ವೀಣಾ ಶಾಂತೇಶ್ವರ ಕೃತಿಗಳಲ್ಲಿ ಸ್ತ್ರೀ ವಿಮೋಚನೆ

ಹಂಪಿ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಸಂಶೋಧನಾ ವಿದ್ಯಾರ್ಥಿ
ರೂಪ. ಕೆ.ಪಿ
Reg:No. KVMBKS 00338

ಮಾರ್ಗದರ್ಶಕರು:
ಡಾ. ವಡ್ಡೆ ಹೇಮಲತಾ
ಎಂ.ಎ., ಪಿ.ಎಚ್.ಡಿ.
ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–560056.

ಕಾವ್ಯ ಮಂಡಲ
13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬಸವನಗುಡಿ,
ಬೆಂಗಳೂರು 560004.
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)

2009

ದೃಢೀಕರಣ ಪತ್ರ

"ವೀಣಾಶಾಂತೇಶ್ವರ ಕೃತಿಗಳಲ್ಲಿ ಸ್ತ್ರೀ ವಿಮೋಚನೆ" ಎಂಬ ಶೀರ್ಷಿಕೆಯ ಎಂ.ಫಿಲ್ ಕಿರು ಪ್ರಬಂಧವನ್ನು ರೂಪ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕಾವ್ಯಮಂಡಲಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಈ ಕಿರು ಪ್ರಬಂಧವನ್ನು ಅಥವಾ ಇದರ ಇತರೆ ಭಾಗಗಳನ್ನು ಪದವಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 22.9.09
ಸ್ಥಳ: ಬೆಂಗಳೂರು

ಡಾ: ವಡ್ಡೆಹೇಮಲತಾ
ಅಧ್ಯಾಪಕರು,
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ
ಬೆಂ.ವಿ ಬೆಂಗಳೂರು – 560056

793

ಪ್ರಮಾಣ ಪತ್ರ

"ವೀಣಾಶಾಂತೇಶ್ವರವರ ಕೃತಿಗಳಲ್ಲಿ ಸ್ತ್ರೀ ವಿಮೋಚನೆ" ಎಂಬ ಶೀರ್ಷಿಕೆಯ ಎಂ.ಫಿಲ್ ಕಿರು ಪ್ರಬಂಧವನ್ನು **ರೂಪ.ಕೆ.ಪಿ** ಆದ ನಾನು ಡಾ. **ವಡ್ಡೆಹೇಮಲತಾ** ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿರುತ್ತೇನೆ. **ಎಂ.ಫಿಲ್** ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕಾವ್ಯಮಂಡಲಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಈ ಕಿರು ಪ್ರಬಂಧವನ್ನು ಅಥವಾ ಇದರ ಇತರೆ ಭಾಗಗಳನ್ನು ಯಾವುದೇ ಪದವಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 22.9.2009

ಸ್ಥಳ : ಹಂಪಿ

ರೂಪ.ಕೆ.ಪಿ.

ಸಂಶೋಧಕರು

ರೂಪ. ಕೆ.ಪಿ

ಪರಿವಿಡಿ

ಅಧ್ಯಾಯಗಳು: ಪುಟಗಳು

ಅಧ್ಯಾಯ–೧

ಪೀಠಿಕೆ, ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ.

ವೀಣಾ ಶಾಂತೇಶ್ವರ ಕೃತಿಗಳಲ್ಲಿ ಸ್ತ್ರೀ ವಿಮೋಚನೆ

ಅಧ್ಯಾಯ –1

ಪೀಠಿಕೆ,ಉದ್ದೇಶ ಮತ್ತು ವ್ಯಾಪ್ತಿ

"ನಾ ಸ್ತ್ರೀ ಸ್ವಾತಂತ್ರ್ಯಂ ಅರ್ಹಂ" ಎಂದು ಮನು ವೇದಗಳಲ್ಲಿ ತಿಳಿಸಿದ್ದಾನೆ. ಈ ವಾಕ್ಯವನ್ನು ಗಮನಿಸಿದಾಗ ಭಾರತೀಯ ಸಮಾಜದಲ್ಲಿ ಮುಖ್ಯವಾಗಿ ನಾವು ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಬದುಕಿ ಬಂದಿರುವುದನ್ನು ಕಾಣಬಹುದಾಗಿದೆ. ಪುರಾಣಗಳಿಂದ ಹಿಡಿದು ಇಲ್ಲಿಯವರೆಗೂ ಸ್ತ್ರೀ ತನ್ನದೇ ಆದ ಒಂದು ಅಸ್ಥಿತ್ವವನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನಿಸಿರುವುದನ್ನು ಕಾಣಬಹುದಾಗಿದೆ. ಸ್ತ್ರೀಯ ಬದುಕಿನ ಅಸ್ಥಿತ್ವದ ಎಲ್ಲ ನೆಲೆಗಳನ್ನೂ ಅವಳನ್ನಾವರಿಸಿರುವ ಸಾಮಾಜಿಕತೆಯ ನಿಯಂತ್ರಿಸುತ್ತಿರುತ್ತದೆ. ಇಲ್ಲಿ ಸ್ತ್ರೀ ತನ್ನ ಅಸ್ಥಿತ್ವದ ಹುಡುಕಾಟದ ಜೊತೆಗೆ ಪ್ರಜ್ಞಾಪೂರ್ವಕವಾಗಿ ಸೃಜನಶೀಲತೆಗೆ ಇರುವ ಅಡೆತಡೆಗಳನ್ನು ನಿವಾರಿಸಿ ಮುಂದುವರೆಯುವ ಒಂದು ಪ್ರಶ್ನೆಯ ಮುಖ್ಯ ರೀತಿಯಾಗಿ ಮಹಿಳಾ ಸಾಹಿತ್ಯವನ್ನು ಪರಿಗಣಿಸಬಸಬಹುದಾಗಿದೆ.

ಕನ್ನಡ ಸಾಹಿತ್ಯದ ಇತಿಹಾಸವನ್ನು ಗಮನಿಸಿದಾಗ ಸ್ತ್ರೀಯರು ತಮ್ಮ ಹಕ್ಕಿನ ಕುರಿತು ಅಥವಾ ತಮ್ಮ ನೆಲೆಯ ರಚನೆಯನ್ನು ಒಂದು ಮಾರ್ಗವಾಗಿ ಕಂಡುಕೊಂಡಿದ್ದು, ಸುಮಾರು 12ನೇ ಶತಮಾನದ ವಚನಗಳಲ್ಲಿ ಎಂದು ಹೇಳಬಹುದು. ಅಂದರೆ ಈ ಹಿಂದೆ ಹೆಣ್ಣು ಸಾಹಿತ್ಯ ರಚನೆಗೆ ತೊಡಗಿಕೊಡಿರಲ್ಲಿಲ್ಲವೆನ್ನುವಂತಿಲ್ಲ. ಆದರೆ ಪುರುಷರು ಬರೆದಂತಹ ಸಾಹಿತ್ಯವು ರಕ್ಷಿಸಲ್ಪಟ್ಟಂತೆ, ಸ್ತ್ರೀ ಸಾಹಿತ್ಯಗಳು ರಕ್ಷಿಸಲ್ಪಡಲಿಲ್ಲ. ಹಲವಾರು ಅಡೆತಡೆಗಳಿಂದ ಪಾರಾಗಿ ಬಂದಂತಹ ಸ್ತ್ರೀ ಸಾಹಿತ್ಯವನ್ನು ಗಮನಿಸಿದಾಗ ನಮಗೆ ಕಾಣುವ ಮುಖ್ಯ ಅಂಶವೆಂದರೆ ಬರೆದಿರುವವರೆಲ್ಲರೂ ಪುರುಷ ನಿರ್ಮಿತ ಚಿಂತನೆಗಳಿಗೆ ಅಧೀನರಾಗಿಯೇ ಯೋಚನೆ ಮಾಡಿ ಬರೆದಿರುವುದನ್ನು ಗಮನಿಸಬಹುದಾಗಿದೆ.

ಈ ವಿಷಯವನ್ನು ಕುರಿತು ಮಹಿಳಾ ಲೇಖಕಿಯಾದ ಶ್ಯಾಮಲದೇವಿಯವರು ಈ ರೀತಿಯ ಒಂದು ಪ್ರಶ್ನೆಯನ್ನು ಸೂಕ್ಷ್ಮವಾಗಿ ಪ್ರತಿಕ್ರಿಯಿಸಿದ್ದಾರೆ "ನಮ್ಮ ಕರ್ನಾಟಕ ಕವಿ ಕುಲದಲ್ಲಿ ನಾರಿಯ ರ ಹೆಸರೇ ಕೇಳಿಬರುವುದಿಲ್ಲ, ಇದ್ದರೆ ಬಂದಿರಬಹುದು. ಈ ಪರಿಸ್ಥಿತಿಗೆ ಆಗಿನ ಸಮಾಜ ಪದ್ದತಿಯಲ್ಲಿ ಸ್ತ್ರೀಗೆ ಇದ್ದ ನಿಕೃಷ್ಟತೆ, ನಿರಕ್ಷರತೆ, ಪ್ರೋತ್ಸಾಹವಿಹೀನತೆ ಮೊದಲಾದವೇ ಕಾರಣವೆಂಬುದು ಸಿಸ್ಸಂದೇಹ. ಇದು ನಮ್ಮ ಸಾಹಿತ್ಯದ ಬೆಳವಣಿಗೆಯನ್ನು ಅರ್ಧಕ್ಕರ್ದದಷ್ಟು ಕುಗ್ಗಿಸಿದೆ ಎಂದು ವಿಷಾದದಿಂದ ಹೇಳಬಹುದಾಗಿದೆ" (೧) ಎಂದು ಅವರ ಮಾತಿನಲ್ಲಿ ಶಿಷ್ಟ ಸಾಹಿತ್ಯದಲ್ಲಿ ಪಾಲ್ಗೊಳ್ಳುವಲ್ಲಿ ಮಹಿಳೆಯರಿಗಿದ್ದ ಸಮಸ್ಯೆಯ ಪ್ರಸ್ಥಾಪವಿದೆ. ಪಿತೃ ಪ್ರಧಾನ ಸಂಸ್ಕೃತಿಯಲ್ಲಿ ಅಥವಾ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯು ಲೆಕ್ಕಕ್ಕೇ ಬರುವುದಿಲ್ಲ ಎಂಬಂತೆ ಅವಳ ಸಂದರ್ಭದ ಸಾಹಿತ್ಯ ರಚನೆಗೂ ಸಾಕ್ಷ್ಯಾಧಾರಗಳಿರಲಿಲ್ಲ ಎಂಬುದು ಬಹಳ ಗಮನಾರ್ಹವಾದ ಸಂಗತಿಯಾಗಿದೆ.

ಈ ರೀತಿಯ ಒಂದು ಸಂದರ್ಭದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಅಥವಾ ಸಮಾನತೆಗಳನ್ನು ತಂದು ಕೊಟ್ಟಿದ್ದು ವಚನ ಯುಗ. ಕರ್ನಾಟಕದ ಧಾರ್ಮಿಕ, ಸಾಮಾಜಿಕ ಚರಿತ್ರೆಯಲ್ಲಿ ಮಾನವೀಯತೆ ಮತ್ತು ವೈಚಾರಿಕತೆಯ ಅಲೆಗಳನ್ನು ಮೂಡಿಸಿದ್ದು ಮತ್ತು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಕ್ರಾಂತಿಕಾರಕ

ತಿರುವುಗಳನ್ನು ಒದಗಿಸಿದ ಮಹತ್ವದ ಘಟ್ಟ. ಶೋಷಿತರ ಉದ್ಧಾರ ಮತ್ತು ಸಮಾನ ಸಂಸ್ಕೃತಿಯ ನಿರ್ಮಾಣಕ್ಕಾಗಿ ನಡೆದ ಶರಣರ ಆಂದೋಲನದಲ್ಲಿ ಸಹಜವಾಗಿಯೇ ಮಹಿಳೆಯರ ಪಾಲುಗಾರಿಕೆಗೆ ಪ್ರಾಶಸ್ತ್ಯ ದಕ್ಕಿತು. ಜೈವಿಕ ವಿಚಾರಗಳು ನಿರಾಕೃತಗೊಂಡು ಸ್ತ್ರೀ ತತ್ವವನ್ನು ಪುರುಷ ತತ್ವದ ಸಮಾನ ನೆಲೆಯಲ್ಲಿ ಗ್ರಹಿಸುವ ಮಾನವೀಯ ಕಾಳಜಿ ಇಲ್ಲಿ ಪ್ರಾರಂಭವಾಯಿತು.

ಕನ್ನಡ ಮಹಿಳಾ ಸಾಹಿತ್ಯದ ಮೊದಲ ಅಧ್ಯಾಯವನ್ನು ಪ್ರಾರಂಭಿಸಿದ ವಚನಕಾರ್ತಿಯರು ತಮ್ಮ ಸಾಮಾಜಿಕ – ಸಾಂಸ್ಕೃತಿಕ ಅನುಭವ ವೈವಿಧ್ಯವನ್ನು ವಚನರೂಪಗಳಲ್ಲಿ ಅಭಿವ್ಯಕ್ತಿಸಿದರು. ಧರ್ಮ, ಸಮಾಜ, ಆಧ್ಯಾತ್ಮಗಳ ಅನುಭಾವಕ್ಕೆ ಸಂಬಂಧಿಸಿದ ತಮ್ಮ ವೈಯಕ್ತಿಕ ಅನಿಸಿಕೆಗಳನ್ನು ನಿರ್ಭಯವಾಗಿ ಪ್ರತಿಪಾದಿಸಿದರು. ಈ ಚಳುವಳಿಯ ವೈಚಾರಿಕ ಮತ್ತು ಆಧ್ಯಾತ್ಮಿಕ ಸತ್ವವನ್ನು ಆತ್ಮ ಶೋಧನೆ ಮತ್ತು ಸಾಮಾಜಿಕ ಶುದ್ಧೀಕರಣ ಸಮನ್ವಯ ಸೂತ್ರವಾಗಿಸಿಕೊಂಡ ಪ್ರಮುಖ ವಚನಕಾರ್ತಿಯೆಂದರೆ ಅಕ್ಕಮಹಾದೇವಿ, ಕಾಳವ್ವೆ, ಲಕ್ಕಮ್ಮ ಮೊದಲಾದವರು.

"ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎನ್ನುವ ಉನ್ನತ ಮನ್ನಣೆ ಪ್ರಾಪ್ತವಾಯಿತು. ಸಿದ್ಧರಾಮಯ್ಯನ ಈ ವಚನದ ಮೂಲಕ ಸ್ತ್ರೀಗೆ ಪುರುಷರಷ್ಟೆ ಸ್ವಾತಂತ್ರ್ಯ ಮತ್ತು ಸಮಾನತೆ ಇರಬೇಕೆಂದು ಬಯಸಿ ಆ ನಿಟ್ಟಿನಲ್ಲಿ ಸಮಾಜದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿತು. ಈ ಕಾಲದಲ್ಲಿ ಕಾಯಕ ಮತ್ತು ದಾಸೋಹ ಇವುಗಳಲ್ಲಿಪುರುಷ ಸ್ತ್ರೀಯರ ನಡುವೆ ಯಾವುದೇ ತಾರತಮ್ಯ ಇರಬಾರದೆಂದು ಈ ಚಳುವಳಿ ಪ್ರತಿಪಾದಿಸಿತು.

ವಚನ ಚಳುವಳಿಯ ನಂತರ ಸ್ತ್ರೀಯ ಬಗ್ಗೆ ಅವಳ ಪುರುಷ ಆಧೀನ ಬದುಕಿನ ಬಗ್ಗೆ ದನಿ ಎದ್ದಿದ್ದು ೧೯ ನೇ ಶತಮಾನದಲ್ಲಿ ಎಂದು ಮುಖ್ಯವಾಗಿ ಗುರುತಿಸಬಹುದು. ಈ ಶತಮಾನದ ಆದಿ ಭಾಗದಿಂದ ಕ್ರಮೇಣವಾಗಿ ಮಹಿಳೆಯರ ಜೀವನ ಕ್ರಮ, ಚಿಂತನೆಗಳು ತಮ್ಮ ಹಳೆಯ ದಾರಿ ಬದಲಾಯಿಸಿ ಹೊಸ ದಾರಿ ಹಿಡಿಯುವ ಪ್ರಯತ್ನ ಮಾಡಿತು. ಈ ಕಾಲದಲ್ಲಿ ಅನೇಕ ಸಮಾಜ ಸುಧಾರಕ ಸಂಸ್ಥೆಗಳು ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಅವಳ ಸಮಸ್ಯೆ ಬಗ್ಗೆ ಚಿಂತನೆ ನಡೆಸಿದವು. ಸ್ತ್ರೀಯರಿಗೆ ಶಿಕ್ಷಣ ನೀಡುವುದಕ್ಕೆ ಪ್ರಾಮುಖ್ಯ ನೀಡಿದ್ದು ಇಲ್ಲಿನ ಮುಖ್ಯ ಬದಲಾವಣೆಯಾಗಿತ್ತು. ಶಿಕ್ಷಣ ಪಡೆಯುವ ಮೂಲಕ ಪುರುಷನಿಗೆ ಸರಿಸಮಾನವಾಗಿ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಂದರೆ ಸಾಮಾಜಿಕ. ರಾಜಕೀಯ, ಆರ್ಥಿಕ ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲೂ ಸಮಾನತೆಗಾಗಿ ಹೋರಾಡಿ ತಮ್ಮ ಹಕ್ಕುಗಳನ್ನು ಪಡೆದಿರುವುದನ್ನು ಕಾಣಬಹುದಾಗಿದೆ.

ಕನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ನವೋದಯದ ಸಂದರ್ಭ ಮಹಿಳಾ ಬರವಣಿಗೆಗೆ ಒಂದು ವಿಶಿಷ್ಟವಾದ ಸಂದರ್ಭವಾಗಿದೆ. ಹೆಣ್ಣು ತನ್ನ ಮನೆ, ಕುಟುಂಬ, ಮಕ್ಕಳು ಈ ವಾತಾವರಣದಲ್ಲೇ ಬೆಚ್ಚಗಿದ್ದ ಸಂದರ್ಭದಲ್ಲಿ ನವೋದಯದ ತಾತ್ವಿಕ ನಂಬಿಕೆ, ಮನೋಭಾವ, ಆಲೋಚನೆಗಳು ಅವಳಿಗೆ ಸ್ವಲ್ಪ ಮಟ್ಟಿಗಾದರೂ ಮನೆಯಿಂದ ಹೊರಬರುವ ಅವಕಾಶ ಕಲ್ಪಿಸಿಕೊಟ್ಟಿತು. ಈ ಸಂದರ್ಭದಲ್ಲಿ ಬರೆದಂತಹ ಲೇಖಕಿಯರು ಮುಖ್ಯವಾಗಿ ಸಾಮಾನ್ಯ ವರ್ಗದ ಜೀವನದ ಚಿತ್ರಣವನ್ನು ಅಥವಾ ಅದಕ್ಕಿಂತ ಮೇಲಿನ ಕಾರು, ಬಂಗಲೆ, ಒಡವೆ, ವಸ್ತ್ರಗಳ ಒಂದು ರೀತಿಯ ವೈಭವೋಪೇರಿತ ಐಷಾರಾಮಿ ಬದುಕನ್ನು ಚಿತ್ರಿಸುವ ಕಾದಂಬರಿ, ಕಥೆಗಳು ಕಂಡು ಬಂದವು. ಈ ಕಾಲದ ಹೊಸ ಎಚ್ಚರದ ಸ್ತ್ರೀಯರು ತಮ್ಮ ಸಮಸ್ಯೆಗಳನ್ನು ತಾವೇ ವಿವರಿಸಿಕೊಳ್ಳಲು ಪರಿಹರಿಸಿಕೊಳ್ಳಲು ಪ್ರಯತ್ನಿಸಿದ್ದನ್ನು ಇಲ್ಲಿನ ಪ್ರಮುಖ ಲೇಖಕಿಯರಾದ ತಿರುಮಲಾಂಬಾ, ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾವ್‌ಕರ್, ತ್ರಿವೇಣಿ ಮೊದಲಾದವರಲ್ಲಿ ಕಾಣಬಹುದು.

ನವೋದಯ ಸಾಹಿತ್ಯಕ್ಕೆ ಪ್ರತಿಯಾಗಿ ಎದ್ದ ಪ್ರಗತಿಶೀಲ ಅಲೆ ಕನ್ನಡ ಸಾಹಿತ್ಯದ ಚಿಂತನೆ ಕ್ರಮದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತು. ಇದು ಕೂಡ ಅವತ್ತಿನ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಉಂಟಾದ ಬದಲಾವಣೆಗಳ ಪ್ರತಿಕ್ರಿಯೆಯಾಯಿತು. ಸ್ವಾತಂತ್ರ್ಯ ಪೂರ್ವದ ಕನಸುಗಳು ಭಗ್ನಗೊಂಡ ನಿರಾಶ ಸ್ಥಿತಿಯಲ್ಲಿ ಈ ಸಾಹಿತ್ಯ ಸೃಷ್ಟಿಯಾಯಿತು. ಇದು ಮುಖ್ಯವಾಗಿ ಕಾರ್ಮಿಕರ ಸಮಸ್ಯೆ, ದುಡಿಯುವ ವರ್ಗದ, ಶ್ರಮಿಕರ ಸಮಸ್ಯೆ, ಬಡತನದ ಫಲವಾಗಿ ತಪ್ಪು ಹಾದಿ ಹಿಡಿದು ವೇಶ್ಯಾವೃತ್ತಿಗಿಳಿದ ವೇಶ್ಯೆಯರ ಸಮಸ್ಯೆಗಳನ್ನು ತಮ್ಮ ಕೃತಿಗಳ ವಸ್ತುವಾಗಿ ಚಿತ್ರಿಸಿದರು.

ಇದರ ನಂತರ ಬಂದದ್ದು ನವ್ಯ ಚಳುವಳಿ. ಇದು ಉಳಿದವುಗಳಿಗಿಂತ ತೀರ ಭಿನ್ನವಾದ ನೆಲೆಯಲ್ಲಿ ತನ್ನನ್ನು ಸಮರ್ಥಿಸಿಕೊಳ್ಳುತ್ತದೆ. ಈ ಸಂದರ್ಭದಲ್ಲಿ ಸೃಷ್ಟಿಯಾದಂತಹ ಬಹುಪಾಲು ಸಾಹಿತ್ಯವು ಪುರುಷ ಪರ ನಿಲುವನ್ನು ತಳೆದಿದ್ದನ್ನು ಮತ್ತು ಹೆಣ್ಣನ್ನು ಬಹುಮುಖ್ಯವಾಗಿ ಗಂಡಿನ ಲೈಂಗಿಕ ಆಕರ್ಷಣೆಯ ಒಂದು ಭೋಗ ವಸ್ತುವಾಗಿ ಚಿತ್ರಿಸುವುದನ್ನು ಕಾಣುತ್ತೇವೆ. ಹೆಣ್ಣಿಗೆ ಗಂಡಿನಂತೆ ಒಂದು ಸಮಾನ ಸ್ಥಾನವನ್ನು ನೀಡುವುದಿರಲಿ ಹೆಣ್ಣಿನ ಮನೋಭಾವಕ್ಕೆ ಅವಳನ್ನು ಅರಿಯುವುದಕ್ಕಾಗಲಿ ಅಥವಾ ಅವಳಿಗೂ ಒಂದು ಸ್ವತಂತ್ರ ವ್ಯಕ್ತಿತ್ವವಿದೆ ಎಂಬುದನ್ನು ಬಿಂಬಿಸುವುದರಲ್ಲಿ ಇದು ವಿಫಲವಾಯಿತು.

ಪ್ರಗತಿ ಪಥದೊಂದಿಗೆ ತಳಕು ಹಾಕಿಕೊಂಡು ಹೊಸ ಲೋಕವನ್ನು ತೆರೆದಿಟ್ಟ ನವ್ಯತೆ ಹೆಣ್ಣಿನ ಅಂತರಂಗದ ಬೆತ್ತಲೆಯನ್ನು ಯಾವುದೇ ಹಿಂಜರಿಕೆಯು ಇಲ್ಲದೆ ಕಥನ ಲೋಕಕ್ಕೆ ತೋರಿಸಿ ಕೊಟ್ಟಿತು ಎನ್ನಬಹುದು. ಇದು ಆಧುನಿಕ ಮಹಿಳಾ ಕನ್ನಡ ಸಾಹಿತ್ಯದ ಬೆಳವಣಿಗೆಯೂ ಹೌದು.

ಹಿಂದೆ ಇದ್ದಂತಹ ಸಾಹಿತ್ಯ ಪ್ರಕಾರಕ್ಕೆ ಹಾಗೂ ನವ್ಯತೆಗೆ ಇರುವ ಭಿನ್ನತೆಯನ್ನು ಗುರುತಿಸಿ ಆ ಮೂಲಕ ಈ ನವ್ಯ ಸಾಹಿತ್ಯವು ಇತರ ಸಾಹಿತ್ಯ ಪ್ರಕಾರಗಳಿಂದ ಹೇಗೆ ಮತ್ತು ಏಕೆ ಭಿನ್ನವಾಗಿದೆ ಎಂಬ ಚರ್ಚೆಯು ಈ ನಿಬಂಧದ ಮುಖ್ಯ ಆಶವಾಗಿದೆ. ಆ ಮೂಲಕ ನವ್ಯರಲ್ಲಿ ಬಂದಂತಹ ಮಹಿಳಾ ಲೇಖಕಿಯರ ಬಗೆಗಿನ ಚರ್ಚೆ ಮತ್ತು ವೀಣಾ ಶಾಂತೇಶ್ವರರ ಕೃತಿಗಳನ್ನು ಆಳವಾಗಿ ಅಭ್ಯಾಸಿಸಿ ಅವರ ದೃಷ್ಟಿಕೋನದಲ್ಲಿ ಸ್ತ್ರೀ ವಿಮೋಚನೆಯನ್ನು ಚರ್ಚಿಸುವುದು ಇದರ ಆಶಯವಾಗಿದೆ.

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ವೀಣಾ ಶಾಂತೇಶ್ವರವರ ಕೃತಿಗಳಲ್ಲಿ ಸ್ತ್ರೀ ವಿಮೋಚನೆ ಎಂಬ ವಿಷಯವನ್ನು ಕರಿತು ಈ ನಿಬಂಧವನ್ನು ಮಂಡಿಸಲು ಚಿಂತಿಸಿದ್ದೇನೆ. ವೀಣಾರವರು ಕನ್ನಡದ ಒಬ್ಬ ಪ್ರಮುಖ ಲೇಖಕಿ ಎಂದು ಗುರುತಿಸಿಕೊಂಡರು. ಇವರು ಬರೆದಿರುವ ಹಲವು ಕಥಾಸಂಕಲನಗಳು ಹಾಗೂ ಅವರ ಎರಡು ಕಿರು ಕಾದಂಬರಿಗಳ ಮುಖಾಂತರ ಸ್ತ್ರೀ ವಿಮೋಚನೆ ಕುರಿತಂತೆ ವೀಣಾ ರವರ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವುದು ಈ ನಿಬಂಧದ ಮುಖ್ಯ ಉದ್ದೇಶವಾಗಿದೆ.

ಇವರು ನವ್ಯ ಕಾಲದ ಸಂದರ್ಭದಲ್ಲಿ ಪ್ರಮುಖವಾಗಿ ಗುರುತಿಸಿಕೊಡವರು. ಪುರುಷರೇ ಅತೀ ಹೆಚ್ಚಾಗಿ ಬರೆಯುತ್ತಿದ್ದ ಅಥವಾ ಪುರುಷ ಪ್ರಾಬಲ್ಯವಿದ್ದ ಕಾಲದಲ್ಲಿ ಬರೆದವರು ಇವರು. ಇವರ ಕೃತಿಗಳಲ್ಲಿನ ಬಹು ಮುಖ್ಯ ಅಂಶವೆಂದರೆ ಪುರುಷ ನಿರ್ಮಿತ ಸಮಾಜದ ನಿಯಮಗಳ ವಿರುದ್ಧ ತಮ್ಮ ಅಭಿಪ್ರಾಯವನ್ನು

ವ್ಯಕ್ತಡಿಸುತ್ತಾರೆ. ಇವರ ಕತೆಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಮುಖ್ಯವಾಗಿ ಪುರುಷ ನಿರ್ಮಿತ ಮೌಲ್ಯಗಳಿಗೆ ವಿರುದ್ಧವಾಗಿ ತಮ್ಮ ಬದುಕನ್ನು ರೂಪಿಸಿಕೊಳ್ಳುವುದನ್ನು ನಾವು ಮುಖ್ಯವಾಗಿ ಗಮನಿಸುತ್ತೇವೆ.

ಸ್ತ್ರೀ ವಿಮೋಚನೆ ಎಂಬ ವಿಷಯವನ್ನು ಕುರಿತಂತೆ ವಿಚಾರ ಮಂಡನೆ ಇಲ್ಲಿ ಮುಖ್ಯ ಉದ್ದೇಶವಾಗಿದೆ. ಆದ್ದರಿಂದ ನಾವು ಮೊದಲಿಗೆ ಸ್ತ್ರೀ ವಿಮೋಚನೆ ಎಂದರೇನು? ಎಂಬುದನ್ನು ಚರ್ಚಿಸುವುದು ಬಹು ಮುಖ್ಯವಾಗುತ್ತದೆ. 'ವಿಮೋಚನೆ' ಎಂದರೆ ಬಿಡುಗಡೆ, ಮುಕ್ತಿ, ಬಂಧ ಮುಕ್ತ ಎಂಬಂತಹ ಅರ್ಥಗಳು ನಮಗೆ ಸಿಗುತ್ತವೆ. ಸ್ತ್ರೀ ವಿಮೋಚನೆ ಎಂದರೆ ಪುರುಷರ ಅಧೀನದಲ್ಲಿರುವ ಮಹಿಳೆಯು ಈ ಬಂಧನದಿಂದ ಮುಕ್ತಿ ಹೊಂದುವುದು ಎಂದು ಹೇಳಬಹುದು. ಹೆಣ್ಣು ಹುಟ್ಟಿದಾಗ ತಂದೆಯ ನೆರಳಿನಲ್ಲಿ, ಮುಂದೆ ಬೆಳೆಯುತ್ತಾ ಅಣ್ಣ ತಮ್ಮಂದಿರ ರಕ್ಷೆಯಲ್ಲಿ, ಮದುವೆಯ ನಂತರ ಗಂಡನ ಅಂಕೆಯಲ್ಲಿ, ಮುಪ್ಪಿನಲ್ಲಿ ಮಗನ ಕರುಣೆಯಲ್ಲಿ ಬಾಳಬೇಕು ಎಂದು ಹಿರಿಯರು ಹೇಳಿರುವುದನ್ನು ನಾವು ಕೇಳುತ್ತೇವೆ. ಅಂದರೆ ಹುಟ್ಟಿನಿಂದ ಸಾಯುವವರೆಗೂ ಹೆಣ್ಣು ಗಂಡಿನ ಅಂಕೆಯಲ್ಲಿ ಇರಬೇಕು ಎಂಬ ಒಂದು ಕಟು ಸತ್ಯ ನಮಗೆ ಗೋಚರಿಸುತ್ತದೆ. ಈ ರೀತಿಯ ಪುರುಷ ನಿರ್ಮಿತ ಭಾರತೀಯ ಸಮಾಜದಲ್ಲಿ ಮಹಿಳೆಯು ತನ್ನ ವ್ಯಕ್ತಿತ್ವ ಸ್ವಾತಂತ್ರ್ಯಕ್ಕೆ ಬೆಲೆ ಕಂಡುಕೊಳ್ಳಲು ಪ್ರಯತ್ನಿಸಿದ್ದನ್ನೇ ಸ್ತ್ರೀ ವಿಮೋಚನೆ ಎಂದು ಹೇಳಬಹುದು.

ವೇದಗಳ ಕಾಲದಲ್ಲಿನ ಸ್ತ್ರೀಯರನ್ನು ಗಮನಿಸಿದಾಗ ನಮಗೆ ಅಲ್ಲಿ ಸ್ತ್ರೀ ಸ್ವಲ್ಪ ಮಟ್ಟಿನ ಶಿಕ್ಷಣವನ್ನು ಹಾಗೂ ಪುರುಷರಿಗೆ ಸಮಾನವಾದ ಅವಕಾಶಗಳನ್ನು ಹೊಂದಿದ್ದಳು ಎಂಬ ಅಂಶ ಗೋಚರಿಸುತ್ತದೆ. ಆದರೆ ನಂತರ ಸ್ವಲ್ಪ ಕಾಲದಲ್ಲಿಯೇ ನಮಗೆ ದೊರೆಯುವ ಪುರಾಣಗಳಲ್ಲಿ (ರಾಮಾಯಣ, ಮಹಾಭಾರತ) ಸ್ತ್ರೀಯು ಪುರುಷ ಅಧೀನವಾಗಿರುವುದನ್ನು ಕಾಣುತ್ತೇವೆ. ನಂತರ ಅಲ್ಲಿಂದೀಚೆಗೆ ಸ್ತ್ರೀಯು ನಿರಂತರವಾಗಿ ಒಂದಲ್ಲ ಒಂದು ರೀತಿಯಲ್ಲಿ ಪುರುಷನ ಶೋಷಣೆಗೆ ಒಳಗಾಗುತ್ತಿರುವುದನ್ನು ನಾವು ಇಂದಿಗೂ ಗಮನಿಸಬಹುದಾಗಿದೆ.

ಮಹಿಳೆಯು ಪುರುಷನಷ್ಟೇ ಸಮಾನ ಅವಕಾಶಗಳನ್ನು ಹೊಂದಿ ಮುಂದೆ ತನ್ನ ಸ್ವಾತಂತ್ರ್ಯತೆಗೆ ಪ್ರಾಮುಖ್ಯತೆ ನೀಡಿದನ್ನು ನಾವು ಮುಖ್ಯವಾಗಿ ಗಮನಿಸುವುದು ವಚನ ಕಾಲದಲ್ಲಿ. ವಚನವು ಒಂದು ಪ್ರಮುಖ ಧಾರ್ಮಿಕ ಚಳುವಳಿಯಾದರು ಇಲ್ಲಿ ಸಮಜದ ಎಲ್ಲಾ ಸ್ತರದವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಸಾಧ್ಯವಾಯಿತು. ನಿಬಂಧದ ಮೊದಲ ಅಧ್ಯಾಯದಲ್ಲಿ ವಚನ ಕಾಲದಲ್ಲಿ ಬಂದಂತಹ ವಚನಕಾರ್ತಿಯರ ಬಗ್ಗೆ ಚರ್ಚಿಸುತ್ತಾ ಅವರು ಹೀಗೆ ಮಹಿಳೆಯ ವಿಮೋಚನೆಗೆ ಪ್ರಯತ್ನಿಸಿದರು ಎಂಬುದನ್ನು ಗಮನಿಸಲಾಗುತ್ತದೆ. ಪ್ರಮುಖ ವಚನಕಾರ್ತಿಯರಾದ ಅಕ್ಕಮಹಾದೇವಿ, ಸೂಳೆ ಸಂಕವ್ವ ಮುಂತಾದವರು ಇಲ್ಲಿ ಪ್ರಮುಖವಾಗಿ ಚರ್ಚಿಸಲ್ಪಡುತ್ತಾರೆ.

ಕನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳೆಂದು ಕರೆಯಲ್ಪಡುವ ನವೋದಯ, ಪ್ರಗತಿಶೀಲ, ದಲಿತ ಬಂಡಾಯ ಮುಂತಾದ ಹಲವು ಪ್ರಮುಖ ಕಾಲಗಳ ಚರ್ಚೆ ಇಲ್ಲಿ ನಡೆಯುತ್ತದೆ. ಈ ಚರ್ಚೆಯಲ್ಲಿ ಆ ಕಾಲದ ಪ್ರಮುಖ ಮಹಿಳಾ ಸಾಹಿತಿಗಳು ಮತ್ತು ಅವರ ಕೃತಿಗಳ ಕುರಿತಂತೆ ಚರ್ಚೆ ಮಾಡಲಾಗುತ್ತದೆ. ಈ ಕಾಲದಲ್ಲಿ ಮಹಿಳೆಯರು ಹೀಗೆ ಪುರುಷ ನಿರ್ಮಿತ ಚಿಂತನೆಗಳಿಗೆ ತಮ್ಮ ವಿರೋಧ ವ್ಯಕ್ತಪಡಿಸಿದರು ಎಂಬ ಚಿಂತನೆ ನಾವು ನಡೆಸುತ್ತೇವೆ. ನವೋದಯ ಅಥವಾ ಅದರ ನಂತರ ಬಂದ ಇನ್ನಿತರ ಸಾಹಿತ್ಯದ ಈ ಘಟ್ಟಗಳಲ್ಲಿ ಮಹಿಳೆಯರು ತಮ್ಮ ಸ್ಥಿತಿಗಳ ಬಗ್ಗೆ ಯಾವ ರೀತಿ ಚಿಂತನೆ ನಡೆಸಿದರು ಎಂಬುದರ ಚರ್ಚೆ ಮಾಡಲಾಗುತ್ತದೆ. ನಂತರ ಸ್ತ್ರೀ ವಿಮೋಚನೆಯ ಬಗ್ಗೆ ಇವರ ಅಭಿವ್ಯಕ್ತಿ ಕ್ರಮ, ಪರಿಕಲ್ಪನೆಗಳು ಇಲ್ಲಿನ ಮುಖ್ಯ ಆಶಯವಾಗುತ್ತವೆ. ಇಲ್ಲಿನ ಪ್ರಮುಖ ಲೇಖಕಿಯರಾದ ತಿರುಮಲಾಂಬ, ತ್ರಿವೇಣಿ, ಕೊಡಗಿನ ಗೌರಮ್ಮ,

ಕಲ್ಯಾಣಮ್ಮ, ಎಚ್. ಸಾವಿತ್ರಮ್ಮ ಇನ್ನು ಮುಂತಾದ ಕೃತಿಗಳ ಮುಖಾಂತರ ಸ್ತ್ರೀ ವಿಮೋಚನೆ ಕುರಿತಂತೆ ಈ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

ಸಾಹಿತ್ಯದಲ್ಲಿ ಬರೆಯಲು ತೊಡಗಿದ್ದಂತಹ ಲೇಖಕಿಯರು ತಮ್ಮ ಹಿಂದಿನವರಿಗಿತಲೂ ಹೇಗೆ ಭಿನ್ನವಾದರು. ಇವರ ಚಿಂತನೆಯ ಕ್ರಮ, ಆಲೋಚನೆಗಳು ಯಾವುವು, ತಮ್ಮ ಹಿಂದಿನ ತಲೆಮಾರಿನವರಾದ ನವೋದಯದ ಲೇಖಕಿಯರಿಗಿಂತ ಭಿನ್ನವಾದ ದಾರಿಯನ್ನು ಇವರು ಹೇಗೆ ಮತ್ತು ಏಕೆ ಆಯ್ಕೆ ಮಾಡಿಕೊಂಡರು ಎಂಬುದು ಇಲ್ಲಿ ಚರ್ಚೆಗೆ ಒಳಗಾಗುತ್ತದೆ. ಪುರುಷ ಪ್ರಧಾನ ವ್ಯವಸ್ಥೆಗೆ ಹೇಗೆ ಇವರು ತಮ್ಮ ವಿರೋಧ ವ್ಯಕ್ತಪಡಿಸಿದರು ಆ ಮೂಲಕ ಸ್ತ್ರೀ ವಿಮೋಚನೆಗೆ ಹೇಗೆ ಒತ್ತು ನೀಡಿದರು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಈ ಸಾಹಿತ್ಯ ಪ್ರಕಾರದಲ್ಲಿ ಕಂಡು ಬರುವ ಪ್ರಮುಖ ಲೇಖಕರಾದ ಯು.ಆರ್ ಅನಂತಮೂರ್ತಿ, ಕೃಷ್ಣ ಆಲನಹಳ್ಳಿ, ಪಿ. ಲಂಕೇಶ ಮೊದಲಾದವರ ಕೃತಿಗಳು ಮತ್ತು ಲೇಖಕಿಯರಾದ ರಾಜಲಕ್ಷ್ಮಿ ಎನ್.ರಾವ್, ಅನುಪಮ ನಿರಂಜನ, ವೀಣಾ ಶಾಂತೇಶ್ವರ ಮೊದಲಾದವರ ಕೃತಿಗಳ ಮುಖಾಂತರ ಚರ್ಚಿಸುವುದಾಗಿದೆ. ಇದರ ಜೊತೆಯಲ್ಲಿ ನವ್ಯ ಕಾಲದ ಕೆಲವೆ ಪ್ರಮುಖ ಪುರುಷ ಲೇಖಕರ ಕೃತಿಗಳ ಜೊತೆಗೆ ಮಹಿಳಾ ಲೇಖಕಿಯರ ಕೃತಿಗಳನ್ನು ಹೋಲಿಸಿ ಚರ್ಚಿಸುವುದಾಗಿದೆ.

ವೀಣಾರವರ ಕೃತಿಗಳ ಹಲವು ನೆಲೆಗಳು ಎಂಬ ಪ್ರಮುಖ ಅಧ್ಯಾಯದಲ್ಲಿ ವೀಣಾರವರ ಕೃತಿಗಳಲ್ಲಿ ಕಂಡು ಬರುವ ಪ್ರಮುಖ ಅಂಶಗಳನ್ನು ಕುರಿತು ಹಲವು ಉಪ ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಇಲ್ಲಿ ನಮಗೆ ಮುಖ್ಯವಾಗಿ ವೀಣಾರವರ ಕಥಾ ಸಾಹಿತ್ಯ ಮುಖ್ಯ ಚರ್ಚೆಯ ವಸ್ತುವಾಗುತ್ತದೆ. ಪುರುಷ ನಿರ್ಮಿತ ಸಮಾಜದ ಹಿನ್ನೆಲೆಯಲ್ಲಿ ವೀಣಾರವರ ಕೃತಿಗಳು ಹೇಗೆ ಸಮಾಜದ ನಿಯಮಗಳನ್ನು ತಿರಸ್ಕರಿಸುತ್ತದೆ ಎಂಬುದು ಇಲ್ಲಿ ಚರ್ಚಿಸಲಾಗುತದೆ. ನಂತರ ಪುರುಷ ಹೇರಿರುವ ಚಿಂತನೆಗಳ ನಿರಾಕರಣೆಯನ್ನು ಕುರಿತು ಇವರ ಕೃತಿಗಳ ಕಾರ್ಯಗಳ ಕುರಿತು ಚರ್ಚಿಸುತ್ತವೆ. ನಂತರ ವೀಣಾರವರ ಕಥಾ ಸಾಹಿತ್ಯ ಒಂದು ರೀತಿಯ ನವ ಸಮಾಜದ ನಿರ್ಮಾಣಕ್ಕೆ ಹೇಗೆ ಒಂದು ಹಾದಿಯನ್ನು ಒದಗಿಸುತ್ತದೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ.

ಡಾ. ವೀಣಾ ಅವರ ಕಥೆ ಮತ್ತು ಕಾದಂಬರಿಗಳನ್ನು ಆಧರಿಸಿ ಇವರ ಕಥೆಗಳ ಮೂಲಕ ಸ್ತ್ರೀ ಪಾತ್ರಗಳು ಪುರುಷರ ವಿರುದ್ಧ ಹೇಗೆ ತಮ್ಮ ಬಂಡಾಯವನ್ನು ತೋರಿಸುತ್ತವೆ ಮತ್ತು ಸಮಾಜದ ರೂಢಿಗತ ಮೌಲ್ಯಗಳನ್ನು ತಿರಸ್ಕರಿಸುವ ಮೂಲಕ ಸ್ತ್ರೀ ತನ್ನದೇ ನೆಲೆಯಲ್ಲಿ ಹೇಗೆ ವಿಮೋಚನೆಯನ್ನು ಪಡೆಯುತ್ತಾಳೆ ಎಂಬುದನ್ನು ಚರ್ಚಿಸುವುದು. ಮತ್ತು ಆ ಸಂದರ್ಭದ ಲೇಖಕಿಯರು ಮತ್ತು ಅವರ ಮಾರ್ಗಕ್ಕಿಂತ ವೀಣಾರವರ ಮಾರ್ಗ ಹೇಗೆ ಭಿನ್ನವಾಗುತ್ತವೆ ಎಂಬಂತಹ ಎಲ್ಲಾ ಅಂಶಗಳ ಚರ್ಚೆಯೇ ಈ ನಿಬಂಧದ ಮುಖ್ಯ ಉದ್ದೇಶವಾಗಿರುವುದರಿಂದ ಇವುಗಳ ಚರ್ಚೆ ಇಲ್ಲಿ ನಡೆಯುತ್ತದೆ.

ಕೊನೆ ಟಿಪ್ಪಣಿ.

(1) ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ಪುಟ.10

ಅಧ್ಯಾಯ-೨

ಸ್ತ್ರೀ ವಿಮೋಚನೆಯ ಪರಿಕಲ್ಪನೆಯಲ್ಲಿ ಮಹಿಳಾ ಲೇಖಕಿಯರು.

ಅಧ್ಯಾಯ-೨

ಸ್ತ್ರೀ ವಿಮೋಚನೆಯ ಪರಿಕಲ್ಪನೆಯಲ್ಲಿ ಮಹಿಳಾ ಲೇಖಕಿಯರು.

ಸ್ತ್ರೀ ವಿಮೋಚನೆ

ಮಾನವ ಜೀವನದಲ್ಲಿ ಹಲವು ಶತಮಾನಗಳಿಂದಲೂ ಅಸಮಾನತೆ ಎಂಬುದು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಅಸಮಾನತೆಯನ್ನು ತೊಡೆದು ಹಾಕಿ ಸಮಾನತೆ ಸಾಧಿಸಲು ಹಲವಾರು ಚಳುವಳಿಗಳು ನಡೆದಿವೆ ಮತ್ತು ಇಂದಿಗೂ ನಡೆಯುತ್ತಲೇ ಇರುವುದನ್ನು ಗಮನಿಸಬಹುದು. ಇದೇ ರೀತಿ ಮಹಿಳಾ ವಿಮೋಚನಾ ಚಳುವಳಿಯು ಸ್ತ್ರೀ ಮೇಲಿನ ದೌರ್ಜನ್ಯ, ಅಸಮಾನತೆಗಳ ವಿರುದ್ಧ ನಡೆದು ಮಹಿಳೆಯರ ಒಂದು ಚಳುವಳಿಯಾಗಿದೆ. ಗಂಡಿಗಿಂತ ಹೆಣ್ಣು ಕೀಳು ಎಂದು ಶತಮಾನಗಳಿಂದಲೂ ನಂಬಿ ಬಂದಿರುವ ಸಮಾಜದಲ್ಲಿನ ಲಿಂಗಾಧಾರಿತ ತಾರತಮ್ಯದ ವಿರುದ್ಧ ನಡೆದ ಹೋರಾಟವೇ ಸ್ತ್ರೀ ವಿಮೋಚನಾ ಚಳುವಳಿಯಾಗಿದೆ.

ಎಲ್ಲಾ ಸಮಾಜಗಳಲ್ಲಿ ಮುಖ್ಯವಾಗಿ ಮಹಿಳಾ ವಿಮೋಚನೆಯ ಆಂದೋಲನದ ಮೊದಲ ಹೆಜ್ಜೆಯನ್ನು ನಾವು ಸ್ತ್ರೀ ಶಿಕ್ಷಣಕ್ಕಾಗಿ ನಡೆದಿರುವ ಹೋರಾಟದ ಮೂಲಕ ಗುರುತಿಸಬಹುದು. ಮಹಿಳಾ ವಿಮೋಚನೆ ವಾದದ ಮುಖ್ಯವಾದ ಧ್ಯೇಯ ಉದ್ದೇಶಗಳಲ್ಲಿ ಸ್ತ್ರೀ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಮಹಿಳೆಯ ದೇಹ ಮತ್ತು ಮನಸ್ಸು ಪುರುಷರ ಅಧಿಕಾರದ ಬಳಕೆಯ ಒಂದು ಆಯುಧವಾಗಿ ಬಳಕೆಯಾಗುತ್ತಿತ್ತು. ಈ ಅಧಿಕಾರ ಮುಖ್ಯವಾಗಿ ಮಹಿಳೆ ಎಲ್ಲೂ ತಲೆ ಎತ್ತದಂತೆ ಅವಳನ್ನು ತಡೆಯುತ್ತಿತ್ತು.ಈ ರೀತಿಯ ಮನೋಭಾವ ದೈನಂದಿನ ಜೀವನದಲ್ಲಿ ಹಲವು ಸ್ಥರಗಳಲ್ಲಿ ಶತಮನಗಳಿಂದ ಬೇರೂರಿತ್ತು. ಈ ಮನೋಭಾವನೆಯನ್ನು ಬೇರು ಸಮೇತ ಕಿತ್ತು ಹಾಕುವುದು ಮಹಿಳಾ ವಿಮೋಚನೆ ಚಳುವಳಿಯ ಮುಖ್ಯ ಉದ್ದೇಶ. ಇದಕ್ಕೆ ಮೂಲ ಅಸ್ತ್ರವಾಗಿ ಸ್ತ್ರೀಯರು ಬಳಸಿದ್ದು ಶಿಕ್ಷಣವನ್ನು ಎಂದು ಹೇಳಬಹುದು. ಸ್ತ್ರೀ ಶಿಕ್ಷಣದ ಮುಖ್ಯ ಉದ್ದೇಶವೆಂದರೆ ಸ್ತ್ರೀಯರ ಮೇಲಿನ ದೌರ್ಜನ್ಯಗಳ ಹಲವು ಮುಖಗಳನ್ನು ಪರಿಚಯಿಸುವುದಾಗಿದೆ. ಅಷ್ಟೇ ಅಲ್ಲದೆ ಶೋಷಣೆಯ ಅಥವಾ ಸಮಸ್ಯೆಯ ಮುಖ್ಯ ನೆಲೆ ಯಾವುದು? ಮತ್ತು ಅದರ ವಿವಿಧ ಪ್ರಕಾರಗಳು ಯಾವುವು? ಅವುಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು? ಎಂಬುದನ್ನು ಇದು ವ್ಯಾಪಕವಾಗಿ ಚರ್ಚಿಸುತ್ತದೆ.

"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೆ ತತ್ರ ದೇವತಾ"- ಅಂದರೆ ಎಲ್ಲಿ ಸ್ತ್ರೀಯರನ್ನು ಗೌರವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ. ಈ ರೀತಿ ಮನು ಸಮಾಜದಲ್ಲಿ ಸ್ತ್ರೀಯರ ಸ್ಥಾನವನ್ನು ಕುರಿತು ಹೇಳುತ್ತಾನೆ. ಅದೇ ಮನು ಮತ್ತೊಂದೆಡೆ "ಸ್ತ್ರೀಯರು ಸ್ವತಂತ್ರಕ್ಕೆ ಅರ್ಹರಲ್ಲ" ಎಂದು ಹೇಳಿ ಸ್ತ್ರೀಯ ಸ್ವತಂತ್ರವನ್ನು ಮೊಟುಕುಗೊಳಿಸಿದ್ದಾನೆ. ಶಂಕರಾಚಾರ್ಯರು 'ನಾರಿ ನರಕಕ್ಕೆ ದಾರಿ' ಎಂದಿದ್ದಾರೆ. ಕ್ರೈಸ್ತ ಧರ್ಮದಲ್ಲಿ ಹೆಣ್ಣನ್ನು ಪಾಪವನ್ನು ಹೊತ್ತು ಜಗತ್ತಿಗೆ ಬಂದವಳು ಹಾಗೂ ಹೆಣ್ಣನ್ನು 'ಅನರ್ಥ, ಅಹಿತಳ ಮೂಲ' ಎಂದಿದೆ. ಹೆಣ್ಣಿಗೆ ಆತ್ಮವೇ ಇಲ್ಲವೆಂಬ ಪ್ರತಿಪಾದನೆ ಮಾಡಿವೆ. (she is a root of

all evils). ಈ ಎಲ್ಲಾ ಹೇಳಿಕೆಗಳನ್ನು ಹೇಳಿರುವವರೆಲ್ಲರೂ ಪುರುಷರೇ ಹಾಗಾಗಿ ಇಲ್ಲಿ ಸ್ತ್ರೀಯರನ್ನು ಕೀಳಾಗಿ ಕಂಡಿರುವುದನ್ನು ಕಾಣಬಹುದು.

ಇವುಗಳೆಲ್ಲವನ್ನು ಗಮನಿಸಿದಾಗ ನಮಗೆ ಪುರಾಣಗಳಲ್ಲಿ ಮತ್ತು ಧರ್ಮಗಳಲ್ಲಿ ಸ್ತ್ರೀಯನ್ನು ಪುರುಷರು ತಮ್ಮ ಹಿಡಿತದಲ್ಲಿ ಇಟ್ಟುಕೊಂಡು ಅವಳನ್ನು ಶೋಷಣೆ ಮಾಡುವುದನ್ನು ಗಮನಿಸಬಹುದಾಗಿದೆ. ಹೆಣ್ಣನ್ನು ಶೋಷಣೆ ಮಾಡಿದರೆ ಮಾತ್ರ ಪುರುಷತ್ವಕ್ಕೆ ಬೆಲೆ ಎನ್ನುವಂತಹ ಭಾವನೆ ಪುರುಷರಲ್ಲಿ ಉಂಟಾಗಿರುವುದು ನಮಗೆ ಕಾಣುತ್ತದೆ.

ಚರಿತ್ರೆಯುದ್ದಕ್ಕೂ ಪುರುಷರು ಸ್ತ್ರೀಯನ್ನು ತಮ್ಮ ಅಂಕೆಯಲ್ಲಿರಿಸಿಕೊಳ್ಳಲು ಯತ್ನಿಸಿದ್ದು ಒಂದು ಸತ್ಯ ಸಂಗತಿ. ಈ ಕ್ರಿಯೆಯ ಹಿಂದಿನ ಮುಖ್ಯ ಉದ್ದೇಶ ಲಿಂಗ ಪ್ರಭೇದವನ್ನು ಅಥವಾ ಲಿಂಗ ತಾರತಮ್ಯವನ್ನು ಮುಖ್ಯವಾಗಿಸಿಕೊಂಡಿದೆ. ಭಾರತೀಯ ಸಾಹಿತ್ಯದಲ್ಲಿ ಕಳೆದ ಒಂದು ದಶಕದಿಂದೀಚೆಗೆ ಸ್ತ್ರೀ ವಿಮೋಚನೆ ಮತ್ತು ಸ್ತ್ರೀವಾದ ಎಂಬ ಪದಗಳು ವಿಸ್ತೃತವಾಗಿ ಬಳಕೆಯಾಗುತ್ತಲಿದೆ. "ಸ್ತ್ರೀ ವಾದವು ಪುರುಷ ಪ್ರಧಾನ ಮತ ಮತ್ತು ಸಂರಚನೆಗಳನ್ನು ವಿಮರ್ಶಿಸುವಂತದ್ದಾಗಿದೆ". ಲಿಂಗ ತಾರತಮ್ಯವನ್ನು ಅಳಿಸಿ ಸ್ತ್ರೀಗೆ ಒಂದು ರೀತಿ ಪುರುಷ ನರಕದಿಂದ ವಿಮೋಚನೆ ನೀಡಬೇಕು ಎಂಬುದು ಸ್ತ್ರೀವಾದಿಗಳ ಮುಖ್ಯ ಉದ್ದೇಶ. ಸತತ ವಿಮರ್ಶೆ ಮತ್ತು ಹೋರಾಟಗಳ ಮೂಲಕ ಈ ಅಸಮಾನ ಸಬಂಧದ ಸನ್ನಿವೇಶವನ್ನು ಬದಲಾಯಿಸಲು ಸಾಧ್ಯವೆನ್ನುವುದು ಸ್ತ್ರೀವಾದಿಗಳ ನಿಲುವು. ಸ್ತ್ರೀ ವಾದವು ಇಂಗ್ಲೀಷ್ ಸಾಹಿತ್ಯದಿಂದ ನಮಗೆ ಬಂದ ಹಲವು ಉಡುಗೊರೆಗಳಲ್ಲಿ ಒಂದಾಗಿದೆ.

ಈ ಹಿನ್ನೆಲೆಯಲ್ಲಿ ಸ್ತ್ರೀವಾದವೆಂದರೆ ನಮ್ಮ ಸಂಸ್ಕೃತಿಯ ವಿಮರ್ಶೆಯೂ ಆಗುತ್ತದೆ. ಆದುದರಿಂದ ಸ್ತ್ರೀವಾದ ದೇಶೀಯವಲ್ಲವೆಂದು ಹೇಳಿದರೆ, ಅದು ಪ್ರಾಯಶಃ ನಮ್ಮ ಸಂಸ್ಕೃತಿ ವಿಮರ್ಶಾತೀತ ಮತ್ತು ಪರಿಪೂರ್ಣವೆಂದು ಹೇಳಿದಂತೆಯೇ ಆಗುತ್ತದೆ.

ಸ್ತ್ರೀವಾದವು ಗಮನಹರಿಸಿರುವ ಮುಖ್ಯ ಅಂಶಗಳೆಂದರೆ

೧] ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರ ಸ್ಥಾನಮಾನ
೨] ಸಮಾಜದಲ್ಲಿ ಮಹಿಳೆಯ (ಅಸ್ಮಿತೆ) ಅಸಮಾನತೆ
೩] ಸ್ತ್ರೀ ಸಂಸ್ಕೃತಿಯ ಪುನರ್ ರಚನೆ
೪] ಸಮಾಜದಲ್ಲಿ ಮಹಿಳೆಯ ಅಪಮೌಲೀಕರಣ
೫] ಲಿಂಗ ಪ್ರಭೇದ ಪರಿಕಲ್ಪನೆಗಳ ದೃಷ್ಟಿಕೋನ
೬] ಸ್ತ್ರೀಯರ ಬಗೆಗಿನ ನಿರ್ಲಕ್ಷ್ಯ ಮತ್ತು ಅಮಾನವೀಯತೆ
೭] ಮಹಿಳೆಯ ಜೈವಿಕ ಸ್ವರೂಪ.
೮] ಮಹಿಳೆಯರಿಗೆ ದೊರೆಯುತ್ತಿರುವ ಅಮಾನ್ಯತೆ.

ಸ್ತ್ರೀವಾದದ ಅರ್ಥ: – ಸಮಾಜದಲ್ಲಿ, ಉದ್ಯೋಗದಲ್ಲಿ ಮತ್ತು ಕುಟುಂಬಗಳಲ್ಲಿ ಮಹಿಳೆಯರ ತುಳಿತ ಮತ್ತು ಶೋಷಣೆಯ ಬಗ್ಗೆ ಅರಿವು ಮೂಡಿಸುವುದು ಮತ್ತು ಪರಿಸ್ಥಿತಿ ಬದಲಾಯಿಸುವುದಕ್ಕಾಗಿ ಪುರುಷರು ಮತ್ತು ಮಹಿಳೆಯರು ಸೇರಿ ನಡೆಸುವ ಪ್ರಜ್ಞಾಪೂರ್ವಕ ಕ್ರಿಯೆಯೇ ಸ್ತ್ರೀವಾದ.

ಕ್ರಾಂತಿಕಾರಕ ತಿರುವುಗಳನ್ನು ಒದಗಿಸಿದ ಮಹತ್ವದ ಘಟ್ಟ. ಧಾರ್ಮಿಕ ವಿಧಿ ನಿಷೇಧಗಳು, ಸಾಮಾಜಿಕ ಕಟ್ಟು ಪಾಡುಗಳು, ಲಿಂಗ ಜಾತಿಯ ಮಿತ್ಯಾ ಬಿಂಬಗಳು ಬಲಹೀನವಾಗಿ ಸಮಾನತೆ ಮತ್ತು ಸಾಮರಸ್ಯದ ಆಶಯಗಳು ಬದುಕಿನ ಸೂತ್ರಗಳಾದವು. ಶೋಷಿತರ ಉದ್ಧಾರ ಮತ್ತು ಸಮಾನ ಸಂಸ್ಕೃತಿಯ ನಿರ್ಮಾಣಕ್ಕಾಗಿ ನಡೆದ ಶರಣರ ಆಂದೋಲನದಲ್ಲಿ ಸಹಜವಾಗಿಯೇ ಮಹಿಳೆಯರ ಪಾಲುಗಾರಿಕೆಗೆ ಪ್ರಾಶಸ್ತ್ಯ ದಕ್ಕಿತು. ಶತಮಾನಗಳ ಬೌದ್ಧಿಕ –ಮಾನಸಿಕ ದಾಸ್ಯದಲ್ಲಿ ತಮ್ಮ ಸ್ವಾತಂತ್ರ್ಯ ಸ್ವಂತಿಕೆ ಮತ್ತು ಸ್ವಾಭಿಮಾನವನ್ನು ಕಳೆದುಕೊಂಡಿದ್ದ ಸ್ತ್ರೀ ಸಮಾಜವು ಮೊದಲ ಬಾರಿಗೆ ತಮ್ಮ ಆಯ್ಕೆ ಆದ್ಯತೆಗಳ ಬಗೆಗೆ ಯೋಚಿಸಿದುದು ವಿಶೇಷ ಸಂಗತಿ. ಧರ್ಮ, ಸಾಹಿತ್ಯ, ಸಮಾಜ ಮತ್ತು ಸಮುದಾಯದ ಆಶಯಗಳೊಂದಿಗೆ ಸ್ಪಂದಿಸುತ್ತ ಆಧ್ಯಾತ್ಮ ಸಾಧನೆಯ ವೈಯಕ್ತಿಕ ತ್ರೀವ್ರತೆಯಲ್ಲಿ ಗ್ರಹಿಸಿದ ಜೀವನಾನುಭವಗಳನ್ನು 'ವಚನ' ಗಳನ್ನಾಗಿಸಿ, ತಮ್ಮ ಸೃಜನಶೀಲ ಪ್ರತಿಭೆಯನ್ನು ಪ್ರಕಟಿಸಿದ ವಚನಕಾರ್ತಿಯರು ಸಮಕಾಲೀನ ಅನುಭಾವ ಪ್ರಪಂಚವನ್ನು ಗಾಢವಾಗಿ ಪ್ರಭಾವಿಸಿದ್ದಾರೆ.

ಶರಣರು ಅಕ್ಕನಂಥ ಒಬ್ಬ ವಚನಕಾರ್ತಿಯನ್ನು ಸೃಷ್ಟಿಸಿದ್ದಕ್ಕಿಂತ ನೀಲವ್ವ, ಗೋಗವ್ವೆ, ಸೂಳೆ ಸಂಕವ್ವರಂಥ ಕೆಳವರ್ಗದ ಹೆಣ್ಣುಮಕ್ಕಳ ಬಾಯಿ ಬೀಗ ತೆರೆದದ್ದು ಒಂದು ಮಹತ್ವದ ಸಂಗತಿಯಾಗಿ ತೋರುತ್ತದೆ. ಮಹಾದೇವಿಯಕ್ಕನ ಜೀವನ ಚರಿತ್ರೆ ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾ ಪ್ರಕರಣವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಅಕ್ಕನಷ್ಟೇ ಚರ್ಚೆಗೆ ಒಳಗಾದ ವಿವಿಧ ತಲೆಮಾರಿನ ಓದುಗರ ಚಿಂತನೆಗೆ ಗ್ರಾಸವಾದ ಕವಯಿತ್ರಿ ಎಂದರೆ ಸಂಚಿ ಹೊನ್ನಮ್ಮ. ಇವಳು ತನ್ನ ಹದಿಬದೆಯ ಧರ್ಮ ಎಂಬ ಗ್ರಂಥದ ಮುಖಾಂತರ ತನ್ನ ಸಾಂಪ್ರದಾಯಿಕ ಪುರುಷ ಪ್ರಧಾನ ಚಿಂತನೆಗಳಿಂದ ಗಮನ ಸೆಳೆದಳು. ಪುರುಷ ನಿರ್ಮಿಸಿದ ಮಾದರಿಯಲ್ಲಿಯೇ ಹೆಣ್ಣಿನ ಜೀವನವನ್ನು ನೋಡ ಬಯಸಿದರೂ ಹೆಣ್ಣು ಗಂಡಿನಲ್ಲಿರುವ ತಾರತಮ್ಯ ಅಸಮಾನತೆಯ ಬಗ್ಗೆ ಕ್ಷೀಣವಾಗಿಯಾದರೂ ದನಿ ಎತ್ತಿರುವುದನ್ನು ಕಾಣಬಹುದು.

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು

ಎಂದು ಹೆಣ್ಣನ್ನು ಶೋಷಿಸಿದವರಿಗೆ ಹೆಣ್ಣಿನ ಮಹತ್ವವನ್ನು ತಿಳಿಸುವ ಕಾರ್ಯವನ್ನು ಈ ಚಳುವಳಿಯ ಪ್ರತಿಪಾದಿಸುತ್ತದೆ. ಅಷ್ಟೇ ಅಲ್ಲದೆ ನಿತ್ಯ ಬದುಕಿನಲ್ಲೂ ಈ ರೀತಿ ಅಸಮಾನತೆ ತೊಲಗಿ ಹೆಣ್ಣಿಗೂ ಸಮಾನ ಅವಕಾಶ ನೀಡಬೇಕು ಎಂದು ಇದು ವಾದಿಸುತ್ತದೆ. 'ಲೋಕದ ಗಂಡರನ್ನು ಒಲೆಯೊಳಗಿಕ್ಕು' ಎಂದು ಹೇಳುವ ಮೂಲಕ ಅಕ್ಕ ಪುರುಷರನ್ನು ಅವರ ಅಧಿಕಾರವನ್ನು ಪ್ರತಿಭಟಿಸುವುದನ್ನು ಗುರುತಿಸಬಹುದು. ಗೊಗ್ಗವ್ವೆ ಎಂಬ ವಚನಕಾರ್ತಿಯ ಒಂದು ವಚನವನ್ನು ಇಲ್ಲಿ ಗಮನಿಸಬಹುದು.

ಗಂಡು ಮೋಹಿಸಿ ಹೆಣ್ಣಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು

ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನ ಪರಿಪೂರ್ಣನೆಂಬೆ.

ಇಲ್ಲಿ ಈ ವಚನಕಾರ್ತಿಯು ಪುರುಷ ಪ್ರಧಾನ ವ್ಯವಸ್ಥೆಗೆ ತನ್ನ ವಿರೋಧ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ. ಗಂಡು-ಹೆಣ್ಣಿನ ಸಂಬಂಧಲ್ಲಿ ಗಂಡಿಗೊಂದು ನೀತಿ ಹೆಣ್ಣಿಗೊಂದು ನೀತಿ ಮಾಡಿ ಹೆಣ್ಣನ್ನು ದೂಷಿಸುವುದರ ಬಗ್ಗೆ ಇವಳು ತನ್ನ ಪ್ರತಿಭಟನೆ ವ್ಯಕ್ತ ಪಡಿಸುತ್ತಾಳೆ.

ಬ್ರಿಟಿಷ್ ವಸಾಹತುಶಾಹಿಯ ಆಗಮನದಿಂದ ಉಂಟಾದ ವಿವಿಧ ಪ್ರತಿಕ್ರಿಯೆಗಳಲ್ಲಿ ನವೋದಯ ಸಾಹಿತ್ಯವೂ ಒಂದಾಗಿದೆ. ವರ್ಣ, ವರ್ಗ, ಲಿಂಗಾಧಾರಿತ ಭಾರತೀಯ ಶ್ರೇಣೀಕೃತ ಸಮಾಜವು ವಸಾಹತುಶಾಹಿಯ ಸಂಪರ್ಕ ಬಂದಾಗ ಒಂದು ರೀತಿಯ ಚಿಕಿತ್ಸೆಗೆ ಒಳಗಾಗಿ ತನ್ನ ಜಡತ್ವವನ್ನು ತೆರೆದುಕೊಂಡ ಹಲವಾರು ಮಹಿಳೆಯರೂ ಈ ಕಾಲದ ಸಾಹಿತ್ಯಕ್ಕೆ ಓದುಗರಾದರು. ಸ್ರಿಯರನ್ನು ಕುರಿತ ಸ್ತ್ರೀ ಸುಧಾರಣ ಚಳುವಳಿಗಳು ಹುಟ್ಟಿಕೊಂಡವು. ಶಿಕ್ಷಣದ ಮೂಲಕ ಮಹಿಳೆಯರಲ್ಲಿ ಒಂದು ರೀತಿಯ ಹೊಸ ಎಚ್ಚರ ಸಾಹಿತ್ಯಕ್ಕೆ ಬಂದು ಸೇರಿತು. ವಿದ್ಯಾಭ್ಯಾಸದ ಲಾಭ ಪಡೆದು, ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಸೂಕ್ಷ್ಮ ಮನಸ್ಸಿನ ಸಂವೇದನಾಶೀಲ ಮಹಿಳೆಯರೂ ಈ ಕಾಲದ ಸಾಹಿತ್ಯ ರಚನೆಯ ಸಮೃದ್ಧಿಗೆ ಕಾರಣವಾಗಿದ್ದಾರೆ.

ನವೋದಯ ಕಾಲದ ಭಾರತೀಯ ಭಾಷೆಗಳಲ್ಲಿ ರಚಿತವಾದ ಕಾದಂಬರಿಗಳಲ್ಲಿ ಕೆಲವೊಂದು ಸಮಾನವಾದ ಅಂಶವನ್ನು ಕಾಣುತ್ತೇವೆ. ಬಂಕಿಮ ಚಂದ್ರ ಚಟರ್ಜಿಯ 'ಇಂದಿರಾ' ಚಂದು ಮೆನನ್ ರವರ 'ಇಂದುಲೇಖ' ಹರಿ ನಾರಾಯಣ ಅಪ್ಪೆಯವರ 'ಪಣ್ ಲಕ್ಷ್ಮಣ್ ಕೋಣ್‌ಗೇತೋ', ಮಿರ್ದಾ ಮೊಹಮದ್ ಹದಿರುಷ್ಟಾರವರ 'ಉಮ್ರಾವ್ ಜಾನ್ ಆದಾ' ಈ ಎಲ್ಲಾ ಕಾದಂಬರಿಗಳು ಲೇಖಕರೇ ಬರೆದವು. ಈ ಕಾದಂಬರಿಗಳಲ್ಲಿ ಸ್ತ್ರೀಯರದೇ ಮುಖ್ಯ ಪಾತ್ರಗಳೇ ಆಗಿವೆ ಎಂಬುದು ಬಹು ಮುಖ್ಯ ಸಂಗತಿಯಾಗಿ ಗಮನಿಸಬಹುದು.

ನವೋದಯ ಕಥಾ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಕನ್ನಡ ಸಾಹಿತ್ಯದ ಲೇಖಕಿಯರದೂ ಬಹು ಮುಖ್ಯ ಪಾತ್ರ. ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲೇ ಬರೆಯಲು ತೊಡಗಿದ್ದ ಆರಂಭದ ಬರಹಗಾರ್ತಿಯರಲ್ಲಿ ಮುಖ್ಯರೆನಿಸಿಕೊಂಡವರು ನಂಜನಗೂಡಿನ ತಿರುಮಲಾಂಬ, ಆರ್.ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾವ್ ಕರ್, ಬೆಳಗೆರೆ ಜಾನಕಮ್ಮ, ಸರಸ್ವತಿ ಬಾಯಿ ರಾಜವಾಡೆ, ಮೊದಲಾದವರನ್ನು ಹೆಸರಿಸಬಹುದು. ಆಧುನಿಕ ಪೂರ್ವ ಲೇಖಕಿಯರ ಬಗ್ಗೆ ಚರ್ಚಿಸುವಾಗ ನಮಗೆ ಕಾಣಸಿಗುವ ಸಾಕಷ್ಟು ಜನ ಲೇಖಕಿಯರು ಹಿಂದಿನ ಶತಮಾನಗಳ ಮಹಿಳಾ ಸಾಹಿತ್ಯಕ್ಕೆ ಸಾಕ್ಷಿಯಾಗಿದ್ದಾರೆ. ಈ ಕಾಲದ ಮೊದಲ ಲೇಖಕಿ, ಸಂಪಾದಕಿ, ಪ್ರಕಾಶಕಿ ಎನಿಸಿಕೊಂಡ ಶ್ರಿಮತಿ ತಿರುಮಲಾಂಬ ಬಹು ಮುಖ್ಯರು. ಇವರ ಸಾಹಿತ್ಯದ ವಸ್ತು, ಸಂವೇದನೆ, ಶೈಲಿ ಮತ್ತು ಪ್ರಾಕಾರಗಳ ದೃಷ್ಟಿಯಿಂದ ಮಹಿಳಾ ಸಾಹಿತ್ಯಕ್ಕೆ ಪ್ರಾರಂಭದಲ್ಲಿ ಅಗತ್ಯವಾಗಿದ್ದ ಗುರುತು ಮತ್ತು ಅತ್ಮ ವಿಶ್ವಾಸವನ್ನು ನೀಡಿದವರು ಇವರು. ಸಾಹಿತ್ಯವನ್ನು ತಮ್ಮ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿ ಸ್ವೀಕರಿಸಿ, ಈ ಕ್ಷೇತ್ರದಲ್ಲಿ ಹಲವು ದಶಕಗಳ ಕಾಲ ತೂಡಗಿಕೊಂಡು, ಪ್ರಕಟಣೆಯತ್ತಲೂ ಮನಸ್ಸು ಮಾಡಿ, ಸ್ರೀಯರ ಸಾಹಿತ್ಯ ಮಾಧ್ಯಮ ಪ್ರವೇಶವನ್ನು ತಿರುಮಾಲಾಂಬ ಅವರು ಅನುಸರಿಸಿದರು. ವರದಕ್ಷಿಣೆ, ವಧೂ ದಹನ, ಬಾಲ್ಯವಿವಾಹ, ವೇಶ್ಯಾಸಮಸ್ಯೆ ಮೋದಲಾದವನ್ನು ಪ್ರತಿಭಟಿಸಿ ತಮ್ಮ ಕಾಂದಂಬರಿಗಳ ಮೂಲಕ ಮತ್ತು ಪತ್ರಿಕೆಯ ಮೂಲಕ ಶಿಕ್ಷಣದ

ಅಗತ್ಯ ಮಹಿಳೆಯರಿಗೆ ಇದೆ ಎಂಬುದನ್ನು ರೂಪಿಸಿದರೂ ವಿಧವಾ ವಿವಾಹವನ್ನು ಮಾತ್ರ ಪ್ರೋತ್ಸಾಹಿಸಲಿಲ್ಲ. ಏಕೆಂದರೆ ಮದುವೆಯೇ ಮಹಿಳೆಯ ಸರ್ವಸ್ವ ಎಂದು ಅವರು ಭಾವಿಸಿರಲಿಲ್ಲ. ಇವರ ಸಾಮಾಜಿಕ ಕಾದಂಬರಿಗಳು ಅಂದಿನ ಕಾಲದ ಮಧ್ಯಮ ವರ್ಗಗಳ ಸಂಸಾರದ ಚಿತ್ರಗಳು . ಮುಖ್ಯವಾಗಿ ಹೆಣ್ಣಿನ ಬದುಕಿನ ಹಲವು ಅಪಸ್ವರಗಳ ಯಶಸ್ವೀ ಚಿತ್ರಣ ಸ್ತ್ರೀಪರ ಹೋರಾಟದ ಮೊದಲ ಧ್ವನಿ ಇಲ್ಲಿದೆ. ಸಂಪ್ರದಾಯ ಬಂಡಾಯ ಎರಡೂ ಒಟ್ಟೊಟ್ಟಿಗೆ ವ್ಯಕ್ತಗೊಳ್ಳುವುದು ಇವರ ವಿಶೇಷ.

ನವೋದಯ ಸಾಹಿತ್ಯ ಕಾಲದಲ್ಲಿ ಅಂದು ಸ್ತ್ರೀ ಶಿಕ್ಷಣದ ಬಗೆಗಿದ್ದ ಕಟುವಾದ ವಿರೋಧ, ಭಯ, ಬೆದರಿಕೆಗಳನ್ನು ವಿರೋಧಿಸಿ ತಿರುಮಲಾಂಬ, ಕಲ್ಯಾಣಮ್ಮ ಮೊದಲಾದವರು ತಮ್ಮ ಕೃತಿಗಳ ಮೂಲಕ ಹಾಗೂ ಪತ್ರಿಕೆಗಳ ಮೂಲಕ ಪ್ರತಿಪಾದಿಸಿದರು. ಮೊದಲ ಹಂತದ ಲೇಖಕಿಯರಾದ ಇವರ ಪ್ರತಿಭಟನೆಯ ಮುಖ್ಯ ನೆಲೆಗಳು ಹಲವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ವಿಧವಾ ಸಮಸ್ಯೆ, ಬಾಲ್ಯ ವಿವಾಹ, ವೇಶ್ಯಾ ಸಮಸ್ಯೆ, ವರದಕ್ಷಿಣೆಯ ಸಮಸ್ಯೆ ಇತ್ಯಾದಿ. ತಿರುಮಲಾಂಬ ಅವರು ತಮ್ಮ ಕೃತಿಗಳಲ್ಲಿ ಮುಖ್ಯವಾಗಿ ವಿಧವಾ ವಿವಾಹಕ್ಕಿಂತ ಕೇಶಮುಂಡನ ಸಮಸ್ಯೆಗೆ ಹೆಚ್ಚು ಒತ್ತು ನೀಡಿ ಅದರ ವಿರುದ್ಧ ದನಿ ಎತ್ತಿದ್ದರು.

೧೯೧೩ ರಲ್ಲಿ ಪ್ರಕಟಣೆಯಾದ "ಸುಶೀಲೆ" ಇವರ ಮೊದಲ ಕಾದಂಬರಿ, ಅಸಮ ದಾಂಪತ್ಯವನ್ನು, ವಿದ್ಯಾವಂತೆಯಾದ ಹೆಣ್ಣೊಬ್ಬಳು ಅನುಭವಿಸಬೇಕಾದ ಕಷ್ಟವನ್ನು ಕುರಿತಾದದ್ದು. ಸ್ತ್ರೀ ವಿದ್ಯಾಭ್ಯಾಸಕ್ಕೆ ಸಾಕಷ್ಟು ವಿರೋಧವಿದ್ದ ಈ ಕಾಲದಲ್ಲಿ ವಿದ್ಯಾವಂತೆಯರು ಎದುರಿಸಬೇಕಾದ ಕಷ್ಟಗಳನ್ನು ಚರ್ಚಿಸುತ್ತಾರೆ. ವಿಧವೆಯರ ದುಃಸ್ಥಿಯನ್ನು ಮುಖ್ಯ ವಸ್ತುವಾಗಿ ಪರಿಗಣಿಸುವ ಕಾದಂಬರಿಗಳನ್ನು ಇವರು ರಚಿಸಿದ್ದಾರೆ. ಆದರೆ ಇವರ ಕಾದಂಬರಿಗಳಲ್ಲಿ ವಿಧವಾ ವಿವಾಹವನ್ನು ಸೂಚಿಸುವಷ್ಟು ಧೈರ್ಯವಹಿಸದಿರುವುದಕ್ಕೆ ಮುಖ್ಯವಾಗಿ ಅವರ ವ್ಯಕ್ತಿತ್ವದ ಸಂದರ್ಭದ ಮಿತಿಯೂ ಕಾರಣವಿರಬಹುದು. ಇವರ ಮುಖ್ಯ ಕಾದಂಬರಿಗಳಲ್ಲೊಂದಾದ 'ಮಾತೃ ನಂದಿನಿ' ಯಲ್ಲಿ ಬಾಲ್ಯವಿವಾಹ, ವರದಕ್ಷಿಣೆ, ಸ್ತ್ರೀ ವಿದ್ಯಾಭ್ಯಾಸ ವಿರೋಧ, ಮದುವೆಯ ದುಂದುವೆಚ್ಚವನ್ನು ವಿರೋಧಿಸುವ ಗಟ್ಟಿ ಪಾತ್ರವಾದ 'ನಂದಿನಿ' ಯನ್ನು ತರುತ್ತಾರೆ. ಹೀಗೆ ಮಹಿಳೆಯರನ್ನು ಕೇಂದ್ರ ಪಾತ್ರಗಳಾಗಿಸಿ ಸಮಾಜ ಸುಧಾರಣೆಯನ್ನೇ ಕಾದಂಬರಿಯ ಮುಖ್ಯ ಧ್ಯೇಯವನ್ನಾಗಿಸಿಕೊಂಡಿರುವ ಇವರ ಕಥಾ ಸಾಹಿತ್ಯವು ಸ್ತ್ರೀ ವಿಮೋಚನೆಗೆ ಒತ್ತು ನೀಡುತ್ತವೆ. ತಿರುಮಲಾಂಬ ಅವರ ಎಚ್ಚರವು 'ಹದಿಬದೆಯ ಧರ್ಮ' ವನ್ನು ಪ್ರತಿಪಾದಿಸಿದ ಹೊನ್ನಮ್ಮನ ಎಚ್ಚರದ ಹಾಗೆ ಪ್ರಾಮಾಣಿಕವಾದದ್ದು ಅಥವಾ ಅದಕ್ಕಿಂತ ಸ್ವಲ್ಪ ವಿಸ್ತಾರವಾದದ್ದು ಎಂದು ಹೇಳಬಹುದು.

ಸ್ತ್ರೀಯರ ಸಮಸ್ಯೆಗಳನ್ನು ಬಿಡಿಸುತ್ತಾ, ಸ್ತ್ರೀಯರಿಗೆ ಗಟ್ಟಿಧ್ವನಿಯನ್ನು ಕೊಟ್ಟ ಲೇಖಕಿ ಅನುಪಮಾ 'ಅನಂತಗೀತ' 'ಹೃದಯವಲ್ಲಭ' ಮೊದಲಾದ ಸರಳ, ಕಪ್ಪು ಬಿಳುಪಿನ ಛಾಯೆಯುಳ್ಳ ಕೌಟುಂಬಿಕ ಕಾದಂಬರಿಯನ್ನು ರಚಿಸಿದ್ದಾರೆ. ೧೯೭೬ ರಲ್ಲಿ 'ಮಾಧವಿ'ಯ ಬದುಕಿನ ಆಳ-ಅಗಲಗಳ ಶೋಧನೆಯಿದೆ, ಪೌರಾಣಿಕ ಆಶಯಗಳ ವೈಜ್ಞಾನಿಕ ವಿಶ್ಲೇಷಣೆಯಿದೆ. ಸ್ತ್ರೀ ದಾಸ್ಯದ ವಿರುದ್ಧ ಬಂಡೆದ್ದ ಮಾಧವಿಯ ಒಳ ತುಮುಲಗಳನ್ನು ನಿಷ್ಠೆಯಿಂದ ದಾಖಲಿಸುವ, ಕಲಾತ್ಮಕವಾಗಿ ನಿರೂಪಿಸುವ ಪ್ರಯತ್ನವು ಪ್ರಶಂಸಾರ್ಹವಾಗಿದೆ.

ರೂಪ ಶೈಲಿಗಳಲ್ಲಿ ಆರಂಭದ ಈ ಕೃತಿಗಳನ್ನು ಹೋಲುವಂತಹ ರಚನೆಗಳನ್ನೇ ಆರ್. ಕಲ್ಯಾಣಮ್ಮನವರು ಬರೆದರು. ಆದರೆ ಕಲ್ಯಾಣಮ್ಮನವರ ಸಾಹಿತ್ಯ ಕೃತಿಗಳಲ್ಲಿ ಸಂಸ್ಕೃತಿಯ ಅಭಿವ್ಯಕ್ತಿ ಹೆಚ್ಚು

ವಿಕಸನದ ಹಾದಿಯನ್ನು ಹಿಡಿದಿದೆ. ಕಲ್ಯಾಣಮ್ಮನವರ ಸಾಮಾಜಿಕ ಕೃತಿಗಳಲ್ಲಿ 'ಪ್ರಿಯಂವದಾ', 'ನಿರ್ಭಾಗ್ಯವನಿತೆ' ಎಂಬ ಕಾದಂಬರಿಗಳು. 'ನಿರ್ಮಲಾ', 'ಬ್ಯಾರಿಸ್ಟರ್ ರಾಮಚಂದ್ರನ್', 'ಇಪ್ಪತ್ತನೇ ಶತಮಾನದ ಅಳಿಯ', 'ಕಪ್ಪಲ್ಲ ಕಬ್ಬು' ಮುಂತಾದ ನಾಟಕಗಳು ಸಾಮಾಜಿಕ ವಿಮರ್ಶೆಯನ್ನೇ ಮುಖ್ಯ ಗುರಿಯಾಗಿಸಿವೆ. ಇವರ ಕಾದಂಬರಿಗಳು ಮತ್ತು ನಾಟಕಗಳನ್ನು ಸಾಮಾಜಿಕ, ಚಾರಿತ್ರಿಕಗಳೆಂದು ಸ್ಪಷ್ಟ ವಿಭಾಗಗಳಡಿ ಸೇರಿಸಬಹುದೆಂದು ತೋರುತ್ತದೆ.

ಕಲ್ಯಾಣಮ್ಮನವರು ತಮ್ಮ ಸಮಕಾಲೀನ ವಸ್ತುಗಳಾದ ವರದಕ್ಷಿಣೆ, ಬಾಲ್ಯವಿವಾಹ, ವಿಧವಾ ಸಮಸ್ಯೆಗಳಿಗೆ ಸ್ಪಂದಿಸಿ, ಪ್ರಗತಿ ಪರವಾಗಿ ಚಿಂತಿಸಿ ತಮ್ಮ ಸಾಹಿತ್ಯಕೃತಿಗಳಲ್ಲಿ ಈ ಚಿಂತನೆಯನ್ನು ಚಿತ್ರಿಸಲು ಪಯತ್ನಿಸಿದ್ದಾರೆ. ಆದರೆ ಕಾದಂಬರಿಗಳ ಶೈಲಿ ಹೆಚ್ಚು ಕಲಾತ್ಮಕತೆಗೆ ಆಗಿರುವಂತೆಯೂ ಕಂಡುಬರುತ್ತದೆ. ಅವರ ಮೊದಲ ಕೃತಿ 'ನಿರ್ಭಾಗ್ಯವನಿತೆ' ಯನ್ನು ಅವರ ಶೈಲಿ ಮತ್ತು ವೈಚಾರಿಕತೆಗೆ ಪ್ರಾತಿನಿಧಿಕ ನಿದರ್ಶನವಾಗಿ ನೋಡಬಹುದು.

ಈ ಕಾದಂಬರಿಯ ಮುಖ್ಯಪಾತ್ರ 'ಇಂದಿರೆ' ಶೀರ್ಷಿಕೆಯೇ ಹೇಳುವಂತೆ ನಿರ್ಭಾಗ್ಯವನಿತೆ. ವಿದ್ಯಾವಂತನೂ, ನಾಗರೀಕನೂ ಆದ ಡೆಪ್ಯೂಟಿ ಕಲೆಕ್ಟರ್ ಹುದ್ದೆಯಲ್ಲಿದ್ದ ಸತೀಶನ ಮಗಳಾಗಿ ಸ್ವತಃ ವಿದ್ಯಾಪ್ರಿಯಳಾದರೂ ತಾನು ಮೆಚ್ಚಿದವನನ್ನು ಬಿಟ್ಟು ವಿದ್ಯೆಯಿಲ್ಲದ 'ನಾರಾಯಣ' ನನ್ನು ಮದುವೆಯಾಗುತ್ತಾಳೆ. ಇದೂ ಬಾಲ್ಯ ವಿವಾಹವೆ. ಒಲ್ಲದ ಗಂಡನು ಮದುವೆಯಾದ ಸ್ವಲ್ಪದರಲ್ಲೇ ಗತಿಸಿದಾಗ ಅವಳು ಬಾಲವಿಧವೆಯಾಗಿ ಈ ಕಾಲದ ಎಲ್ಲ ವಿಧವೆಯರೂ ಅನುಭವಿಸಬೇಕಾಗಿದ್ದ ನೋವನ್ನು ಅನುಭವಿಸುತ್ತಾಳೆ. ಕೇಶಮುಂಡನವೊಂದನ್ನು ಬಿಟ್ಟು ಅವಳನ್ನು ಪ್ರೀತಿಸಿದ್ದ ವಿದ್ಯಾವಂತ, ನಾಗರಿಕ ಸುಂದರೇಶನೂ ಅನಿವಾರ್ಯವಾಗಿ ಮದುವೆಯಾಗಿ, ಪತ್ನಿವಿಯೋಗ ಹೊಂದಿ ಇಂದಿರೆಗಾಗಿ ಹಂಬಲಿಸುತ್ತಾನೆ. ಕೊನೆಗೆ ವಿಧುರ- ವಿಧವೆಯರಿಬ್ಬರ ಪುನರ್ವಿವಾಹವಾಗುತ್ತದೆ. ವಿಧವಾ ವಿವಾಹದ ಮೂಲಕ ಸ್ತ್ರೀಗೆ ಒಂದು ರೀತಿ ವಿಮೋಚನೆ ನೀಡುತ್ತಾರೆ.

ಬಿ. ವೆಂಕಟಾಚಾರ್ಯರು ಕನ್ನಡಿಗರಿಗೆ ಒದಗಿಸಿದ ಬಂಕಿಮಚಂದ್ರನ ಮಾದರಿಗಳಂತೆ ಪಾತ್ರಗಳ ಹೆಸರು, ಭಾವ, ವಿಚಾರಗಳ ನಿರೂಪಣೆ, ಭಾಷೆ ಮುಂತಾದವುಗಳ ಪ್ರಭಾವವನ್ನು ನವೋದಯ ಲೇಖಕರು ತೊರೆಯುತ್ತಿದ್ದ ಕಾಲದಲ್ಲಿ ಕಲ್ಯಾಣಮ್ಮ (ತಿರುಮಲಾಂಬ ಅವರಂತೆ) ಕೊಂಚ ಅದೇ ಹಳೆಯ ರಮ್ಯ ಸಾಹಿತ್ಯ ಕಲ್ಪನೆಯೊಂದಿಗೆ ಈ ಕಾದಂಬರಿಯನ್ನು ರಚಿಸಿರುವಂತೆ ತೋರುತ್ತದೆ. ಎನ್ನುವ ಡಾ.ಬಿ.ಎನ್. ಸುಮಿತ್ರಾಬಾಯಿಯವರ ವಿಶ್ಲೇಷಣೆ ಗಮನಿಸುವಂತಹುದು. ಆದ್ದರಿಂದ ನವೋದಯ ಸಾಹಿತ್ಯದ ಸಂದರ್ಭದಲ್ಲಿ ಬರವಣಿಗೆಗೆ ಕೈಗೊಂಡ ಹೊಸಗನ್ನಡದ ಈ ಆರಂಭದ ಬರಹಗಾರ್ತಿಯರು ನವೋದಯ ಸಾಹಿತ್ಯದ ಲಕ್ಷಣಗಳಿಗಿಂತ ಹೆಚ್ಚಾಗಿ ಅವರ ಹಿಂದಿನವರ ಭಾಷೆ, ಶೈಲಿಗಳನ್ನು ರೂಢಿಸಿಕೊಂಡು, ಪ್ರಗತಿಶೀಲ ಚಳವಳಿಯ ಆಶಯಗಳನ್ನು ತಮ್ಮೊಡಲಲ್ಲಿ ಇಟ್ಟುಕೊಂಡವರು (ಕ. ಸಾ. ಮ.ಸ್ತ್ರೀ. ಚಿಂತನೆ).

ಚಾರಿತ್ರಿಕವಾಗಿ ಮತ್ತು ವ್ಯಕ್ತಿಗತ ಪ್ರತಿಭೆಯಿಂದಾಗಿ ಕನ್ನಡದ ಕಥಾ ಸಾಹಿತ್ಯದಲ್ಲಿ ಪ್ರಮುಖಸ್ಥಾನ ಪಡೆಯಬಲ್ಲ ಅರ್ಹ ಲೇಖಕಿ ಕೊಡಗಿನ ಗೌರಮ್ಮ ಅವರು ಬರೆಯತೊಡಗಿದಾಗ ಆಗಿನ್ನೂ ಸಣ್ಣಕಥೆಗಳ ಆರಂಭದ ಕಾಲ. ಕಲಿತ, ವಿದ್ಯಾವಂತೆಯಾದ, ಎಳೆವಯಸ್ಸಿನ ಗೌರಮ್ಮ ತಮ್ಮ ಸಾಹಿತ್ಯಾಭಿವ್ಯಕ್ತಿಗೆ ಸಣ್ಣಕಥೆಗಳ ರೂಪವನ್ನು ಆರಿಸಿಕೊಂಡರು. ಅವರ ಕಥೆಗಳ ಉಸಿರೆಂದರೆ ಅವರ ಸುತ್ತಲಿನ ಸಮಾಜದ ಅವರ

ಅನುಭವಕ್ಕೆ ಹತ್ತಿರವಾದ ಜಾತಿಯ ತರುಣ–ತರುಣಿಯರ ಮುಗ್ಧಪ್ರೇಮ ವಿವಾಹದ ಹಲವಾರು ಕನಸುಗಳು, ಪ್ರೇಮದ ಹೆಸರಿನಲ್ಲಿ ಎದುರಿಸಬೇಕಾದ ನಿರಾಸೆ ಹಾಗೂ ಮಾನಭಂಗಗಳು ಮುಂತಾದ ಮಧ್ಯಮವರ್ಗದ ಜನರ ಜೀವನ ಚಿತ್ರಣ ನೀಡುತ್ತವೆ. ತರುಣಿಯರ ವಿವಾಹ ಸಂಸ್ಥೆಗೆ ಸಂಬಂಧಪಟ್ಟ ಹತ್ತು ಹಲವಾರು ಮುಖಗಳು ಮತ್ತು ಸುಖದ ಅನುಭವಗಳು– ಇವುಗಳ ಸುತ್ತ ಹರಡಿಕೊಂಡಿವೆ. ಈ ಎಲ್ಲ ಕಥೆಗಳಲ್ಲು ಒಂದು ರೀತಿಯ ಸ್ತ್ರೀ ಪರವಾದ ವೈಚಾರಿಕ ನೆಲೆಗಟ್ಟಿದೆ. ಈ ಕಥೆಗಳು ಎತ್ತುವ ಸಮಸ್ಯೆಗಳು ಮತ್ತು ಪ್ರಶ್ನೆಗಳು ಹೊಸದಲ್ಲವಾದರೂ ಗೌರಮ್ಮ ಅನ್ವೇಷಿಸಿಕೊಂಡ ಕಲಾತ್ಮಕ ರೂಪಗಳಿಂದಾಗಿ ಇವು ವಿಶಿಷ್ಟ ಒಳನೋಟವನ್ನು ತೋರುತ್ತವೆ. ಒಣ ಭಾಷಣಗಳಾಗುವುದಿಲ್ಲ ವಿಚಾರದ ಹೊರೆಯಿಂದ ಬಳಲುವುದಿಲ್ಲ.

ಇಂಗ್ಲೀಷ್ ಶಿಕ್ಷಣ ಮತ್ತು ನಗರೀಕರಣದ ಪ್ರಭಾವದಿಂದಾಗಿ ಗಂಡು–ಹೆಣ್ಣುಗಳ ನಡುವೆ ಪ್ರೀತಿ, ಪ್ರೇಮದ ನಿರೀಕ್ಷೆಗಳು, ಆಕಾಂಕ್ಷೆಗಳು ಮನಸ್ಸಿನಲ್ಲಿ ಜನಿಸುವ ರೀತಿಯನ್ನು ಇವರ ಕಥೆಗಳಲ್ಲಿ ಕಾಣಬಹುದು. ಪ್ರೇಮವಿಲ್ಲದ ಮದುವೆ ಮದುವೆಯೇ ಅಲ್ಲವೆಂದು ಹಲುಬುವ 'ಒಂದು ಚಿತ್ರ'ದ ಕಥೆಯ ರೋಹಿಣಿ, 'ಮರದ ಬೊಂಬೆ' ಕಥೆಯಲ್ಲಿ ಬೋರ್ಡಿಂಗ್ ಸ್ಕೂಲಿನ ಹುಡುಗಿ ಶೈಲಾ ತನ್ನ ಮೇಷ್ಟರನ್ನು ಮದುವೆಯಾಗುವುದು, ತಮ್ಮ ವಿವಾಹ ಅಸಾಧ್ಯವೆನಿಸಿದಾಗ ಪ್ರೇಮಿಯ ಕತ್ತಿಗೆ ಜೀವ ಕೊಡುವ 'ಅಪರಾಧಿ ಯಾರು?' ಕಥೆಯ ಲತಿಫಾ, ತಂದೆಯ ಮನಸ್ಸಿಗೆ ವಿರುದ್ಧವಾಗಿ ತಾನು ಪ್ರೇಮಿಸಿದವಳನ್ನು ಮದುವೆಯಾಗುವ 'ಪ್ರಾಯಶ್ಚಿತ್ತ' ಕತೆಯ ಮೂರ್ತಿ, 'ಸಂನ್ಯಾಸಿ ರತ್ನ' ಕಥೆಯಲ್ಲಿ ಪ್ರೀತಿಸಿ ಮದುವೆಯಗುವ ರತ್ನ ಮತ್ತು ವಾಣಿ, ಸೀತೆ ಮತ್ತು ರಾಜರು–ಇವರೆಲ್ಲಾ ವಿವಾಹ ಸಂಸ್ಥೆಗೆ ಪ್ರಿತಿಯನ್ನು ತುಂಬಿ ಗಂಡು– ಹೆಣ್ಣಿನ ಸಂಬಂಧವನ್ನು ಹೆಚ್ಚು ವ್ಯಾಪಕಗೊಳಿಸುತ್ತಾರೆ. ಗೌರಮ್ಮನವರು ರಚಿಸಿರುವ ಬಹುಪಾಲು ಕಥೆಗಳು ಪತ್ರಗಳ ರೂಪದಲ್ಲಿವೆ. ಇಲ್ಲಿ ಪಾತ್ರಗಳು ಕಥೆಯ ಒಡಲಲ್ಲಿ ತೂರಿಕೊಂಡು ಬಂದಿವೆ. ಅಕ್ಷರ ಸಂಸ್ಕೃತಿಗೆ ಹೊಸದಾಗಿ ತಮ್ಮನ್ನು ತೆರೆದುಕೊಳ್ಳುತ್ತಿದ್ದ ಬಹುಪಾಲು ಸ್ತ್ರೀ ಪುರುಷರು ಈ ತಲೆಮಾರಿನವರಾಗಿದ್ದರಿಂದ ಪಾತ್ರಗಳ ರಚನೆ ಅವರ ಭಾವನಾತ್ಮಕ ಸಂಬಂಧಗಳಿಗೆ ಉತ್ತಮ ಸಂವಹನವಾಗಿದ್ದಂತೆ ಕಂಡುಬರುತ್ತದೆ. ಅದು ಪ್ರೇಮ ಪತ್ರ ಅಥವಾ ಆತ್ಮನಿವೇಧನೆಯೇ ಇರಲಿ, ಇಲ್ಲವೆ ಆತ್ಮಹತ್ಯೆಯ ಟಿಪ್ಪಣಿಯೇ ಆಗಿರಲಿ ಎಲ್ಲವೂ ಪತ್ರಗಳ ಒಕ್ಕಣೆಯಲ್ಲಿ ಚಿತ್ರಿತವಾಗಿವೆ. ವಿದ್ಯಾವಂತ ಯುವಕ–ಯುವತಿಯರಿಂದ ಹಿಡಿದು ವೇಶ್ಯೆ ರಾಜಮ್ಮನವರೆಗೂ ಎಲ್ಲರೂ ಪತ್ರ ರಚನೆಯನ್ನೇ ತಮ್ಮ ಭಾವನೆಗಳ ಮಾಧ್ಯಮವನ್ನಾಗಿ, ನಿವೇಧನೆಗೆ ವಾಹಕವನ್ನಾಗಿ ಮಾಡಿಕೊಂಡಿದ್ದಾರೆ.

ಪತ್ರಗಳಂತೆ ಗೌರಮ್ಮ ಬಳಸಿರುವ ಮತ್ತೊಂದು ತಂತ್ರವೆಂದರೆ ಪತ್ರಿಕೆಗಳ ಸುದ್ದಿಗಳು. ಗಂಡು–ಹೆಣ್ಣಿನ ಸಬಂಧದಿಂದ ಉದ್ಭವಿಸಿರುವ ಸಮಸ್ಯೆಗಳು ಕೌಟುಂಬಿಕ ನೆಲೆಯಲ್ಲಿ ಸಿದ್ಧವಾದದ್ದಾದರೂ, ಅದು ಕೇವಲ ಖಾಸಗಿ ಸಮಸ್ಯೆಯಾಗಿ ಉಳಿಯದೆ, ಗೌರಮ್ಮನವರ ಕಥೆಗಳಲ್ಲಿ ಸಾಮಾಜಿಕ ಆಯಾಮವನ್ನು ಪಡೆಯುತ್ತವೆ. ಬಾಲವಿಧವೆ ಶಾಂತಾ ಹುಸಿ ಆಶ್ವಾಸನೆ ತೋರಿದ ಅತ್ತಿಗೆಯ ಅಣ್ಣನ ಚೆಲ್ಲಾಟದಿಂದ ಗರ್ಭಧರಿಸಿ, ಅವನು ಕೈಬಿಟ್ಟಾಗ ಕೆರೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ (ಒಂದು ಪುಟ್ಟ ಚಿತ್ರ). ಪಂಡಿತರ ಮಗಳು ಪಾರ್ವತಿ, ತಾನು ಮನೆಗೆಲಸ ಮಾಡುತ್ತಿದ್ದ ಒಡೆಯನಿಂದಲೇ ಅತ್ಯಾಚಾರಕ್ಕೊಳಗಾಗಿ, ಅವನಿಂದಲೇ ಮನೆಯಿಂದ ಹೊರಗೆ ದಬ್ಬಲ್ಪಟ್ಟಾಗ, ಬೇಸರದಿಂದ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ. ಈ ದುರಂತದಿಂದ ಅವಳನ್ನು ಪಾರುಮಾಡಿದ ನೆರಳು ಕೊಟ್ಟವರ ಇಚ್ಛೆಯಂತೆ, ಶಾಶ್ವತ ರಕ್ಷಣೆಗಾಗಿ ಮುಸಲ್ಮಾನ ಧರ್ಮ ಸ್ವೀಕರಿಸುತ್ತಾಳೆ. (ಅಪರಾಧಿಯಾರು?) ಕಾನ್ವೆಂಟಿನಲ್ಲಿ ಓದುತಿದ್ದ ಬಾಲಕಿ ಪ್ರಭಾಕುಮಾರಿ ತನ್ನ ಪ್ರಣಯಿಯ ಸಾವಿನಿಂದ ಹತಾಶಳಾಗಿ, ಶಾಲೆ ಬಿಟ್ಟು ಯಾರಿಗೂ ಹೇಳದೆ ಹೊರಟು

ಹೋಗತ್ತಾಳೆ (ಕೆಲವು ಕಾಗದಗಳು). ಬಡ ತಂದೆಯ ಮಗಳಾಗಿ ವರದಕ್ಷಿಣೆ ಕೊಡಲಾಗದ್ದರಿಂದ ತನ್ನ ತಂದೆಯ ವಯಸ್ಸಿನ ಮುದುಕನ ಮೂರನೆಯ ಹೆಂಡತಿಯಾಗಲು ಒಪ್ಪದೆ ಶಾಂತಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ (ಆಹುತಿ). ಇವೆಲ್ಲಾ ವಾರ್ತಾ ಪತ್ರಿಕೆಗಳಲ್ಲಿ ಸುದ್ದಿಯ ತುಣುಕುಗಳಾಗಿ ಕಾಣಿಸಿಕೊಳ್ಳುತ್ತವೆ. ಹೆಣ್ಣು ಅನುಭವಿಸುವ ವರದದಕ್ಷಿಣೆಯ ಸಮಸ್ಯೆಯಿರಲಿ, ಪ್ರಣಯ ಭಂಗವಿರಲಿ, ಅತ್ಯಾಚಾರವಿರಲಿ, ವಿವಾಹೇತರ ಸಂಬಂಧದ ಪರಿಣಾಮವಿರಲಿ, ಎಲ್ಲ ಸಮಸ್ಯೆಗಳಿಗೂ ಸಾಮಾಜಿಕ ಆಯಾಮಗಳಿವೆಯೆಂಬುದನ್ನು ಕತೆಗಾರ್ತಿ ಈ ತಂತ್ರದ ಮೂಲಕ ಸೂಚಿಸುತ್ತಾರೆ.

ಉತ್ತರ ಕರ್ನಾಟಕದ ಮೊದಲ ಕತೆಗಾರ್ತಿಯೆಂಬ ಕೀರ್ತಿಗೆ ಪಾತ್ರರಾದ ಶ್ರೀಮತಿ ಶ್ಯಾಮಲಾದೇವಿ ಬೆಳಗಾವ್‌ಕರ್ ನವೋದಯ ಕಥಾಸಾಹಿತ್ಯ ಸಂದರ್ಭದಲ್ಲಿ ಅಪರೂಪದ ಹೆಸರಾಗಿ ನಿಲ್ಲುತ್ತಾರೆ. ಸಾಮಾನ್ಯವಾಗಿ ಅಂದಿನವರೆಗೂ ಲೇಖಕಿಯರು ಆರಿಸಿಕೊಂಡ ವಸ್ತುಗಳಿಗಿಂತ ಭಿನ್ನವಾದ ಮತ್ತು ವೈವಿಧ್ಯಮಯವಾದ ಕಥಾವಸ್ತುಗಳನ್ನು ಆಯ್ದುಕೊಂಡವರು ಶ್ಯಾಮಲಾರವರ ಕಥಾ ಪ್ರಪಂಚದಲ್ಲಿ ವಿವಿಧ ಜಾತಿಯ ಹಾಗೂ ವರ್ಗಗಳ ಜನರ ಜೀವನಾನುಭಗಳ ಒಳನೋಟಗಳಿವೆ. ದುಡಿದು ತಿನ್ನುವ ಗಟ್ಟಿಗಿತ್ತಿಯರು, ಹೆತ್ತವರಿಂದಲೇ ವೇಶ್ಯಾವೃತ್ತಿಗೆ ದಬ್ಬಲ್ಪಟ್ಟವರು, ಒಲ್ಲದ ಮನಸ್ಸಿನಿಂದ ಮದುವೆಯಾಗಿ ನೋವಿಗೆ ಸಿಕ್ಕಿದವರು, ವಿವಾಹದ ಪಾವಿತ್ರ್ಯತೆಯನ್ನು ಪ್ರಶ್ನಿಸಬಲ್ಲ ಪಾತ್ರಗಳು, ವಿವಾಹೇತರ ಮತ್ತು ವಿವಾಹ ಪೂರ್ವ ಸಂಬಂಧಗಳಲ್ಲಿ ಲೈಂಗಿಕ ಸಂಬಂಧವನ್ನು ಹೊಂದಿ ನೋವು ತಿಂದವರು- ಹೀಗೆ ಹಲವು ಮುಖದ ಮಹಿಳಾ ಜಗತ್ತು ಇವರ ಕಥೆಗಳಲ್ಲಿ ತೆರೆದುಕೊಳ್ಳುತ್ತದೆ.

ಲೈಂಗಿಕ ಸಮಸ್ಯೆಯ ಹಲವಾರು ಸಾಮಾಜಿಕ ಮುಖಗಳು ಶ್ಯಾಮಲಾರವರ ಕಥಾಸಾಹಿತ್ಯದ ವಸ್ತುಗಳಾಗಿವೆ. ಕುಡುಕ ಮತ್ತು ಬೇಜವಾಬ್ದಾರಿ ಗಂಡನಿಂದ ಬೇರೆಯಾದ ಕಂತಿ (ಕಂತಿಯ ದೇಶಾಂತರ), ವಿವಾಹಪೂರ್ವ ಸಬಂಧದಿಂದ ತಾಯಿಯಾಗಿ ವ್ಯಥೆಪಡುವ ಶಾಲಿನಿ (ವಸಂತರಾಯನ ಮದುವೆ), ತಾಯಿಯ ಒತ್ತಡದಿಂದ ವೇಶ್ಯಾವೃತ್ತಿಗೆ ತಳ್ಳಲ್ಪಡುವ ಲೀಲಾ (ತಾಯಿ ಮಾತಾಯಿ) ಮತ್ತು ಹೆತ್ತವರ ದುರಾಸೆಯಿಂದ ವೇಶ್ಯೆಯಾಗಬೇಕಾದ ಚಂದ್ರಾ (ಕರುಳ ಕತ್ತರಿ) ಈ ಎಲ್ಲಾ ಸ್ತ್ರೀ ಪಾತ್ರಗಳು ಒಂದಲ್ಲ ಒಂದು ರೀತಿಯಲ್ಲಿ ನೋವು ತಿನ್ನುವುದು ಸಮಾಜದ ವೃತ್ತಿಗಳಿಂದಲೇ ಆದರೂ ಅವರ ನೋವಿನ ಪರಿಣಾಮ ಮತ್ತು ವ್ಯಾಪ್ತಿ ಸಾಮಾಜಿಕ ಸ್ವರೂಪವನ್ನು ಪಡೆಯುತ್ತದೆ.

ತಮಗೆ ಪ್ರತಿಕೂಲವಾದ ಸಾಮಾಜಿಕ ಪರಿಸರವಿದ್ದಾಗ್ಯೂ ಅದನ್ನು ಎದುರಿಸಿ ನಿಲ್ಲಬಲ್ಲ ಗಟ್ಟಿ ಸ್ತ್ರೀ ಪಾತ್ರಗಳನ್ನು ಶ್ಯಾಮಲಾ ತನ್ನ ಕತೆಗಳಲ್ಲಿ ಚಿತ್ರಿಸಿರುವುದು ಆ ಕತೆಗಳ ವೈಚಾರಿಕ ದೃಷ್ಟಿಕೋನವೂ ಆಗಿದೆ. ಗಂಡನ ಕಾಟ ತಡೆಯಲಾರದೆ ಅವನನ್ನು ಬಿಟ್ಟು ಹೋದ ಕಂತಿ (ಕಂತಿಯ ದೇಶಾಂತರ) ತನ್ನ ಜೀವನವನ್ನು ತನ್ನ ದುಡಿಮೆಯಿಂದಲೇ ರೂಪಿಸಿಕೊಳ್ಳುವುದು, ಈ ದುಡಿಮೆಯ ಮಹತ್ತಿನಿಂದಲೇ ಅವಳ ವ್ಯಕ್ತಿತ್ವಕ್ಕೊಂದು ಅರ್ಥಬರುವುದು ಎಂಬ ನಂಬಿಕೆ ಇದೆ. ಇವು ಶ್ಯಾಮಲಾರವರ ಕಥಾಪಾತ್ರಗಳ ಜೀವನ ಸಿದ್ಧಾಂತವೆಂದರೂ ತಪ್ಪಾಗದು. ಆದ್ದರಿಂದಲೇ ಇವರ ಕಥೆಗಳಲ್ಲಿ ಬರುವ ವಿವಿಧ ಜಾತಿಯ, ವರ್ಗದ ಸ್ತ್ರಿಪಾತ್ರಗಳು ವಿದ್ಯಾವಂತರಿರಲಿ, ಇಲ್ಲದಿರಲಿ ಸ್ವಾವಲಂಬನೆಗೆ ತುಡಿಯುವವರು. ಇಲ್ಲವೇ ಅದಕ್ಕೆ ಬೇಕಾದ ಅರ್ಹತೆಯನ್ನು ಗಳಿಸಿಕೊಳ್ಳಲು ಇಚ್ಛಿಸುವವರು. ಇಲ್ಲವೇ ಅದಕ್ಕೆ ಬೇಕಾದ ಅರ್ಹತೆಯನ್ನು ಗಳಿಸಿಕೊಳ್ಳಲು ಇಚ್ಛಿಸುವವರು. ವೇಶ್ಯಾವೃತ್ತಿಯ ಕರಾಳತೆಯಿಂದ ಹೊರಬರುಲು ಬಯಸುವ ಪ್ರೇಮ, ಲೀಲಾರಂತಹವರು ವಿದ್ಯಾಕಾಂಕ್ಷಿಗಳು, ಸ್ವತಂತ್ರ ಮನೋಭಾವದವರೂ ಆಗಿ ಚಿತ್ರಿತರಾಗಿದ್ದಾರೆ.

ಶ್ಯಾಮಲಾರವರ ಕಥೆಗಳ ಪಾತ್ರದ ಸಂಕೀರ್ಣತೆ ಬೆರಗು ಹುಟ್ಟಿಸುವಂತಹುದು. ಹೆಣ್ಣಿನ ಶೋಷಣೆಯ ಕಾರಣವಾಗಲೀ, ಅದಕ್ಕೆ ಪರಿಹಾರವಾಗಲೀ, ಕಪ್ಪು ಬಿಳುಪಿನ ಸಿದ್ಧಸೂತ್ರಗಳಾಗಲಿ ಇವರ ಕತೆಗಳಲ್ಲಿ ಮೂಡಿ ಬಂದಿಲ್ಲ. ಇವರ ಕತೆಗಳಲ್ಲಿ ಒಳ್ಳೆಯ ಸವತಿಯರೂ, ಒಳ್ಳೆಯ ಗಂಡಂದಿರೂ ಇದ್ದಾರೆ. ಹಾಗೆಯೇ ತಮ್ಮ ಮಕ್ಕಳ ಬಾಳಿಗೆ ಬೆಂಕಿಯಿಡುವ ಹೆತ್ತವರು ಇದ್ದಾರೆ. ಸಮಾಜದಲ್ಲಿ ಸಾಂಪ್ರದಾಯಿಕವಾಗಿ ಪ್ರಚಲಿತವಾಗಿರುವ ಮನಸ್ಸು, ಸ್ವಭಾವ ನಂಬಿಕೆಗಳನ್ನು ಇವರ 'ಕರುಳ ಕತ್ತರ', 'ಸವತಿಯರು' ಕಥೆಯಲ್ಲಿ ಮೊದಲ ಹೆಂಡತಿಯಿರುವಾಗಲೇ ಸಂತಾನದ ಕಾರಣಕ್ಕಾಗಿ ಮತ್ತೊಂದು ಮದುವೆಯಾಗುವ ಕೃಷ್ಣರಾಯನ ಮತ್ತು ಅವನ ಕುಟುಂಬದ ನಿರೀಕ್ಷೆಯನ್ನು 'children Manufacturing company ltd' ಎಂದು ಗೇಲಿ ಮಾಡುತ್ತಲೇ ಹೆಣ್ಣಿಗೆ ಪ್ರಾಮುಖ್ಯತೆ ಇರುವುದು ಅವಳ ಸಂತಾನೋತ್ಪತ್ತಿಯ ಕ್ರಿಯೆಯಿಂದಾಗಿ ಎಂಬುದನ್ನು ವಿಡಂಬಿಸುತ್ತಾರೆ.

ಹೀಗೆ ನವೋದಯದ ಉಳಿದ ಯಾವ ಲೇಖಕಿಯರಲ್ಲೂ ಕಾಣಸಿಗದಷ್ಟು ವಸ್ತು ವೈವಿಧ್ಯತೆ ಮತ್ತು ಸಂಕೀರ್ಣತೆ ಶ್ಯಾಮಲಾರವರ ಕತೆಗಳಲ್ಲಿವೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಚಲಿತ ಹೆಣ್ಣಿನ ನಂಬಿಕೆ, ಮೌಲ್ಯಗಳನ್ನು ಹೆಚ್ಚು ಚಿಕಿತ್ಸಕ ದೃಷ್ಟಿಯಿಂದ ನೋಡಿದ ಮತ್ತು ಅದನ್ನು ಕಲಾತ್ಮಕವಾಗಿ ರೂಪಿಸಿದ ಹಿರಿಮೆ ಶ್ಯಾಮಲಾದೇವಿಯವರದು.

ನವೋದಯ ಸಾಹಿತ್ಯದಲ್ಲಿ ಉಲ್ಲೇಖಿಸಲೇಬೇಕಾದ ಲೇಖಕಿ ಬೆಳಗೆರೆ ಜಾನಕಮ್ಮ. ಇವರು ತಮ್ಮ ಕವನಗಳಲ್ಲಿ ಬಳಸಿರುವ ಬಂಧ, ರೂಪಶಕ್ತಿ ಈ ಕಾಲದ ಶ್ರೇಷ್ಠ ಕವನಗಳಿಗೆ ಸರಿಸಾಟಿಯಾಗಿ ನಿಲ್ಲಬಲ್ಲವಾಗಿವೆ, ಎನ್ನುತ್ತಾರೆ ಕವಯಿತ್ರಿ ಸ. ಉಷಾ (ಕನ್ನಡ ಸಾಹಿತ್ಯ ಸಂದರ್ಭ, ಪುಟ: ೨೩೦, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ). ಇವರ ಕವಿತೆಗಳು ಹೆಚ್ಚು ಪ್ರಾಮಾಣಿಕ ಅಭಿವ್ಯಕ್ತಿಯಿಂದಾಗಿ ಹೆಚ್ಚು ಆತ್ಮೀಯವಾಗುತ್ತದೆ. ಸ್ತ್ರೀ ಸಂವೇಧನೆಯ ಮೊಟ್ಟ ಮೊದಲ ಎಳೆಗಳನ್ನು ಇವರ ಕಾವ್ಯಗಳಲ್ಲಿ ಗುರುತಿಸಬಹುದಾಗಿದ್ದು ಅನ್ಯಾಯವನ್ನು ಕುರಿತು ಬರೆಯುವಾಗ ಅವರ ಲೇಖನಿ ಹರಿತವಾಗುತ್ತದೆ.

ಕಸಕ್ಕಿಂತ ಕಡೆಯಾಯ್ತೆ
ಹೆಣ್ಣು ಜನ್ಮವು ನಿನಗೆ
ಈ ಭಾರ ಹೊರಿಸುವುದಕೆ
ಲಂಚಕೋರನು ನೀನು
ವಂಚನೆಯ ಮಾಡಿರುವೆ
ಮೃದುತನದ ಸ್ತ್ರೀವರ್ಗಕೆ
ಗಿಡವೆಂದು ಬಗೆದೆಯೋ
ಹೆಣ್ಣು ಜನ್ಮದ ಒಡಲ ಫಲಗಳನು ಸೃಜಿಸುವುದಕೆ? (ಚಂಡಶಾಸನ)

ಬದುಕನ್ನು ಅದು ಸಾಗುವ ದಾರಿಯಲ್ಲೇ ಹಿಂಬಾಲಿಸುವ ನವೋದಯದ ದಾರಿಯನ್ನು ನಿರಾಕರಿಸಿ ಬೇರೆ ಬದುಕನ್ನು ಸಾಗಿಸಬಹುದು ಎಂಬ ಉದ್ದೇಶದಿಂದ ಹುಟ್ಟಿತು ಪ್ರಗತಿಶೀಲ ಸಾಹಿತ್ಯ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರ ಮತ್ತು ಸಮಾಜದ ಕೆಳಸ್ತರದ ಜನರ ಬದುಕನ್ನು ಹತ್ತಿಕಲ್ಪಟ್ಟವರ ನೆಲೆಯಲ್ಲಿ ಸಮಾನವಾಗಿ ಗುರುತಿಸಿದ್ದು ಮೊದಲಿಗೆ ಕಾಣುವುದು ಪ್ರಗತಿಶೀಲರಲ್ಲಿ. ಜಾತಿ, ವರ್ಗ, ಲಿಂಗಾಧಾರಿತ ಅಸಮಾನತೆಯಿಂದ ಶ್ರೇಣೀಕೃತವಾಗಿರುವ ಸಾಮಾಜಿಕ ವಾಸ್ತವವನ್ನು ಬುದ್ಧಿ ಪೂರ್ವಕವಾಗಿ ಸಾಹಿತ್ಯದಲ್ಲಿ

ಸಮಸ್ವೀಕರಿಸಲು ಯತ್ನಿಸಿದವರು ಪ್ರಗತಿಶೀಲ ಬರಹಗಾರರು. ಸ್ತ್ರೀಯರ ಸಮಸ್ಯೆಗಳನ್ನು ಕೆಳಜಾತಿ ವರ್ಗಗಳ ಜನರ ಸಮಸ್ಯೆಯನ್ನು ನವೋದಯದವರಿಗಿಂತ ಸೂಕ್ಷ್ಮವಾಗಿ ತೆರೆದಿಡುವಲ್ಲಿ ಯತ್ನಿಸಿದ್ದರು. ಬಡತನದಲ್ಲಿ ನರಳುವ, ವಿದ್ಯೆಯೂ ಇಲ್ಲದ ಹೆಣ್ಣುಮಕ್ಕಳು ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಬಂದು ಮರ್ಯಾದೆಯಿಂದ ದುಡಿಯುವ ಅವಕಾಶವೂ ಇಲ್ಲದೆ ನಗರಗಳ ಗಿಲೀಟಿನ ಬದುಕಿಗೆ ಮಧ್ಯವರ್ತಿ ತಲೆಹಿಡುಕರ ಕಾಮ ಪೀಪಾಸೆಗೆ ಬಲಿಯಾಗಿ ವೇಶ್ಯೆಯರಾದ ಹೆಣ್ಣುಗಳನ್ನು ಸಹಾನುಭೂತಿಯಿಂದ ನೋಡುವ ಮನಸ್ಸನ್ನು ಇದು ಬಿಚ್ಚಿಡುತ್ತದೆ.

ಪ್ರಗತಿಶೀಲ ಚಳುವಳಿ ತನ್ನೊಳಗಿನ ಒತ್ತಡಗಳು, ಅದನ್ನು ಕಾರಿಕೊಳ್ಳುವ ಆವೇಶಯುತ ಬರವಣಿಗೆಯ ತೀವ್ರತೆ, ಪ್ರಖರತೆ, ಅತಿಯಾದ ಅಬ್ಬರ, ಘೋಷಣೆ ಇವುಗಳ ಒನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕೇವಲ ಕಡಿಮೆ ಅವಧಿ ಜೀವಿಸಿದ್ದು. ಈ ಚಳುವಳಿಯಲ್ಲಿ ವಿಶೇಷವಾಗಿ ಲೇಖಕಿಯರು ತಮ್ಮನ್ನು ತಾವು ಗುರುತಿಸಿಕೊಳ್ಳದಿದ್ದರೂ, ಈ ಯುಗದಲ್ಲಿ ಬರೆದ ಲೇಖಕಿಯರು ತಮಗೇ ತಿಳಿಯದಂತೆ ಕೆಲವು ಅಂಶಗಳಿಗೆ ಬದ್ದರಾಗಿದ್ದರು.

ಪ್ರಗತಿಶೀಲ ಸಾಹಿತ್ಯದಲ್ಲಿ ಎಚ್.ವಿ. ಸಾವಿತ್ರಮ್ಮ, ತ್ರಿವೇಣಿ, ಎಂ,ಕೆ ಇಂದಿರಾ, ಸುಶೀಲಕೊಪ್ಪರ, ಡಾ ಅನುಪಮ ನಿರಂಜನ ಮುಂತಾದ ಲೇಖಕಿಯರಲ್ಲಿ ಮೌಲ್ಯಾಧಾರಿತ ಕುಟುಂಬ ವ್ಯವಸ್ಥೆಯ ಅಸಮತೋಲನಗಳನ್ನು, ಅಸಮಾನತೆಗಳನ್ನು ಪರಿಶೀಲಿಸುವ ಕೆಲಸ ಮಾಡುತ್ತಾರೆ. ಇವರ ಕಥಾ ಜಗತ್ತಿನೊಳಗೆ ಕುಟುಂಬವೇ ಪ್ರಧಾನಕ್ಷೇತ್ರ. ಇಲ್ಲಿ ಹೆಣ್ಣು ಎದುರಿಸುವ ವರದಕ್ಷಿಣೆಯ ಸಮಸ್ಯೆ, ಗಂಡಿನ ದಬ್ಬಾಳಿಕೆ, ಶೋಷಣೆಗೆ ಈಡಾದ ಅವಳ ಸಂಕಟ, ಅಸಹಾಯಕತೆಗಳು, ಇವಕ್ಕೆಲ್ಲಾ ಪೂರಕತೆಯನ್ನು ಒದಗಿಸುವ ವಾತಾವರಣವನ್ನು ಚಿತ್ರಿಸುತ್ತಾರೆ.

ಎಚ್.ವಿ. ಸಾವಿತ್ರಮ್ಮ ಮುಖ್ಯವಾಗಿ ಬರೆದಿರುವುದು ಕಥೆಗಳನ್ನು (ನಿರಾಶ್ರಿತೆ, 'ಪತೀಕ್ಷೆ', 'ಮರುಮದುವೆ', ಮತ್ತು ಲಕ್ಷ್ಮಿ ಇವು ಕಥಾ ಸಂಕಲನಗಳು) ಮತ್ತು ಎರಡು ಕಾದಂಬರಿಗಳನ್ನು. ಸಾವಿತ್ರಮ್ಮನವರ ಕಥೆಗಳು ಇಲ್ಲಿ ನಮಗೆ ಪ್ರಸ್ತುತವಾಗುವುದು. ಅವರು ಆರಿಸಿಕೊಂಡಿರುವ ಸಮಕಾಲೀನ ಸಾಮಾಜಿಕ ಬದುಕಿನ ವಸ್ತುಗಳಿಂದ ಮತ್ತು ಅಂಥ ವಸ್ತುಗಳ ನಿರ್ವಹಿಸುವ ಕ್ರಮದಿಂದ. ಹೊರನೋಟಕ್ಕೆ ಕೌಟುಬಿಕ ಸ್ಥಿತಿ, ವಿವಾಹ ಸಂಸ್ಥೆ ಮತ್ತು ಸ್ತ್ರೀ ಪುರುಷ ಸಂಬಂಧಗಳ ಪ್ರಚಲಿತ ಸ್ವರೂಪಗಳು ಇಲ್ಲಿ ಚರ್ಚೆಗೆ ಒಳಗಾಗುವುದು ಸೂಕ್ಷ್ಮ ನೋಟಕ್ಕೆ ಅರಿವಾಗಬಲ್ಲದು. ಅವರ ಬಹು ಚರ್ಚಿತ ಪ್ರಗತಿಪರ ಕಥೆ 'ನಿರಾಶ್ರಿತೆ' ನಮಗೆ ಎರಡು ರೀತಿಯಾಗಿ ಮುಖ್ಯವಾಗುತ್ತದೆ.

೧] ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿನ ಚಟುವಟಿಗಳನ್ನು ಅನೇಕ ಲೇಖಕರು ದಾಖಲು ಮಾಡುತ್ತ ಸ್ವಾತಂತ್ರ್ಯವನ್ನು ಪಡೆದುಕೊಂಡ ವಿಜೃಂಭಣೆಯಲ್ಲಿ ಆ ಸಂದರ್ಭದಲ್ಲಿ ಘಟಿಸಿದ ಕಹಿ ನೆನಪುಗಳನ್ನು ಮರೆಯುತ್ತಾರೆ. ಆದರೆ ಸಾವಿತ್ರಮ್ಮನವರು ಈ ಸಂದರ್ಭದಲ್ಲಿ ಘಟಿಸಿದ ಕಹಿ ನೆನಪುಗಳನ್ನು, ಹೆಣ್ಣಿನ ಬದುಕಿನಲ್ಲಿ ಅದು ಉಂಟು ಮಾಡಿದ ಅಲ್ಲೋಲಕಲ್ಲೋಲಗಳನ್ನು ತಮ್ಮ ಕಥೆ, ಪಾತ್ರಗಳ ಮೂಲಕ ವಿವರಿಸುತ್ತಾರೆ.

೨] ಕೋಮಲವಾದ, ಜಾತಿಯತೆಗಳ ಜಾಲದಲ್ಲಿ ಸಿಕ್ಕು ತಮ್ಮ ಬಾಳ ಹಾಳು ಮಾಡಿಕೊಂಡ ಹೆಣ್ಣು ಮಕ್ಕಳ ನೋವಿನ ಕ್ಷಣಗಳನ್ನು ತೆರೆದಿಡುತ್ತಾರೆ.

ಸಾವಿತ್ರಮ್ಮನವರು ಆ ಕಾಲದಲ್ಲೇ ಅತ್ಯಾಚಾರಕ್ಕೊಳಗಾದ ಹೆಣ್ಣನ್ನು ಸಮಾಜವಿರಲಿ,

ಕಟ್ಟಿಕೊಂಡ ಗಂಡನೇ ಸಹಾನುಭೂತಿಯಿಂದ ನಡೆಸಿಕೊಳ್ಳದ ದುರಂತವನ್ನು ಹೇಳುತ್ತದೆ. ತನ್ನ ಮೇಲಿನ ಹಕ್ಕನ್ನು ಮಹಿಳೆ ತಾನೇ ಉಳಿಸಿಕೊಳ್ಳಲು ಮಾಡುವ ಹೋರಾಟದ ಇನ್ನೊಂದು ಮುಖ ವೈವಾಹಿಕ ಚೌಕಟ್ಟಿಲ್ಲದೆಯೂ ತಾಯ್ತನವನ್ನು ಆರಿಸಿಕೊಳ್ಳುವಿಕೆ ಇವರ ಸುಪ್ತ ಬಯಕೆಯ ಸೀತೆ ಕತೆಯಲ್ಲಿದೆ.

'ಮಾಯದ ನೆನಪು' ಸ್ಮರಣೆ, ಸರ್ಪಮತ್ತರ, ಮರುಮದುವೆ, ಸುಪ್ತಬಯಕೆ, ಸರಿದ ಬೆರಳು, ಪ್ರತೀಕ್ಷೆಗಳಂಥ ಕತೆಗಳಲ್ಲಿ ಸ್ತ್ರೀ–ಪುರುಷ ಸಬಂಧಗಳನ್ನು ಹಲವಾರು ಮಗ್ಗುಲುಗಳಿಂದ ವಿಶ್ಲೇಷಣೆ ಮಾಡುವಲ್ಲಿ ಲೈಂಗಿಕತೆ, ತಾಯ್ತನದ ಹಕ್ಕು, ವಿವಾಹದ ಹೊರಗಿನ ಪ್ರೇಮ ಮುಂತಾದ ಪಶ್ನೆಗಳನ್ನು ಎತ್ತುತ್ತಾರೆ. ಸ್ತ್ರಿಯರ ನೈತಿಕ ನಿರ್ಧಾರ, ಗಟ್ಟಿ ನೆಲೆಗಳ ಜೊತೆ ಪುರುಷರ ಮಾನಸಿಕ ಒಳತೋಟಿಯನ್ನು ವಿಶೇಷವಾಗಿ ದಾಖಲಿಸುವ ಸಾವಿತ್ರಮ್ಮನ ಒತ್ತಡಗಳು, ವ್ಯಕ್ತಿಗತ ದೌರ್ಬಲ್ಯಗಳೂ ಸ್ತ್ರೀಯರ ದುರಂತಕ್ಕೆ ಕಾರಣವಾಗಿರುವುದುನ್ನು ಸಹಾನುಭೂತಿಯಿಂದ ನಿರೂಪಿಸುವಂತೆಯೇ ಪುರುಷರಲ್ಲಿನ ಸ್ವಾರ್ಥ, ದೌರ್ಬಲ್ಯಗಳಂತೆಯೇ ಅವರೊಳಗಿನ ದಯೆ ಅನುಕಂಪ, ವಿವೇಕ, ವಿವೇಚನೆಗಳನ್ನೂ ಗುರುತಿಸುವಂಥ ವಿಶಾಲ ದೃಷ್ಟಿಯ ಕತೆಗಾರ್ತಿಯಾಗಿದ್ದಾರೆ.

ತ್ರಿವೇಣಿಯವರ ಕಥಾಲೋಕದ ವೈಶಿಷ್ಟ್ಯ–ಸಾವಿತ್ರಮ್ಮನವರದಕ್ಕಿಂತ ಬಹು ಚರ್ಚಿತವಾದದ್ದು. ವಾಸ್ತವಿಕವಾಗಿ ಸ್ತ್ರೀ ಸಂಬಂಧಿತ ಮೌಲ್ಯಗಳನ್ನು ನವೋದಯದ ಕಲ್ಯಾಣಮ್ಮ, ಗೌರಮ್ಮ, ಶ್ಯಾಮಲಾದೇವಿಯಂಥವರು ಪ್ರಬುದ್ಧ ರೀತಿಯಲ್ಲಿ ನಡೆಸಿದ್ದರೂ ಕನ್ನಡ ಸಾಹಿತ್ಯ ಚರಿತ್ರೆ ಮಾತ್ರ ಅತಿಯಾಗಿ ಕಣ್ಣುಕುಕ್ಕುವಂತಿದ್ದ ತ್ರಿವೇಣಿಯವರ ರಚನೆಗಳಿಂದ ಮಾತ್ರ ಇಂಥ ಅಂಶವನ್ನು ಗುರುತಿಸುವ ರೂಢಿಯನ್ನು ಬೆಳೆಸಿಕೊಂಡಿದೆ. ತ್ರಿವೇಣಿಯವರಿಗಿಂತ ಮೊದಲು ಬರೆದ ಎಷ್ಟೋ ಲೇಖಕಿಯರು ಅಲ್ಪಾಯುಷಿಗಳಾಗಿದ್ದದ್ದು, ಅವರ ಕೃತಿಗಳು ಕಾಲದಿಂದ ಕಾಲಕ್ಕೆ ಬೆಳೆಯುತ್ತ, ಚರಿತ್ರೆಯಲ್ಲಿ ದಾಖಲೆಗಳನ್ನು ಸೃಷ್ಟಿಮಾಡಲು ಸಾಧ್ಯವಾಗದಿದ್ದದೂ ಇದಕ್ಕೆ ಕಾರಣವಾದೀತು.

ಮೂವತ್ತುನಾಲ್ಕು ವರ್ಷಗಳಲ್ಲಿ ಇಪ್ಪತ್ತು ಕಾದಂಬರಿಗಳನ್ನು, ಮೂರು ಕಥಾ ಸಂಕಲನಗಳನ್ನು ಬರೆದ ತ್ರಿವೇಣಿಯವರ ಬರಹಗಳಲ್ಲಿ ಉದ್ದಕ್ಕೂ ಹೆಣ್ಣಿನ ಸ್ವತಂತ್ರ ವ್ಯಕ್ತಿತ್ವದ ಆಸೆ, ಆಕಾಂಕ್ಷೆ, ಅವುಗಳ ಹತ್ತಿಕ್ಕುವಿಕೆಯಿಂದ ಬದುಕು ಬಗೆಯ ಚಿಂತನೆ ಎದ್ದು ತೋರುತ್ತದೆ. ತ್ರಿವೇಣಿ ಬರೆಯತೊಡಗಿದ ಕಾಲಕ್ಕೆ ಇದು ಎಷ್ಟೊಂದು ಹಳತಾಗಿತ್ತು ಎನ್ನುವುದನ್ನು ಇದುವರೆಗಿನ ವಿವೇಚನೆಯಲ್ಲೇ ಗ್ರಹಿಸಬಹುದು ವ್ಯಕ್ತಿಗಳ ರೂಪದಲ್ಲಿ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಅಂಶಗಳು ಹೇಗೆ ಪಾತ್ರವಹಿಸುತ್ತವೆ ಎಂಬುದರ ಅರಿವಿನೊಂದಿಗೆ ಸ್ತ್ರೀಯ ನೆಲೆಯಿಂದ ಸಮಸ್ಯೆಗಳನ್ನು ವಿಶ್ಲೇಷಿಸಿದ್ದು ತ್ರಿವೇಣಿಯವರೊಬ್ಬರದೇ ವಿಶಿಷ್ಟತೆ ಕೂಡ ಅಲ್ಲ. ಆದರೆ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ವಸ್ತುವಾಗಿಸಿಕೊಂಡು ಚಿತ್ತಾಕರ್ಷಕ ರೀತಿಯಲ್ಲಿ, ಸರಳ, ಚತುರ ಭಾಷೆಯಲ್ಲಿ ಕೊಂಚ ಸ್ತ್ರೀ ಪಕ್ಷಂತತೆಯನ್ನು ದಿಟ್ಟವಾಗಿಯೇ ಪ್ರಕಟಿಸುತ್ತಾ ಅವರು ಬರೆದದ್ದು ವಿಶೇಷವಾಗಿ ಜನರ ಮನವನ್ನು ಸೆಳೆಯಿತು.

ಬಹುಮಟ್ಟಿಗೆ ತ್ರಿವೇಣಿ ಚಿತ್ರಿಸುವ ಸ್ತ್ರೀ ಸಮಸ್ಯೆಗಳು ಮಾನಸಿಕ ಸಹಾನುಭೂತಿಯ ಮೂಲಕ ಗೃಹೀತವಾದದ್ದು. ಸಾವಿತ್ರಮ್ಮನವರ ಅನುಭವ ಗ್ರಹಿಕೆ ಕೂಡ ಇದೇ ರೀತಿಯದು. ಹಾಗಿದ್ದೂ ಸಾಂಸ್ಕೃತಿಕ ಪರಿಸರ ವ್ಯಕ್ತಿಯಲ್ಲಿ ಬಿತ್ತುವ ನಂಬಿಕೆಗಳು ಹೇಗೆ ತಲೆಮಾರಿನಿಂದ ತಲೆಮಾರಿಗೆ ರವಾನೆಯಾಗುತ್ತವೆ ಮತ್ತು ಹೇಗೆ ರವಾನಿಸುವ ಪ್ರಮುಖ ವಾಹಕಗಳು ಇಲ್ಲಿ ಸ್ತ್ರೀಯರೇ ಆಗಿರುತ್ತಾರೆಂಬುದನ್ನು ತ್ರಿವೇಣಿ ಗುರುತಿಸಬಲ್ಲರು. ಕೀಲುಗೊಂಬೆ ಕಾದಂಬರಿಯ ಅಜ್ಜಿ, ತಾಯಿ, ಮಗಳು ಇಂಥ ಚಿತ್ರದ ಮಾದರಿಯಾಗಿದ್ದಾರೆ. ಬಡ ಮಧ್ಯಮ ವರ್ಗದ ತಂದೆ ತಾಯಿಗಳ ಒಬ್ಬಳೇ ಮಗಳು ಸೀತೆ ಜಾಣೆ, ಮೆದು ಮನಸ್ಸಿನವಳು, ಓದಿನಲ್ಲಿ

ಚುರುಕು, ಆದರೆ ಬಡತನ ಹೆಚ್ಚು ಓದಿದ ಹೆಣ್ಣಿಗೆ ಮದುವೆಗೆ ಗಂಡು ಸಿಗಲಾರದೆಂಬ ವಾಸ್ತವದ ಆತಂಕಗಳಿಂದ ಅವಳ ಓದು ಹತ್ತು ವರ್ಷಕ್ಕೆ ಮೊಟಕುಗೊಳ್ಳುತ್ತದೆ. ಮುಂದೆ ಓದಬೇಕೆಂಬ ಸೀತೆ ಹಂಬಲಕ್ಕೆ ಅಜ್ಜಿ ಹೇಳುತ್ತಾಳೆ. 'ಸಂಸಾರ ಮಾಡೋಕೆ ಓದು ಬೇಕಾಗಿಲ್ಲ ಸೀತು, ಈಗ ನಾವೆಲ್ಲ ಓದಿಯೇ ಸಂಸಾರ ಮಾಡಿದೆವೆ? ಈಗಿನಿಂದ ಮನೇಲಿ ಕಲಸಕಾರ್ಯ ಕಲಿತುಕೋ' ಅತಿ ತಿಳಿವಿನ ಕಿಶೋರಿಗೆ ಎಣ್ಣೆ ಒತ್ತುವ ಹೊತ್ತಲ್ಲಿ ಅವಳಿಗೆ ಹಿರಿಯರು 'ಎರೆಯುವ' ತಿಳುವಳಿಕೆ ಎಂದರೆ 'ಮುತ್ತೈದೆ ಸಾವಿತ್ರಿಯಾಗಿ ಗಂಡ ಹೇಳಿದ ಹಾಗೆ ಕೇಳಿಕೊಂಡಿರು ಎನ್ನುವುದು. ಇಂಥ ಸ್ಥಿತಿಯನ್ನು ಇತರ ಪ್ರಗತಿಶೀಲರೂ ಚಿತ್ರಿಸುತ್ತಾರೆ. ಆದರೆ ತ್ರಿವೇಣಿಯವರ ಸೀತೆ (ನಿರಂಜನರ ಕೃತಿಗಳಲ್ಲಿ ಮಾತ್ರ ಕಾಣುವಂತೆ) ಪ್ರಯತ್ನಿಸಬಲ್ಲಳು; ಗೋಪಿ ಎಣ್ಣೆ ಇಡುವಾಗ ಹೆಂಡತಿ ಹೇಳಿದ ಹಾಗೆ ಕೇಳಿಕೊಂಡಿರೂಂತ ಹರಸುತ್ತೀಯೇ ನಮ್ಮ? ಈಗ ತಾಯಿಯ ಶತಮಾನಗಳ ನಂಬಿಕೆಯ ಹೊರೆ ಹೊರೆಗೆ ಬರುತ್ತದೆ. ಅವನಿಗೇಕೆ ಹೆಂಡತಿಯ ಗುಲಾಮಗಿರಿ? ಗಂಡೋ ಮತ್ತಿನ ಚೆಂಡೋಂತ ಹೆಟ್ಟಿದ್ದಾನೆ, ಮತ್ತು ಬಿಡದ ಸೀತೆ 'ನಮಗೇಕೆ ಹಾಗೆ ಆಶೀರ್ವಾದ ಮಾಡ್ತೀಯ? ಎಂದು ಕೇಳಿದಾಗ ಮತ್ತೊಂದು ಜ್ಞಾನಧಾರೆ. ಹೆಂಗಸಿಗೆ ಗಂಡನೇ ದೇವರು. ಗಂಡನ ಸೇವೆ ಮಾಡುವುದೇ ಹೆಂಗಸಿನ ಧರ್ಮ, ಪತಿಯೇ ಪರದೈವ? ಹೀಗೆ ಲಿಂಗಾಧರಿತ ದ್ವಿಸ್ತರ ನೀತಿ ಹೆಣ್ಣಿನಿಂದ ಹೆಣ್ಣಿಗೆ ಹರಿದು ಸಿಗುತ್ತದೆ.

ಎಷ್ಟೋ ಬುದ್ಧಿವಂತಿಕೆ, ಓದಿನ ಬಗ್ಗೆ ಆಸಕ್ತಿ, ಸಾಧನೆಯ ಮಹತ್ವಾಕಾಂಕ್ಷೆಯಿದ್ದರೂ ಒಳ್ಳೆಯ ಸಂಬಂಧ ಬಂದಾಗ ಮದುವೆ ಮಾಡಿಬಿಟ್ಟು ತಮ್ಮ ಹೊಣೆ ಕಳೆದುಕೊಳ್ಳುವ ಹೆತ್ತ ಹಿರಿಯರ ಆಸೆ, ಅವರನ್ನು ಧಿಕ್ಕರಿಸಿ ಸ್ವತಂತ್ರವಾಗಿ ಓದುವ ಹಂಬಲ ಈಡೇರಿಸಿಕೊಳ್ಳಲು ಆರ್ಥಿಕ ಪಾರತಂತ್ರ್ಯ, ಒಲ್ಲದ ಮದುವೆಗೆ ತನ್ನನ್ನು ತೆತ್ತುಕೊಳ್ಳುವಂಥ ಸ್ಥಿತಿಗೆ ಮೀರಳನ್ನು ತಳ್ಳುತ್ತದೆ. ಸ್ವಭಾವ, ಆಸಕ್ತಿಗಳ ಅಸಾಮರಸ್ಯದ ಮೇಲೆ ಹುಟ್ಟಿದ ದಾಂಪತ್ಯ- ಮಗುವಿನ ಸಾವಿನೊಂದಿಗೆ ಅವಸಾನ ಹೊಂದುತ್ತದೆ. ತಾಯಿಯೂ ಆಗಲಾರದ ಅನಿವಾರ್ಯತೆಯಲ್ಲಿ ಮತ್ತೆ ಓದಿ ವೈದ್ಯಳಾಗುವ ಹಂಬಲಕ್ಕೆ ಗಂಡನ ಆರ್ಥಿಕ ಬಲ, ಬೆಂಬಲ ದೊರೆತು ಸಫಲಳಾದರೂ ಸಾಂಸಾರಿಕ ಬದುಕಿಗೆ ಅವಳು ಎರವಾಗುವುದು ಅನಿವಾರ್ಯ.

ಸ್ತ್ರೀಯ ವಿವಾಹಪೂರ್ವ ಮತ್ತು ವಿವಾಹೇತರ ಸಂಬಂಧಗಳ ಬಗೆಗಿನ ತ್ರಿವೇಣಿಯವರ ಮಥನವನ್ನು 'ಮೊದಲ ಹೆಜ್ಜೆ', 'ಸೋತು ಗೆದ್ದವಳು', 'ತಾವರೆ ಕೊಳ'ದಂಥ ಕೃತಿಗಳಲ್ಲಿ ಕಾಣಬಹುದು. ಪ್ರಗತಿಶೀಲರಲ್ಲಿ ಬಹುಮುಖ್ಯ ಲಕ್ಷಣವಾಗಿರುವ ಹಾಗೆ, ತ್ರಿವೇಣಿ ಕೂಡ ಇಲ್ಲೂ ನೈತಿಕತೆಯಿಂದ ಮುಕ್ತವಾದ ಅರಾಜಕತೆಯನ್ನು ಸಮರ್ಥಿಸಲಾರರು. ಆದರೆ ಪರಿಸ್ಥಿಗಳ, ಮನಸ್ಥಿತಿಗಳ ಒತ್ತಡಗಳಿಂದ ವ್ಯಕ್ತಿಗಳು ಆ ದಾರಿಯತ್ತ ನಡೆದಾಗ ಸ್ತ್ರೀಯರನ್ನು ಮಾತ್ರವೇ ಹೊಣೆಯಾಗಿಸಿ, ನಿರ್ದಯವಾಗಿ ತಿರಸ್ಕರಿಸುವ ಸಾಂಪ್ರದಾಯಿಕ ದೃಷ್ಟಿಯನ್ನು ಅವರು ಖಂಡಿಸಿದ್ದಾರೆ. ರಮಾ (ಹೂವು ಹಣ್ಣು), ವನಜಾ (ಅವಳ ಮಗಳು), ಭಾರತಿ (ಸೋತುಗೆದ್ದವಳು), ರತ್ನ (ತಾವರೆಯ ಕೊಳ) ಮತ್ತು ಮೊದಲ ಹೆಜ್ಜೆಯ ನಾಯಕಿ ಇವರೆಲ್ಲರ ಪರಿಸ್ಥಿತಿಗಳು ಸನ್ನಿವೇಶಗಳು ತಂದೊಡ್ಡುವ ಒತ್ತಡಗಳು ವಿಭಿನ್ನವಾಗಿರುವುದನ್ನು ತ್ರಿವೇಣಿ ದಾಖಲಿಸುತ್ತಾರೆ. ಮನಶ್ಶಾಸ್ತ್ರ ಸಾಮಾಜಿಕ ವಿಷಮತೆಗಳ ಅರಿವಿನ ಹಿನ್ನೆಲೆಯಿಂದ ಉದಾರವಾದ ಸಹಾನುಭೂತಿಯಿಂದ ಇವರ ನ್ಯಾಯದ ವಿರುದ್ಧ ಧ್ವನಿಯೆತ್ತಿದ್ದಾರೆ. ಆದರೆ ಒಟ್ಟಾರೆ ಸ್ತ್ರೀಯರನ್ನು ಬಲಿಪಶುವನ್ನಾಗಿಸುವ ಮೂಲದಲ್ಲೇ ಇವರು ವಿಷಮತೆಯನ್ನು ಅವರ ರಚನೆಗಳು ಕಾಣಿಸುವುದಿಲ್ಲ. ಇಂಥ ಅರಿತವನ್ನು ಸಿದ್ಧಾಂತದ ಮಟ್ಟಿಗಾದರೂ ಪ್ರಕಟಿಸುವ ಯತ್ನವನ್ನು ಅನುಪಮಾ ನಿರಂಜನರ ಸಾಹಿತ್ಯದಲ್ಲಿ ಕಾಣಬಹುದು.

ಕತೆ, ಕಾದಂಬರಿಗಳೆರಡರಲ್ಲೂ ಅನುಪಮಾ ತಾತ್ವಿಕ ಸೂತ್ರವೊಂದನ್ನು ಏಕರೂಪದ್ದು ಎನ್ನಬಹುದಾದ ರೀತಿಯಲ್ಲಿ ಅಳವಡಿಸಲು ಬುದ್ಧಿಪೂರ್ವಕವಾಗಿ ಯತ್ನಿಸುವಲ್ಲಿ ಪ್ರಗತಿಶೀಲರ ಪ್ರಭಾವವನ್ನು ಗುರುತಿಸಬಹುದಾಗಿದೆ. ಅನುಪಮಾ ಅನೇಕ ಕಥೆ, ಕಾದಂಬರಿಗಳು ಪ್ರಸಕ್ತ ವ್ಯವಸ್ಥೆಯಲ್ಲಿನ ವರ್ಗ, ಜಾತಿ, ಲಿಂಗಾಧಾರಿತ ವೈಷಮ್ಯಗಳನ್ನು ವಸ್ತುವಾಗಿರಿಸಿಕೊಂಡಿವೆ. 'ಮಣ್ಣಿನ ದಿಬ್ಬ' ಆ ಮೂರು ಮನೆಗಳು, ಒಂಟಿ ಹಾಯಿ, ರೂವಾರಿಯ ಲಕ್ಷ್ಮಿ, ಮಣ್ಣು, ಚಕ್ರಗಳು, ಅಣ ಉಡುಗಿ ಮೊದಲಾದ ಕಥೆಗಳಲ್ಲಿ ಮತ್ತು 'ನೂಲುನೇಯ್ದ ಚಿತ್ರ, ಕಣಿವೆಗೆ ಬಂತು ಬೇಸಗೆ, ಎಳೆ, ಕೊಳಚೆಕೊಂತೆದಾನಿಗಳು ಮತ್ತು ಘೋಷ, ಮಾಧವಿ, ಮುಕ್ತಿಚಿತ್ರ' ಗಳಂಥ ಇತ್ತಿಚಿನ ಕಾಂದಬರಿಗಳಲ್ಲಿ ಅವರು ಸ್ಪಷ್ಟವಾಗಿ ಬಡವರ ರೈತರ, ಕೂಲಿಕಾರರ, ದಲಿತರ ಮತ್ತು ಸ್ತ್ರೀಯರ ಪರವಾದ ನಿಲುವಿನಿಂದ, ಸಹಾನುಭೂತಿಯಿಂದ ಬರೆದಿದ್ದಾರೆ. ಈ ಎಲ್ಲ ಅಪಮಾನಿತ ಬವಣೆಗಳೇ ಗಿಡಿದಿರುವ ಬದುಕನ್ನು ವಿಶ್ಲೇಷಿಸಲು ಯತ್ನಿಸುವಾಗ ಅನುಪಮಾ ವಹಿಸುವ ಮುಖ್ಯ ಎಚ್ಚರವೆಂದರೆ, ಈ ಕೆಳಸ್ತರದ ಜನರ ಬದುಕಿಗೆ ಸಾಪೇಕ್ಷವಾಗಿ ಇಂಥವರನ್ನು ಒತ್ತರಿಸಿ ಬದುಕಿರುವ ಸಿರಿವಂತರು, ಬಂಡವಾಳಶಾಹಿಗಳು, ಮೇಲ್ಜಾತಿಯವರು, ಪುರೋಹಿತಶಾಹಿಗಳು. ರಾಜಕೀಯ ವ್ಯವಸ್ಥೆ, ಪುರುಷ ಪ್ರಪಂಚವಿರುವುದನ್ನು ಅವರು ಗುರುತಿಸುತ್ತಾರೆ.

ಸ್ತ್ರೀ- ಪುರುಷರೆಂಬ ಅಂತರವಿಲ್ಲದ, ಆದರೆ ಸಹಕಾರದಿಂದ ಕೂಡಿದ ನಿರಂತರ ಯಾಂತ್ರಿಕ ದುಡಿಮೆ, ಉಸಿರಾಡುವ ಹೋರಾಟಕ್ಕಾಗಿ, ಹಸಿವು, ಬಡತನ, ಅದ್ಧಿನಗಳು, ಮೇಲಿನವರ ದಬ್ಬಾಳಿಕೆಗಳು, ಸ್ವಾರ್ಥ ಕ್ರೌರ್ಯಗಳಿಗೆ ಇರುವ ಸಹ ಬಲಿಯಾಗುವಂತೆ ಮಾಡುವ ಮೂಲ ಕಾರಣಗಳು ನಿರಕ್ಷತೆ, ಮೌಢ್ಯ, ಜಾತಿ, ಧರ್ಮಗಳ ವಿವಿಧ ಸ್ತರದ ಕಟ್ಟುಪಾಡುಗಳು. ಈ ಅಂಶವನ್ನು ತುಂಬ ಸಹಜವಾದ ನೈಜವೆನ್ನಬಹುದಾದ ಸನ್ನಿವೇಶ, ಭಾಷೆ, ಸಂಭಾಷಣೆಗಳ ಮೂಲಕ ಸರಳವಾಗಿ ಚಿತ್ರಿಸುತ್ತಾರೆ ಅನುಪಮಾ.

ಅನುಪಮಾ ಚಿತ್ರಿಸುವ ಈ ಎಲ್ಲಾ ಬಡ ಶ್ರಮಿಕ ವರ್ಗದ ಮಂದಿ ಅಸಂಘಟಿತರು. ಆದ್ದರಿಂದ ಅವರ ಸಮಸ್ಯೆಗಳು ಬಲಪಡೆದ ಹೋರಾಟವಾಗದೆ, ವ್ಯಕ್ತಿಗತ ನೆಲೆಗಳಲ್ಲಿ ತೊಳಲಾಟಗಳಾಗಿರುವುದೇ ಹೆಚ್ಚು. ಅಲ್ಲದೆ ಈ ಚಿತ್ರಗಳಲ್ಲಿ ಕಾಣುವಂಥ ಮುಗ್ಧ ಸಹಕಾರ ವಾಸ್ತವದ ಈ ದುಡಿಮೆಯ ಬದುಕಿನಲ್ಲಿ ಇಷ್ಟು ಸರಾಗವಾಗಿ ಕಾಣುವಂತಹುದಲ್ಲ. ಸ್ತ್ರೀ ಪುರುಷರ ಅಂತರವಂತೂ ಸಮಾಜದ ಯಾವ ಸ್ತರವನ್ನೂ ಸ್ಪರ್ಶಿಸದೆ ಉಳಿಸಲಾರದಂಥ ಸಂಸ್ಕೃತಿಯಲ್ಲಿ ನಾವಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಅನುಪಮಾ ಬಡಜನರ ಬಗ್ಗೆ ತಳೆವ ಉದಾರ, ಸಹಾನುಭೂತಿ, ಈ ವ್ಯಕ್ತಿಗಳು ಅಮಾಯಕರೆಂಬ ಚಿತ್ರವನ್ನು ನೀಡಬಲ್ಲದಾದರೂ, ಇಂಥ ಚಿತ್ರ ಕೇವಲ, ಆಶಾವಾದವಾಗಬಲ್ಲುದೇ ಹೊರತು, ಪೂರ್ಣವಾಸ್ತವತೆಯದಲ್ಲ.

ಕಾದಂಬರಿಗಳೊಳಗೆ ಅನುಪಮಾ ತ್ರಿವೇಣಿಯವರ ಮಾದರಿಗಳನ್ನು ಎದುರಿಗೆ ಇಟ್ಟುಕೊಂಡು ಬರೆದ ಅವಧಿಯಲ್ಲಿ ನಾಯಕಿ ಪ್ರಧಾನವಾದದ್ದರಿಂದ ಕುಟುಂಬ, ವಿವಾಹದಂಥ ಸಂಸ್ಥೆಗಳ ನೆಲೆಯಲ್ಲಿ ಪ್ರಚಲಿರವಿರುವ ಸ್ತ್ರೀ-ಪುರುಷ ಸಂಬಂಧಗಳ ಅಸಮಾನ ನೆಲೆಗಳನ್ನು ಗುರುತಿಸಲು ಯತ್ನಿಸಿದ್ದಾರೆ. ಸಂಕೋಲೆಯೊಳಗಿಂದ, ಹಿಮದ ಹೂ, ಸ್ನೇಹಪಲ್ಲವಿ, ಋಣ, ಚಿತ್ತಮೋದನ ಮುಂತಾದ ಕಾದಂಬರಿಗಳಲ್ಲಿ ಶಿಕ್ಷಣ, ಉದ್ಯೋಗದತ್ತ ಹೊರಳಿರುವ ಅಡುಗೆ ಮನೆಯ ಶಾಶ್ವತ ಬಂಧನದಿಂದ ಹೊರಬರಲು ಯತ್ನಿಸುವ ಮಧ್ಯಮವರ್ಗದ ಸ್ತ್ರೀಯರ ಆಕಾಂಕ್ಷೆಗಳನ್ನು ಕುರಿತು ಬರೆದರು. ಸಂಪ್ರದಾಯನಿಷ್ಠ ಸಮಾಜದೊಳಗೆ ಇಂಥ ಆಸೆ, ಆಕಾಕ್ಷೆಗಳನ್ನು ಹತ್ತಿಕ್ಕುವ ಶಕ್ತಿಗಳು, ಹಿತಾಸಕ್ತಿಗಳು ವ್ಯಕ್ತಿಯ ಸುತ್ತಲಿನ ಪರಿಸರದಲ್ಲಿ ಮತ್ತು ಅಂಥ ಪರಿಸರ ವ್ಯಕ್ತಿಯೊಳಗೆ ರೂಪಿಸಿರುವ ಸಾಂಸ್ಕೃತಿಕ ಮೌಲ್ಯಗಳಲ್ಲೂ ಸೇರಿಕೊಂಡಿರುವುದನ್ನು ಅವರು ದಾಖಲಿದರು. 'ಹಿಮದ ಹೂ' ಕಾದಂಬರಿಯಲ್ಲಿ ಉದ್ಯೋಗ ಕ್ಷೇತ್ರದ ಸಾಧನೆಯ ಮಹತ್ವಾಕಾಂಕ್ಷೆಗೂ,

ಸಾಂಸಾರಿಕ ಬದುಕಿಗೂ ನ್ಯಾಯ ಸಲ್ಲಿಸಲೆತ್ನಿಸಿದಾಗ ಹುಟ್ಟುವ ದುಡಿವ ಮಹಿಳೆಯ ದ್ವಂದ್ವವನ್ನು ಚಿತ್ರಿಸಿದರು. ಕೆಳಜಾತಿ, ವರ್ಗಗಳ ಮಹಿಳೆಯರ ಬದುಕಿನ ತುಂಬ ವ್ಯಾಪಿಸಿರುವ ಸಮಸ್ಯೆಗಳನ್ನು ಅನುಪಮಾ ತುಂಬು ಸಹಾನುಭೂತಿಯಿಂದ ಚಿತ್ರಿಸಲು ಮಾಡಿದ ಯತ್ನಗಳನ್ನು 'ಕಣಿವೆಗೆ ಬಂತು ಬೇಸಗೆ', ಕೊಳಚೆಕೊಂಪೆಯ ದಾನಿಗಳು ಮುಂತಾದವುಗಳಲ್ಲಿ ಕಾಣಬಹುದು. ಮಾಧವಿ, ಘೋಷ, ಮುಕ್ತಿ ಚಿತ್ರ, ಮೂಲಮುಖಿಗಳಲ್ಲಿ ಸಮಕಾಲೀನ ಸ್ತ್ರೀವಾದಿ ಸಿದ್ಧಾಂತದ ಪ್ರಬಲ ಘೋಷಣೆಯೇ ಇದೆ. ಈ ರೀತಿಯಲ್ಲಿ ಮಹಿಳಾವಾದಿ ನೆಲೆಯಿಂದ ಸಾಮಾಜಿಕ ಅನುಭವಗಳನ್ನು ಅರ್ಥೈಸುವ ಬಗೆಯ ಯತ್ನಗಳ ಜಾತಿ, ವರ್ಗ ಅಸಮಾನತೆಗಳ ನೆಲೆಯ ಮಹಿಳಾ ಸ್ಥಿತಿಯ ಶೋಧನಾ ಯತ್ನಗಳಿಗೂ ಏಕಸೂತ್ರವೆಂದು ಗ್ರಹಿಸಬಹುದಾದ ವೈಚಾರಿಕತೆಯೊಂದನ್ನು ರೂಪಿಸುವುದರಲ್ಲಿ ಅನುಪಮಾ ರಚನೆಗಳಲ್ಲಿ ಕೊರತೆ ತಲೆದೋರುತ್ತದೆ.

ಪ್ರಗತಿಶೀಲ ಅವಧಿಯಲ್ಲಿ ಬರೆಯತೊಡಗಿದ ಕೆಲವರು ಮುಂದಿನ ಸಾಹಿತ್ಯ ಚಳುವಳಿಗನ್ನು ಎದುರಿಸಿ, ಅರಗಿಸಿಕೊಂಡು, ಬೆಳೆಯುತ್ತ ಬರೆದರು. ನಿರಂಜನ, ಚದುರಂಗ, ಬಲ್ಲಾಳರ ಇಂಥ ಬೆಳವಣಿಗೆಯಿಂದ ಉತ್ಕೃಷ್ಟ ಕೃತಿಗಳನ್ನು ಉತ್ತರ ಕಾಲದಲ್ಲಿ ನೀಡುವುದು ಸಾಧ್ಯವಾಯಿತು. ಹಾಗೆ ನೋಡಿದಾಗ ಅನುಪಮಾ ಕೂಡ 'ಚಿತ್ತಮೋಹನ' ದ ನೆಲೆಯಿಂದ ಮೂಲಮುಖಿಯವರೆಗೆ ಸಾಕಷ್ಟು ಬೆಳೆಯುತ್ತಾ, ಬದಲಾಗುತ್ತಾ ಸಾಗಿರುವುದು ಸ್ಪಷ್ಟವಾದ ಇತ್ಯಾತ್ಮಕ ಸಂಗತಿಯಾಗಿದೆ. ಆದರೆ ಈ ಬೆಳವಣಿಗೆಯ ಮೂಲಕ ಆ ಇತರ ಲೇಖಕರಿಗೆ ಸಾಧ್ಯವಾದ ಸಮಗ್ರತೆಯ ನೆಲೆಯೊಂದು ಅನುಪಮಾಗೆ ದಕ್ಕುವುದು ಬಾಕಿ ಉಳಿಯಿತು. ಅನುಪಮಾ ಅವರ ಮಾರ್ಗದಿಂದ ತುಂಬ ದೂರ ಉಳಿದ ಎಚ್.ವಿ. ಸಾವಿತ್ರಮ್ಮನವರು ಎಂಬತ್ತರ ದಶಕದಲ್ಲಿ ಮೊದಲ ಬಾರಿಗೆ ಕಾದಂಬರಿ ಪ್ರಕಾರಕ್ಕೆ ಕೈಹಾಕಿ ರಚಿಸಿದ 'ಸೀತೆ ರಾಮ ರಾವಣ' ವಿಮುಕ್ತಿಗಳು ಹೆಚ್ಚು ಕಡಿಮೆ ಆ ಇತರ ಲೇಖಕರ ರಚನೆಗಳಂತೆಯೇ ಸಾಂಸ್ಕೃಕವಾಗಿ ಮಹತ್ವದ ಪ್ರಶ್ನೆಗಳನ್ನು ಎತ್ತಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.

ಇದೇ ಕಾಲಘಟ್ಟದ ಪ್ರಮುಖ ಲೇಖಕಿಯರೆಂದರೆ ಎಂ.ಕೆ. ಇಂದಿರಾ, ತುಂಗಭದ್ರೆ, ಫಣಿಯಮ್ಮ, ಗೆಜ್ಜೆಪೂಜೆ, ಸದಾನಂದ ಹೀಗೆ ಸಾಲಾಗಿ ನಲವತ್ತೊಂಭತ್ತು ಕಾದಂಬರಿಗಳು, ಹನ್ನೊಂದು ಕಥಾ ಸಂಕಲನಗಳನ್ನು ಹೊರತಂದರು. ಇವರ ಸ್ತ್ರೀಪರ ಕಾಳಜಿಗಳನ್ನು ಹೇಳುತ್ತಾರೆ. ದಟ್ಟ ಜೀವನಾನುಭವಗಳನ್ನು ಕಲಾತ್ಮಕಗೊಳಿಸುವ ರೀತಿ ಅವರ ಉತ್ತಮ ಸೃಜನಶಿಲತೆಯ ಸಾಕ್ಷಿಯಾಗುತ್ತದೆ. ಇಂದಿರಾ ವಿಧವಾ ಸಮಸ್ಯೆ, ವೈಶ್ಯಾಸಮಸ್ಯೆ, ಬಡತನ, ವೈವಾಹಿಕ ಸಂಮಸ್ಯೆಗಳನ್ನು ವಸ್ತುವಾಗಿ ಸ್ವೀಕರಿಸಿದ್ದಾರೆ. ಶೋಷಣೆಯ ಮೂಲವಾಗಿರುವ ಪುರುಷ ಕೇಂದ್ರಿತ ಮೌಲ್ಯಗಳನ್ನು ಫಣಿಯಮ್ಮದಂತಹ ಕಾದಂಬರಿಯಲ್ಲಿ ವ್ಯಾಖ್ಯಾನಿಸುತ್ತಾರೆ.

'ಗೆಜ್ಜೆಪೂಜೆ' ಯ ವಸ್ತು ಕನ್ನಡದ ಪ್ರಗತಿಶೀಲರು ಮೇಲಿಂದ ಮೇಲೆ ಆಯ್ಕೆ ಮಾಡಿಕೊಂಡ ವೇಶ್ಯಾಸಮಸ್ಯೆ. ಶುದ್ಧ ಪ್ರಗತಿಶೀಲದಂತೆ ಇಂದಿರಾ ಅವರು ಈ ಕಾದಂಬರಿಯಲ್ಲಿ 'ವಿವಾಹ' ಹೆಣ್ಣಿನ ಬಧುಕಿನ ಗುರಿ ಎಂಬಂತೆ, ನಿರಾಸೆಗೊಳಗಾದ ಎಲ್ಲ ಸಮಸ್ಯೆಗಳ ಪರಿಹಾರ 'ಸಾವು' ಎಂಬಂತೆ ಸಮಸ್ಯೆಯನ್ನು ಇಲ್ಲವಾಗಿಸಲು ನಾಯಕಿ ಚಂದ್ರ ಸಾವನ್ನು ಆಯ್ಕೆಮಾಡಿಕೊಳ್ಳುತ್ತಾಳೆ. ಏನೋ ಹೇಳುತ್ತದೆ ಎಂದು ಕಿವಿದೆರೆದು ಕುಳಿತ ಓದುಗನಿಗೆ ಅಪಾರ ನಿರಾಶೆಯಾಗುತ್ತದೆ.

ಇಂದಿರಾ ಅವರ ಕೃತಿಗಳಲ್ಲಿ ಹೆಣ್ಣಿನ ತ್ಯಾಗ, ಹೌದಾರ್ಯಗಳ ವಿಜೃಂಭಣೆಯಿದೆ. ಪ್ರಧಾನ ಸಂಸ್ಕೃತಿ ಮಹಿಳೆಯಿಂದ ಬಹಳ ಮುಖ್ಯವಾಗಿ ನಿರೀಕ್ಷಿಸುವ ಗುಣಗಳನ್ನು ಕೆಲವೊಮ್ಮೆ ಇಂದಿರಾ ಎತ್ತಿ ಹಿಡಿಯುತ್ತಾರೆ. ಇದು ಆಶ್ಚರ್ಯವಾದರೂ ವಾಸ್ತವದ ಸಂಗತಿಯಾಗಿದೆ. ಅವರ ಕಥೆ ಕಾದಂಬರಿಗಳಲ್ಲಿ ನವೋದಯದ ಆದರ್ಶವಾದ, ಅದರ ಮೇಲೆ ತೆಳುವಾದ ವಾಸ್ತವ ವಾದದ ಪರದೆಯಿದೆ. ಇಂದಿರಾ ಅವರ ಕೃತಿಗಳು ಸಾಂಪ್ರದಾಯಿಕ ಇಬ್ಬಗೆಯ ಮೌಲ್ಯಗಳನ್ನು ಪ್ರಶ್ನಿಸಿ, ಮೀರುವ ಚಿಹ್ನೆಗಳನ್ನು ತೋರಿದರೂ ಪುರುಷ ನಿರ್ಮಿತ ಮೌಲ್ಯ ಪ್ರಪಂಚದೀಚೆ ಹೊರ ಬರುವುದಿಲ್ಲ. ಆದರೆ ಆ ಶೋಷಣಾ ಚಕ್ರದಿಂದ ಹೊರಬರಬೇಕೆನ್ನುವ ಬಯಕೆಯಿದ್ದರೂ, ಅದರ ರಹದಾರಿಗಳನ್ನು ಕಾಣದೆ ಒದ್ದಾಡುತ್ತಾರೆ.

ದಲಿತ ಮತ್ತು ಬಂಡಾಯ ಲೇಖಕಿಯರಲ್ಲಿ ಸ್ತ್ರೀ ವಿಮೋಚನೆಯ ಜೊತೆಗೆ ಸಾಮಾಜಿಕ ಶೋಷಣೆಯ ಚಿತ್ರವೇ ಮುಖ್ಯ ಉದ್ದೇಶ. ಇಲ್ಲಿ ಸ್ತ್ರೀ ಪ್ರಧಾನವಾದ ಕಥೆಗಳು ಕಡಿಮೆ. ಇವರ ಕಥೆಗಳಲ್ಲಿ ಸಾಮಾಜಿಕ ಎಲ್ಲ ಅಯೋಮಯಗಳೊಂದಿಗೆ ಹೆಣ್ಣಿನ ಶೋಷಣೆಯೂ ಇಲ್ಲಿ ದಲಿತರೆಲ್ಲರ ದುಃಖ ನೋವುಗಳ ಭಾಗವಾಗಿ ಹೆಣ್ಣು ಬರುತ್ತಾಳೆ.

ಎಪ್ಪತ್ತರ ದಶಕದಲ್ಲಿ ನಡೆದ ಜನಪರ ಹೋರಾಟಗಳು ದೇಶದ ರಾಜಕೀಯ ಸಾಮಾಜಿಕ ಬದುಕಿನಲ್ಲಿ ಮಾತ್ರವೇ ಅಲ್ಲ ಸಾಹಿತ್ಯ ಕ್ಷೇತ್ರದಲ್ಲಿಯೇ ಮಹತ್ತರ ಬದಲಾವಣೆಗಳನ್ನು ಉಂಟು ಮಾಡಿತು. ಶೋಷಿತ ವರ್ಗ, ಕೆಳವರ್ಗ, ಕೆಳಜಾತಿಗಳವರ ಬದುಕು ಬದಲಾವಣೆಗಳನ್ನು ಇದು ಚಿತ್ರಿಸುತ್ತದೆ. ಅದರಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿತು. ಇಂತಹ ಸಮಯದಲ್ಲಿ ಈ ವರ್ಗಗಳಿಂದ ರೂಪುಗೊಂಡ ಲೇಖಕಿಯರು ತಮ್ಮ ಹಾಗೂ ತಮ್ಮವರ ಬದುಕಿಗೆ ದನಿಯಾಗಿದ್ದು ಒಂದು ಮಹತ್ವದ ಸಂಗತಿ. ಇಲ್ಲಿ ಕೇಳಿ ಬರುವ ಪ್ರಮುಖ ಹೆಸರುಗಳೆಂದರೆ ಗೀತಾನಾಗಭೂಷಣ, ಬಿ.ಟಿ. ಲಲಿತಾನಾಯಕ್, ಸರಸ್ವತಿಗೌಡ, ಮಲ್ಲಿಕಾಘಂಟಿ, ಶೈಲಜಾ ಉಡುಪರಾ, ಎಂ.ಎಸ್. ವೇದಾ ಮೊದಲಾದವರು.

ಅನಕ್ಷರತೆ, ಮೂಢನಂಬಿಕೆ, ಬಡತನ, ಅಜ್ಞಾನಗಳು ತಾಂಡವವಾಡುವ ಪ್ರದೇಶದಿಂದ ಒಂದು ಬರವಣಿಗೆಯಲ್ಲಿ ತೊಡಗಿಸಿಕೊಂಡಾರು ಗೀತಾನಾಗಭೂಷಣ. ದೇವಿಯ ಹೆಸರಿನ ಮೇಲೆ ನಡೆಸುವ ಸೂಳೆಗಾರಿಕೆ, ನಿರ್ಗತಿಕ ಹೆಂಗಸರ ಮೇಲೆ ನಡೆಯುವ ದೌರ್ಜನ್ಯ, ದಬ್ಬಾಳಿಕೆ, ಲೈಂಗಿಕ ಶೋಷಣೆ, ಮೂಢನಂಬಿಕೆ, ಹಳ್ಳಿಯ ಅಮಾಯಕ ಅನಕ್ಷ್ಯರಸ್ಥ ಹೆಂಗಸರ ಶೋಷಣೆ ಸಂಕಟಗಳೇ ಇವರ ಬರಹಕ್ಕೆ ಬೇರುಗಳು.

ಗೀತಾರವರ 'ಬದುಕು' ಕಾದಂಬರಿಯಲ್ಲಿ ಈಚಲು ಮರಗಳನ್ನು ಕೆತ್ತಿ ನೀರಾ ಸೇಂದಿಗಳನ್ನು ಗಿಡದಿಂದ ಇಳಿಸಿ ಜೀವನ ನಡೆಸುವ ಜನಾಂಗದವರ ಕಥೆಯೇ ಪ್ರಧಾನವಾಗಿದೆ. ಒಂದು ಜನಾಂಗದ ಆಚಾರ, ವಿಚಾರ, ಹಬ್ಬ-ಹರಿದಿನ, ಊಟೋಪಚಾರ ಮೊದಲಾದ ಸಮಸ್ತ ವಿವರಗಳನ್ನು ಇಲ್ಲಿ ದಾಖಲಾಗುತ್ತವೆ. ಗೀತಾ ಅವರ ಕಾಳಜಿಗಳು ಕೆಳವರ್ಗದ ಶೋಷಿತ ಮಹಿಳೆಯರಿಗೆ ಮಾತ್ರ ಸೀಮಿತಗೊಳ್ಳದೆ ಇಡೀ ಒಂದು ಸಮುದಾಯದ ಬದುಕನ್ನೇ ಒಳಗೊಳ್ಳುವುದು ಇವರ ಬರವಣಿಗೆಯ ಪ್ರಮುಖ ಅಂಶ.

ಕರ್ನಾಟಕದ ತೀರ ಹಿಂದುಳಿದ ಜಿಲ್ಲೆಯವರು ಬಿ.ಟಿ. ಲಲಿತಾನಾಯಕ್. ಇವರು ತಮ್ಮ ಜನಾಂಗದ ಜನರ ಕಷ್ಟ ಸುಖಗಳನ್ನು ಮತ್ತು ಬುಡಕಟ್ಟಿನ ಜನರ ಮಹಿಳೆ ಶೋಷಿತಳಾಗುವುದನ್ನು ಕಂಡು ಅದನ್ನು ಅನುಭವಿಸಿದವರು. ತಮ್ಮ ಜನಾಂಗದಲ್ಲಿ ತಾಂಡವವಾಡುವ ಅನಕ್ಷರತೆ, ಅನಾರೋಗ್ಯ, ಬರಗಾಲ, ಹಸಿವು,

ಬಡತನಗಳ ನೋವು ಸಂಕಟಗಳನ್ನು ಸಮೀಪದಿಂದ ಕಂಡು ಅದರ ವಿರುದ್ಧ ಹೋರಾಡಿದವರಾಗಿದ್ದಾರೆ. ಇವರ ಕಥೆ, ಕಾದಂಬರಿ, ಕಾವ್ಯಗಳಲ್ಲಿ ಶೋಷಣೆಗೊಳಗಾದ ಎಲ್ಲ ಜನರ ಬದುಕನೊಳಗೊಂಡಿದೆ. ಬುಡಕಟ್ಟಿನ ಹೆಣ್ಣು ಸಾಮಾನ್ಯವಾಗಿ ಅಲ್ಲಿನ ಪುರುಷರಿಗೆ ಸರಿಸಮವಾಗಿ ದುಡಿಯುವವರು. ಆದರೆ ಇಲ್ಲಿ ಆಕೆಗೆ ಸಮಾನ ಅವಕಾಶಗಳಿರುವುದಿಲ್ಲ ಎಂಬ ಸತ್ಯವನ್ನು ಇವರ ಕಾದಂಬರಿಗಳು ಬಿಚ್ಚಿಡುತ್ತವೆ. ಸ್ತ್ರೀಯನ್ನು ಇಲ್ಲಿ ಅತ್ಯಂತ ಹೀನಾಯವಾಗಿ ಶೋಷಿಸುವುದಲ್ಲದೆ ದೈಹಿಕವಾಗಿ ಶೋಷಣೆಗೆ ಗುರಿಪಡಿಸುತ್ತಾರೆ. ಇಂತಹ ವ್ಯವಸ್ಥೆಯನ್ನು ನೇರವಾಗಿ ಟೀಕಿಸುವ ದಿಟ್ಟ ನಿಲುವನ್ನು ಇವರ ಕಥೆಗಳು ವ್ಯಕ್ತಪಡಿಸುತ್ತವೆ. ಕನ್ನಡದಲ್ಲಿ ಮೊಟ್ಟ ಮೊದಲಿಗೆ ಬುಡಕಟ್ಟು ಸಮಾಜವೊಂದರ ಅನಿಸಿಕೆಗಳಿಗೆ ದನಿಕೊಟ್ಟ ಲೇಖಕಿಯಾಗಿ ಲಲಿತಾನಾಯಕ್ ಕಂಡುಬರುತ್ತಾರೆ.

ಬಂಡಾಯ ಸಾಹಿತ್ಯಕ್ಕೆ ಒಂದು ಹೊಸ ಅರ್ಥವನ್ನು ಕೊಟ್ಟವರು ಮುಸ್ಲಿಂ ಲೇಖಕಿಯರು. ಬೇರೆ ಉಳಿದ ಎಲ್ಲಾ ಲೇಖಕಿಯರು ಬರೆಯಲು ತೊಡಗಿದ್ದಕ್ಕಿಂತ ಹೆಚ್ಚಾಗಿ ಮುಸ್ಲಿಂ ಲೇಖಕಿಯರು ಬರೆಯಲು ತೊಡಗಿದ್ದು ಒಂದು ಬೃಹತ್ ಸ್ತ್ರೀ ವಿಮೋಚನಾ ಚಳುವಳಿ ಕನ್ನಡ ಸಾಹಿತ್ಯದಲ್ಲಿ ಒಂದು ಮುಖ್ಯ ಭಾಗವಾಗಿ ಕಂಡು ಬರುತ್ತದೆ. ಇಲ್ಲಿ ಪ್ರಮುಖ ಮುಸ್ಲಿಂ ಲೇಖಕಿಯರೆಂದರೆ ಸಾರಾ ಅಬೂಬಕರ್, ಬಾನುಮುಷ್ತಾಕ ಮುಂತಾದವರು. ಸ್ತ್ರೀಯರು ಧರ್ಮದ ಬಗ್ಗೆ ಮಾತನಾಡುವುದೇ ಒಂದು ಅಪರಾಧ ಎಂಬುದು ಮುಸ್ಲಿಂ ವ್ಯವಸ್ಥೆಯಲ್ಲಿ ಅಪರಾಧ. ಸ್ತ್ರೀಯರು ಕೇವಲ ಪುರುಷರ ಲೈಂಗಿಕ ಆಸಕ್ತಿ ತಣಿಸಲು ಇರುವವರು ಎಂಬಂತಹ ಮನೋಭಾವ ಮುಸ್ಲೀಮರಲ್ಲಿತ್ತು. ಧರ್ಮ ಮತ್ತು ಧರ್ಮದಿಂದ ರೂಪಿತವಾದ ಕಟ್ಟಳೆಗಳು ಪ್ರಶ್ನಾತೀತವಾಗಿದ್ದವು. ಇಲ್ಲಿ ಹೆಂಗಸರನ್ನು ಚಪ್ಪಲಿಯಂತೆ ಬಳಸಿಕೊಳ್ಳುವ ಮನೋಭಾವವನ್ನು ಪುರುಷರಲ್ಲಿ ಕಾಣಬಹುದು.

ಈ ಸಂದರ್ಭದಲ್ಲಿ ಬರೆಯಲು ತೊಡಗಿದ್ದಂತಹ ಮುಸ್ಲಿಂ ಲೇಖಿಯರು ಒಂದು ಕಲ್ಲಿಗೆ ಎರಡು ಹಕ್ಕಿಯನ್ನು ಹೊಡೆದರು ಎಂದು ಹೇಳಬಹುದು. ಇವರು ಮುಖ್ಯವಾಗಿ ತಮ್ಮ ಮೇಲೆ ಹೇರಿದ ಧಾರ್ಮಿಕ ಕಟ್ಟುಪಾಡುಗಳಿಂದ ಹೊರಬರುತ್ತಾರೆ. ಅಷ್ಟು ಮಾತ್ರವಲ್ಲದೆ ತಮ್ಮ ಅನಿಸಿಕೆಗಳನ್ನು ಅಥವಾ ತಮ್ಮ ಶೋಷಣೆಯ ವಿರುದ್ಧ ದನಿ ಎತ್ತಿದರು ಎಂದು ಹೇಳಬಹುದು.

ಸಾರಾ ಅಬೂಬಕರ್ ಮತ್ತು ಮುಷ್ತಾಕ್‌ರ ಕಥೆಗಳಿಗೆ ಮುಸ್ಲಿಂ ಹೆಣ್ಣುಗಳ ಬವಣೆಗಳ ಚಿತ್ರಣವೇ ಮುಖ್ಯ ಉದ್ದೇಶ. ಸಾರಾ ಅವರ ಒಂದೆರಡು ಕಥೆಗಳನ್ನು ಹೊರತುಪಡಿಸಿದರೆ ಬಹುತೇಕ ಎಲ್ಲ ಕಥೆಗಳಲ್ಲಿಯೂ ಮುಸ್ಲಿಂ ಜನಾಂಗದ ವಿವಿಧ ವಯೋ ಮಾನದ ವಿವಿಧ ಸ್ಥಿತಿಗಳಲ್ಲಿ ಮಹಿಳೆಯೇ ಕೇಂದ್ರ ಪಾತ್ರಗಳಗಿದ್ದಾರೆ. ಇವರ ಮೊದಲಿನ ಕತೆಗಳಲ್ಲಿ ಧಾರ್ಮಿಕ ಶೋಷಣೆಗೆ ತುತ್ತಾಗುವ ಅಸಾಯಕ ಹೆಣ್ಣುಗಳಿದ್ದಾರೆ. ಅವರ ಇತ್ತೀಚಿನ ಕಥೆಗಳ ಸ್ತ್ರೀ ಪಾತ್ರಗಳು ತಮ್ಮ ತನವನ್ನು ಸ್ಥಾಪಿಸಿಕೊಳ್ಳುವ ಪಾತ್ರಗಳಾಗಿದ್ದಾರೆ. ಮುಖ್ಯವಾಗಿ ಇವರು ಮುಸ್ಲಿಂ ವ್ಯವಸ್ಥೆಯಲ್ಲಿರುವ 'ತಲಾಖ್' ವ್ಯವಸ್ಥೆಯ ವಿರುದ್ಧ ತಮ್ಮ ಕಥೆಗಳಲ್ಲಿ ದನಿ ಎತ್ತಿದ್ದಾರೆ.

ಇವರ ಮಹತ್ವದ ಕೃತಿ "ಸಹನಾ" ಮುಸ್ಲಿಂ ಜನಾಂಗದಲ್ಲಿ ಮನೆ ಮಾಡಿರುವ ಬಡತನ, ಅಜ್ಞಾನಗಳ ನಗ್ನ ಚಿತ್ರಣ. ಇಲ್ಲಿ ವ್ಯವಸ್ಥೆಗೆ ಹೆಣ್ಣು ಮಾತ್ರವಲ್ಲದೆ ಗಂಡೂ ಬಲಿಪಶುವಾಗುತ್ತಾನೆ. ಮಾನವೀಯತೆಯನ್ನು ಮೆಟ್ಟಿ ನಿಲ್ಲುವ ಮೂಢನಂಬಿಕೆ ಇಲ್ಲಿ ಮೆರೆಯುತ್ತದೆ. ತಲೆಮಾರಿನಿಂದ ರಲೆಮಾರಿಗೆ ಹೆಣ್ಣು ತನ್ನ ಸ್ಥಾನದಲ್ಲಿ

ಬದಲಾವಣೆ ಹೊಂದುವುದನ್ನು ಇಲ್ಲಿ ಕಾಣಬಹುದು. ವಜ್ರಗಳು, ಚಪ್ಪಲಿಗಳು, ಚಂದ್ರಗಿರಿಯ ತೀರದಲ್ಲಿ ಇವು ಇವರ ಇತರ ಕಾದಂಬರಿಗಳು.

ಹೆಜ್ಜೆ ಮೂಡಿದ ಹಾದಿ, ಬೆಂಕಿಮಳೆ ಎಂಬ ಕಥಾ ಸಂಕಲನಗಳ ಮೂಲಕ ಬಾನು ಮುಷ್ತಾಕ ತಮ್ಮ ಸಾಹಿತ್ಯ ರಚನೆಗೆ ತೊಡಗಿದರು. ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಪ್ರಪಂಚದಾದ್ಯಂತ ಧರ್ಮ ಮತ್ತು ದೇವರುಗಳನ್ನು ಬಳಸಿಕೊಳ್ಳಲಾಗಿದೆ ಎಂದು ಹೇಳುತ್ತಾ ಇವುಗಳ ಮೂಲಕ ಮುಸ್ಲಿಂ ಸಮಾಜದಲ್ಲಿ ಹೆಣ್ಣಿನ ಶೋಷಣೆ ಯಾವ ರೀತಿ ನಡೆಯುತ್ತದೆ ಎಂಬ ಚಿತ್ರವನ್ನು ಇವರ ಕಾದಂಬರಿಗಳು ನೀಡುತ್ತವೆ. ಸ್ತ್ರೀಯರಿಗೆ ಆತ್ಮಗೌರವ ಆಯ್ಕೆಯ ಹಕ್ಕು ಆಕೆಯನ್ನು ಆಕೆಯ ದುಡಿಮೆಯನ್ನು ಗೌರವಿಸುವ ಸಮಾಜ ನಿರ್ಮಾಣ ದಲಿತ– ಬಂಡಾಯ ಸಾಹಿತ್ಯ ಸಾಧ್ಯವಾಗಿಸಿದೆ.

ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಬಂಡೇಳುವ ಮತ್ತು ಸ್ತ್ರೀಗೆ ಪುರುಷ ಪರ ನಿಲುವುಗಳಿಂದ ವಿಮೋಚನೆ ದೊರಕಿಸುವುದನ್ನು ಈ ಎಲ್ಲಾ ಸಾಹಿತ್ಯದ ಕಾಲಘಟ್ಟಗಳಲ್ಲಿ ಬಂದ ಮಹಿಳಾ ಲೇಖಕಿಯರಲ್ಲಿ ನಾವು ಗುರುತಿಸಬಹುದುದಾಗಿದೆ. ಶಿಕ್ಷಣದ ಮೂಲಕ ಮಹಿಳೆಯರಲ್ಲಿ ಒಂದು ರೀತಿಯ ಹೊಸ ಎಚ್ಚರ ಸಾಹಿತ್ಯಕ್ಕೆ ಬಂದು ಸೇರಿತು. ಈ ಮೂಲಕ ಇವರು ಅನೇಕ ಪುರಾಣಕತೆಗಳಿಗೆ ಒಂದು ಹೊಸ ಮೌಲ್ಯ ಪದ್ಧತಿಗೆ ತಮ್ಮ ಪ್ರತಿಭಟನೆಯನ್ನು ತೋರುತ್ತಾರೆ. 'ತಿರುಮಲಾಂಬ' ಅವರ 'ವಿವೇಕೋದಯ'ದಲ್ಲಿ ಮಾಧವಿಯ ಕಥೆ ಮುಖ್ಯವಾಗುತ್ತದೆ. ಪುರುಷನೊಬ್ಬ (ಯಯಾತಿ) ಮಹಿಳೆಯರಿಂದ ಅಂದರೆ ಮಗಳು ಹಾಗೂ ಮಗಳ ಮಕ್ಕಳ ಮೂಲಕ ಉದ್ಧಾರವಾಗುವುದನ್ನು ಚಿತ್ರಿಸುತ್ತಾರೆ. ನಂತರದ ಎಚ್.ವಿ. ಸಾವಿತ್ರಮ್ಮನವರ ಎರಡು ಕೃತಿಗಳಲ್ಲಿ ಪುರಾಣದ ಕತೆಗಳಿಗೆ ಒಂದು ಹೊಸ ರೀತಿಯ ಚೌಕಟ್ಟನ್ನು ನೀಡಿರುವುದನ್ನು ಕಾಣಬಹುದು. ಸೀತೆ– ರಾಮ, ರಾವಣ ರಾಮಾಯಣದ ಸ್ತ್ರೀ ಪಾತ್ರಗಳ ಚಿತ್ರಣ ನೀಡುತ್ತದೆ. ಕೌಸಲ್ಯೆ, ಸೀತೆ, ಊರ್ಮಿಳೆ ಇವರು ತಮ್ಮ ಪ್ರತಿಭಟನೆಯನ್ನು ನೇರವಾಗಿ ತೋರದೆ ಅದನ್ನು ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸುವುದನ್ನು ಕಾಣುತ್ತೇವೆ. ಕೌಸಲ್ಯೆ, ದಶರಥೆ ಬೇರೆಯವರನ್ನು ವಿವಾಹವಾದಾಗ ಮತ್ತು ರಾಮನನ್ನು ಕಾಡಿಗೆ ಕಳುಹಿಸುವ ಸಂದರ್ಭ ಬಂದಾಗ ತನ್ನ ಮಾತಿಗೆ ಬೆಲೆ ಇಲ್ಲದೆ ಇರುವುದನ್ನು ಕಂಡು ಸಿಡಿಯುತ್ತಾಳೆ. ಸೀತೆ ಗಂಡನೊಡನೆ ವನವಾಸಕ್ಕೆ ಹೋದರು ನಂತರ ರಾವಣನ ಕಾರಣದಿಂದ ರಾಮ ಅವಳನ್ನು ಅವಮಾನಿಸಿದಾಗ ತಾನು ಸಂನ್ಯಾಸತ್ವ ಸ್ವೀಕರಿಸುವುದರ ಮೂಲಕ ಪ್ರತಿಭಟನೆ ತೋರಿಸುತ್ತಾಳೆ. ಊರ್ಮಿಳೆ ಅಣ್ಣನನ್ನು ಅನುಸರಿಸಿ ಕಾಡಿಗೆ ಹೋದ ಗಂಡನನ್ನು ಅನುಸರಿಸದೆ ನದಿ ತೀರದಲ್ಲಿ ವಾಸಿಸುವ ಮೂಲಕ ಲಕ್ಷ್ಮಣನಿಗೆ ತನ್ನ ಪ್ರತಿಭಟನೆ ಒಡ್ಡುವುದನ್ನು ಈ ಕಾದಂಬರಿಯಲ್ಲಿ ಇವರು ಚಿತ್ರಿಸುತ್ತಾರೆ. ಮುಸ್ಲಿಂ ಲೇಖಕಿಯಾದ ಸಾರಾ ಅಬೂಬಕರ್ ಅವರ ಕೃತಿಯಾದ 'ಸಹನ' ಮತ್ತು ವಜ್ರಗಳು ಕಾದಂಬರಿಗಳು ಇವರು ಮುಸ್ಲಿಂ ವ್ಯವಸ್ಥೆಯ ವಿರುದ್ಧ ನಡೆಸಿದ ಸ್ತ್ರೀ ವಿಮೋಚನಾ ಚಳುವಳಿಯಾಗಿ ಕಾಣಿಸುತ್ತವೆ. ಧರ್ಮದ ಹೆಸರಿನಲ್ಲಿ ಈ ಸಮುದಾಯದವರು ಸ್ತ್ರೀಯರ ದೇಹ ಮತ್ತು ಮನಸ್ಸಿನ ಮೇಲೆ ಹಕ್ಕು ಸ್ಥಾಪಿಸಿಕೊಳ್ಳುತ್ತಿದ್ದುದರ ವಿರುದ್ಧ ಈ ಕಾದಂಬರಿ ಹೋರಾಡುತ್ತವೆ. ಬಾಲ್ಯವಿವಾಹ, ವಿವಾಹ ಬಂಧನದ ಚೌಕಟ್ಟಿನೊಳಗೆ ಸ್ತ್ರೀಯ ಮೇಲೆ ನಡೆಯುವ ವ್ಯಭಿಚಾರ, ಬಹುಪತ್ನಿತ್ವ ಮುತಾದುವುಗಳ ಬಗ್ಗೆ 'ಸಹನ' ಕಾದಂಬರಿಯ ನಸೀಮ ಪ್ರತಿಭಟನೆ ನಡೆಸಿ ಸ್ವತಂತ್ರಳಾಗಿ ಜೀವಿಸುವುದರ ಮೂಲಕ ವಿಮೋಚನೆ ಹೊಂದುತ್ತಾಳೆ. ವೈಚಾರಿಕ ಜೀವನದ ದುಃಖವನ್ನೇ ಕಾಣದೇ 'ತಲಾಖ್' ಎಂಬ ಶಬ್ದದಿಂದ ಎರಡೂ ಸರಿ ಅನುಭವಿಸುವ ನಫೀಸ ನಂತರವೂ ಹೊತ್ತು, ಹೆತ್ತು, ಸಾಕಿ ದುಡಿಯುವ ಕ್ರಿಯೆಗಳಲ್ಲಿ ಚರ್ಚಿತವಾಗಿ ತನ್ನ ಜೀವನವನ್ನು ತನ್ನ ಕೈಗೆ ತೆಗೆದುಕೊಳ್ಳುವ ಮೂಲಕ ಪುರುಷ ಪ್ರಧಾನ ವ್ಯವಸ್ಥೆಗೆ ತಿರುಗಿ ನಿಲ್ಲುತ್ತಾಳೆ. ವಜ್ರಗಳು ಕಾದಂಬರಿಯ ಮುಖ್ಯ ಸ್ತ್ರೀ ವಿಮೋಚನೆಯ ನೆಲೆಯಾಗಿ ಇದನ್ನು ಕಾಣಬಹುದು.

ಕೊನೆ ಟಿಪ್ಪಣಿ.

(1) ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ: ಪುಟ.90

(2) ,, ,, ,, ,, ,, ಪುಟ.10

ಅಧ್ಯಾಯ–೩

ನವ್ಯ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀ ವಿಮೋಚನೆ ಕುರಿತಾದ ಚಿಂತನೆಯ ನೆಲೆಗಳು.

ಅಧ್ಯಾಯ –೩

ನವ್ಯ ಸಾಹಿತ್ಯದಲ್ಲಿ ಸ್ತ್ರೀ ವಿಮೋಚನೆಯ ಚಿಂತನೆಗಳು

ನವೋದಯ ಪ್ರಗತಿಶೀಲದ ನಂತರ ಬಂದಂತಹ ನವ್ಯ ಸಾಹಿತ್ಯ ಕನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ಒಂದು. ಮೊದಲೆರಡರ ಕಾಲ ಘಟ್ಟದ ಸಾಹಿತಿಗಳು ಸಾಹಿತ್ಯವನ್ನು ಕಂಡ ರೀತಿಗಿಂತ ಭಿನ್ನವಾಗಿ ನೋಡಿದವರು ನವ್ಯ ಸಾಹಿತಿಗಳು. ಸಾಹಿತ್ಯದಾಚೆಗಿನ ನಿಜ ಜೀವನದ ಅನುಭವಗಳನ್ನೂ, ಅನುಭವ ಮೂಡಿಸಿದ ಮನಸ್ಸಿನ ಚಿತ್ರವನ್ನು ಸಂಪೂರ್ಣವಾಗಿ ತೊಡೆದು ಹಾಕದೇ ಅವುಗಳ ಮೂಲಕವೇ ಸಾಹಿತ್ಯ ರಚನೆಗೆ ತೊಡಗಿದವರು ನವೋದಯ ಮತ್ತು ಪ್ರಗತಿಶೀಲದವರು. ತಮ್ಮ ಜೀವನದಲ್ಲಿ ತಾವು ಕಂಡ ಅರ್ಥ, ಸ್ವೀಕರಿಸಿದ ಮೌಲ್ಯಗಳನ್ನು ಓದುಗರಿಗೆ ಸಾಹಿತ್ಯದ ಮೂಲಕ ತಿಳಿಸಿದವರು. ಜೀವನದಲ್ಲಿನ ಒಂದಷ್ಟು ಸಾಮಗ್ರಿಗಳನ್ನು ಆರಿಸಿಕೊಂಡು ಅರ್ಥ, ಮೌಲ್ಯಗಳನ್ನು ವಿವರಿಸುಲು ಪ್ರಯತ್ನಿಸಿದರು. ಇವುಗಳಿಗಿಂತ ಭಿನ್ನವಾದ ನೆಲೆಯಲ್ಲಿ ಸಾಹಿತ್ಯ ರಚಿಸಿದವರು ನವ್ಯ ಸಾಹಿತಿಗಳು. ಇವರು ಸಾಹಿತ್ಯವನ್ನು ಜೀವನದ ಒಂದು ವಿಶ್ಲೇಷಣೆಯ ಮಾಧ್ಯಮವನ್ನಾಗಿ ಮಾಡಿಕೊಂಡವರು. ಜೀವನಕ್ಕೆ ಮೌಲ್ಯಗಳು ಇವು ಎಂದು ನಿಶ್ಚಯಿಸದೆ ಜೀವನಾನುಭವವನ್ನೇ ಸಾಹಿತ್ಯವಾಗಿಸಿದವರು. ಜೀವನದ ಮೌಲ್ಯಗಳನ್ನು, ಅನುಭವಗಳನ್ನು ಸಾಹಿತ್ಯ ಕೃತಿಯಲ್ಲಿ ವಿಶ್ಲೇಷಿಸಿ, ಒಡೆದು ನೋಡಿ, ಅದರ ಸ್ತರ ಸ್ತರಗಳನ್ನು ಬಿಡಿಸಿ ನೋಡಿದ್ದಾರೆ.

ನಮ್ಮ ಈ ಶತಮಾನದ ಹಲವಾರು ಚಾರಿತ್ರಿಕ ಸಂದಿಗ್ಧತೆಗಳಿಂದ ಪ್ರಪಂಚದ ಹಲವಾರು ಭಾಷೆಗಳಲ್ಲಿ ನವ್ಯತೆ ತಲೆ ಎತ್ತಿತ್ತು. ಕನ್ನಡ ಸಾಹಿತ್ಯದ ನವ್ಯತೆ ಮತ್ತು ಅದು ವ್ಯಕ್ತವಾದ ವಿಶಿಷ್ಟ ರೀತಿ ಕನ್ನಡ ಸಂಸ್ಕೃತಿಯ ಸಂದಿಗ್ಧತೆಗಳಿಗೆ ಅನುಗುಣವಾದದ್ದು. ನವ್ಯತೆ ಎಂಬುದು ಸಾಹಿತ್ಯದಲ್ಲಿ ವಿವಿಧ ದೇಶ–ಭಾಷೆಗಳಲ್ಲಿ ವಿಭಿನ್ನ ರೀತಿಯಲ್ಲಿ ಪ್ರಕಟಗೊಂಡಿದೆ.

"ಬಹು ಮುಖ್ಯವಾಗಿ ನವ್ಯತೆ ಮತ್ತು ನವ್ಯತೆಯ ಅಭಿವ್ಯಕ್ತಿ ಆಯಾ ಲೇಖಕನ ವ್ಯಕ್ತಿ ಪ್ರತಿಭೆಯಿಂದ ನಿರ್ಣೀತವಾಗುತ್ತದೆ" (೧) ನವ್ಯವು ಅನುಭವವನ್ನು ಜೀವನದ ಸಂಕೀರ್ಣ ಸಂದರ್ಭದಲ್ಲಿಟ್ಟು ನೋಡಿ, ಅನುಭವದ ಅರ್ಥ ಬಿಚ್ಚಿಕೊಳ್ಳುವಂತೆ ಮಾಡುತ್ತದೆ. ನವ್ಯ ಸಾಹಿತ್ಯದಲ್ಲಿ ವೈಯಕ್ತಿಕ ಜೀವನಕ್ಕೆ ಒತ್ತುಕೊಡಲಾಗಿದೆ. ತಾನು ಸಮಾಜದ ಮೇಲೆ ಪ್ರಭಾವ ಬೀರಿ ಅದನ್ನು ಉತ್ತಮಗೊಳಿಸುತ್ತೇನೆ ಎಂಬ ಭಾವನೆಯನ್ನು ನಾವು ನವ್ಯ ಸಾಹಿತ್ಯದಲ್ಲಿ ನೋಡಲು ಸಾಧ್ಯವಿಲ್ಲ. ಸಾಹಿತ್ಯವು ಸೌಂದರ್ಯದ ಸೃಷ್ಟಿಯೆಂಬ ಭಾವನೆಯನ್ನೇ ನವ್ಯ ಸಾಹಿತ್ಯ ತಿರಸ್ಕರಿಸುತ್ತದೆ. ನವ್ಯ ಸಾಹಿತ್ಯ ಮುಖ್ಯವಾಗಿ ಪ್ರಯತ್ನಿಸುವುದು ತನ್ನ ಅನುಭವದ ಶೋಧಕ್ಕೆ, ತನ್ನ ಸ್ವಭಾವದ ಪೃಥಕರಣಕ್ಕೆ ಎನ್ನಬಹುದು. ಸಂವಹನಕ್ಕಿಂತ ಶೋಧನೆ ನವ್ಯರಿಗೆ ಮುಖ್ಯವಾಗುತ್ತದೆ. ಕಲ್ಪನಾಲೋಕದಲ್ಲಿನ ಅನುಭವ, ಕನಸು, ಭ್ರಮೆ ಭ್ರಾಂತಿಗಳು ಇತ್ಯಾದಿಗಳು ಜೀವನದ ಭಾಗವಾಗಿರುವುದರಿಂದ ಅವುಗಳ ವಸ್ತುವನ್ನು, ರೀತಿಯನ್ನು ನವ್ಯರು ಬಳಸಿಕೊಳ್ಳುತ್ತಾರೆ.

ನವ್ಯ ಸಾಹಿತ್ಯದ ಮುಖ್ಯ ಸಾಧನೆಯೆಂದರೆ ಸಾಹಿತ್ಯದ ಭಾಷೆ ಶೈಲಿಗಳನ್ನು ಹರಿತಗೊಳಿಸಿದ್ದಾಗಿದೆ. ಮಾತನಾಡುವ ಭಾಷೆಯೇ ಭಾವಾಭಿನಯವಾಗಬೇಕು ಎಂಬ ಧೋರಣೆ ಹೊಂದಿದ ನವ್ಯ ಸಾಹಿತಿಗಳು ನವೋದಯದವರಿಗಿಂತ ಭಿನ್ನರೆನಿಸಿದರು. ವೈಯಕ್ತಿಕ ಬದುಕು, ಆ ಬಗೆಗಿನ ಚಿಂತನೆ ಮಾತ್ರ ನವ್ಯ ಬರಹಗಾರರ ಮುಖ್ಯ ವಿಷಯವಾಗಿತ್ತು. ತಾನು ಸಮಾಜದ ಒಂದು ಭಾಗವಾಗಿದ್ದರೂ ಅದನ್ನು

ಅಭಿವೃದ್ಧಿಪಡಿಸುತ್ತೇನೆಂಬ ಉದ್ಧೇಶವನ್ನು ನವ್ಯ ಬರಹಗಾರರಲ್ಲಿ ಕಾಣಲು ಸಾಧ್ಯವಿಲ್ಲ. ನವ್ಯ ಸಾಹಿತಿಗಳು ಮುಖ್ಯವಾಗಿ ಸಮಾಜವನ್ನು ಅನುಮಾನದಿಂದ ನೋಡಲು ಪ್ರಾರಂಭಿಸಿದರು. ತಾನು ಸಮಾಜಕ್ಕೆ ಹೊಂದಿಕೊಂಡಿಲ್ಲವೋ, ಅಥವಾ ಸಮಾಜ ತನಗೆ ಹೊಂದಿಕೊಂಡಿಲ್ಲವೋ ಎಂಬ ಗುಮಾಸಿಯನ್ನು ಹೊಂದಿದ್ದವರಾಗಿದ್ದರು. ನವ್ಯ ಲೇಖಕರು ಲೋಕದ ಎಲ್ಲವೂ ಸರಿಯಲ್ಲವೆನಿಸಿ ಪ್ರಜ್ಞಾ ಪೂರ್ವಕವಾಗಿ ಬದುಕನ್ನು ನೋಡಲು ಹೊರಟವರು.

ಸ್ವಾತಂತ್ರೋತ್ತರ ಭಾರತದ ರಾಜಕೀಯದ ಮೋಸ, ಕಪಟ, ವಂಚನೆ ಮತ್ತು ಭ್ರಮನಿರಸನ ಮೊದಲಾದವು ಕನ್ನಡ ನವ್ಯ ಸಾಹಿತ್ಯದ ಮೇಲೆ ಮುಖ್ಯವಾದ ಚಾರಿತ್ರಕ ಪ್ರಭಾವ ಬೀರಿದೆ. ಸ್ವಾತಂತ್ರ್ಯ ನಂತರದ ಹತಾಶೆ, ನಿರಾಶೆ, ಭಗ್ನ ಕನಸು, ಪ್ರಜಾ ಪ್ರಭುತ್ವ, ಮತ್ತು ಸ್ವಹಿತಃ ಸಮಾನತೆ ಹೆಸರಿನಲ್ಲಿಯೇ ಏಕಸ್ವಾಮ್ಯ ಎನ್ನುವ ಸುಧಾರಣಾವಾದಿಗಳ ದ್ವಂದ್ವ ಬುದ್ಧಿಜೀವಿಗಳ ಲೋಲುಪತೆ, ರಾಜಕಾರಣಿಗಳ ಬೂಟಾಟಿಕೆ, ಸಾಮಾನ್ಯರ ದುಃಖ, ಅಳಲು, ಭಯ, ದುಗುಡ ಇವೆಲ್ಲವೂ ನವ್ಯ ಸಾಹಿತ್ಯದಲ್ಲಿವೆ. ನವ್ಯ ಸಾಹಿತ್ಯದ ಪ್ರಮುಖ ಲಕ್ಷಣಗಳೆಂದರೆ ಏನನ್ನು ಆಳವಾಗಿ ಪ್ರೀತಿಸಲಾರರು ಮತ್ತು ದ್ವೇಷಿಸಲಾರರು, ಅಸ್ವಸ್ಥ ಜೀವನ ವಿಧಾನ ಇವರದು. ಇವರಲ್ಲಿ ಜೀವನವು ಒಂದು ರೀತಿ ತಲ್ಲೀನ ಕೂಡ ಆಗಿರುವುದನ್ನು ಗುರುತಿಸಬಹುದಾಗಿದೆ. ಲೈಂಗಿಕತೆಯೇ ಜೀವನ ಎಂಬುದು ಈ ತಲ್ಲೀನತೆಗೆ ಕಾರಣ. ಸದಾ ಬೇಕು ಬೇಡಗಳ ದ್ವಂದ್ವ ಬದುಕು ಇಲ್ಲಿನದು. ಅಸಂಗತವಾದ ಮತ್ತು ಅಸ್ಥಿತ್ವವಾದದ ಆಧಾರದ ಮೇಲೆ ರೂಪುಗೊಂಡಿದ್ದು ನವ್ಯ ಸಾಹಿತ್ಯ.

ನವ್ಯ ಸಾಹಿತ್ಯದ ನಿರ್ಮಿತಿಗೆ ಮೂಲಭೂತವಾದ ಇನ್ನೊಂದು ಅಂಶವೆಂದರೆ ಎಲ್ಲಾ ರೀತಿಯ ಉಸಿರು ಕಟ್ಟಿಸುವ ಘೋರವಾದ ಪರಿಸ್ಥಿತಿಯನ್ನು ಕಂಡು ಹುಟ್ಟಿದ ಹೆದರಿಕೆ ಎನ್ನಬಹುದು. ಭಯದಿಂದಾಗಿ ಸಮಾಜದಲ್ಲಿ ಜರುಗುಬಹುದಾದ ಪ್ರತಿಯೊಂದು ಕ್ರಿಯೆಯು ಮಾನವನ ಬದುಕಿಗೆ ಹೇಗೆ ಮುಳ್ಳುಗಳಾಗಿ ಪರಿವರ್ತಿತವಾಗುತ್ತದೆ ಎಂಬುದನ್ನು ಗಮನಿಸಬಹುದು. ಇದರ ಜೊತೆಗೆ ಮೇಲು ವರ್ಗದಲ್ಲಿರುವ ಆದರ್ಶ ಕೆಳಗೆ ಇಳಿದು ಬರಲಾರದು. ಇಳಿದು ಹೋರಾಡಲಾರದಂಥ ಮನಸ್ಸು ಜೀವನದ ಅನಿವಾರ್ಯ ಅಂಗ ಎಂಬಂತಿದ್ದ ಕಾಲದ್ದಲ್ಲಿನವ್ಯ ಸಾಹಿತ್ಯ ಹುಟ್ಟಿಕೊಂಡಿತು.

ನವೋದಯ, ಪ್ರಗತಿಶೀಲ ನಂತರದ ಸ್ಥಾನವನ್ನು ನವ್ಯ ಸಾಹಿತ್ಯ ಪಡೆದಿದ್ದರೂ ವಿಚಾರ ಸರಣಿಯಲ್ಲಿ ಅದಕ್ಕಿಂತ ಹಿಂದೆ ಚಲಿಸಿ ಪುರುಷ ಕೇಂದ್ರಿತ ಚಿತ್ರಣವನ್ನು ಇದು ಮುಖ್ಯವಾಗಿಸುತ್ತದೆ. ಪುರುಷ ಪರ ದೃಷ್ಟಿಕೋನ ಹೊಂದಿದ್ದು ಇಲ್ಲಿ ಚಿತ್ರಿತವಾಗುವ ಗಂಡು ಪಾತ್ರಗಳು ಸ್ವಭಾವತಹ ಅಂಜುಬುರುಕರು, ದ್ವಂದ್ವ ಮನಸ್ಸಿನವರು, ದುರ್ಬಲ ವ್ಯಕ್ತಿತ್ವದವರು.ಹೆಣ್ಣಿನ ವಿಚಾರ ಬಂದಾಗ ಇವರ ದುರ್ಬಲಗಳು ಮರೆಯಾಗುತ್ತದೆ. ಹೆಣ್ಣು ಇವರ ಲೋಪ, ದೋಷಗಳನ್ನು ಮುಚ್ಚಿಕೊಳ್ಳುವುದಕ್ಕಾಗಿ ಬಳಸಿಕೊಳ್ಳುವ ಭೋಗದ ವಸ್ತುವಾಗಿ ಚಿತ್ರಿಸಲ್ಪಡುತ್ತಾಳೆ. ನವ್ಯ ಸಾಹಿತ್ಯದಲ್ಲಿ ಬರುವ ಪ್ರಮುಖ ಸಾಹಿತಿಗಳೆಂದರೆ ಕೃಷ್ಣ ಆಲನಹಳ್ಳಿ, ಯು.ಆರ್. ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಪಿ.ಲಂಕೇಶ್, ರಾಜಲಕ್ಷ್ಮಿ ಎನ್.ರಾವ್, ವೀಣಾಶಾಂತೇಶ್ವರ, ಜಿ.ಎಸ್.ಸದಾಶಿವ ಮೊದಲಾದವರಾಗಿದ್ದಾರೆ.

ನವ್ಯ ಸಾಹಿತ್ಯ ಚಳುವಳಿಯು ಹೆಸರಿಗೆ ತಕ್ಕಂತೆ 'ನವ್ಯ' ಅಂದರೆ ತನ್ನ ಉದ್ದೇಶಗಳಲ್ಲಿ ಹೊಸತನವನ್ನು ಹೊಂದಿತ್ತಾದರೂ ಸ್ತ್ರೀಯ ಬಗೆಗಿನ ಅಭಿಪ್ರಾಯದಲ್ಲಿ ಇದು ನಿಜ ಎನ್ನಿಸುವುದಿಲ್ಲ. ಈ ಕಾಲದಲ್ಲಿ ಬರೆಯಲು ತೊಡಗಿದ ಪುರುಷ ಲೇಖಕರು ಹೆಣ್ಣನ್ನು ಗಂಡಿನ ಕಾಮವನ್ನು ತಣಿಸುವ ಒಂದು ವಸ್ತು ಎಂಬಂತೆ ಚಿತ್ರಿಸಿದ್ದಾರೆ. ಲೈಂಗಿಕಾ ಉಪಭೋಗಕ್ಕೆ ನೆರವಾಗುವ ಸ್ತ್ರೀ ಎಂಬ ಸಾಮಗ್ರಿಯನ್ನು ಬಿಟ್ಟರೆ ಬೇರೆ

ರೀತಿಯ ಹೆಣ್ಣು ಕಾಣುವುದೇ ಅಪರೂಪ. ವಾಸ್ತವದಲ್ಲಿ ಈ ಒಂದೆ ಗಂಡಿನ ಕೈ ಗೊಂಬೆಯಂತೆ ಚಿತ್ರಿತವಾಗಿದ್ದ ಹೆಣ್ಣು ನವ್ಯ ಚಳುವಳಿಯ ಕಾಲದಲ್ಲಿ ಸ್ವಲ್ಪ ಭಿನ್ನವಾದಳು. ಪಾಶ್ಚಾತ್ಯ ರಾಷ್ಟ್ರಗಳಿಂದ ತಂದ ಎರವಲು ಸಂಸ್ಕೃತಿಯಿಂದಾಗಿ ಜಾಹೀರಾತಿನ ಬೊಂಬೆಯಾಗುತ್ತಾಳೆ. ಜಾಹೀರಾತಿನಂತಹ ಆಧುನಿಕ ಪ್ರಪಂಚದಲ್ಲಿ ಕಾಲನ್ನಿರಿಸಿದರು ಹೆಣ್ಣು ಇಲ್ಲಿ ಕರಿವೆಣ್ಣೆನ ಬೆಲೆಯನ್ನು ಮಾತ್ರ ಪಡೆಯುತ್ತಾಳೆ.

ವೀಣಾ ಶಾಂತೇಶ್ವರವರು ಈ ರೀತಿಯ ಪುರುಷ ಪ್ರಧಾನ ಸಮಾಜದಲ್ಲಿ ಪುರುಷ ನಿರ್ಮಿಸಿದ ಮೌಲ್ಯಗಳಿಗೆ ವಿರುದ್ಧವಾಗಿ ಬರೆಯಲು ತೊಡಗಿದರು. ತಮ್ಮ ಹಿಂದಿನ ತಲೆಮಾರಿನ ಲೇಖಕಿಯರಂತೆ ಇವರು ಹೆಂಗಸರನ್ನು ಗಂಡಸರ ಕಣ್ಣುಗಳ ಮೂಲಕ ಚಿತ್ರಿಸುವುದಿಲ್ಲ. ಇವರಿಗಿಂತ ಹಿಂದಿನ ಮತ್ತು ಸಮಕಾಲೀನ ಲೇಖಕಿಯರು ಬರೆದ ಕಥೆ, ಕಾದಂಬರಿಗಳ ಮೂಲಕ ನೋಡಿದರೆ ಅವರೆಲ್ಲರಿಗಿಂತ ವೀಣಾರವರು ಭಿನ್ನವಾಗುತ್ತಾರೆ. ಇವರ ಹಿಂದಿನ ಲೇಖಕಿಯರನ್ನು ಗಮನಿಸಿದಾಗ ಅಲ್ಲಿ ಹೆಣ್ಣುಗಳು ದೇಹ ರಹಿತ ಹೃದಯಗಳು, ಇಲ್ಲವೇ ಮನಸ್ಸುಗಳು. ದೇಹ ಏಸಿದ್ದರೂ ಗಂಡಸರು ಕಂಡಿದ್ದು ಮಾತ್ರ. ಇಂತಹ ಸಂದರ್ಭದಲ್ಲಿ ಹೆಂಗಸರನ್ನು ಅವರು ಇರುವ ಹಾಗೆ, ಯಾರ ನಿರೀಕ್ಷೆಗಳಿಗೂ ತಲೆಬಾಗದೆ, ಯಾವ ರಿಯಾಯಿತಿಗಳನ್ನು ತೋರಿಸದೆ ಚಿತ್ರಿಸಿದ್ದು ವೀಣಾರವರ ಕಥೆಗಳ ವೈಶಿಷ್ಟ್ಯ. ಹಲವಾರು ಲೇಖಕಿಯರಿಂದ ನೂರಾರು ಕಥೆಗಳು ರಚಿತವಾಗಿದ್ದರೂ ಅವುಗಳಲ್ಲಿ ಹೆಚ್ಚಿನವೂ ಸಾಮಾನ್ಯ ಸೂತ್ರವನ್ನು ಅನುಸರಿಸಿಯೇ ಬರೆದಂತವಾಗಿವೆ. ಹೊಸ ಬಗೆಯ ಕಥೆಗಳಿಗೆ ಬುನಾದಿಯನ್ನು ಹಾಕಿರುವಂತ ಲೇಖಕಿಯರ ಮಾತು ಬಂದಾಗಲೆಲ್ಲ ಪಸ್ತಾಪವಾಗುವುದು ಎರಡು ಹೆಸರುಗಳು. (೧) ರಾಜಲಕ್ಷ್ಮೀ ಎನ್.ರಾವ್ (೨) ವೀಣಾ ಶಾಂತೇಶ್ವರ್.

ಈ ಇಬ್ಬರು ಲೇಖಕಿಯರ ಕೃತಿ ರಚನೆಯ ಅವಧಿಯಲ್ಲಿ ಸುಮಾರು ೩೦ ವರ್ಷಗಳ ಅಂತರವನ್ನು ಕಾಣಬಹುದು. ಇವರಿಬ್ಬರ ನಡುವೆ ಇರುವ ಸಾಮ್ಯವೆಂದರೆ ಇಬ್ಬರೂ ಆಂಗ್ಲ ಸಾಹಿತ್ಯವನ್ನು ಓದಿಕೊಂಡವರು. ಕನ್ನಡ ಸಾಹಿತ್ಯದ ಬೆಳವಣಿಗೆಯತ್ತ ಮಾತ್ರ ಗಮನ ಹರಿಸುವುದಲ್ಲದೆ, ಆಂಗ್ಲಸಾಹಿತ್ಯದ ಪ್ರತಿಭಾವಂತರ ಕೃತಿಗಳನ್ನು ಓದಿಕೊಂಡು ತಮ್ಮ ಬರವಣಿಗೆಯನ್ನು ಶ್ರೀಮಂತಗೊಳಿಸಿಕೊಂಡವರು. ಹೊಸ ರೀತಿಯ ಸಾಹಿತ್ಯವನ್ನು ತಮ್ಮ ಬರವಣಿಗೆಯ ಮೂಲಕ ನೀಡಬೇಕೆಂಬ ಹುಮ್ಮಸ್ಸನ್ನು ಹೊಂದಿದವರು. ನವ್ಯ ಸಾಹಿತ್ಯದ ರೀತಿಯಲ್ಲಿ ಕಥೆಗಳನ್ನು ಹೆಣೆದ ತಂತ್ರಗಳನ್ನು, ಸಂಕೇತ, ಪ್ರತಿಮೆಗಳನ್ನು ಧಾರಾಳವಾಗಿ ಬಳಸಿಕೊಂಡು ನವೀನ ರೀತಿಯಲ್ಲಿ ಹೆಣ್ಣನ್ನು ಪ್ರತಿಪಾದಿಸಲು ಪ್ರಯತ್ನಿಸಿದವರು.

ಕನ್ನಡ ಲೇಖಕಿಯರ ಸಾಹಿತ್ಯಕ ಬರವಣಿಗೆಯಲ್ಲಿ ಸ್ಪಷ್ಟವಾಗಿ ಮಗ್ಗುಲನ್ನು ಬದಲಿಸಿ, ಅದಕ್ಕೊಂದು ಹೊಸ ಚಾಲನೆಯನ್ನು ತಂದು ಕೊಟ್ಟವರಲ್ಲಿ ರಾಜಲಕ್ಷ್ಮಿ.ಎನ್.ರಾವ್ ಪ್ರಮುಖರಾಗಿದ್ದಾರೆ. ಬಿ.ಎಂ. ಶ್ರೀಯವರ ಮೊಮ್ಮಗಳಾದ ರಾಜಲಕ್ಷ್ಮಿಯವರಿಗೆ ದಟ್ಟವಾದ ಸಾಹಿತ್ಯಕ ವಾತಾವರಣವಿದ್ದುದರಿಂದ ಅವರಿಗೆ ಸಮಕಾಲೀನ ಸಾಹಿತ್ಯ ಹಾಗೂ ಸಾಹಿತಿಗಳ ಬಗೆಗೆ ಆಸಕ್ತಿ ಮೂಡಿತು. ಇವರ ಸಂದರ್ಭದಲ್ಲಿದ್ದ ನವ್ಯ ಸಾಹಿತಿಗಳಾದ ಗೋಪಾಲಕೃಷ್ಣಅಡಿಗ, ಬಿ.ಸಿ.ರಾಮಚಂದ್ರ ಶರ್ಮ, ಕೆ.ಸದಾಶಿವ, ಯು.ಆರ್.ಅನಂತಮೂರ್ತಿ ಮೊದಲಾದವರು ತಮ್ಮದೇ ಆದ ಹೊಸ ರೀತಿಯಲ್ಲಿ ಬರವಣಿಗೆ ಮೂಡಿಸಿದ್ದ ಕಾಲದಲ್ಲಿಬಂದವರು. ಅವರುಗಳ ಜೊತೆಗಿನ ಚರ್ಚೆ, ಚಿಂತನೆಗಳು ಜೊತೆಗೆ ಅವರಿಗಿದ್ದ ಇಂಗ್ಲೀಷ್ ಸಾಹಿತ್ಯದ ಹಿನ್ನೆಲೆ ಇವುಗಳು ಅವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಲು ಪ್ರೇರೇಪಿಸಿದವು. ಈ ಎಲ್ಲ ಹಿನ್ನೆಲೆಗಳಿಂದ ರಾಜಲಕ್ಷ್ಮೀ ಯವರು ಜಾನ್ ಗ್ಯಾಲ್ಸವರ್ತಿಯ 'ಆನ್ ಪಲ್ ಟ್ರೀ' ಎಂಬ ಪುಸ್ತಕವನ್ನು 'ಸೇಬಿನ ಗಿಡ' ಎಂಬ ಶೀರ್ಷಿಕೆಯಲ್ಲಿ ಅನುವಾದಿಸುವ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು.

ನವ್ಯ ಪುರುಷ ಲೇಖಕರ ಕೃತಿಗಳಲ್ಲಿ ಕಂಡು ಬರುವ ಸ್ತ್ರೀ ಪಾತ್ರಗಳಿಗಿಂತ ಭಿನ್ನ ವ್ಯಕ್ತಿತ್ವದ ಸ್ತ್ರೀ ಪಾತ್ರಗಳನ್ನು ಇವರ ಕೃತಿಗಳಲ್ಲಿ ಕಾಣಬಹುದು. ವಸ್ತುವಿನ ನಿರ್ವಹಣೆಯಲ್ಲಿ ಕೂಡ ಇವರು ನವ್ಯ ಲೇಖಕರಿಗಿಂತ ಭಿನ್ನವಾದ ದೃಷ್ಟಿಕೋನ ಹೊಂದಿದ್ದರು.ಇವರ ಮೇಲೆ ಪ್ರಭಾವ ಬೀರಿದ ಅನಂತಮೂರ್ತಿ, ಶರ್ಮರವರ ಕಥೆಗಳಲ್ಲಿ ಕಾಣಲಾಗದ ನಿಜಕ್ಕೂ ಆಧುನಿಕ ಮನೋಧರ್ಮದ ಹೆಣ್ಣುಗಳನ್ನು ಇವರ ಕಥೆಗಳಲ್ಲಿ ಕಾಣಬಹುದು. ಇವರ ಕಥೆಗಳಲ್ಲಿ ಹೆಣ್ಣುಗಳ ಜೀವನ ಸರಳ ರೇಖೆಯಲ್ಲ. ಅವರಿಗೆ ಜೀವನವೆಂದರೆ ಮದುವೆಯೊಂದಿಗೆ ಮುಗುದು ಹೋಗುವಷ್ಟು ಸರಳವಲ್ಲ. ಅವರೊಳಗಿನ ಚಡಪಡಿಕೆ. ದುಗುಡ. ಸಂಕ- ನಿರಂತರವಾದುದು.

ರಾಜಲಕ್ಷ್ಮೀಯವರು ಮುಖ್ಯವಾಗಿ ತಮ್ಮ ಕಾಲಕ್ಕಾಗಲೇ ಬರುತ್ತಿದ್ದ ಸಾಹಿತ್ಯದ ಏಕತಾನತೆಗೆ, ಸವಕಲಾದ ಶೈಲಿಯ ಬಗೆಗೆ ಬೇಸತ್ತವರು. ಸಮಾಜಕ್ಕೂ, ಸಾಹಿತ್ಯಕ್ಕೂ ಇರುವ ನಂಟಿನ ಶೋಧನೆಯಾಗಬೇಕು, ಹೊಸ ವಸ್ತುವಿರಬೇಕು, ಜೀವನ ಹಾಗೂ ಸಮಸ್ಯೆಗಳನ್ನು ಸಾಹಿತ್ಯ ಪರಿಶೀಲಿಸಬೇಕೆಂಬ ತುಡಿತವನ್ನು ಹೊಂದಿದ್ದರು. ಸಾಹಿತ್ಯಕ ವಾತಾವರಣದಿಂದ ಬಂದಿದ್ದ ಇವರ ಮನಸ್ಸಿನ ಮೇಲೆ ರಾಮಚಂದ್ರಶರ್ಮರ ಕಥೆಗಳು ಇವರಲ್ಲಿ ಸ್ಫೋಟ, ವಿಪ್ಲವ, ಕ್ರಾಂತಿ ಮುಂತಾದವು ಶುರುವಾಗುವಂತೆ ಮಾಡಿದವು ಎಂದು ಹೇಳುತ್ತಾರೆ.

ರಾಜಲಕ್ಷ್ಮೀಯವರ ಏಕೈಕ ಕಥಾಸಂಕಲನ 'ಸಂಗಮ' ಇದರಲ್ಲಿನ ಕಥೆಗಳಲ್ಲಿ ಮುಖ್ಯವಾಗಿ ಬಾಹ್ಯದ ವಾಚ್ಯ ವಿವರಣೆಗಳಿಗಿಂತ ಮನೋವಲಯದಲ್ಲಿ ನಡೆಯುವ ದ್ವಂದ್ವ, ತುಮುಲ, ಹೋರಾಟಗಳ ಚಿತ್ರಣವಿರುವುದನ್ನ ಗುತಿಸಬಹುದು. ಕಥೆಗಳಲ್ಲಿ ಬರುವ ನಾಯಕಿಯರಲ್ಲಿ ಸಮಸ್ಯೆಯನ್ನು ಕೂಗಿ ಹೇಳುವ ವಾಚ್ಯವಿಲ್ಲ. ಅಂತರಂಗದಲ್ಲೇ ಘಟಿಸುವ ಪಿಸು ನರಳಿಕೆಗಳು, ಸಣ್ಣ-ದೊಡ್ಡ ನೋವುಗಳು ಎಲ್ಲವೂ ಕಥೆಗಳಲ್ಲಿ ವಸ್ತುವಾಗಿ ಸ್ಥಾನ ಪಡೆಯುತ್ತವೆ. ಇವರ ಎಲ್ಲಾ ಕಥೆಗಳಲ್ಲೂ ಹೆಣ್ಣೊಬ್ಬಳೇ ಕಡ್ಡಾಯವಾಗಿ ನಾಯಕಿಯಾಗದೆ ಪುರುಷರೂ ಸಹ ಸ್ಥಾನ ಪಡೆದಿದ್ದಾರೆ. ಪುರುಷ ಜಗತ್ತಿನ ಸೂಕ್ಷ್ಮಾತಿ ಸೂಕ್ಷ್ಮ ವಿವರಗಳೂ ಇವರ ಕಥೆಗಳಲ್ಲಿ ವ್ಯಕ್ತವಾಗುತ್ತವೆ.

'ಕಲ್ಯಾಣಿ' ರಾಜಲಕ್ಮೀಯವರು ಬರೆದ ಪ್ರಮುಖ ಕಥೆಗಳಲ್ಲಿ ಒಂದು. ಪ್ರೇಮವು ಪ್ರಮುಖ ವಸ್ತುವಾಗಿರುವುದು ಇದರ ವೈಶಿಷ್ಟ್ಯ. ಕಥೆ ಮುಖ್ಯವಾಗಿ ಗಂಡು-ಹೆಣ್ಣುಗಳ ಜಗತ್ತುಗಳ ನಡುವೆ ಇರುವ ಅಂತರವನ್ನು ಸ್ಪಷ್ಟವಾಗಿ ಬಿಡಿಸುತ್ತದೆ. ಕಥೆಯ ನಾಯಕಿಯಾದ ಕಲ್ಯಾಣಿಯ ಮೂಲಕ ಗಂಡು ಹೆಣ್ಣನ್ನು ಗ್ರಹಿಸುವ ಕ್ರಮಕ್ಕೂ, ಹೆಣ್ಣೊಬ್ಬಳು ಗಂಡನ್ನು ವಿವರಿಸಿಕೊಳ್ಳುವುದಕ್ಕೂ ಇರುವ ವ್ಯತ್ಯಾಸಗಳ ದಾಖಲಾತಿ ಇದೆ. ಕಥೆಯ ನಾಯಕಿ ಕಲ್ಯಾಣಿ ತನ್ನನ್ನು ಪ್ರೀತಿಸುವ ಶ್ರೀಮಂತನಾದ ಮಾಧವ, ಕಲಾವಿದನಾದ ಕೇಶವ, ಕವಿ ಗೋಪಾಲರ ಜೀವನವನ್ನು ತನ್ನ ನಿಲುವಿನಿಂದ ಗ್ರಹಿಸುತ್ತಾಳೆ. ಈಕೆಯ ಪ್ರಕಾರ ಮೂರು ಜನ ಗಂಡುಗಳ ಗುರಿಯು ಬೇರೆ ಬೇರೆಯಾಗಿದೆ.

ಇವಳ ಪ್ರಕಾರ ಶ್ರೀಮಂತನಾದ ಮಾಧವನಿಗೆ ಹೆಣ್ಣಿಗಿಂತ ಹಣವೇ ಮುಖ್ಯ. ಕಲ್ಯಾಣಿಯ ಬಗ್ಗೆಯಾಗಲೀ ಅಥವಾ ಇತರ ಹೆಣ್ಣುಗಳ ಬಗ್ಗೆಯಾಗಲೀ ಇತನಿಗೆ ಯಾವುದೇ ಭ್ರಮೆಗಳಿಲ್ಲ. ಅತೀ ದೊಡ್ಡ ಶ್ರೀಮಂತನಾಗಿರುವ ಈತ ತನ್ನ ವ್ಯಾಪಾರೀ ಮನೋಭಾವದಿಂದಲೇ ಹೆಣ್ಣುಗಳನ್ನು ಅಳೆಯುವವನು. ಮನುಷ್ಯ ಸಂಬಂಧಗಳಿಗಿಂತ ಹಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾನೆ. ಕವಿಯಾದ ಗೋಪಾಲನಿಗೆ ಮಾಧವನಿಗಿಂತ ವಿರುದ್ಧವಾದ ಭಾವನೆ ಇವನಿಗೆ ಯಾವುದೇ ಕೊರತೆಯಿಲ್ಲದ ಹೆಣ್ಣಿನ ಬಗ್ಗೆ ಆಸಕ್ತಿ. ತಾನು ಬರೆಯುವ

ಕವಿತೆಗಳಂತೆ ಹೆಣ್ಣುಗಳು ಸುಂದರವಾಗಿ, ಆಕರ್ಷಕವಾಗಿರಬೇಕು ಎಂಬುದು ಈತನ ಅನಿಸಿಕೆ. ಇನ್ನು ಕಲಾವಿದನಾದ ಕೇಶವನಿಗೆ ಹೆಣ್ಣುಗಳೆಂದರೆ ತಾನು ಬಿಡಿಸುವ ಚಿತ್ರಗಳಂತೆ ಜೀವವಿಲ್ಲದವರು. ವಾಸ್ತವದಲ್ಲಿ ಶ್ರೀಮಂತನೇ ಆಗಿರುವುದರಿಂದ ಅವನಿಗೆ ಹಣದ ಬಗೆಗಿನ ಆಸಕ್ತಿಗಿಂತ ತಾನು ಹೇಳಿದಂತೆ ಕೇಳುವ ಹೆಂಡತಿ ಬೇಕಾಗಿದ್ದಾಳೆ. ಹೆಣ್ಣು, ಮಕ್ಕಳನ್ನು ಹೆರುವ ಯಂತ್ರ, ಆಕೆಯಿಂದ ಪಡೆಯುವ ಮಕ್ಕಳ ಬಗೆಗೆ ಅತೀವ ಪ್ರೀತಿ ಮತ್ತು ವ್ಯಾಮೋಹವಿರುವ ಈತನಿಗೆ ಹೆಂಡತಿಯ ಬಗ್ಗೆ ಆಸಕ್ತಿಯಿಲ್ಲ.

ಕಲ್ಯಾಣಿಯ ಜೀವನದಲ್ಲಿ ಬರುವ ಈ ಮೂರು ಜನ ಗಂಡುಗಳು ಮೂರು ಗುಣಗಳ ಸಂಕೇತವಾಗುತ್ತಾರೆ. ಮೂರು ಜನ ಗಂಡುಗಳು ತಮಗಿಷ್ಟವಾದ ರೀತಿಯಲ್ಲೇ ಕಲ್ಯಾಣಿಯನ್ನು ಕಲ್ಪಿಸಿ ಅವಳೊಂದಿಗೆ ಬದುಕಲು ಬಯಸುತ್ತಾರೆ. ಆದರೆ ಓದುಗರಿಗೆ ಕಥೆಯಲ್ಲಿ ಮುಖ್ಯವಾಗುವುದು ನಾಯಕಿ ಕಲ್ಯಾಣಿಯ ಆಯ್ಕೆ. ಅವಳ ಜೀವನದಲ್ಲಿ ಕಂಡು ಬರುವ ಈ ಮೂರು ಗಂಡುಗಳೂ ಅವಳಿಗೆ ಅಪೂರ್ಣವಾಗಿ ಕಂಡು ಬಂದು ಯಾರೊಬ್ಬರನ್ನು ಒಪ್ಪಿಕೊಳ್ಳದೆ ತಿರಸ್ಕರಿಸುತ್ತಾಳೆ. ಕಲ್ಯಾಣಿಯ ಪ್ರಕಾರ ಮೂರು ಜನ ಗಂಡುಗಳು ಅವಳ ಒಂದೊಂದು ಭಾಗವನ್ನು ಮಾತ್ರ ಅರ್ಥ ಮಾಡಿಕೊಳ್ಳಬಲ್ಲರು. ಗಂಡುಗಳೆಂಬ ಈ ಮೂರು ಕನ್ನಡಿಗಳಲ್ಲಿ ಆಕೆಯ ಪೂರ್ಣ ಪ್ರತಿ ಬಿಂಬ ಮೂಡಲಾರದು. ಮೂರು ಕನ್ನಡಿಗಳಲ್ಲೂ ಈಕೆಯ ಚಿತ್ರ ಸುಂದರವಾಗಿರಬಹುದು ಅಥವಾ ಇಲ್ಲದಿರಬಹುದು. ಆದರೆ ಇವಳನ್ನು ಪ್ರತಿಬಿಂಬಿಸುವುದರಲ್ಲಿ ಮೂರು ಕನ್ನಡಿಗಳು ಅಪೂರ್ಣ. ತನ್ನ ವ್ಯಕ್ತಿತ್ವ, ಅಸ್ತಿತ್ವದ ಬಗೆಗೆ ಗಟ್ಟಿಯಾದ ನಂಬಿಕೆ ಇರುವುದರಿಂದ ಕಲ್ಯಾಣಿ ಮೂರು ಜನರನ್ನು ತಿರಸ್ಕರಿಸುತ್ತಾಳೆ.

ಇವರ ಮತ್ತೊಂದು ಮಹತ್ವದ ಕಥೆ 'ಫೀಡ್ರಾ' ವಿವಾಹವಾದ ಹೆಣ್ಣಿನ ವಿವಾಹೇತರ ಸಂಬಂಧದ ಬಗೆಗೆ ಈ ಕಥೆ ಹೇಳುತ್ತದೆ. ಕಥೆಯ ನಾಯಕಿ ಪಾರ್ವತಿ ತಾನು ಹುಟ್ಟಿದ ಮನೆಯ ಕಷ್ಟಗಳಿಗೆ ಮರುಗಿ ತನಗಿಂತ ಹೆಚ್ಚು ಹಿರಿಯರಾದ ಮುದುಕ ನರಸಿಂಹಯ್ಯನನ್ನು ಮದುವೆಯಾಗುತ್ತಾಳೆ. ತಾನು ಹುಟ್ಟಿದ ಮನೆಗೆ ಏನಾದರೂ ಸಹಾಯ ಮಾಡಬಹುದು ಎಂಬ ನಿರ್ಧಾರದಿಂದ ತನ್ನ ವಯೋಸಹಜ ಕಾಮನೆಗಳನ್ನು ಸಾಯಿಸಿ ಮದುವೆಯಾಗುತ್ತಾಳೆ. ಆದರೆ ಹದಿನಾರು ವರ್ಷದ ಪಾರ್ವತಿ ತನಗಿಂತ ಎರಡೇ ವರ್ಷ ದೊಡ್ಡವನಾದ ಮಲ ಮಗನಿಂದ ಆಕರ್ಷಿತಳಾಗುತ್ತಾಳೆ. ಪಾಪ ಪ್ರಜ್ಞೆ ಹಾಗೂ ಬದುಕಿನ ದೊಡ್ಡ ಸೆಳೆತವಾದ 'ಕಾಮ' ಈ ಎರಡರಿಂದಲೂ ಭಾದೆಗೆ ಒಳಗಾಗಿ ಅಳುತ್ತಾಳೆ. ವಾಸ್ತವದ ಬದುಕಿನಲ್ಲಿ ಬರುವ ಧರ್ಮಶಾಸ್ತ್ರ, ವೇದ, ಪುರಾಣಗಳ ಮೂಲಕ ಅವಳು ತನ್ನ ಬದುಕಿನ ಕಾಮವನ್ನು ಅತಿ ಸಣ್ಣದೆಂದೇ ಭಾವಿಸುತ್ತಾಳೆ. ಎಲ್ಲಾ ಕಟ್ಟು ಪಾಡುಗಳ ನಡುವೆ ಸಿಕ್ಕಿ ತೊಳಲಾಡುತ್ತಲೆ ಜೀವನ ಮುಂದುವರೆಸುತ್ತಾಳೆ.

ಕಥೆಯಲ್ಲಿ ಪಾರ್ವತಿ ಕಾಣುವ ಕನಸುಗಳು ಅವಳ ವಯೋಸಹಜ ಕಾಮನೆಗಳು, ವಸ್ತು ಸ್ಥಿತಿಯ ಹೋರಾಟಗಳನ್ನು ದಾಖಲಿಸುತ್ತವೆ. ಕಥೆಯು ಕೇವಲ ಪಾರ್ವತಿಯ ಸ್ಥಿತಿಯನ್ನು ಮಾತ್ರ ವಿವರಿಸದೆ ಹೆಣ್ಣಿನ ಬದುಕಿನ ವಸ್ತು ಹಾಗೂ ವಾಸ್ತವದ ಸ್ಥಿತಿಯನ್ನು ಹೇಳುತ್ತದೆ.

'ವೈಶಾಖ ಶುದ್ಧ ಪೂರ್ಣಿಮೆ' ಕಥೆಯಲ್ಲಿ ಬುದ್ಧನ ವಿಗ್ರಹವನ್ನು ಹೆಣ್ಣೊಬ್ಬಳ ಭಾವನೆಗಳ ಸಂಕೇತವಾಗಿ ರಾಜಲಕ್ಷ್ಮಿ ಬಳಸಿಕೊಳ್ಳುತ್ತಾರೆ. ಮದುವೆ ನಿಶ್ಚಯವಾಗಿ ಹೊಸ ಬದುಕಿನ ಹೊಂಗನಸನ್ನು ಕಾಣುತ್ತಿದ್ದ ಹೆಣ್ಣೊಬ್ಬಳ ಕನಸುಗಳು ಗಂಡನಾಗುವವನು ಅಪಘಾತದಲ್ಲಿ ಸಾಯುವ ಮೂಲಕ ಕೊನೆಗೊಳ್ಳುತ್ತದೆ.

ಹೆಣ್ಣೊಬ್ಬಳ ಗುಣ, ಭಾವನೆಗಳಿಗೆ ಬುದ್ಧನ ವಿಗ್ರಹ ಪ್ರತಿಮೆಯಾಗುತ್ತದೆ. ಮದುವೆಯ ಕನಸು ಭಗ್ನಗೊಂಡಾಗ ತರುಣಿಗೆ ಅಪಾರ ನಿರಾಸೆಯಾಗುತ್ತದೆ. ವೈಶಾಖದ ಶುದ್ಧ ಪೂರ್ಣಿಮೆಯಂದು ತಾನು ಮದುವೆಯಾಗಲಿರುವ ಹುಡುಗನಿಗೆ ಉಡುಗೊರೆಯಾಗಿ ಬುದ್ಧನ ವಿಗ್ರಹವನ್ನು ತರುತ್ತಾಳೆ. ಮನೆಗೆ ತಂದಾಗ ಆಕೆಗೆ ವಿಗ್ರಹದಲ್ಲಿ ಮುಕ್ಕು ಕಾಣಿಸುತ್ತದೆ. ಅದೇ ದಿನ ಹುಡುಗನು ಅಪಘಾತದಲ್ಲಿ ಸಾಯುತ್ತಾನೆ. ಅಂದು ಆತನಿಗೆ ತಗುಲಿದ ನೋವೇ ಈಕೆಗೆ ಬುದ್ಧನ ಪ್ರತಿಮೆಯಲ್ಲಿನ ಮುಕ್ಕಾಗಿ ಕಾಣಿಸುತ್ತದೆ.ಆದರೆ ಜೀವನದ ಕಾಲ ಕ್ರಮದಲ್ಲಿ ಸನ್ನಿವೇಶಗಳ ನಡುವೆ ಮುಕ್ಕು ಮರೆಯಾಗುತ್ತದೆ. ಲಗ್ನಕ್ಕೆ ಮುಂಚೆಯೇ ಭಗ್ನವಾಗಿರುವ ಕನಸನ್ನು ಮರೆತು ಮತ್ತೆ ಹೊಸ ಬದುಕಿಗೆ ಕಾಲಿಡಲು ಒಪ್ಪದ ಆಕೆ ಬುದ್ಧನ ವಿಗ್ರಹದಂತೆ ನಿಶ್ಚಲವಾಗಿರುವ ದೃಢ ನಿಶ್ಚಯಕ್ಕೆ ಬರುತ್ತಾಳೆ.

ಬಯಕೆ ಕೈಗೂಡದಾಗ ಹೆಣ್ಣಿಗಾಗುವ ತಲ್ಲಣಗಳು, ತಾಕಲಾಟಗಳನ್ನು ಕಥೆಯಲ್ಲಿ ಗುರುತಿಸಬಹುದು. ಕನಸಿನ ಭಗ್ನತೆಯ ನೋವಿನಿಂದ ಹೊರಬಂದು ಹೊಸ ನಿಶ್ಚಯದೊಂದಿಗೆ ಬದುಕುವ ಹೆಣ್ಣಿನ ನಿರ್ಧಾರವನ್ನು ಬುದ್ಧನ ಪ್ರತಿಮೆಯ ಮೂಲಕ ಹೇಳುತ್ತಾರೆ.

ರಾಜಲಕ್ಷ್ಮೀಯವರು ತಾವು ಬರೆದು ತಾವೇ ಮೆಚ್ಚಿಕೊಂಡಿರುವ ಕಥೆ 'ಆವೆ ಮರೀಯಾ' ಸಂಗೀತ ಪ್ರಧಾನ ಪಾತ್ರವಾಗಿರುವ ಕಥೆಯ ನಾಯಕ ಟೋನಿ. ರಾಜಲಕ್ಷ್ಮಿಯವರ ಇತರ ಕಥೆಗಳಲ್ಲಿ ಹೆಣ್ಣಿಗಿರುವ ಕುಟುಂಬದ ಕಷ್ಟ ಸುಖಗಳು ಈತನಿಗೆ ಇದೆ. ಆದರೆ ಇತರ ಕಥೆಗಳ ನಾಯಕಿಯರಂತೆ ಈತ ಅವುಗಳಿಗೆ ತಲೆಬಾಗದೆ ತಲೆ ತಪ್ಪಿಸಿಕೊಳ್ಳುತ್ತಾನೆ. ತನ್ನ ಗೆಳತಿ ಮರಿಯಾಳಿಗೆ ಮದುವೆಯಾಗುವ ಮಾತು ಕೊಟ್ಟು ನಂತರ ತನ್ನ ಬಡತನ, ಕಷ್ಟ, ಸಂದರ್ಭಗಳ ಒತ್ತಡಕ್ಕೆ ಸಿಲುಕಿ ಮದುವೆಯಾಗುವ ಮಾತನ್ನು ಮುರಿಯುತ್ತಾನೆ. ಮರಿಯಾಳಿಗೆ ನೀಡಿದ ಮನಸ್ಸನ್ನು ಹಿಂದಕ್ಕೆ ಹಿರಿದು ತನ್ನೊಳಗಿನ ಆಂತರಿಕ ಹೋರಾಟದಲ್ಲಿ ವಿವಾಹಕ್ಕೆ ವಿರುದ್ಧವಾಗಿ ಹೋರಡುತ್ತಾನೆ. ಟೋನಿಯು ತನ್ನ ಮನಸ್ಸನ್ನು ಸ್ಥಿಮಿತಗೊಳಿಸಲು ಬಳಸುವ ಸಾಧನ ಸಂಗೀತ. ಟೋನಿಯು ತನ್ನ ಸ್ಥಿತಿಯ ಕುರಿತು ಹೇಳುವ ಮಾತು ಗಮನಿಸಿದಾಗ ಈತ ಪರಿಸ್ಥಿತಿಯ ಕೈಗೊಂಬೆಯಾಗಿರುವುದು ತಿಳಿಯುತ್ತದೆ. ಹಣವಿದ್ದವರಿಗೆ ಮಕ್ಕಳಿರುವುದಿಲ್ಲ, ಹಣವಿಲ್ಲದವರಿಗೆ ಹೆಚ್ಚು ಮಕ್ಕಳು ಎನ್ನುವಂತೆ ಟೋನಿಯ ಗೆಳೆಯನಿಗೆ ದುಡ್ಡಿದೆ ಮಕ್ಕಳಿಲ್ಲ, ತಂಗಿಗೆ ಮಕ್ಕಳಿವೆ ದುಡ್ಡಿಲ್ಲ. ಅದೇ ರೀತಿ ತಂದೆ ಹಣವಿಲ್ಲದೆ ಚಿಂತೆಗೀಡಾಗಿದ್ದಾರೆ. ಈ ರೀತಿಯ ಬದುಕಿನ ಹೋರಾಟದಿಂದ ಪಲಾಯನ ಮಾಡುವ ಟೋನಿ ಸಂಗೀತದಲ್ಲಿ ತಲ್ಲೀನನಾಗಿ ಅದರಲ್ಲಿನ ಆರೋಹಣ, ಅವರೋಹಣಕ್ಕು, ಮನುಷ್ಯ ಬದುಕಿನ ಕಷ್ಟ ಸುಖಗಳಿಗೂ ಇರುವ ಒಂದು ಅನಿರ್ದಿಷ್ಟವಾದ ಲಯ, ನಾದ, ಮಾಧುರ್ಯ ರಾಗ ವೈಭವಗಳ ಹಿನ್ನೆಲೆಯಲ್ಲಿ ಬದುಕನ್ನು ರೂಪಿಸಿಕೊಳ್ಳುತ್ತಾನೆ. ಹಣವಿದ್ದವನಿಗೂ, ಇಲ್ಲದವನಿಗೂ ಹಣವೇ ಶತ್ರು ಎಂಬುದು ಟೋನಿಯ ಅಭಿಪ್ರಾಯ. ಲೇಖಕಿ ಕಥೆಯಲ್ಲಿ ಸಂಗೀತದ ಶಕ್ತಿಯನ್ನು ಗುಪ್ತಗಾಮಿನಿಯಾಗಿ ಹರಿಸುತ್ತಾರೆ. ಸಂಗೀತವನ್ನು ಬದುಕಿನ ಲಯದೊಂದಿಗೆ ಹೊಂದಿಕೊಳ್ಳುವ ಹೆಣ್ಣಿನಂತೆ ಚಿತ್ರಿಸಿದ್ದಾರೆ. ಹೆಣ್ಣಿಗೆ ಕಷ್ಟ ಬಂದು ಆಕೆಯ ದಾರಿ ಕವಲೊಡೆದಾಗ ಆಕೆ ಸಾಂಸಾರಿಕ ಜೀವನ ಆಯ್ದುಕೊಳ್ಳುತ್ತಾಳೆ. ಆದರೆ ಗಂಡು ಹೇಗೆ ಜವಬ್ದಾರಿಗಳಿಂದ ನುಣುಚಿಕೊಂಡು ತನ್ನ ದಾರಿ ನೋಡಿಕೊಳ್ಳುತ್ತಾನೆ ಎಂಬುದನ್ನು ಕಥೆಯು ಸೂಚಿಸುತ್ತದೆ.

ರಾಜಲಕ್ಷ್ಮೀಯವರ ನಂತರ ನವ್ಯ ಸಾಹಿತ್ಯದಲ್ಲಿ ಕಂಡು ಬರುವ ಮಹಿಳಾ ದನಿ ವೀಣಾಶಾಂತೇಶ್ವರ. ನವ್ಯ ಧೋರಣೆಯನ್ನು ಪ್ರತಿಪಾದಿಸುತ್ತಲೆ ಪ್ರಸಕ್ತ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಲೇ ಬಂದವರು. ಈ ರೀತಿಯ ಅವಲೋಕನದಿಂದಲೇ ಇವರು ತಮ್ಮ ಕೃತಿಗಳಲ್ಲಿ ಸ್ತ್ರೀ ವಿಮೋಚನೆಯ ಹಲವು ನೆಲೆಗಳನ್ನು ಗುರುತಿಸಿರುವುದನ್ನು ಕಾಣಬಹುದು.

ಇವರ ಮೊದಲ ಕಥಾಸಂಕಲನ 'ಮುಳ್ಳುಗಳು' ಮೊದಲಭಾರಿಗೆ ಪುರುಷ ಪ್ರಧಾನ ಸಂಸ್ಕೃತಿ ಚಿತ್ರಿಸುತ್ತಾ ಬಂದ ಹೆಣ್ಣಿನ ಮಾದರಿಗೊಂದು ಪೆಟ್ಟು ಕೊಟ್ಟಿತು. ಈ ಸಂಕಲನದ ಬಹುಪಾಲು ಕಥೆಗಳು ಮುಖ್ಯವಾಗಿ ಸ್ತ್ರೀ ಪುರುಷ ಸಂಬಂಧಗಳನ್ನು ಲೈಂಗಿಕ ಹಿನ್ನೆಲೆಯಲ್ಲಿ ಚಿತ್ರಿಸುತ್ತವೆ. 'ಹಸಿವು', 'ಕೊನೆಯದಾರಿ', 'ಕವಲು', 'ಬಿಡುಗಡೆ' ಇವು ಇವರ ಇತರ ಕಥಾಸಂಕಲನಗಳು. 'ಗಂಡಸರು' 'ಶೋಷಣೆ, ಬಂಡಾಯ ಇತ್ಯಾದಿ____'ಇವರ ಕಾದಂಬರಿಗಳು. ಇವರು ಮುಖ್ಯವಾಗಿ ಪುರುಷ ಪ್ರಧಾನ ಸಮಾಜದ ವಿರುದ್ಧ ದನಿ ಎತ್ತುತ್ತಾರೆ. ನವ್ಯ ಚಳುವಳಿ ಕಾಲದ ಪ್ರಮುಖ ದನಿಯಾಗಿರುವ ವೀಣಾರವರ ಕಥನ ಸಾಹಿತ್ಯವೇ ಈ ನಿಬಂಧದ ಮುಖ್ಯ ಉದ್ಧೇಶವಾಗಿರುವುದರಿಂದ ಇವರ ಕಥನಗಳ ಬಗ್ಗೆ ಮುಂದಿನ ಅಧ್ಯಾಯದಲ್ಲಿ ಚರ್ಚೆ ಮಾಡಲಾಗುತ್ತದೆ.

ನವ್ಯ ಸಾಹಿತ್ಯ ದ ಪ್ರಮುಖ ಲೇಖಕರೆಂದರೆ ಯು.ಆರ್.ಅನಂತಮೂರ್ತಿ. ಇವರ ಕೃತಿಗಳಲ್ಲಿ ಹೆಣ್ಣನ್ನು ಭೋಗದ ದೃಷ್ಟಿಯಿಂದ ಚಿತ್ರಿಸಿದ್ದಾರೆ. ಅವರ ಕಥೆಗಳಲ್ಲಿನ ಸ್ತ್ರೀ ಪಾತ್ರಗಳಿಗೆ ಗಂಡಿನ ಕಾಮತೃಪ್ತಿಯೊಂದೆ ಮುಖ್ಯ ಜೀವನೋದೇಶ ಎಂಬುದು ಸ್ತ್ರೀವಾದಿಗಳು ಎನಿಸಿಕೊಂಡ ಲೇಖಕಿಯರ ಆಪಾದನೆಯಾಗಿದೆ. ಈ ದೃಷ್ಟಿಯಿಂದ ಅನಂತಮೂರ್ತಿಯವರ ಕಥೆನಗಳನ್ನು ಗಮನಿಸಿದಾಗ ಈ ವಾಕ್ಯ ನಿಜವೆನಿಸುತ್ತದೆ. ಯಾವುದೇ ಒಂದು ವ್ಯಕ್ತಿಗೆ ತಾನು ಬರೆಯುವ ಕಥನಗಳಲ್ಲಿನ ಪಾತ್ರ ಚಿತ್ರಣದ ಮೇಲೆ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಒಂದು ಪಾತ್ರವನ್ನು ಉನ್ನತೀಕರಿಸುವ ಅಥವಾ ಕೀಳು ಮಟ್ಟಕ್ಕೆ ಇಳಿಸುವ ಶಕ್ತಿ ಅವರಲ್ಲಿ ಇರುತ್ತದೆ. ಸ್ತ್ರೀಯನ್ನು ಉದಾರೀಕರಿಸಿ ಉನ್ನತ ಮಟ್ಟಕ್ಕೇರಿಸುವ ಗುಣ ಅಥವಾ ಪಾತ್ರ ಚಿತ್ರಣ ಶಕ್ತಿಯನ್ನು ಅನಂತಮೂರ್ತಿಯವರ ಕೃತಿಗಳಲ್ಲಿ ನಾವು ಕಾಣಲು ಸಾಧ್ಯವಿಲ್ಲ.

ನವ್ಯದ ಪ್ರಾತಿನಿಧಿಕ ಕೃತಿಗಳಲ್ಲಿ ಒಂದು ಎನ್ನಬಹುದಾದ 'ಸಂಸ್ಕಾರ' ಕಾದಂಬರಿಯಲ್ಲಿ ಗೊಡ್ಡು ಸಂಪ್ರದಾಯಗಳು ಹಾಗೂ ಅರ್ಥಹೀನ ಧಾರ್ಮಿಕ ಮೌಲ್ಯಗಳಿಂದ ಕೂಡಿದ ಜನರನ್ನು ಕಾಣುತ್ತೇವೆ. ಶ್ರೇಷ್ಠ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಇಲ್ಲಿನ ವೈದಿಕ ಧರ್ಮವು ಒಂದು ಹೆಣ್ಣನ್ನು ಸಕಾಲದಲ್ಲಿ ಸಂಸ್ಕಾರ ಮಾಡಲಾರದಂಥ ಸ್ಥಿತಿಯಲ್ಲಿದೆ. ವೇಶ್ಯೆ ಎನಿಸಿಕೊಂಡ ಚಂದ್ರಿಯ ಮಾನವೀಯ ಹಾಗೂ ವಾಸ್ತವ ಪ್ರಜ್ಞೆಯ ಮುಂದೆ ಇಲ್ಲಿಯ ಶ್ರೇಷ್ಠ ಧರ್ಮ ಕೀಳಾಗಿ ಕಾಣಿಸುತ್ತದೆ. ಗೊಡ್ಡು ಸಂಪ್ರದಾಯ, ಆಚಾರಗಳನ್ನು ಧಿಕ್ಕರಿಸುವ ನಾರಾಣಪ್ಪ ನವ್ಯ ಪ್ರಜ್ಞೆಯ ಅಸ್ಥಿತ್ವವಾದಿಯಾಗಿದ್ದಾನೆ. ಆದರೆ ಸಂಪ್ರದಾಯಿಕ ಮೌಲ್ಯಗಳ ಪ್ರತೀಕವೆಂಬಂತಿದ್ದ ಪ್ರಾಣೇಶಾಚಾರ್ಯರು ತಾನು ತಾತ್ವಿಕನಾಗಿ ಹುಟ್ಟಿದ್ದೇನೆ ತನಗಿರುವ ರೋಗಗ್ರಸ್ಥ ಹೆಂಡತಿಯ ಶುಶ್ರೂಷೆಯೇ ತನ್ನ ಯಜ್ಞ ಭೂಮಿ ಎಂದು ನಂಬಿದವರು. ಈ ರೀತಿ ಹೆಂಡತಿಯ ಪಾರಿಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದರು ಇವರ ಜೀವನ ಅಪರಿಪೂರ್ಣ. ಈ ಕೊರೆತೆಯನ್ನು ತುಂಬುವ ಒಂದು ಸಾಧನವಾಗಿ ಚಂದ್ರಿ ಇಲ್ಲಿ ಕಂಡು ಬರುತ್ತಾಳೆ. ಕಾದಂಬರಿಯಲ್ಲಿ ಬರುವ ದುರ್ಗಾಭಟ್ಟನಿಗೆ ಚಂದ್ರಿಯನ್ನು ನೋಡಿದಾಗ ವಾತ್ಸಾಯನನ ಕಾಮ ಸೂತ್ರ ನೆನೆಪಾಗುತ್ತದೆ. ಅದೇ ರೀತಿ ಶ್ರೀಪತಿಯೂ ಸಹ ಕಾಣುತ್ತಾನೆ. ಇವರಿಬ್ಬರಿಗೂ ನೇರವಾಗಿ ಹೆಣ್ಣಿನ ಜೊತೆ ಸಂಗ ಮಾಡುತ್ತಾರೆ. ಇವರಿಬ್ಬರಿಗಿಂತ ವಿರುದ್ಧ ದಿಕ್ಕಿನಲ್ಲಿದ್ದ ಸುಸಂಸ್ಕೃತರಾದ ಪ್ರಾಣೇಶಾಚಾರ್ಯ ಚಂದ್ರಿಯನ್ನು ಕೂಡಿದಾಗ ಆತನ ಜೀವನದ ಅಪರಿಪೂರ್ಣತೆ ಮಾಯವಾಗುತ್ತದೆ. ಚಂದ್ರಿಯ ತೋಳ್ತೆಕ್ಕೆಯಲ್ಲಿ ಹೆಣ್ಣಿನ ಸುಖ ಅನುಭವಿಸಿ ಪರಿಪೂರ್ಣನಾಗುವ ಪ್ರಾಣೇಶಾಚಾರಿ ಇಲ್ಲಿ ಸೋಲುತ್ತಾನೆ. ಆದರೆ ಲೇಖಕರು ಇದನ್ನು ಹೆಣ್ಣಿನ ಜಯ ಎನ್ನದೆ ಪ್ರಕೃತಿ ಜಯ ಎನ್ನುತ್ತಾರೆ. ವಾಸ್ತವವಾಗಿ ಇಲ್ಲಿ ಜಯಗಳಿಸುವುದು ಒಂದು ಹೆಣ್ಣು.

ಕೃಷ್ಣರವರ ' ಗೆಂಡೆ ತಿಮ್ಮ' ಕಾದಂಬರಿಯಲ್ಲಿ ಬರುವ ಮರಂಕಿ ಆಧುನಿಕತೆಯ ಮೂಲಕ ತನ್ನನ್ನು ಸಂಘರ್ಷಕ್ಕೆ ಒಡ್ಡಿಕೊಳ್ಳುತ್ತಾಳೆ. ಕಾದಂಬರಿಯಲ್ಲಿ ಮರಂಕಿ ಸ್ವಾತಂತ್ರ್ಯಾಪೇಕ್ಷೆಯುಳ್ಳವಳು. ಮರಂಕಿಯ ಗಂಡನಾದ ಗೆಂಡೆತಿಮ್ಮನ ಗೋಜಲು, ದ್ವಂದ್ವ, ಸಂಕಷ್ಟಗಳನ್ನು ಲೇಖಕರು ವಿಜೃಂಭಿಸಿದ್ದಾರೆ. ಮರಂಕಿ ನವ ನಾಗರೀಕತೆಯ ಪ್ರಭಾವವಿರುವಂತಹ ಹೆಣ್ಣು, ಆಕೆಗೆ ಗಂಡನ ಮನೆಯ ಉಸಿರು ಕಟ್ಟಿಸಿದಂತಹ ವಾತಾವರಣ ಹಿಡಿಸುವುದಿಲ್ಲ. ಅದಕ್ಕಾಗಿ ಆಕೆ ಬದಲಾವಣೆಗೆ ಪ್ರಯತ್ನಿಸುತ್ತಾಳೆ. ಲೇಖಕರು ಇದನ್ನು ಮರಂಕಿ ನವನಾಗರಿಕತೆಯ ಸೋಂಕಿನಿಂದ ತಮ್ಮ ಸಂಸಾರಕ್ಕೆ ತಂದ ಆಪತ್ತು ಎಂದು ಚಿತ್ರಿಸಿದ್ದಾರೆ. ಆದರೆ ಇಲ್ಲಿ ನಾಯಕಿ ತನ್ನ ಅಭಿರುಚಿ, ಆಸೆಗಳಿಗೆ ತಕ್ಕವನಲ್ಲದ ಗಂಡನ ಜೊತೆ ಜೀವಿಸಲು ಇಚ್ಛಿಸದೆ ತನ್ನದೇ ಆದ ಸ್ವತಂತ್ರ್ಯ ದಾರಿಯನ್ನು ಸೃಷ್ಟಿಸಿಕೊಳ್ಳುತ್ತಾಳೆ.

ಲಂಕೇಶರವರು ಆಲನಹಳ್ಳಿ ಕೃಷ್ಣರಂತೆ ಹೆಣ್ಣನ್ನು ಗಂಡಿನ ಆತ್ಮ ಉದ್ಧಾರಕ್ಕಾಗಿ ಇರುವ ಸಾಧನ ಎಂಬಂತೆ ಚಿತ್ರಿಸಿದ ಮತ್ತೊಬ್ಬ ನವ್ಯ ಲೇಖಕ ಎಂದು ಗುರುತಿಸಬಹುದು. ಲಂಕೇಶರ ಕಥನಗಳಲ್ಲಿ ಮುಖ್ಯವಾಗಿ ಸ್ತ್ರೀ ಪಾತ್ರಗಳು ಚಿತ್ರಿತವಾಗುವುದು ಕಾಮ ಮತ್ತು ದೈಹಿಕ ವಿವರಗಳಲ್ಲಿ ಗಂಡಿಗೆ ಮೂರ್ತುಗೊಳ್ಳುವ ಹೆಣ್ಣು. ಲಂಕೇಶರು ತೀವ್ರವಾದ ವ್ಯಕ್ತಿ ಪ್ರಜ್ಞೆಯಿಂದ ಬರೆಯುವ ಲೇಖಕರು. ಇವರ ಬರವಣಿಗೆಯಲ್ಲಿ ತಾನು ಗಂಡು ಎಂಬ ಅರಿವೂ ಹೆಚ್ಚಾಗಿ ಸೇರಿರುತ್ತದೆ. ಸೂಕ್ಷ್ಮ ಮನಸ್ಸಿನ ಗಂಡೊಬ್ಬನಿಗೆ ಹೆಣ್ಣು ಹೇಗೆ ವೇದವ್ಯಳಾಗುತ್ತಾಳೆ ಎಂಬುದರ ನೋಟವೊಂದು ಅವರ ಕಥೆ, ಕಾದಂಬರಿಗಳಲ್ಲಿ ಸಿಗುತ್ತದೆ. ತನಗಿಂತ ಭಿನ್ನವಾದ ಹೆಣ್ಣಿನ ದೇಹ ಗಂಡಿನಲ್ಲಿ ತುಂಬ ಕುತೂಹಲ ಹುಟ್ಟಿಸುತ್ತದೆ. ಮತ್ತು ತೀವ್ರ ಕಾಮದ ಸಂದರ್ಭದಲ್ಲಿ ಹೆಣ್ಣು ಗಂಡಿಗೆ ಮೂರ್ತಗೊಳ್ಳುತ್ತಾಳೆ. ಈ ರೀತಿಯ ಬರವಣಿಗೆಯು ಗಂಡು ಪ್ರಜ್ಞೆಯಿಂದ ಮಾತ್ರ ಸಾಧ್ಯ ಎನ್ನಬಹುದು. ಇವಕ್ಕೆ ಉದಾಹರಣೆಯಾಗಿ ಅವರ ಕಥೆಗಳಲ್ಲಿನ ಸ್ತ್ರೀ ಪಾತ್ರಗಳ ವರ್ಣನೆ ಮಾಡುವುದನ್ನು ಗಮನಿಸಬಹುದು. 'ದೇವಿ' ಕಥೆಯ ದೇವಿ, ಅಕ್ಕ ಕಾದಂಬರಿಯ ಸುಭದ್ರ, ದೇವೀರಿ, 'ಸೆಪ್ಟಂಬರ್ ನಲ್ಲಿ ಪ್ರಥಮ ರಾತ್ರಿ' ಯ ಶಾಂತಾ, 'ದಾಹ' ಕಥೆಯ ಸೆಲ್ವಿಯಾ ಪದ್ಮ ಮುಂತಾದರನ್ನು ಇಲ್ಲಿ ಗುರುತಿಸಬಹುದಾಗಿದೆ.

ಈ ಎಲ್ಲಾ ಕಥೆಗಳಲ್ಲೂ ಹೆಣ್ಣು ತನ್ನ ದೇಹ ಸೌಂದರ್ಯದಿಂದ ಅಂದರೆ ಮೈಯಿ ಕಣ್ಣು,ಮುಂತಾದುವುಗಳೇ ಮುಖ್ಯವೆಂಬಂತೆ ವರ್ಣಿತವಾಗಿವೆ. ಹೆಣ್ಣಿನ ಜತೆಗಿನ ಕಾಮ ಸಂಬಂಧವು ಕುತೂಹಲದ, ಜೀವಂತಿಕೆಯ, ತೃಪ್ತಿಯ ಭಾಗವಾಗಿದೆ. ಆದರೆ ಇವರ ಕಥೆಗಳಲ್ಲಿ ಗಮನಿಸಬಹುದಾದ ಮತ್ತೊಂದು ಮುಖ್ಯ ವಿಷಯವೆಂದರೆ ಕಾಮದ ತುಡಿತ ಗಂಡಿಗೆ ಮಾತ್ರ ಸೀಮಿತವಾಗದೆ ಹೆಣ್ಣಿನಲ್ಲೂ ಇರುವುದಾಗಿದೆ. ನವ್ಯದ ವ್ಯಕ್ತಿ ಪ್ರಜ್ಞೆ ಮತ್ತು ಕಾಮ ಪ್ರಾಮುಖ್ಯತೆಗಳಿಗೆ ಒಂದು ಉತ್ತಮ ಉದಾಹರಣೆಯೆಂದರೆ ಲಂಕೇಶರ 'ಚಂದ್ರಪ್ಪಗೌಡರಿಗೆ ಬಿದ್ದ ಕನಸು'. ಸಂಕೀರ್ಣಗೊಳ್ಳುತ್ತಿದ್ದ ಸೋಗಿಗೊಳಗಾಗುತ್ತಿದ್ದ ತಮ್ಮ ಸುತ್ತಲಿನ ಬದುಕಿನಿಂದ ಹತಾಶರಾದ ಚಂದ್ರಪ್ಪಗೌಡರು ಅರೆಹುಚ್ಚ ಸ್ಥಿತಿಯಲ್ಲಿ ತಮ್ಮ ಕೆಲಸದಾಳಾದ ಮಂಜಿಯೊಡನೆ ಕಾಮ ಸಂಬಂಧ ಬೆಳೆಸುವ ಘಟನೆ ಈ ಕಥೆಯಲ್ಲಿ ವರ್ಣಿತವಾಗಿದೆ. ರೋಗಿಯೊಬ್ಬ ತನ್ನ ರೋಗದ ಚಿಕಿತ್ಸೆಯೆಡೆಗೆ ಧಾವಿಸುವಂತೆ ಚಂದ್ರಪ್ಪಗೌಡರು ಮಂಜಿಯೊಡನೆ ಒಂದಾಗುತ್ತಾರೆ.

ಚಂದ್ರಪ್ಪಗೌಡರು ಮಂಜಿಯೊಡನೆ ಸಂಬಂಧ ಬೆಳೆಸುವಾಗ ಆಕೆಯನ್ನು ತನ್ನ ಬಳಿಗೆ ಕರೆದಾಗ ಅವರನ್ನು ಅಪ್ಪಾ ಎಂದು ಕರೆಯುತ್ತಾಳೆ. ಇಲ್ಲಿ ಅಪ್ಪಾ ಎಂಬ ಸಂಭೋಧನೆ ಅರ್ಥ ಕಳೆದುಕೊಳ್ಳುವುದನ್ನು ಗಮನಿಸಬಹುದು. ಹತ್ತಿರ ಬಂದ ಮಂಜಿಯನ್ನು ತಮ್ಮ ಹಿಡಿತದಲ್ಲಿ ಹಿಡಿದು ಆಕೆಯನ್ನು ಅನುಭವಿಸುತ್ತಾರೆ.

ಅವಳ ಮೈಯ ಬೆಚ್ಚಗಿನ ಸುಖದಿಂದ ಅವರ ಮೈ ಬೆಚ್ಚಗಾಗುವುದಲ್ಲದೆ ಅವರ ಮನಸ್ಸಿಗೂ, ಆತ್ಮಕ್ಕಾ ಕೂಡ ಹಿತವಾಗುತ್ತದೆ. ಮಂಕಾಗಿದ್ದ ಅವರ ವಿವೇಕ ಕೂಡ ರೋಮಾಂಚಿತವಾಗುತ್ತದೆ. ಆದರೆ ಇವರು ಅನುಭವಿಸಿದ ಸುಖವನ್ನು ಮಂಜಿ ಅನುಭವಿಸಲಾರಳು. ಆಕೆಯ ಮನಸ್ಸಿನಲ್ಲಿ ಚಂದ್ರಪ್ಪಗೌಡರು ಮುದ್ದಿಸುವ ನಾಯಿ ಜೋಸಿಯಂತೆ ಈಕೆಯೂ ಸಹ ಅವರ ಆಲಿಂಗನವನ್ನು ಅನುಭವಿಸುತ್ತಾಳೆ. ಕೆಲಸದವಳಾದ ಮಂಜಿ ಪ್ರತಿರೋಧ ಇಲ್ಲದ ಲಂಕೇಶರ ಪ್ರಾತಿನಿಧಿಕ ಪಾತ್ರವಾಗಿದ್ದಾಳೆ. ಗಂಡಿನ ದೃಷ್ಟಿಯಲ್ಲಿ ಹೆಣ್ಣು ಮತ್ತು ಅವಳ ದೇಹ ಪಡೆದುಕೊಳ್ಳುವ ಸ್ಥಾನವನ್ನು ಇದರಿಂದ ಅರ್ಥೈಸಬಹುದು. ಹೆಂಗಸಿನ ಬೇರೆ ಬೇರೆ ಆಯಾಮಗಳು ಗಂಡಿನ ಪ್ರಧಾನ ದೃಷ್ಟಿಗೆ ಹೆದರಿ ಮರೆಯಾಗುವಂತೆ ಚಿತ್ರಿತವಾಗಿದೆ.

ಕಾಮದ ಸಂದರ್ಭದಲ್ಲಿ ಗಂಡು ಹೆಣ್ಣು ಪರಸ್ಪರ ಪ್ರಭಾವಶಾಲಿಯಾಗಿರುವಂತೆ ಲಂಕೇಶ್ ಚಿತ್ರಿಸಿದ್ದಾರೆ. ದಾಹ, ಅಕ್ಕ , ಚಂದ್ರಗೌಡರಿಗೆ ಬಿದ್ದ ಕನಸು ಕಥೆಗಳು ಇದಕ್ಕೆ ಒಳ್ಳೆಯ ಉದಾಹರಣೆಯಾಗಿವೆ. ಇಲ್ಲಿ ಗಂಡಿಗೆ ಹೆಣ್ಣಿನಿಂದ ಆಗುವ ಭಾವನಾ ಪರಿಣಾಮಗಳು, ಅವಳ ಪಾತ್ರದಿಂದ ಮೂಡುವ ನೈತಿಕ ಪ್ರಜ್ಞೆ, ಆ ಸಂಬಂಧಗಳಲ್ಲಿ ಉಂಟಾಗುವ ಬದಲಾವಣೆಗಳು ಇವನ್ನೆಲ್ಲಾ ಗಂಡು ಪ್ರಜ್ಞೆಯಿಂದ ನಿರ್ವಹಿಸಲಾಗಿದೆ. ಹೆಣ್ಣಿನ ದೇಹ ಸಾವಿನ ಮುಂಚಿನ ಗಂಡಿನ ಕೊನೆಯ ಊಟ ಆಗುತ್ತದೆ. ಇವರ ಕಥೆಗಳಲ್ಲಿ ಸ್ತ್ರೀ ಸಂವೇದನೆ ಹಿಂದೆ ಸರಿದು, ಗಂಡಿನ ಆತ್ಮ ಶೋಧನೆಯಲ್ಲಿ ಹೆಣ್ಣು ಒಂದು ನಿಮಿತ್ತವಾಗಿ ಚಿತ್ರಿತವಾಗುತ್ತಾಳೆ.

'ಲಂಕೇಶರ ದೇವಿ ಕಥೆಯ ದೇವೀ ಐದನೇ ಕ್ಲಾಸ್ ಮಾತ್ರ ಓದಿರುವ ತೀರಾ ಸಾಮಾನ್ಯ ಹೆಂಗಸು. ಈಕೆ ಚುರುಕಾಗಿ ಓಡಾಡುವ ಆಕರ್ಷಕ ವ್ಯಕ್ತಿತ್ವವುಳ್ಳವಳು, ಸಂಸಾರ ಯಾತ್ರೆಯನ್ನು ಚಾಣಾಕ್ಷತನದಿಂದ ನಡೆಸಿಕೊಂಡು ಹೋಗುವವಳು ಎಂಬುದು ಕಥೆಯ ಪ್ರಾರಂಭದಲ್ಲಿ ನಮಗೆ ತಿಳಿಯುತ್ತದೆ. ದೇವೀ ಹಳ್ಳಿಯ ಹೆಣ್ಣಾದರೂ ತನ್ನ ಆಳದ ವೇದನೆಗಳನ್ನೆಲ್ಲಾ ಅದುಮಿಟ್ಟು ತನ್ನ ಆಫೀಸರ್ ಗಂಡನಾದ ಚಂದ್ರಪ್ಪನೊಂದಿಗೆ ಚೊಕ್ಕವಾಗಿ ಸಂಸಾರ ಮಾಡುವವಳು. ತನ್ನ ಮಗಳಿಗೆ ಮದುವೆ ಮಾಡಿ ಪ್ರಸ್ತದ ದಿನ ಸಂಭ್ರಮವಾಗಿ ಓಡಾಡುತ್ತಾಳೆ. ಆ ಮೂಲಕ ತನ್ನ ವೈವಹಿಕದ ಹಿಂದಿನ ಜೀವನವನ್ನು ನೆನಪಿಸಿಕೊಳ್ಳಲು ಯತ್ನಿಸುತ್ತಾಳೆ.

ದೇವೀ ಹಳ್ಳಿಯ ಮುಗ್ಧ ಹೆಣ್ಣು ಕಡಿಮೆ ಓದಿದ ಆಕೆ ಅಷ್ಟೇನು ತಿಳುವಳಿಕೆ ಇಲ್ಲದವಳು. ಹಳ್ಳಿಯ ಪ್ರಕೃತಿಯ ತಾಣದಲ್ಲಿ ಬೆಳೆದ ಈಕೆಯ ಸೌಂದರ್ಯವೂ ಅಪೂರ್ವವಾಗಿತ್ತು. ದೇವಿಯನ್ನು ಒಳ್ಳೆಯ ಅಂತಸ್ತು, ಅಧಿಕಾರ ಇರುವ ಚಂದ್ರಪ್ಪ ಕೈ ಹಿಡಿಯುತ್ತಾನೆ. ಚಂದ್ರಪ್ಪನನ್ನು ಮದುವೆಯಾದ ಮೇಲೆ ದೇವಿಯಲ್ಲಿ ತಿಳುವಳಿಕೆ, ನಿಗೂಢತೆ, ಚಾಣಾಕ್ಷತನ ಬೆಳೆಯುತ್ತದೆ. ಕ್ರಮೇಣ ಚಂದ್ರಪ್ಪ ದೇವಿಯನ್ನು ನಿರ್ಲಕ್ಷಿಸುತ್ತಾನೆ. ಇದೇ ಸಮಯದಲ್ಲಿ ದೇವಿಯು ತನ್ನ ಆಕರ್ಷಣೆಯಲ್ಲಿ ಬಿದ್ದು ಪ್ರೇಮಕ್ಕಾಗಿ ಪರಿತಪಿಸುವ ಸಿನಿಮಾ ನಿರ್ದೇಶಕ ರವಿನಾಯ್ಡುವಿನ ಕಡೆ ಹೊರಳುತ್ತಾಳೆ. ದೇವಿಯ ಸೌಂದರ್ಯಕ್ಕೆ ನಿರ್ದೇಶಕ ರವಿನಾಯ್ಡು ಸೋತಿರುತ್ತಾನೆ. ದಿನದಿಂದ ದಿನಕ್ಕೆ ಬಹಳ ಆಕರ್ಷಕಳಾಗಿ ಕಾಣುವ ದೇವಿಯ ವ್ಯಕ್ತಿತ್ವ ಮತ್ತು ಅವಳ ಆಧುನಿಕ ಆಲೋಚನಾ ಲಹರಿಗಳು ಇವನನ್ನು ಮಂತ್ರ ಮುಗ್ಧನನ್ನಾಗಿಸುತ್ತದೆ. ಕಥೆಯಲ್ಲಿ ಮುಖ್ಯವಾಗಿ ಅಸ್ತಿತ್ವವಾದದ ಹಿನ್ನೆಲೆಯಲ್ಲಿ ದೇವಿಯ ಕ್ರಿಯೆಗೆ ಮತ್ತು ಪ್ರತಿಕ್ರಿಯೆಗಳಿಗೆ ಅವಳೇ ಸಂಪೂರ್ಣವಾಗಿ ಬದ್ಧಳಾಗಿ ಕಂಡುಬರುತ್ತಾಳೆ. ದೇವಿ ತನ್ನನ್ನು ಕಡೆಗಣಿಸಿದ ಚಂದ್ರಪ್ಪನಿಗೆ ತಾನು ರವಿನಾಯ್ಡುವಿನೊಡನೆ ಸಂಬಂಧ ಬೆಳೆಸುವ ಮೂಲಕ ಪ್ರತೀಕಾರ ಒಡ್ಡುತ್ತಾಳೆ. ವೈವಾಹಿಕ ಬದುಕಿನ ಆಕರ್ಷಣೆಗಳು ಹಾಗೂ ಲೈಂಗಿಕ ಜೀವನದಿಂದ ವಂಚಿತಳಾದ ದೇವಿಯ ಪ್ರತಿಕ್ರಿಯೆ ಈ ರೀತಿಯಲಿ ಕಥೆ ಮೂಡಿಬರುತ್ತದೆ.

ಯಶವಂತ ಚಿತ್ತಾಲರು ಸಹ ನವ್ಯ ಲೇಖಕರಂತೆ ಹೆಣ್ಣನ್ನು 'ಆತ್ಮಶೋಧನೆಯ ಸಾಧನ' ಅಸ್ತಿತ್ವವನ್ನು ನಿಜಗೊಳಿಸಿಕೊಳ್ಳುವ ಭೂಮಿಕೆ ಎಂದು ತಿಳಿದವರು. ವ್ಯಕ್ತಿಯಲ್ಲಿರುವ ಕ್ರೌರ್ಯವು ಪುರುಷ ಪ್ರಧಾನ ಸಂಸ್ಕೃತಿಯ ಅನುಮೋದನೆಯಿಂದ ಸ್ತ್ರೀಯರ ವಿಷಯದಲ್ಲಿ ಮತ್ತಷ್ಟು ಕರಾಳವಾಗುವಂತಹ ವ್ಯಕ್ತಿತ್ವವನ್ನು ಚಿತ್ತಾಲರ ಕಥೆಗಳಲ್ಲಿ ಗಮನಿಸಬಹುದು. ಇವರ 'ಆಬೋಲೀನ' ಕಥೆಯ ಜಾನಕಿ ಇಂತಹ ಪಾತ್ರಗಳಿಗೆ ಉದಾಹರಣೆ. ಇವರೆಲ್ಲರೂ ಬಾಳು ಏನೆಂದು ಅರಿಯುವ ಮೊದಲೇ ತಮ್ಮ ವಿರುದ್ಧ ನಿಂತಿರುವ ಶಕ್ತಿಗಳಿಂದಾಗಿ ನಲುಗಿ ನೊಂದು ಜೀವ ಕಳೆದುಕೊಂಡ ಪಾತ್ರಗಳಿವು. ಲೈಂಗಿಕ ಜೀವನ ಎಂದರೇನು?, ಬಸುರಿಯಾಗುವುದು ಎಂದರೇನು? ಎಂಬುವನ್ನೇ ಅರಿಯದ ಆಬೋಲೀನ ಕಥೆಯಲ್ಲಿನ ಪುರುಷ ಪಾತ್ರ ಮನವೇಲನ ಕುತ್ಸಿತ ಬುದ್ಧಿಗೆ ಬಲಿಯಾಗಿ, ಅಸಹಾಯಕಳಾಗಿ ನಿಂತಾಗ ಇಡೀ ಸಮಾಜ ಅವಳ ವಿರುದ್ಧ ನಿಂತು ಬಿಡುತ್ತದೆ. 'ನಾನು ಬಸುರಿಯೇನೇ' ಎಂದು ಕಣ್ಣ ತುಂಬ ನೀರು ತುಂಬಿಕೊಂಡು ಗೆಳತಿಯರನ್ನು ಕೇಳುವವಳು ಆಬೋಲೀನ.

'ಕಥೆಯಾದವಳು ಹುಡುಗಿ' ಕಥೆಯ ಚಿಂದಿಯಾಗದ ಕಿರುಗಣೆ ಉಟ್ಟ ಪುಟ್ಟ ಹುಡುಗಿ ಜಾನಕಿ. ಕತ್ತಲಾದ ಮೇಲೆ ಊರಿನ ರಂಗಪ್ಪನ ಸ್ಟುಡಿಯೋದ ಬಾಗಿಲಲ್ಲಿ ಕಾಣಿಸಿಕೊಂಡ ಮಹಾ ಅಪರಾಧಕ್ಕಾಗಿ ಎಲ್ಲರ ನಿಂದೆ ಭರ್ತ್ಸ್ಯನೆಗಳಿಗೆ ಒಳಗಾಗುವ 'ಮೂರು ದಾರಿಗಳು' ಕಥೆಯ ನಿರ್ಮಲೆ ನಮ್ಮನ್ನು ಕಾಡುತ್ತಾರೆ. ಪಿತೃ ಪ್ರಧಾನ ಚೌಕಟ್ಟು ಹಾಕುವ ನಡತೆಯ ಲಕ್ಷ್ಮಣ ರೇಖೆಗಳಿಂದ ಸ್ವಲ್ಪ ಆಚೀಚೆ ಸರಿದರೂ ಮುಗ್ಧ ಹೆಣ್ಣುಗಳು ಬಂದು ತಲುಪುವ ಈ ವಿಹ್ವಲ ಸ್ಥಿತಿ ನಮ್ಮನ್ನು ಕಂಗೆಡಿಸುತ್ತದೆ. ಪಾತ್ರಗಳು ಪಿತೃ ಸಂಸ್ಕೃತಿಯನ್ನು ಅಂತರಂಗೀಕರಿಸಿಕೊಂಡು ಒಂದು ಅದಕ್ಕೆ ಹೆದರಿ ಹಿಂದೆ ಸರಿಯುತ್ತವೆ. ಇಲ್ಲ ಅದರ ಕ್ರೌರ್ಯದಲ್ಲಿ ಶಾಮೀಲಾಗುತ್ತದೆ. 'ಮೂರು ದಾರಿಗಳು' ಕಾದಂಬರಿಯ ಚಂದ್ರಭಾಗಿ, ರಾಧಮ್ಮ, 'ಆಬೋಲೀನ' ಕಥೆಯ ಸುಮಿತ್ರೆ, ಅವಳ ತಾಯಿ, 'ರಾಧಕ್ಕನ ಅಳಿಯ' ಕಥೆಯ ರಾಧಕ್ಕ ಇವರೆಲ್ಲರೂ ಪಿತೃ ಸಂಸ್ಕೃತಿಯ ಸುಳಿಗೆ ಸಿಕ್ಕು ಅದಕ್ಕೆ ತಮ್ಮನ್ನು ಹೊಂದಿಸಿಕೊಳ್ಳಲು ಹೆಣಗುವ ಪಾತ್ರಗಳು. ಪಿತೃಸಂಸ್ಕೃತಿಯ ಸ್ತ್ರೀ ವಿರೋಧಿ ಧೋರಣೆಯಲ್ಲಿ ಪಾಲುದಾರರಾಗಿ ಹಿಂಸೆಗೆ ಕಾರಣಕರ್ತರಾಗುತ್ತಾರೆ.

ನವ್ಯ ಕತೆ, ಕಾದಂಬಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಗಂಡು ಹೆಣ್ಣಿನ ನಡುವೆ ಸಂಘರ್ಷ ಏರ್ಪಡುವುದು 'ಶಾಂತಿನಾಥ ದೇಸಾಯ'ರ ಕಥೆ ಕಾದಂಬರಿಗಳಲ್ಲಿ ಮಾತ್ರ. ಇಲ್ಲಿನ ಬಹುಪಾಲು ಸ್ತ್ರೀ ಪಾತ್ರಗಳು ಈ ಮಣ್ಣಿನ ನೆಲದಿಂದ ಒಡಮೂಡಿದ ಪಾತ್ರಗಳಂತೆ ಕಾಣದಿದ್ದರೂ, ಇಲ್ಲಿಯು ಲೈಂಗಿಕತೆ ಎಂಬ ಏಕಮಾತ್ರ ಮಾಪನದಿಂದ ಗಂಡುಹೆಣ್ಣಿನ ಮುಖಾಮುಖಿ ಕುತೂಹಲ ಹುಟ್ಟಿಸುವಂಥದ್ದು.

ದೇಸಾಯಿಯವರ 'ಮುಕ್ತಿ' ಮತ್ತು 'ವಿಕ್ಷೇಪ'–ಎರಡೂ ಕಾದಂಬರಿಗಳ ನಾಯಕರೂ ಮಾಮೂಲಿ ನವ್ಯ ನಾಯಕರಂತೆ ಅಸ್ವಸ್ಥರು, ದುರ್ಬಲರು, ಸದಾ ತಹತಹಿಸುತ್ತಿರುವವರು. ಮುಕ್ತಿ ಕಾದಂಬರಿಯಲ್ಲಿನ ಗೌರೀಶ, ಕಾಮಿನಿ, ಶಶಿಕಲಾ,ಡಾಲಿ ಎಂಬ ಮೂರು ಹೆಣ್ಣುಗಳೊಂದಿಗೆ ಮುಖಾಮುಖಿಯಾಗುತ್ತಾನೆ. ಶಶಿಕಲಾ ತನ್ನ ವಿದ್ಯಾಭ್ಯಾಸಕ್ಕೆ, ಯೋಗ್ಯತೆಗೆ ತಕ್ಕವಳಲ್ಲ ಎಂದು ಅವಳನ್ನು ತಿರಸ್ಕರಿಸುತ್ತಾನೆ. ತಾನು ಕಾಲೇಜಿನ ದಿನದಿಂದಲೂ ಆರಾಧಿಸುತ್ತಿದ್ದ ಕಾಮಿನಿಯು ಬೇರೆಯವರ ಜೊತೆ ಸಂಬಂಧ ಬೆಳೆಸಿದಾಗ ಅವಳನ್ನು ತನ್ನ ಸ್ವಪ್ನ ಸಾಮ್ರಾಜ್ಯದಿಂದ ಹೊರತಳ್ಳುತ್ತಾನೆ. ಕೊನೆಗೆ ಮುಂಬಯಿಯ ಗೆಳತಿ ಡಾಲಿಯ ಮಡಿಲಿನಲ್ಲಿ ತನ್ನ ಮುಕ್ತಿಯನ್ನು ಕಂಡುಕೊಳ್ಳುತ್ತಾನೆ ಎಂದು ಕೊಳ್ಳುತ್ತಾನೆ ಗೌರೀಶ.

ಕತೆಯಲ್ಲಿ ಗೌರೀಶ ತನ್ನ ಮನಸ್ಸಿನಲ್ಲಿರುವ ಹೆಣ್ಣಿನ ಕಲ್ಪನೆಯಲ್ಲಿಯೇ ಈ ಮೂರು ಜನ ಹೆಣ್ಣುಗಳನ್ನು ಬಯಸುತ್ತಾನೆ. ಹೆಣ್ಣಿಗೆ ಪವಿತ್ರ, ಸುಂದರ ಎಂಬ ಇತ್ಯಾದಿ ಗುಣಗಳನ್ನು ಸೃಷ್ಟಿಸಿ ತಾನು ಆರಾಧಿಸಿದ ಕಾಮಿಸಿಯನ್ನು, ಶಶಿಕಲಾಳನ್ನು ದೂರ ಮಾಡುತ್ತಾನೆ. ಕೊನೆಗೆ ಡಾಲಿಯಲ್ಲೂ ಅವನು ಮುಕ್ತಿಯನ್ನು ಪಡೆಯುವುದಿಲ್ಲ. ತನ್ನ ಕಲ್ಪನೆಯ ಹೆಣ್ಣಿಗಾಗಿ ಗೌರೀಶ ಹಲವಾರು ಹೆಣ್ಣುಗಳನ್ನು ಅಭ್ಯಾಸ ಮಾಡುತ್ತಾನೆ, ಕತೆಯಲ್ಲಿ ಹೆಣ್ಣುಗಳು ಎಲ್ಲರ ಉಪಯೋಗಕ್ಕಾಗುವ ವಸ್ತುಗಳಂತೆ ಅಥವಾ ಗ್ರಂಥಾಲಯದಲ್ಲಿರುವ ಪುಸ್ತಕದಂತೆ ಚಿತ್ರಿತಳಾಗುತ್ತಾಳೆ.

ನವ್ಯ ಸಾಹಿತ್ಯದ ಸಂದರ್ಭದ ಲೇಖಕರೆಲ್ಲರ ಸ್ತ್ರೀಯ ಬಗೆಗಿನ ಧ್ಯೇಯ ಒಂದೇ ಎಂದು ಈ ಕೃತಿಗಳ ಮೂಲಕ ತಿಳಿಯುತ್ತದೆ. ನವ್ಯ ಲೇಖಕರಲ್ಲಿ ಸ್ತ್ರೀಯ ಪಾತ್ರದ ಚಿತ್ರೀಕರಣ ನವೋದಯಕ್ಕಿಂತ ಹಿಂದಕ್ಕೆ ಚಲಿಸಿದಂತೆ ಕಂಡು ಬರುತ್ತದೆ. ಈ ಸಾಹಿತ್ಯ ಸ್ತ್ರೀಯರ ಮೇಲೆ ಬಲವಂತವಾಗಿ ಕಟ್ಟು ಕಟ್ಟಳೆಗಳನ್ನು ನಿಷೇಧಗಳನ್ನು ವಿಧಿಸುತ್ತದೆ. ಹೆಣ್ಣಿನ ಸಹಜ ಬಯಕೆಗಳನ್ನು ಹತ್ತಿಕ್ಕುವ ಸಂಸ್ಕೃತಿಯನ್ನು ಕಾಣುತ್ತೇವೆ. ಒಟ್ಟಾರೆ ನವ್ಯರಲ್ಲಿ ಮಡಿವಂತರೆನಿಸಿಕೊಂಡವರನ್ನು, ಸಭ್ಯರೆನಿಸಿಕೊಂಡವರನ್ನು ಬೆಚ್ಚಿ ಬೀಳಿಸುವ ಗುಣವಿದೆ. ಎಲ್ಲವನ್ನು ಸಂದೇಹಿಸುವ, ಪ್ರಶ್ನಿಸುವ, ದಂಗೆ ಏಳುವ ಪ್ರವೃತ್ತಿಯಿದೆ. ಇವರ ಜೊತೆಗೆ ಸ್ತ್ರೀಯರ ಬಗೆಗಿನ ದ್ವಂದ್ವಗಳಿವೆ. ನಗರ ಪ್ರಜ್ಞೆಗೆ ಆಕರ್ಶಿತರಾಗಿ ಹಳ್ಳಿಯ ಈ ಎಲ್ಲವುಗಳನ್ನು ಅಸಹನೆಯಿಂದ ಕಾಣುವ, ನಿಷೇಧಗಳನ್ನು ಮೀರುವ ಬಂಡೇಳುವ ಪವೃತ್ತಿಯ ಸ್ತ್ರೀಯನ್ನು ಕಾಣಬಹುದು.

ಕೊನೆ ಟಿಪ್ಪಣಿ.

(1) ಮೊದಲ ಕಟ್ಟಿನ ಗದ್ಯ. ಪುಟ.3
(ನವ್ಯಸಾಹಿತ್ಯ ಒಂದು ಅವಲೋಕನ)

ಅಧ್ಯಾಯ–೪

ನವ್ಯ ಸಾಹಿತ್ಯದಲ್ಲಿ ಡಾ. ವೀಣಾಶಾಂತೇಶ್ವರವರ ಕೃತಿಗಳಲ್ಲಿನ ಹಲವು ನೆಲೆಗಳು.

ಅಧ್ಯಾಯ-೪

ನವ್ಯ ಸಾಹಿತ್ಯದಲ್ಲಿ ಡಾ. ವೀಣಾ ಶಾಂತೇಶ್ವರವರ ಕೃತಿಗಳಲ್ಲಿನ ಹಲವು ನೆಲೆಗಳು

ಆಧುನಿಕ ಕನ್ನಡದ ನವ್ಯ ಸಾಹಿತ್ಯದಲ್ಲಿ ಕಂಡು ಬರುವ ಒಂದು ಪ್ರಮುಖ ಸ್ತ್ರೀ ಧ್ವನಿ ವೀಣಾಶಾಂತೇಶ್ವರ್ ಎಂದು ಹೇಳಬಹುದು. ಇವರು ನವ್ಯ ಚಳುವಳಿಯ ಅತೀ ಹೆಚ್ಚು ಪರಾಕಾಷ್ಠೆಯಲ್ಲಿದ್ದ ಸಂದರ್ಭದಲ್ಲಿ ಕೃತಿಗಳನ್ನು ಬರೆದವರು. ನವ್ಯ ಸಂದರ್ಭದಲ್ಲಿ ಬಂದಂತಹ ಬರಹಗಾರ್ತಿಯರಲ್ಲಿ ವೀಣಾರವರು ಉಳಿದವರಿಗಿಂತ ಭಿನ್ನ ಹಾದಿ ಹಿಡಿದಿದ್ದಾರೆ. ನವ್ಯ ಸಾಹಿತ್ಯದ ತತ್ವ, ತಾತ್ವಿಕತೆಗಳನ್ನು, ತಂತ್ರಗಳನ್ನು, ವಸ್ತುವನ್ನು ಭಿನ್ನ ರೀತಿಯಲ್ಲಿ ಆಯ್ಕೆ ಮಾಡಿಕೊಂಡಿದ್ದು ವೀಣಾರವರ ಸಾಹಿತ್ಯದ ಒಂದು ದೊಡ್ಡ ಬಂಡಾಯ ಎಂದು ಹೇಳಬಹುದು. ನವ್ಯ ಸಾಹಿತ್ಯದ ತಾತ್ವಿಕತೆಗಳನ್ನು ವಿಭಿನ್ನ ರೀತಿಯಲ್ಲಿ ಬಳಸಿಕೊಂಡ ಇವರ ಕ್ರಮ ವಿಶಿಷ್ಟವಾಗಿದೆ. ವೀಣಾರವರ ಒಟ್ಟು ಕೃತಿಗಳ ಕುರಿತು ಮಾತನಾಡುವಾಗ ನವ್ಯ ವಿಮರ್ಶೆಯ ಮಾರ್ಗವನ್ನು ಮೀರಿ ಹೊಸ ದೃಷ್ಟಿಕೊನದಲ್ಲಿ ನೋಡುವುದು ಅನಿವಾರ್ಯವೆನಿಸುತ್ತದೆ. ವೀಣಾರವರು ತಮ್ಮ ಕಾಲಕ್ಕೆ ಸ್ಪಂದಿಸಿದ ರೀತಿಯ ಹೊಸ ಪ್ರಜ್ಞೆ, ತನ್ನ ತನವನ್ನು ಕಾಪಾಡಿಕೊಳ್ಳಬೇಕೆನ್ನುವ ತುಡಿತ, ಹಂಬಲಗಳೇ ವಿಶಿಷ್ಟವಾದ ಸ್ತ್ರೀ ದನಿಯಾಗಿ ಮಹಿಳೆಯ ಪರವಾಗಿ ಚಿಂತಿಸಲು ಕಾರಣವಾಯಿತೆನ್ನಬಹುದು.

ನವ್ಯ ಸಾಹಿತ್ಯವು ಅತೀ ಪರಾಕಾಷ್ಠೆಯಲ್ಲಿ ಇದ್ದಂತಹ ಸಂದರ್ಭದಲ್ಲಿ ನಮಗೆ ಮುಖ್ಯವಾಗಿ ಪುರುಷ ಬರಹಗಾರರು ಹೆಚ್ಚಾಗಿ ಕಾಣಿಸುತ್ತಾರೆ. ಪುರುಷರ ಬರವಣಿಗೆಯ ಸಂದರ್ಭದಲ್ಲಿ ಹೆಣ್ಣು ಬರೆಯಲು ಹೆದರಿದಂತೆ ನಮಗೆ ಕಾಣುತ್ತದೆ. ಕನ್ನಡದ ನವ್ಯ ಲೇಖಕಿಯರಲ್ಲೇ ತಮ್ಮ ಕೃತಿಗಳಂತೆ ಭಿನ್ನವಾಗಿ ಗುರುತಿಸಲ್ಪಡುವವರು ವೀಣಾ. ಇವರು ಆಗಿನ ಕಾಲಕ್ಕೆ ತಮ್ಮ ಕೃತಿಗಳಿಂದ ಅತೀ ಹೆಚ್ಚು ಚರ್ಚೆಗೆ ಒಳಗಾಗಿದ್ದವರು. ಪುರುಷ ಕೇಂದ್ರಿತ ಪ್ರಧಾನ ಸಮಾಜದಲ್ಲಿ ನಿಂತು ಅಲ್ಲಿನ ಮೌಲ್ಯಗಳನ್ನು ನಿರ್ಭೀತಿಯಿಂದ ಧಿಕ್ಕರಿಸಿ ಬರೆಯುತ್ತಾರೆ.

ಧಾರವಾಡ ಜಿಲ್ಲೆಯವರಾದ ವೀಣಾ ತಮ್ಮ ಗ್ರಹಿಕೆಯಿಂದ ಚಿಕ್ಕ ವಯಸ್ಸಿನಿಂದಲೇ ಬರಹದಲ್ಲಿ ತನ್ನನ್ನು ತೊಡಗಿಕೊಂಡವರು. ವೀಣಾರವರಿಗೆ 'ಮನೆಯೇ ಮೊದಲ ಪಾಠಶಾಲೆ'. ವಿದ್ಯಾವಂತರಾದ ತನ್ನ ತಂದೆ, ತಾಯಿಯರ ಪ್ರೌಢ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಸುಶಿಕ್ಷಿತರಾಗಿ ಬೆಳೆದವರು. ಸ್ತ್ರೀ ವಿಮೋಚನೆಯ ಅಥವಾ ಸ್ತ್ರೀಯ ಸ್ಥಿತಿಗತಿಗಳ ಬಗ್ಗೆ ಕಾಳಜಿಯುಳ್ಳ ತಾಯಿಯ ನೆರಳಿನಲ್ಲಿ, ದಿಟ್ಟ ಮನೋಭಾವದಲ್ಲಿ ಬೆಳೆದ ವೀಣಾರವರು ತಮ್ಮ ಕಥೆಗಳಲ್ಲಿ ಸ್ತ್ರೀ ಪರ ನಿಲುವನ್ನು ತಳೆದಿರುವುದನ್ನು ಕಾಣಬಹುದು.

ಮೇಲಿನ ಎಲ್ಲಾ ಕಾರಣಗಳಿಂದ ಇತರ ಲೇಖಕಿಯರಿಗಿಲ್ಲದ ಒಂದು ಹಿನ್ನೆಲೆ ವೀಣಾರವರಿಗೆ ಇರುವುದು ಕಂಡು ಬರುತ್ತದೆ. ಇಂಗ್ಲೀಷ್ ಸಾಹಿತ್ಯದ ವಿದ್ಯಾರ್ಥಿಯಾಗಿ ನಂತರ ಇಂಗ್ಲೀಷ್ ಅಧ್ಯಾಪಕಿಯಾದವರು. ಪಾಶ್ಚಾತ್ಯ ಶಿಕ್ಷಣ ಪ್ರಭಾವದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿ ತನ್ನದೇ ಆದ ಒಂದು ಛಾಪನ್ನು ಮೂಡಿಸಿರುವುದನ್ನು ಗಮನಿಸಬಹುದು. ಪಾಶ್ಚಾತ್ಯ ಶಿಕ್ಷಣವು ಇವರಿಗೆ ಮತ್ತಷ್ಟು ಮಾನಸಿಕ ಧೈರ್ಯವನ್ನು ಒದಗಿಸಿಕೊಡುತ್ತದೆ. ತಂದೆ,ತಾಯಿಯರ ಪ್ರಭಾವ, ಪಾಶ್ಚಾತ್ಯ ಶಿಕ್ಷಣದ ಮುಖಾಂತರ ತಮ್ಮ ಕಥೆ, ಕಾದಂಬರಿಗಳಲ್ಲಿ ಹೆಣ್ಣಿನ ಬೆತ್ತಲ ಅಂತರಂಗವನ್ನು ತೆರೆದಿಡುವಲ್ಲಿ ಯಾವ ರೀತಿಯ ಸಂಕೋಚವನ್ನು ತೋರದಿರುವ ನಿರ್ಭಿಢೆಯ ಮನೋಭಾವ ಬೆಳೆಸಿಕೊಂಡರು. ಧಾರವಾಡದ ಸಂಪ್ರದಾಯಸ್ಥರಲ್ಲಿ ಬೆಳೆದು ಅದಕ್ಕೆ ವಿರುದ್ಧವಾಗಿ ಮಾತನಾಡಿದವರು.

ನವ್ಯ ಸಂದರ್ಭದಲ್ಲಿನ ಅವರ ಜೀವನಾನುಭವ, ಆ ಕಾಲದ ಸಾಹಿತ್ಯ ಪ್ರೇರಣೆಗಳು, ದಿಟ್ಟ ಪ್ರಶ್ನಾ ಮನೋಭಾವ ಮತ್ತು ಪರಕೀಯ ಪ್ರಜ್ಞೆಯನ್ನನುಭವಿಸುವ ಕ್ಲಿಷ್ಟ ಮನಸ್ಥಿತಿ ಇವು ಇವರ ಸಾಹಿತ್ಯದಲ್ಲಿವೆ. ಇವೆಲ್ಲದರ ಜೊತೆಗೆ ಅವರನ್ನು ಕಾಡಿರುವ ಸ್ತ್ರೀ ವಿಶಿಷ್ಟ ಪ್ರಶ್ನೆಗಳು ಇವೆಲ್ಲದರ ಒಂದು ಸಮ್ಮಿಶ್ರದಿಂದ ಇವರ ಸಾಹಿತ್ಯ ರೂಪ ಪಡೆದಿರುವುದನ್ನು ಕಾಣಬಹುದು.

ವೀಣಾ ಆಧುನಿಕ ಸಂದರ್ಭದಲ್ಲಿನ ನವ್ಯ ಪ್ರಜ್ಞೆಯ ಪ್ರಮುಖ ಸ್ತ್ರೀ ಧ್ವನಿ. ಇವರು ಎಲ್ಲಾ ವಿಮರ್ಶಕರ ಪ್ರಶಂಸೆಗೆ ಪಾತ್ರರಾದವರು. ನವ್ಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಒಬ್ಬ ಲೇಖಕಿಯು ಬರೆಯ ಹೊರಟಾಗ ಆಕೆಗೆ ತನ್ನದೇ ಆದ ಒತ್ತಡಗಳಿರುತ್ತವೆ. ತಮ್ಮ ಕಾಲದ ರೀತಿ, ಸಂಪ್ರದಾಯಗಳನ್ನು, ಸನ್ನಿವೇಶಗಳನ್ನು ದಿಟ್ಟವಾಗಿ ಪ್ರಶ್ನಿಸುವ ವ್ಯಕ್ತಿತ್ವ ಹೊಂದಿರಬೇಕು. ಇಂತಹ ವ್ಯಕ್ತಿತ್ವವನ್ನು ನಾವು ವೀಣಾರವರಲ್ಲಿ ಕಾಣಬಹುದು.

ವೀಣಾ ತಮ್ಮ ಸಾಹಿತ್ಯದಲ್ಲಿ ಪುರುಷ ಗ್ರಹಿಕೆಯಾಚೆ ನಿಂತು ಸ್ತ್ರೀಯ ಗ್ರಹಿಕೆಯಲ್ಲಿ ನಿಂತು ಪುರುಷನನ್ನು ನೋಡುತ್ತಾರೆ. ಪುರುಷ ಇಲ್ಲಿ ಒಡೆಯನಲ್ಲ, ವಿಶೇಷ ಜೀವಿಯೂ ಅಲ್ಲ. ಅವನಲ್ಲಿನ ದೌರ್ಬಲ್ಯಗಳು, ಲೋಪ ದೋಷಗಳು, ಹೇಡಿಯಂತೆ ವರ್ತಿಸುವ ರೀತಿ ಇವೆಲ್ಲವನ್ನೂ ಅತ್ಯಂತ ಸಮರ್ಥವಾಗಿ ಚಿತ್ರಿಸುತ್ತಾರೆ. ಅಲ್ಲದೆ ಮದುವೆಯ ಮೂಲಕ ಒಬ್ಬ ದುರ್ಬಲ ಗಂಡಸು ಹೇಗೆ ಅಧಿಕಾರವಂತನಾಗುತ್ತಾನೆ ಎಂಬುದನ್ನು ಇವರ ಕೃತಿಗಳು ಚರ್ಚಿಸುತ್ತವೆ.

ಇವರ ಬರಹ ಸ್ತ್ರೀ ಸಂವೇದನೆಯಿಂದ ಕೂಡಿದ್ದು, ಪುರುಷ ಪ್ರಧಾನ ಸಮಾಜದ ಹಲವು ತೊಡಕು ಶೋಷಣೆಗಳನ್ನು ಗಟ್ಟಿ ಧ್ವನಿಯಲ್ಲಿ ಪ್ರಶ್ನಿಸುತ್ತೇವೆ. ಇವರ ಪ್ರಕಟಿತ ಕೃತಿಗಳನ್ನು ಗಮನಿಸದರೆ ಹಸಿವು, ನೋವು, ಹತಾಶೆ, ಹೆಪ್ಪುಗಟ್ಟಿದ ಅವಮಾನ ಮುಂತಾದ ಹತ್ತು ಹಲವುವಿಷಯಗಳನ್ನು ಕಾಣಬಹುದು. ಎಪ್ಪತ್ತರ ದಶಕದ ನಂತರ ಬರವಣಿಗೆಯನ್ನು ಆರಂಬಿಸಿದ ಮಹಿಳಾ ಬರಹಗಾರರ ಪ್ರಾರಂಭದ ರೊಚ್ಚು ಸಹಜವಾಗಿ ಅವರನ್ನು ಭೋಗದ ವಸ್ತುವೆಂದುಕೂಂಡ ಗಂಡಸರ ಕಡೆಗಿದ್ದಂತೆ ವೀಣಾರವರು ತಮ್ಮ ಸಾಹಿತ್ಯದಲ್ಲಿ ಗಂಡಸರ ದಬ್ಬಾಳಿಕೆ, ಸಮಾಜದ ದುಷ್ಟ ಸಂಪ್ರದಾಯಗಳ ಬಗ್ಗೆ ತಮ್ಮ ಕೃತಿಗಳ ಮೂಲಕ ಎಚ್ಚರ ಮೂಡಿಸುತ್ತಾರೆ.

ರೂಢಿಗತ ಮೌಲ್ಯಗಳನ್ನು ಪ್ರಶ್ನಿಸುವ ವೀಣಾ ಸ್ತ್ರೀ ಪಾತ್ರಗಳನ್ನು ಸರಳ ಸುಂದರ ಪವಿತ್ರ ಗುಣಗಳಿಂದ ಹೆಣ್ಣನ್ನು ಕಟ್ಟಿಹಾಕುವ ಪುರುಷನ ಎಲ್ಲಾ ಮೃಗೀಯ ಗುಣಗಳೊಂದಿಗೆ ಚಿತ್ರಿಸುತ್ತಾರೆ. ಆಧುನಿಕ ನಗರ ಪ್ರಜ್ಞೆಯಿಂದ ಬರೆಯುವ ವೀಣಾ ಎಲ್ಲಾ ನವ್ಯ ಬರಹಗಾರರಂತೆ ಭಾಷೆಯ ಸೂಕ್ಷ್ಮತೆಯ ಕಡೆಗೆ ಹೆಚ್ಚು ಗಮನ ಕೊಟ್ಟಿದ್ದಾರೆ ವ್ಯಂಗ್ಯ, ಕಟಕಿ, ಬಯ್ಗಳ, ಇರಿಯುವಿಕೆ, ಅವುಡು ಕಚ್ಚಿದ ಸ್ಥಿತಿ ಇವು ಇವರ ಭಾಷೆಯ ಪ್ರಧಾನ ಗುಣಗಳು. ವೀಣಾ ಅವರ ಕತೆ, ಕಾದಂಬರಿಗಳ ಪ್ರಜ್ಞೆಯು ರೂಢಿಗತ ಮೌಲ್ಯಗಳು ಕೊಡುವ ಅರಿವನ್ನು ಪ್ರಶ್ನಿಸಿ, ದಿಕ್ಕರಿಸಿ ತನ್ನ ಅನುಭವದ ಹಿನ್ನೆಲೆಯಲ್ಲಿ ಹೊಸ ಅರಿವನ್ನು ಕಟ್ಟಿ ಕೊಡುವಂತದ್ದು. ಇದೊಂದು ರೀತಿಯ ಸಿದ್ಧ ಪ್ರತಿಮೆಗಳನ್ನು ಒಡೆಯುವ ಗುಣ ಅಥವಾ ಉಲ್ಲಂಘನಾ ಪ್ರವಾಹ. ಸ್ಥಾಪಿತ ಮೌಲ್ಯಗಳ ವಿರುದ್ಧ ಬೆಂಕಿಯಂತೆ ಉರಿಯುವ ಸಿಟ್ಟು ಈ ಪ್ರಜ್ಞೆಯ ಪ್ರಧಾನ ಗುಣವನ್ನು ಇವರಲ್ಲಿ ಗುರುತಿಸಬಹುದು. ಬದುಕನ್ನು ಇದ್ದ ಹಾಗೆ ಒಪ್ಪಿಕೊಳ್ಳದೆ ಅದನ್ನು ಉಲ್ಲಂಘಿಸಿ, ಅಲ್ಲಾಡಿಸಿ ನೋಡಿಯೇ ಬಿಡೋಣ ಎನ್ನುವ ಪ್ರಯೋಗ ಮನೋಭಾವ ಇಲ್ಲಿದೆ. ಗಂಡಿಗೊಂದು ಹೆಣ್ಣಿಗೊಂದು ಮೌಲ್ಯಗಳನ್ನು ಮಾಡಿ ತಪ್ಪಿದ್ದಾಗಲೆಲ್ಲ ಹೆಣ್ಣನ್ನೆ ದೂಷಿಸುವ ಆತ್ಮವಂಚಕ ಸಮಾಜದತ್ತ ಇವರ ಕಥನ ಪ್ರಜ್ಞೆಗಳು ಬೆಳಕು

ಮೂಡಿಸುತ್ತವೆ. ಇವರ ಕಥನಗಳು ಸ್ತ್ರೀ ಅಭಿವ್ಯಕ್ತಿಗೆ ಅಧಿಕೃತತೆಯನ್ನು ಮತ್ತು ಸ್ತ್ರೀವಾದಿ ವಿಮರ್ಶೆಯ ಎಲ್ಲೆಯನ್ನು ವಿಸ್ತರಿಸಲು ಸಹಾಯ ಮಾಡಿವೆ. ಕಥನ ಕಲೆಗೆ ಆಕರ್ಷಿತರಾಗಿ ಜೀವನದುದ್ದಕ್ಕೂ ಕತೆಯನ್ನು ಆತ್ಮಸಂಗಾತಿಯನ್ನಾಗಿಸಿಕೊಂಡಿರುವ ವೀಣಾ ಅವರು ತಮ್ಮೊಳಗಿನ ಸಂವೇದನಾಶೀಲ ಕತೆಗಾರ್ತಿಯನ್ನು ಅತ್ಯಂತ ಪರಿಶ್ರಮ ಪ್ರಾಮಾಣಿಕತೆಯಿಂದ ಘೋಷಿಸುತ್ತಾರೆ. ತಮ್ಮೆಲ್ಲ ಅನುಭವ, ಚಿಂತನ- ಮಂತನಗಳಿಗೆ ಕತೆಗಳ ಕಲಾತ್ಮಕ ಜಗತ್ತಿನಲ್ಲಿ ಜೀವ ತುಂಬಿದ್ದಾರೆ.

"ಏಕಾಂಗಿಯಾಗಿ ಗಂಡಸಿನ ಹಾಗೂ ಸಮಾಜದ ಅನ್ಯಾಯಗಳ ವಿರುದ್ಧ ಹೋರಾಡುವ ಮಹಿಳೆಯ ದಾರಿ ಇನ್ನು ಸುಗಮವಾಗಿಲ್ಲ. ಪರಿಪೂರ್ಣ ಮಹಿಳಾ ಸ್ವಾತಂತ್ರ್ಯಕ್ಕೆ ಕಾಲವಿನ್ನೂ ಪಕ್ವವಾಗಿಲ್ಲ. ಆಕೆ ಹೊಂದಾಣಿಕೆ ಮಾಡಿಕೊಳ್ಳಬೇಕು ಅಥವಾ ತನ್ನ ತತ್ವಗಳಿಗಾಗಿ ನೋವು ಅನುಭವಿಸುತ್ತ ಬದುಕಿರಬೇಕು. ಹೋರಾಡಿ ಜಯಗಳಿಸಿಯೂ ಸುಖವಾಗಿರುವ ಭಾಗ್ಯ ತೀರಾ ಕಡಿಮೆ ಸಂಖ್ಯೆಯ ಮಹಿಳೆಯರಿಗಿದೆ. ಉಳಿದವರನ್ನು ಈ ಸಮಾಜ ಒತ್ತಾಯದಿಂದ ಹೊಂದಾಣಿಕೆ ಮಾಡಿಕೊಳ್ಳಲು ಹಚ್ಚುತ್ತದೆ. ಈ ಮಹಿಳೆಯರು ಅಂಜುಬುರುಕರಲ್ಲ, ಹೇಡಿಗಳಲ್ಲ, ಕಟು ವಾಸ್ತವದ ಅರಿವುಳ್ಳವರು. ಇವರು ಸೋತವರಲ್ಲ, ಪಕ್ವತೆ ಹೊಂದಿದವರು.(೧) ತಮ್ಮ ಕಥೆಗಳಲ್ಲಿನ ಸ್ತ್ರೀ ಪಾತ್ರಗಳ ಕುರಿತು ವೀಣಾರವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

ಸ್ತ್ರೀಗೆ ಪುರುಷನಷ್ಟೇ ಸಮಾನ ಅವಕಾಶಗಳನ್ನು ನೀಡಿ ಗೌರವಿಸಬೇಕು ಎಂಬ ಮಾತು ವ್ಯಾಪಕವಾಗಿ ಕೇಳಿ ಬರುತ್ತಿದ್ದ ಕಾಲದಲ್ಲಿ ವೀಣಾ ಈ ಮಾತು ಹೇಳಿದ್ದಾರೆ. ಸಮಾಜದಲ್ಲಿ ಯಾರೋ ಕೆಲವೊಬ್ಬ ಮಹಿಳೆಯರು ಮಾತ್ರ ಅದನ್ನು ಪಡೆದು ಉಳಿದವರು ತಮ್ಮ ಕುಟುಂಬ, ಮಾನ ಮರ್ಯಾದೆ ಇತ್ಯಾದಿಗಳಿಗೆ ಹೆದರಿ ಹೊಂದಾಣಿಕೆ ಮಾಡಿಕೊಳ್ಳುವುದನ್ನು ವೀಣಾ ಇಲ್ಲಿ ವಿವರಿಸಲು ಪ್ರಯತ್ನಿಸುತ್ತಾರೆ.

"ಸ್ತ್ರೀತತ್ವ ಮತ್ತು ಸ್ತ್ರಿ ಪರಿಕಲ್ಪನೆ, ಕಾಳಜಿಗಳು ವ್ಯವಸ್ಥಿತ ರೂಪವನ್ನು ಪಡೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ, ಸ್ತ್ರೀ ವಾದದ ಚಿಂತನೆಗಳಿಗೆ ಎಲ್ಲ ಅರ್ಥದಲ್ಲು ಸ್ಪಷ್ಟತೆಯನ್ನು ನೀಡದವರಲ್ಲಿ ವೀಣಾ ಶಾಂತೇಶ್ವರ ಮೊದಲಿಗರು. ಸ್ವಾತಂತ್ರ್ಯಾ ನಂತರದಲ್ಲಿ ಭಾರತದ ಸಾಮಾಜಿಕ, ರಾಜಕೀಯ, ಆರ್ಥಿಕ ರಂಗದಲ್ಲಿ ಹಲವು ಬದಲಾವಣೆಗಳು ನಡೆದವು. ಈ ಸಾಮಾಜಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳ ಪರಿವರ್ತನಾ ನೆಲೆಯಲ್ಲಿಯೇ ಸ್ತ್ರಿ ಕೇಂದ್ರಿತ ದೃಷ್ಟಿಕೋನದ ಅನ್ವೇಷಣೆಯೂ ಆರಂಭವಾಯಿತು. ಗಂಡಿನ ಪರಿಧಿಯಿಂದ ದೂರ ಸರಿದು , ತನ್ನಿಂತಾನಾಗೇ ಜೀವನದ ಪ್ರಧಾನ ಮತ್ತು ಕೇಂದ್ರ ಸ್ಥಾನದಲ್ಲಿ ನಿಂತು, ಜೀವನವನ್ನು ಪರಿಗ್ರಹಿಸುವ ಸಂದರ್ಭದಲ್ಲಿ ಘಟಿಸುವ ಸವಾಲುಗಳಿಗೆ ತನ್ನ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವ ಹೊಸ ಸಾಧ್ಯತೆಯತ್ತ ಇವರ ಕಾದಂಬರಿಗಳು ಬೆರಳು ತೋರಿಸುತ್ತವೆ. ಸಾಂಪ್ರದಾಯಿಕ ಸವಾಲುಗಳನ್ನು ಪ್ರಜ್ಞಾಪೂರ್ವಕವಾಗಿ ಪ್ರಶ್ನಿಸುವ ತನ್ನ ಸ್ವತಂತ್ರ್ಯವನ್ನು ತಾನೇ ಕಂಡುಕೊಳ್ಳುವ ಸ್ತ್ರೀಯ ವ್ಯಕ್ತಿತ್ವದ ಆಳವಾದ ಶೋಧನೆಯ ಫಲವನ್ನು ಇವರು ತಮ್ಮ ಕಾದಂಬರಿಗಳಲ್ಲಿ ದಾಖಲಿಸಿದ್ದಾರೆ".(೨)

ಆರ್ಯಾಂಭ ಪಟ್ಟಾಭಿಯವರು ಹೇಳಿರುವ ಈ ಮಾತುಗಳು ವೀಣಾರವರ ಸಮಗ್ರ ಕಥನದ ಮೇಲೆ ಬೆಳಕು ಬೀರುತ್ತವೆ. ವೀಣಾರವರ ಪುರುಷ ವಿರುದ್ಧ ನಿಲುವಿನ ಕುರಿತು ಪಟ್ಟಾಭಿಯವರು ಇಲ್ಲಿ ವಿವರಿಸಿದ್ದಾರೆ. ಪುರುಷ ಕೇಂದ್ರತ ಸಮಾಜದಿಂದ ದೂರ ಸರಿದು ಹೆಣ್ಣು ಇವರ ಕಥೆಗಳಲ್ಲಿ ತನ್ನನ್ನು ತಾನು ಹೊಸದಾಗಿ ರೂಪಿಸಿಕೊಳ್ಳುತ್ತಾಳೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ವೀಣಾ ಅವರ ಬರವಣಿಗೆಯ ಸತ್ಯವನ್ನು ಗಮನಿಸಿ ಮರಾಠಿ ಲೇಖಕಿಯೊಬ್ಬರು "ಬೆಲ್ಲಕ್ಕೆ ವಿಶಿಷ್ಟ ರುಚಿ, ಸುವಾಸನೆ, ತತ್ವ ಇದೆ. ಆದರೆ ಬೆಲ್ಲವನ್ನು ಸಂಸ್ಕರಿಸಿ ಮಾಡುವ ಪ್ರಕ್ರಿಯೆಯಲ್ಲಿ ಈ ವೈಶಿಷ್ಟ್ಯಗಳೆಲ್ಲ ಕಳೆಯ ಹೋಗುತ್ತವೆ. ಲೇಖಕಿಯರ ಸಂವೇದನೆ ಬೆಲ್ಲದಂತೆ, ವಿಶಿಷ್ಟ ಸತ್ವ, ರುಚಿ, ಬಣ್ಣದ ಗುಣಗಳನ್ನು ಹೊಂದಿದ್ದರೂ ಅಭಿವ್ಯಕ್ತಿಯ ಸಮಸ್ಯೆಯಿಂದ, ಹಿಂಜರಿಕೆಯಿಂದ ಈ ಅನುಭವಗಳು ಸಂಸ್ಕರಣೆಯಾಗಿ ಬರಹ ರೂಪದಲ್ಲಿ ಬಂದಾಗ ಅವು ಸಕ್ಕರೆಯಂತೆ ತಮ್ಮ ಮೂಲ ಗುಣ ರೂಪಗಳನ್ನು ಕಳೆದುಕೊಂಡಿರುತ್ತದೆ" ಎಂದಿದ್ದಾರೆ. (೩)

ಬೆಲ್ಲ ಮತ್ತು ಸಕ್ಕರೆಯ ಗುಣಗಳನ್ನು ಹೋಲಿಕೆ ಮಾಡುತ್ತ ಬೆಲ್ಲವನ್ನು ಸಕ್ಕರೆಯಾಗಿ ಪರಿವರ್ತಿಸುವಾಗ ಅದರ ನಿಜ ಗುಣ ಮರೆಯಾಗುವಂತೆ ಲೇಖಕಿಯರ ಸಂವೇದನೆಗಳು ಬರಹ ರೂಪದಲ್ಲಿ ಎಲ್ಲರಲ್ಲೂ ಪೂರ್ಣವಾಗಿ ಅಭಿವ್ಯಕ್ತಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ವೀಣಾ ಈ ರೀತಿಯ ಪ್ರಕ್ರಿಯೆಗೆ ಒಳಗಾಗದೆ ತಮ್ಮಲ್ಲಿರುವ ಸತ್ವ, ಗುಣಗಳಿಂದ ಕಥೆಯನ್ನು ಬರೆಯುತ್ತಾರೆ ಎಂದು ಹೇಳುತ್ತಾರೆ.

ಅದೇ ರೀತಿ ವೀಣಾಶಾಂತೇಶ್ವರವರ ಕಥೆಗಳನ್ನು ಕುರಿತು ವಿಮರ್ಶಕ ಜಿ.ಎಸ್.ಅಮೂರವರು "ವೀಣಾರ ಕಥೆಗಳಲ್ಲಿ ನಾವು ನೋಡುವ ಅಂತರ್ಮುಖತೆ, ಆತ್ಮ ಪ್ರಜ್ಞೆ, ದ್ವಂದ್ವಗಳ ಅರಿವು ನವ್ಯ ಮನೋಧರ್ಮದ ಆವಿಷ್ಕಾರಗಳು, ಕತೆಯನ್ನು ಕೇವಲ ಮನೋರಂಜನೆಗಾಗಲೀ, ಸಾಮಾಜಿಕ ಜಾಗೃತಿಗಾಗಲೀ ಬಳಸದೆ ಇವರು ಅದನ್ನು ಸತ್ಯದ ಶೋಧದಂತಹ ಗಂಭೀರ ಪ್ರಯತ್ನದಲ್ಲಿ ತೊಡಗಿಸಿದರು ಹಾಗೂ ಅದನ್ನು ಪ್ರಬುದ್ಧ ಸಾಹಿತ್ಯ ಮಾಧ್ಯಮವಾಗಿ ಬಳಸಿಕೊಂಡರು". (೪)

ಸಾಹಿತ್ಯವು ಅಭಿವ್ಯಕ್ತಿಯ ಒಂದು ಮಾಧ್ಯಮ ಎಂಬುದು ಲೋಕಾರೂಢಿಯ ಒಂದು ಮಾತು . ಈ ಮಾತನ್ನು ವೀಣಾರವರು ತಮ್ಮ ಸಾಹಿತ್ಯದಲ್ಲಿ ಕೇವಲ ಮನೋರಂಜನೆಯೊಂದೇ ಸಾಹಿತ್ಯದ ಗುರಿಯಲ್ಲ ಆದರಾಚೆಗಿನ ಸತ್ಯದ ಆವಿಷ್ಕಾರವನ್ನು ವೀಣಾರವರ ಕಥೆಗಳು ಮಾಡುತ್ತವೆ ಎಂದು ಹೇಳುತ್ತಾರೆ.

ವೀಣಾ ಮತ್ತು ಅವರ ಕಥಾ ಸಾಹಿತ್ಯ ಹಲವು ವಿಮರ್ಶಕರಿಂದ ವಿಮರ್ಶಿಸಲ್ಪಟ್ಟಿದೆ ಎಂಬುದಕ್ಕೆ ಕೆಲವು ನಿದರ್ಶನಗಳಾಗಿ ಇವುಗಳನ್ನು ನೋಡಬಹುದು. ವೀಣಾರವರು ತಾವು ಸಾಹಿತ್ಯ ರಚನೆಗೆ ತೊಡಗಿದ ಸಂದರ್ಭದಲ್ಲಿ ಅವರು ಪ್ರವಾಹದೊಂದಿಗೆ ಈಜದೆ ಪ್ರವಾಹದ ವಿರುದ್ಧ ಈಜುವ ನಿರ್ಧಾರ ಮಾಡಿದವರು. ತಮ್ಮ ಸಮಾಕಾಲೀನ ವಾತಾವರಣದ ಒತ್ತಡಗಳನ್ನು ಎದುರಿಸಿಕೊಂಡು ತನ್ನದೇ ಆದ ದಾರಿಯನ್ನು ಹುಡುಕಿಕೊಂಡವರು. ನವ್ಯ ಸಾಹಿತ್ಯದ ತಾತ್ವಿಕತೆ, ವಿಧಾನಗಳು ಮತ್ತು ಪರಿಕರಗಳನ್ನು ಬಳಸಿಕೊಳ್ಳುತ್ತಲೇ ಅವುಗಳನ್ನು ಬದಲಾಯಿಸುವ ಮತ್ತು ಅವಕ್ಕೆ ತಮ್ಮದೇ ಆದ ಆಯಾಮವನ್ನು ಸೇರಿಸುವ ಕೆಲಸದಲ್ಲಿ ವೀಣಾ ಅವರದು ಒಂದು ಸಾಹಸದ ಪಯಣವಾಗಿ ಕಾಣಿಸುತ್ತದೆ.

ವೀಣಾರವರು ಬರೆದದ್ದು ಕೇವಲ ತಮ್ಮ ಪೀಳಿಗೆಯವರ ತಲ್ಲಣಗಳ ಬಗ್ಗೆ ಮಾತ್ರವಲ್ಲ,ತಮ್ಮ ಮುಂದಿನ ಪೀಳಿಗೆಯ ಬಗ್ಗೆಯು ಚಿಂತಿಸಿದ್ದಾರೆ. ಅವರು ಬರೆದ ಎಲ್ಲಾ ಕಥೆಗಳ ಕೇಂದ್ರದಲ್ಲಿಯೂ ಹೆಣ್ಣು ಇರುವುದು ನಿಜವಾದರೂ ಅವರು ಕೇವಲ ಹೆಂಗಸರ ಬಗ್ಗೆ ಬರೆಯುತ್ತಿಲ್ಲ. ಅವರು ಬರೆದಿದ್ದು ಎಲ್ಲ ಮನುಷ್ಯರ ಬಗ್ಗೆ. ಅವರು ಓದಿಕೊಂಡಿದ್ದ ಸಾಹಿತ್ಯ ಮತ್ತು ಸ್ತ್ರೀ ಕೇಂದ್ರಿತವಲ್ಲದ ಕೇವಲ ಪುರುಷ ಕೇಂದ್ರಿತವಾಗಿದ್ದ ನವ್ಯ ಬರವಣಿಗೆ ಅವರಿಗೆ ಪೂರ್ವ ಸಿದ್ಧತೆಗಳನ್ನು ಕೊಟ್ಟಿತು. ತಮ್ಮ ಕಾಲದ ಸಾಹಿತ್ಯಕ ಸನ್ನಿವೇಶಕ್ಕೆ ಅವರು ಸ್ಪಂದಿಸುವ ರೀತಿಯು, ಹೊಸದನ್ನು ಕಲಿಯುವ ಹಾಗೆಯೇ ತನ್ನ ತನವನ್ನು ಕಾಪಾಡಿಕೊಳ್ಳುವ ಗುಣವನ್ನು ಪಡೆದಿತ್ತು.

ಕೊನೆ ಟಿಪ್ಪಣಿ.

(1)ಲೇಖ ಲೋಕ .2 .ಡಾ. ವೀಣಾಶಾಂತೇಶ್ವರ :ಪುಟ. 109

(2)ಮಹಿಳಾ ಸಾಹಿತ್ಯ ಸಮೀಕ್ಷೆ : ಅರ್ಯಾಂಬ ಪಟ್ಟಾಭಿ : ಸ್ವಾತಂತ್ರೋತ್ತರ ಕನ್ನಡ ಮಹಿಳಾ ಸಾಹಿತ್ಯ–ಕಾದಂಬರಿ. :ಪುಟ. 160

(3)ನಡೆದದ್ದೇ ದಾರಿ : ವೀಣಾಶಾಂತೇಶ್ವರ : ಅವರ ಬಗ್ಗೆ ಕೆಲವು ಅಭಿಪ್ರಾಯಗಳು : :ಪುಟ. 475

(4)ನಡೆದದ್ದೇದಾರಿ : ವೀಣಾಶಾಂತೇಶ್ವರ: ,, ,, ,, :ಪುಟ 478

ಉಪ ಅಧ್ಯಾಯ– ೪.೧

ಸಮಾಜದ ಹಿನ್ನಲೆಯಲ್ಲಿ

ವೀಣಾರವರ ಕಥಾ ಸಾಹಿತ್ಯದಲ್ಲಿನ ಹಲವು ನೆಲೆಗಳು ಎಂಬ ಮುಖ್ಯ ಅಧ್ಯಾಯದಲ್ಲಿನ ಮೊದಲನೇ ಉಪ ಅಧ್ಯಾಯದಲ್ಲಿ ಮೊದಲಿಗೆ ಅವರ ಕೆಲವು ಕತೆಗಳಲ್ಲಿನ ಸಾಮಾಜಿಕ ಕಳಕಳಿಯ ದೃಷ್ಟಿಯನ್ನು ವಿವರಿಸಲು ಪ್ರಯತ್ನಿಸುತ್ತೇನೆ. ಇವರ ಕಥೆಗಳಾದ ಅನಾಥೆ, ದರಿದ್ರ ಬ್ರಾಹ್ಮಣ ಕ್ರಿಷ್ಟಪ್ಪ, ಧೈರ್ಯದ ಮನುಷ್ಯ, ಹರಿದು ಬಾತಾಯಿ, ಮುಂದಾಳುವಿನ ಜನತಾ ಸೇವೆ, ಸೋನಿಯಾ, ಒಂದು ಗಿಡ ಒಂದು ಬಾವಿ ಇವುಗಳ ಮೂಲಕ ಈ ಅಧ್ಯಾಯವನ್ನು ಚರ್ಚಿಸಲಾಗುತ್ತದೆ.

ಸ್ವಾತಂತ್ರ್ಯ ಬಂದ ನಂತರದ ಭಾರತೀಯರಲ್ಲಿನ ಕೆಲವು ಸಾಮಾಜಿಕ ಜಿವನದ ಚಿತ್ರಣವನ್ನು ಕಥೆಗಳು ನಮಗೆ ನೀಡುತ್ತವೆ. ಸಮಾಜದಲ್ಲಿ ಮೇಲ್ವರ್ಗದವರು ಮತ್ತು ಅಧಿಕಾರವಂತರು ತಮ್ಮ ಕೈ ಕೆಳಗಿನ ಜನರ ಮೇಲೆ ನಡೆಸುವ ದಬ್ಬಾಳಿಕೆಯ ಚಿತ್ರಣವನ್ನು ಇವು ನೀಡುತ್ತವೆ. ಸರ್ಕಾರದ ಯೋಜನೆಗಳು ಹೇಗೆ ವರ್ಷಾನುಗಟ್ಟಲೆ ಎಳೆಯುತ್ತವೆ, ಅಂದು ಇದ್ದ ಸಮೃದ್ಧ ಜೀವನ ಈಗ ಏಕಿಲ್ಲ ಮುಂತಾದ ಹಲವು ಸಮಸ್ಯೆಗಳ ಬಗ್ಗೆ ಈ ಕಥೆಗಳು ಗಮನ ಸೆಳೆಯುತ್ತವೆ.

'ಅನಾಥೆ' ಕತೆಯಲ್ಲಿ ಅನಾಥಾಲಯದ ದೌರ್ಜನ್ಯವನ್ನು ಕಾಣುತ್ತೇವೆ. ಕಥೆಯಲ್ಲಿ ಭಗಿನಿ ಸೇವಾ ಸಮಾಜದ ಒಳ ಹೊರಗಿನ ಚಿತ್ರಣವಿದೆ. ಸಮಾಜದಲ್ಲಿ ಹೆಣ್ಣು ಮಕ್ಕಳ ಲೈಂಗಿಕ ಶೋಷಣೆಯು ಹೇಗೆ ನಡೆಯುತ್ತದೆ ಎನ್ನುವುದು ಚಿತ್ರಿತವಾಗಿದೆ. ಇಂದಿನ ಸಮಾಜದಲ್ಲಿನ ವಿದ್ಯಾರ್ಥಿನಿಲಯಗಳ ಬಗ್ಗೆ ಕುರಿತು ಬರೆದಿರುವುದಾಗಿದೆ. ಕೋಮಲ ಎನ್ನುವ ಕೇಂದ್ರ ಪಾತ್ರದ ಮೂಲಕ ಅನಾಥ ಮಕ್ಕಳಿಗಾಗಿ ಇರುವ ವಿದ್ಯಾರ್ಥಿನಿಲಯವೊಂದರಲ್ಲಿ ನಡೆಯುವ ದಬ್ಬಾಳಿಕೆ ಅನ್ಯಾಯದ ಕುರಿತ ಚಿತ್ರಣವನ್ನು ಕತೆ ನೀಡುತ್ತದೆ.

ಶ್ರೀಮತಿ ಧೋಂಡುಬಾಯಿ ಪಂತರವರ ಸಮಾಜ ಕಲ್ಯಾಣ ಕಾರ್ಯಕ್ರಮದಲ್ಲಿ ಅಸ್ಥಿತ್ವಕ್ಕೆ ಬಂದದ್ದು ಭಗಿನೀ ಸೇವಾ ಸಮಾಜ. ನಿರ್ಗತಿಕ, ಅನಾಥ ಹೆಣ್ಣು ಮಕ್ಕಳ ಉದ್ಧಾರಕ್ಕಾಗಿ ಬೆಳಗಾವಿಯಲ್ಲಿನಿರ್ಮಿತವಾದದ್ದು ಇದು. ಕತೆಯಲ್ಲಿ ಹೆಣ್ಣು ಮಕ್ಕಳ ಉದ್ಧಾರವೇ ಮೂಲ ಮಂತ್ರ ಎಂದು ಹೇಳುವ ಅನಾಥಾಶ್ರಮದ ಮೇಲ್ವಿಚಾರಕಿ ಕಮಲಮ್ಮ ದೇಸಾಯಿ ಮತ್ತು ಹೆಡ್ ಮಾಸ್ತರ್ ಶಿವರಾಮರೆಡ್ಡಿ ಇವರಿಬ್ಬರ ದೌರ್ಜನ್ಯದ ಚಿತ್ರಣವನ್ನು ಈ ಕಥೆಯಲ್ಲಿ ನೋಡುತ್ತೇವೆ. ಅನಾಥಾಲಯದಲ್ಲಿರುವ ಹೆಣ್ಣು ಮಕ್ಕಳ ಮೇಲೆ ಇವರು ನಡೆಸುವ ದೌರ್ಜನ್ಯ ಅತೀ ಕ್ರೂರವಾಗಿ ಕಾಣುತ್ತದೆ. ಶಾಲೆಯ ಮುಖ್ಯೋಪಧ್ಯಾಯನಾದರೂ ಆ ಸ್ಥಾನಕ್ಕೆ ಮರ್ಯಾದೆಯೇ ಇಲ್ಲವೆನ್ನುವಂತೆ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವನ್ನು ಶಿವರಾಮರೆಡ್ಡಿ ಎಸಗುತಿರುತ್ತಾನೆ. ಶಾಲೆಯಲ್ಲಿಯೇ ಹೆಣ್ಣು ಮಕ್ಕಳ ಬಗ್ಗೆ ಕೆಟ್ಟದಾಗಿ ಮಾತನಾಡುವುದಷ್ಟೇ ಅಲ್ಲದೆ, ಅವರ ಮೈ– ಕೈ ಸೋಂಕಿಸಿ ಮಾತನಾಡಿಸುವುದರ ಮೂಲಕ ಅವರಿಗೆ ಮುಜುಗರವನ್ನುಂಟು ಮಾಡುವ ವ್ಯಕ್ತಿ.

ಇದೇ ರೀತಿ ಹೆಣ್ಣು ಮಕ್ಕಳ ಉದ್ಧಾರಕ್ಕಾಗಿ ಇರುವ ಈ ಸಮಾಜದ ಮತ್ತೊಬ್ಬ ಮುಖ್ಯಸ್ಥೆ ಮತ್ತು ಮೇಲ್ವಿಚಾರಕಿ ಕಮಲಮ್ಮ. ಇಕೆಯದು ಮತ್ತೊಂದು ರೀತಿಯ ಪೀಡನಾ ವ್ಯಕ್ತಿತ್ವ. ವಯುಸ್ಸಿಗೆ ಬಂದ ಹೆಣ್ಣು

ಮಕ್ಕಳನ್ನು ರಾತ್ರಿ ತನ್ನೊಂದೆಗೆ ಕಳೆಯಲು ಎಳೆದೊಯ್ಯುವಳು. ಅನಾಥ ಮಕ್ಕಳಿಗಾಗಿ ಇತರ ಸಂಘ ಸಂಸ್ಥೆಗಳು ಮತ್ತು ಸರಕಾರ ನೀಡುತ್ತಿದ್ದ ವಸ್ತುಗಳನ್ನು ತನ್ನಿಷ್ಟದಂತೆ ಮಾರಿಕೊಳ್ಳುವ ಕ್ರೂರ ವ್ಯಕ್ತಿತ್ವದವಳು.

ಭಗಿನೀ ಸಮಾಜದ ಪ್ರತಿ ವರ್ಷದ ವಾರ್ಷಿಕೋತ್ಸವದ ಸಂಭ್ರಮದಂತೆ ಈ ವರ್ಷವೂ ಸಹ ವಾರ್ಷಿಕೋತ್ಸವದ ಸಮಾರಂಭ ಅದ್ದೂರಿಯಾಗಿ ಜರುಗಲು ಆಶ್ರಮ ಸಿದ್ದವಾಗುತ್ತಿದೆ. ಎಂದಿನ ಮಾಸ್ತರರ ಮತ್ತು ಕಮಲಮ್ಮನ ಕಾಟ ಇಂದು ಇರುವುದಿಲ್ಲ. ಮತ್ತು ದಿನದಂತೆ ಕಟ್ಟದಾದ ಆಹಾರ ಇಂದು ಇಲ್ಲದೆ ವಿಶೇಷ ಆಹಾರ ದೊರೆಯುತ್ತದೆಂದು ಸಮಾಜದ ಮಕ್ಕಳೆಲ್ಲ ಖುಷಿಯಿಂದ ನಲಿದಾಡುತ್ತಿದ್ದಾರೆ, ಆದರೆ ಕತೆಯ ಕೇಂದ್ರ ಪಾತ್ರವಾದ ಕೋಮಲಾ ಇಂದು ದುಃಖಿತಳಾಗಿ ಭಯಭೀತಳಾಗಿದ್ದಾಳೆ. ಇದಕ್ಕೆ ಮುಖ್ಯ ಕಾರಣ ಅವಳ ಪಾಲಿಗೆ ಬಂದಿರುವ 'ಗೆಸ್ಟ್ ರೂಮ್ ಡ್ಯೂಟಿ' ಈ ಭಯದ ಮೂಲಕ ಅನಾಥಾಲಯದಲ್ಲಿ ನಡೆಯುವ ಅನಿಷ್ಟ ಚಟುವಟಿಕೆಗಳ ವಿವರ ಬಿಚ್ಚಿಕೊಳ್ಳುತ್ತದೆ.

ಕಮಲಮ್ಮ ಮತ್ತು ಶಿವರಾಮರೆಡ್ಡಿ ಇವರು ಸಭೆ ಸಮಾರಂಭಗಳಲ್ಲಿ ಬರುವ ಅತಿಥಿಗೆ ರಾತ್ರಿ ಗೆಸ್ಟ್ ರೂಮಿನಲ್ಲಿ ಹೆಣ್ಣು ಮಕ್ಕಳ ಜೊತೆ ಮಲಗುವ ವಿಶೇಷ ಏರ್ಪಾಡು ಮಾಡಿ ಅವರಿಂದ ಸಹಾಯ ಪಡೆಯುವುದು ರೂಢಿ. ಅನಾಥಾಲಯದಲ್ಲಿರುವ ಹೆಣ್ಣುಮಕ್ಕಳನ್ನು ಅವರ ಇಚ್ಛೆಗೆ ವಿರುದ್ಧವಾಗಿ ಬಂದ ಅತಿಥಿಗಳ ಜೊತೆ ಮಲಗುವಂತೆ ಮಾಡುತ್ತಾರೆ. ಇಂದು ಕೋಮಲಾಗೆ ಈ ಡ್ಯೂಟಿ ಬಂದಿದೆ, ಅವಳು ಇದರಿಂದ ಭಯಭೀತಳಾಗಿದ್ದಾಳೆ. ಇದಕ್ಕೆ ಕಾರಣ ಇವಳಿಗೆ ಈ ಡ್ಯೂಟಿಯ ಬಗ್ಗೆ ತಿಳಿದಿರುವ ಪೂರ್ವಗ್ರಹ ವಿಷಯಗಳು, ಹಿಂದೆ ಇದೇ ರೀತಿ ಸಮಾರಂಭವೊಂದಕ್ಕೆ ಮುಖ್ಯಮಂತ್ರಿಗಳು ಬಂದಿದ್ದಾಗ ಈ ರೀತಿಯ ಡ್ಯೂಟಿ ಮಾಡಿದ ಹುಡುಗಿಯೊಬ್ಬಳು ಸಮಾಜದ ಮುಂದಿನ ಒಂದು ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು ಆಗಿರುತ್ತದೆ. ಇದಲ್ಲದೆ ಹಿಂದಿನ ರಾತ್ರಿ ಹೆಡ್ಮಾಸ್ತರರ ಕಾಲು ಒತ್ತುವ ಡ್ಯೂಟಿಗೆ ಹೋಗಿದ್ದ ಇವಳ ರೂಂ ಮೇಟ್ ಸುಮಿತ್ರ ರಾತ್ರಿಯಲ್ಲಾ ನಿದ್ದೆ ಮಾಡದೆ ಅಳುತ್ತಾಇದ್ದದ್ದನ್ನು ನೆನೆದು ಕೋಮಲಾ ಭಯಪಡುತ್ತಿದ್ದಾಳೆ.

ಇಂದಿನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದವರು ಸಮಾಜಕಲ್ಯಾಣ ಇಲಾಖೆಯ ಮುಖ್ಯ ಅಧಿಕಾರಿಗಳಾಗಿರುವವರು. ತಮ್ಮ ಭಾಷಣದಲ್ಲಿ ಹೆಣ್ಣು ಮಕ್ಕಳಿಗೆ ಮನುವಿನ ಕಾಲದಿಂದಲು ಆಗುತ್ತಿರುವ ಅನ್ಯಾಯವನ್ನು ಕುರಿತು ಮಾತನಾಡುತ್ತಾರೆ. ಹೆಣ್ಣು ಅನಾಥೆಯಲ್ಲ, ಆಕೆ ಮಾತೆ, ಶಕ್ತಿ ಸ್ವರೂಪಿಣಿ, ಸ್ಫೂರ್ತಿದಾಯಿನಿ ಎಂದು ಹೆಣ್ಣನ್ನು ಹೊಗಳುತ್ತಾರೆ. ಇಂದಿನ ಹೆಣ್ಣು ಮಕ್ಕಳು ತಮ್ಮ ಮೇಲೆ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರಗಳನ್ನು ಹೇಗೆ ಎದುರಿಸಬೇಕು ಎಂದು ಭಾಷಣ ಮಾಡಿ ಸಭಿಕರಿಂದ ಚಪ್ಪಾಳೆ ಮತ್ತು ಮೆಚ್ಚುಗೆ ಗಳಿಸುತ್ತಾರೆ.

ಈ ರೀತಿ ಹೆಣ್ಣಿನ ಬಗ್ಗೆ ಮಾತನಾಡಿ, ಹೊಗಳಿ ಅವರನ್ನು ಗೌರವಿಸುವನಂತೆ ಮಾತನಾಡಿದ ವ್ಯಕ್ತಿ ಅದೇ ರಾತ್ರಿ ಅನಾಥಾಲಯದ ಹೆಣ್ಣು ಕೋಮಲಾಳ ಜೊತೆ ಮಲಗಲು ಸಿದ್ಧಾವಾಗುವುದು 'ಆಚಾರ ಆಡಲಿಕ್ಕೆ ಬದನೆಕಾಯಿ ತಿನ್ನಲಿಕ್ಕೆ' ಎಂಬ ಅವನ ಕೊಳಕು ವ್ಯಕ್ತಿತ್ವಕ್ಕೆ ಸಾಕ್ಷಿಯಾಗುತ್ತದೆ. ಕೋಮಲಾ ತನ್ನ ಮೇಲಿನ ಈ ಅತ್ಯಾಚಾರವನ್ನು ಸಹಿಸದೆ ಆತನನ್ನು ನಿರಾಕರಿಸಿ ಆತನನ್ನು ಕಾಡಿಬೇಡಿದಾಗ ಬೇಸರದಿಂದ ಆ ವಿಷಯವನ್ನು ಶಿವರಾಮರೆಡ್ಡಿಗೆ ತಿಳಿಸುವನು. ಆತ ತನ್ನ ಒರಟು ವ್ಯಕ್ತಿತ್ವದಿಂದ ಈಕೆಯ ಮೇಲೆ ಅತ್ಯಾಚಾರವೆಸಗಿ ಅವಳು ತನ್ನ ಅಸ್ಥಿತ್ವದ ಆಸೆಯನ್ನೇ ಕಳೆದುಕೊಳ್ಳುವಂತೆ ಮಾಡಿ ಅತಿಥಿಗೆ ಆಕೆಯನ್ನು ಒಪ್ಪಿಸುತ್ತಾನೆ. ಈ ರೀತಿ ಪ್ರಜ್ಞಾಶೂನ್ಯಳಾಗಿರುವ ಕೋಮಲಾಳ ಮೇಲೆ ಈತ ಅತ್ಯಾಚಾರ ಮಾಡುತ್ತಾನೆ. ಸಮಾಜ ಕಲ್ಯಾಣಾ ಇಲಾಖೆ

ಎಂಬ ಸಮಾಜ ಉದ್ಧಾರಕ್ಕಾಗಿ ಇರುವ ಒಂದು ಶಾಖೆಯ ಅಧಿಕಾರಿಯಾದರೂ, ಅವನು ಮಾಡುವುದು ಈತನ ಹೀನ ವ್ಯಕ್ತಿತ್ವ ಮತ್ತು ಕೃತ್ಯಕ್ಕೆ ಸಾಕ್ಷಿಯಾಗುತ್ತದೆ.

ಇಡೀ ಕಥೆಯಲ್ಲಿ ನಮಗೆ ಕಾಣುವುದು ನಮ್ಮ ಸಮಾಜದ ಅವ್ಯವಸ್ಥೆಯ ಚಿತ್ರಣ. ಭಗಿನೀ ಸಮಾಜ ಎಂಬುದು ಇಲ್ಲಿ ಒಂದು ನೆಪ ಮಾತ್ರ. ಇಲ್ಲಿ ನಡೆಯುವ ಚಟುವಟಿಕೆಗಳು ನಮ್ಮ ದಿನ ನಿತ್ಯ ಜೀವನದಲ್ಲಿ ದಿನಕ್ಕೊಮ್ಮೆಯಾದರೂ ಒಬ್ಬ ಸ್ತ್ರೀಯಾದರು ಅನುಭವಿಸುವ ಲೈಂಗಿಕ ಕಿರುಕುಳದ ಚಿತ್ರಣವನ್ನೇ ವೀಣಾ ರವರು ಚಿತ್ರಿಸಿದ್ದಾರೆ. ಸಮಾಜದಲ್ಲಿರುವ ಗಣ್ಯ ವ್ಯಕ್ತಿಗಳು, ಮಂತ್ರಿಗಳು, ಅಧಿಕಾರಿಗಳು ಮೊದಲಾದವರು ನಡೆಸುವ ದಬ್ಬಾಳಿಕೆಯ ನೈಜ ಚಿತ್ರಣವೇ ಈ ಕಥೆ ಎಂದು ಹೇಳಬಹುದು.

"ಕಮಲೀ, ಇನ್ನು ಮುಂದೆ ಈ ಹುಡುಗಿಯರನ್ನು ಒಂದು ದಂ ಮೊದಲು ನಾನು ಟೆಸ್ಟ್ ಮಾಡಿ, ಸಾದು ಮಾಡಿ ನಂತರವೇ ಗೆಸ್ಟ್ ರೂಂ ಡ್ಯೂಟಿಗೆ ಕಳುಹಿಸಬೇಕು ನೋಡು, ಇಲ್ಲವಾದರೆ ಇವರು ಸಮಾಜದ ಮರ್ಯಾದೆ ತೆಗೆದಾರು. ಕಮಲಮ್ಮನ ನಗು, ಗಂಡಸಿನ ನಗುವಿನಂತೆ ಕೇಳಿಸಿತು". (೧)

ಕಥೆಯಲ್ಲಿ ಬರುವ ಈ ಕೊನೆಯ ವಾಕ್ಯ ನಮ್ಮನ್ನು ಅತಿಯಾಗಿ ಕಾಡುತ್ತದೆ. ಇಲ್ಲಿ ಕಾಡುವ ಮತ್ತೊಂದು ಮುಖ್ಯ ಪ್ರಶ್ನೆ ಅಥವಾ ವ್ಯಕ್ತಿಯೆಂದರೆ ಕಮಲಮ್ಮ ತಾನೂ ಒಂದು ಹೆಣ್ಣಾಗಿದ್ದು, ತನ್ನಂತೆ ಇರುವ ಹಲವು ಅನಾಥ ಮಕ್ಕಳಿಗೆ ತಾಯಿಯಾಗಿರಬೇಕಾದವಳು ಅವರ ಬಗ್ಗೆ ಅತಿ ಕ್ರೂರಿಯಗಿದ್ದಾಳೆ ಎಂಬುದು.
ಕಥೆಯ ಕೊನೆಯಲ್ಲಿ ಬರುವ ಆಕೆಯ ನಗು ಗಂಡಸಿನ ನಗುವಿನಂತೆ ಎಂಬ ಮಾತು ಈಕೆ ಹೆಣ್ಣು ಮಕ್ಕಳ ಮೇಲೆ ನಡೆಸುವ ದೌರ್ಜನ್ಯ, ಈಕೆಯ ದರ್ಪ ಮುಂತಾದವುಗಳಿಗೆ ಸಾಕ್ಷಿಯಾಗಿದೆ. ಸಮಾಜದಲ್ಲಿ ಗಂಡಿನಿಂದ ಮಾತ್ರ ಹೆಣ್ಣಿನ ಮೇಲೆ ದೌರ್ಜನ್ಯ ನಡೆಯುತ್ತದೆ ಎನ್ನುವ ಮಾತಿನ ಜೊತೆಗೆ ಕೆಲವೊಮ್ಮೆ ಹೆಣ್ಣು ಇದಕ್ಕೆ ಕಾರಣ ಎಂಬುದನ್ನು ತಿಳಿಸಿತ್ತದೆ.

'ದ.ಬ್ರಾ ಕ್ರಿಷ್ಟಪ್ಪ' ಕಾಲ ಎಂದಿಗೂ ಯಾರಿಗೂ ನಿಲ್ಲುವುದಿಲ್ಲ ಎಂಬುದಕ್ಕೆ ಈ ಕಥೆಯನ್ನು ನಿರೂಪಿಸಿದ್ದಾರೆ. ಕತೆಯಲ್ಲಿ ನಮ್ಮ ಗಮನ ಸೆಳೆಯುವ ಒಂದು ಅಂಶವೆಂದರೆ ಜಾತಿ ಹೆಸರಿನಲ್ಲಿ ನಡೆಯುವ ಅನ್ಯಾಯವಾಗಿದೆ. ಒಂದೊಮ್ಮೆ ಅತೀ ಶ್ರೇಷ್ಠ ಎನಿಸಿದ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನು ಕ್ರಿಷ್ಟಪ್ಪ. ತನ್ನ ಬಡತನದಿಂದಾಗಿ ಮತ್ತು ಸರ್ಕಾರದ ಮೀಸಲಾತಿ ನೀತಿಯಿಂದ ಹೇಗೆ ಅವಕಾಶಗಳಿಂದ ವಂಚಿತನಾಗುತ್ತಾನೆ ಎಂಬುದರ ಬಗ್ಗೆ ನಮಗೆ ಕತೆ ತಿಳಿಸುತ್ತದೆ.

ಕಥೆಯ ಕೇಂದ್ರ ಪಾತ್ರ ಕ್ರಿಷ್ಟಪ್ಪ ತಾಲ್ಲೂಕು ಆಫೀಸಿನಲ್ಲಿ ಗುಮಾಸ್ತ ಕೆಲಸದಲ್ಲಿದ್ದವನು. ಬಿ.ಎ. ಓದಿ ಒಳ್ಳೆಯ ಅಂಕಗಳನ್ನು ಪಡೆದಿದ್ದರೂ ಲಂಚ ಕೊಡಲು ಕಾಸಿಲ್ಲದೆ ಗುಮಾಸ್ತ ಕೆಲಸಕ್ಕೆ ಸೇರುತ್ತಾನೆ. ಪಿತ್ರಾರ್ಜಿತವಾದ ನಾಲ್ಕೆಕೆರೆ ಆಸ್ತಿಯು ಟೆನೆಂಸ್ಸಿ ಕಾಯ್ದೆ ಪ್ರಕಾರ ರೈತರಿಗೆ ಹೋಗುತ್ತದೆ. ಇಲ್ಲಿಂದಲೇ ವ್ಯಕ್ತಿಯೊಬ್ಬ ಲಂಚಕೋರತನ ಮತ್ತು ಅಧಿಕಾರಶಾಹಿಗಳ ವ್ಯವಸ್ಥೆಯ ಒಳಗೆ ಹೇಗೆ ಸಿಕ್ಕಿಬೀಳುತ್ತಾನೆ ಎಂಬುದರ ಬಗ್ಗೆ ಮಾಹಿತಿ ದೊರೆಯುತ್ತದೆ.

ಓದಿಗೆ ತಕ್ಕ ಕೆಲಸ ದೊರಕಿಸಿಕೊಳ್ಳಲು ಈತನಿಗೆ ಸಾಧ್ಯವಾಗುವುದಿಲ್ಲ. ನಂತರ ಜೀವನದ ಕೊನೆಯ ಘಟ್ಟದಲ್ಲಿರುವ ತನ್ನ ತಾಯಿಯ ಆಸೆಯ ಈಡೇರಿಕೆಗಾಗಿ ನಿವೃತ್ತಿ ನಂತರ ಬಂದ ಹಣವನ್ನು ಮನೆ ಕಟ್ಟಿಸುವ ಸಲುವಾಗಿ ಹೌಸಿಂಗ್ ಸೊಸೈಟಿಯಲ್ಲಿ ಕಟ್ಟುತ್ತಾನೆ. ಕಥೆಯ ಮತ್ತೊಂದು ಪ್ರಮುಖ ಪಾತ್ರದಾರಿಯಾದ

ಕಲ್ಲಪ್ಪನವರಿಂದ ಇಲ್ಲಿ ಇವನಿಗೆ ಮೋಸ ಆಗುತ್ತದೆ. ಇವನಿಗೆ ಇದ್ದ ಸೈಟು ಕಲ್ಲಪ್ಪನ ಅಳಿಯನಿಗೆ ದೊರೆಯುತ್ತದೆ. ವಿಷಯ ತಿಳಿದ ಕಿಷ್ಟಪ್ಪನ ತಾಯಿ ಇದೇ ಚಿಂತೆಯಲ್ಲೇ ಕೊರಗಿ ಕೊರಗಿ ಆರು ತಿಂಗಳಲ್ಲಿ ಸಾಯುತ್ತಾಳೆ. ಪ್ರಭಾವಶಾಲಿ, ಹಣದ ಪ್ರಭಾವದ ಸುಳಿಯೊಳಗೆ ಸಿಕ್ಕ ಕಿಷ್ಣಪ್ಪನಿಗೆ ಸೈಟು, ಮನೆಯ ಆಸೆ ಸಾಯುತ್ತದೆ.

ಅಧಿಕಾರಿಶಾಹಿಗಳ ದರ್ಪದಿಂದ ಕೃಷ್ಣಪ್ಪನಿಗೆ ಬಿದ್ದ ಎರಡನೆಯ ಹೊಡೆತವೆಂದರೆ ತನ್ನ ಕಿರಿಯ ಮಗ ಪ್ರಾಣೇಶನ ವಿಚಾರದಲ್ಲಿ. ಓದಿನಲ್ಲಿ ಮುಂದಿದ್ದ ಪ್ರಾಣೇಶ ಪಿ.ಯು.ಸಿ ಯಲ್ಲಿ ಎಂಬತ್ತೆಂಟು ಪರ್ಸೆಂಟ್ ಪಡೆದರೂ ತನ್ನ ಮಹಾತ್ವಾಕಾಂಕ್ಷೆಯಾದ ಮೆಡಿಕಲ್ ಸೀಟು ಪಡೆಯಲು ವಿಫಲನಾಗುತ್ತಾನೆ. ಆದರೆ ಹಣ ಮತ್ತು ಅಧಿಕಾರ ಹೊಂದಿದ್ದ ಕಲ್ಲಪ್ಪನವರ ಮಗ ಅತಿ ಕಡಿಮೆ ಐವತ್ತೇ ಪರ್ಸೆಂಟ್ ಪಡೆದು ಮೆಡಿಕಲ್ ಸೀಟು ಸಂಪಾದಿಸುತ್ತಾನೆ. ಅಧಿಕಾರಶಾಹಿಯ ದರ್ಪ ಅಥವಾ ಅಧಿಕಾರ ಎನ್ನುವುದು ಹಣವಂತರಿಗೆ ಎನ್ನುವ ಪರಿಸ್ಥಿತಿಯನ್ನು ಇಲ್ಲಿ ಕಾಣಬಹುದು.

ಕ್ರಿಷ್ಣಪ್ಪ ತನ್ನ ಮಗಳಿಗೆ ಕೆಲಸ ಸಿಗುವ ಸಂಬಂಧದಲ್ಲಿ ಮತ್ತೊಂದು ಆಘಾತ ಅನುಭವಿಸುತ್ತಾನೆ. ಬಿ.ಎಡ್ ಮುಗಿಸಿದ ಮಗಳು ರಮಾ ಊರಲ್ಲಿ ಶುರುವಾದ ಹುಡುಗಿಯರ ಶಾಲೆಗೆ ಅರ್ಜಿ ಹಾಕುತ್ತಾಳೆ. ಎಲ್ಲಾ ಅರ್ಹತೆಗಳಿದ್ದರೂ ಅವಳಿಗೆ ಕೆಲಸ ಸಿಗುವುದಿಲ್ಲ. ಮೀಸಲಾತಿ ನಿಯಮದ ಪ್ರಕಾರದಿಂದ ಅರ್ಹತೆ ಇಲ್ಲದ ವಿದ್ಯೆಯಿಲ್ಲದವನಿಗೆ ಕೆಲಸ ದೊರೆಯುತ್ತದೆ. ಇವನಿಗಿರುವ ಒಂದೇ ಅರ್ಹತೆ ಎಂದರೆ ಆತ ಕಲ್ಲಪ್ಪನವ: ಅಣ್ಣನ ಮಗ.

ಕ್ರಿಷ್ಟಪ್ಪ ಇಷ್ಟೆಲ್ಲಾ ಆದರೂ ಎಲ್ಲವೂ ಕಾಲದ ಮಹಿಮೆ ಎಂದು ನಿರ್ಧರಿಸಿ ಸುಮ್ಮನಿರುತ್ತಾನೆ. ಇವನ ಪ್ರಕಾರ ಒಂದೊಮ್ಮೆ ಇವನ ತಾತ ದುಡ್ಡಿದ್ದವರು. ಅವರ ಬಳಿ ಕಲ್ಲಪ್ಪನವರ ತಾತ ಕೆಲಸ ಮಾಡುತ್ತಿದ್ದರು. ಅವರದೇ ಹೆಸರನ್ನು ಇಟ್ಟುಕೊಂಡ ಕ್ರಿಷ್ಟಪ್ಪ ಇಂದು ಕಡುಬಡವನಾಗಿದ್ದಾನೆ. ಅಂತೆಯೇ ತಾತನ ಹೆಸರು ಪಡೆದ ಕಲ್ಲಪ್ಪ ಇಂದು ಸಾಹುಕಾರ. ಇಡೀ ಕಥೆಯಲ್ಲಿ ಕ್ರಿಷ್ಟಪ್ಪನ ತನ್ನ ಆಸೆ ಮತ್ತೆ ತನ್ನ ಮೊಮ್ಮಗನ ಕಾಲಕ್ಕೆ ಕಾಲ ಬದಲಾಗಬಹುದು ಎಂದು ಕಾಯುವ ಆಶಾ ಮನೋಭಾವದೊಂದಿಗೆ ಕಥೆ ಮುಗಿಯುತ್ತದೆ.

'ದುಡ್ಡಿದ್ದವನೆ ದೊಡ್ಡಪ್ಪ' ಎಂಬ ಹಳೆಯ ಗಾದೆಯಂತೆಯೆ ಅಥವಾ ಆಧುನಿಕರ 'ಕಾಸಿದ್ದೋನೆ ಬಾಸು' ಎಂಬಂತೆ ಇಂದಿನ ಸಮಾಜದ ನೈಜ ಚಿತ್ರಣವನ್ನು ಕಥೆ ಕಟ್ಟಿಕೊಡುತ್ತದೆ. ಸಮಾಜದಲ್ಲಿ ಜಾತಿ ವಿಷಯ ಆಧಾರಿತ ಮೀಸಲಾತಿ ವಿಷಯ ಹೇಗೆ ವಿವಿಧ ವರ್ಗಗಳ ನಡುವೆ ಒಂದು ರೀತಿಯ ಅಸಮಾನ ವ್ಯವಸ್ಥೆಯನ್ನು ಸೃಷ್ಟಿಸಿದೆ ಎಂಬ ವರ್ಗ ತಾರತಮ್ಯದ ರೀತಿ ನೀತಿಗಳನ್ನು ತಿಳಿಸುತ್ತದೆ.

'ಧೈರ್ಯದ ಮನುಷ್ಯ' ಸಾಮಾಜಿಕ ರೀತಿ ನೀತಿಗಳು ವ್ಯಕ್ತಿಯೊಬ್ಬನನ್ನು ಹೇಗೆ ಸಾವಿನಂಚಿಗೆ ದೂಡುತ್ತವೆ ಎಂಬುದಕ್ಕೆ ವೀಣಾರವರ ಈ ಕಥೆ ಮುಖ್ಯವಾಗುತ್ತದೆ. ಕಥೆ ಮೊದಲಿಗೆ ಎರಡನೇ ಮಹಾಯುದ್ಧದ ಚಿತ್ರಣವನ್ನು ನೀಡುತ್ತದೆ. ಈ ಮಹಾಯುದ್ಧದಲ್ಲಿ ಹೋರಾಡಿದ ವ್ಯಕ್ತಿಯೊಬ್ಬ ತನ್ನ ಸಂಸಾರ ಜೀವನದ ಬಗ್ಗೆ ನೊಂದು ಆತ್ಮಹತ್ಯೆ ಮಾಡಿಕೊಳ್ಳುವುದು ಕಥೆಯ ಸಾರಾಂಶ.

ಮನುಕುಲ ಎಂದಿಗೂ ಮರೆಯಲು ಸಾಧ್ಯವಿಲ್ಲದ ಭಯಾನಕ ಯುದ್ಧವಾದ ಎರಡನೇ ಮಹಾಯುದ್ಧದ ಕಾಲದಲ್ಲಿ ನಡೆಯುವಂತಹ ಕಥೆಯಿದು. ಎರಡು ಇಡೀ ನಗರಗಳನ್ನು ಅಣುಬಾಂಬಿನ

ಮೂಲಕ ನಾಶ ಮಾಡಿದ ಅಮೇರಿಕಾ ಮತ್ತು ಜಪಾನ್ ರಾಷ್ಟ್ರಗಳ ನಡುವೆ ನಡೆದ ಯುದ್ಧವಿದು. ಅಧಿಕೃತವಾಗಿ ಯುದ್ಧ ಮುಗಿದರೂ ಜಪಾನಿನ ಒಳಗೆ ಬದುಕುಳಿದಿರುವ ಅನೇಕ ಜನರು ಅಮೇರಿಕಾದ ವಿರುದ್ಧ ಶೀತಲ ಸಮರವನ್ನು ಅನೇಕ ವರ್ಷಗಳ ಕಾಲ ನಡೆಸುತ್ತಲೆ ಇರುತ್ತಾರೆ. ಈ ರೀತಿಯ ಮಹಾಯುದ್ಧದಲ್ಲಿ ಭಾರತದವರಾದ ಪೆರುಮಾಳ್ ಮತ್ತು ಆತನ ಸಹಚರರು ಭಾಗಿಯಾಗಿರುತ್ತಾರೆ. ಅಳಿದುಳಿದ ಜಪಾನಿಯರನ್ನು ಸಂಪೂರ್ಣವಾಗಿ ತೊಡೆದು ಹಾಕಲು ಇವರು ತಮ್ಮ ಪ್ರಾಣವನ್ನು ಪಣಕ್ಕೆ ಇಟ್ಟು ಹೋರಾಡುತ್ತಾರೆ.

ಕಥೆಯ ಕೇಂದ್ರ ಪಾತ್ರವಾದ ಪೆರುಮಾಳ್ ಅತೀ ಹೆಚ್ಚು ಬಲಶಾಲಿ ಮತ್ತು ಧೈರ್ಯಶಾಲಿ ಎಂದು ಹೆಸರಾಗಿದ್ದವನು. ಐದು ಜನರೊಡನೆ ಸೇರಿ ನಲವತ್ತು ಜನರಿದ್ದ ಜಪಾನಿ ಸೈನಿಕರನ್ನು ಮಣ್ಣು ಮುಕ್ಕಿಸಿ ಬ್ರಿಟೀಷ್ ಅಧಿಕಾರಿಗಳ ಜೀವ ಉಳಿಸಿದವರು, ದುರ್ಗಮವಾದ ಬೆಟ್ಟ, ಕೊಳ್ಳಗಳಲ್ಲಿ ಓಡಾಡಿ ಒಬ್ಬರೇ ತುರ್ತು ಸಂದೇಶಗಳನ್ನು ಕಳುಹಿಸುವಂತಹ ಗಂಡೆದೆಯ ಭಂಟ ಇಷ್ಟೆಲ್ಲಾ ಧೈರ್ಯವಂತರಾದ ಇವರು ತಮ್ಮ ಮನೆಗೆ ತೆರಳಿ ಕುಟುಂಬದವರನ್ನು ಕಾಣಲು ಉತ್ಸುಕರಾಗಿದ್ದರು. ಇವರ ಸಹಚರ ಜಮಾದಾರ್ ಜೋಗಿಂದರ್ ಸಿಂಗ್‌ನ ಕಷ್ಟದ (ಹೆಣ್ಣು ಮಕ್ಕಳ ಸಮಸ್ಯೆ, ಗಂಡು ಮಕ್ಕಳ ಬಡಿದಾಟ, ಹೆಂಡತಿಯ ಅನಾರೋಗ್ಯ, ಹಳ್ಳಿಯಲ್ಲಿರುವ ರಾಜಕೀಯದ ಒಳಜಗಳಗಳು) ಸಮಸ್ಯೆ ಕೇಳಿ ಆತನಿಗೆ ಸಮಾಧಾನ ಹೇಳುತ್ತಾರೆ. ಕಷ್ಟಗಳು ಬಂದಾಗ ಅದನ್ನು ಎದುರಿಸುವ ಶಕ್ತಿಯನ್ನು ನಾವು ಪ್ರಯತ್ನ ಪೂರ್ವಕವಾಗಿ ಮೈಗೂಡಿಸಿಕೊಂಡು ಬಾಳಬೇಕು ಹಾಗೂ ಕಷ್ಟಗಳನ್ನು ಎದುರಿಸಬೇಕು ಎಂದು ಸಮಾಧಾನ ಹೇಳುವಂಥವನು.

ಇನ್ನೊಬ್ಬರಿಗೆ ಈ ರೀತಿ ಸಮಾಧಾನ ನೀಡುವ ಈತ ತನ್ನ ಸ್ವಂತ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗದೆ ಬೇರೆಯೇ ರೀತಿಯ ಅಂತ್ಯವನ್ನು ಕಂಡುಕೊಳ್ಳುತ್ತಾನೆ. ಇಷ್ಟು ದಿನ ಕಾತರವಾಗಿ ಕಾದಿದ್ದ ಊರಿಗೆ ತೆರಳುವ ಹಿಂದಿನ ದಿನ ತನ್ನ ಕುಟುಂಬದವರಿಂದ ಬಂದ ಪತ್ರ ಓದಿದ ಪೆರುಮಾಳರು ತನ್ನ ಸಾಂಸಾರಿಕ ಸಮಸ್ಯೆಗಳಿಗೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಪ್ರಾಣಕ್ಕಿಂತ ಮಾನ ಹೆಚ್ಚು ಎಂದು ತಿಳಿದ ಪೆರುಮಾಳ್ ತಮ್ಮ ಹೆಂಡತಿ ಬೇರೆ ಯಾರೊಂದಿಗೋ ಓಡಿ ಹೋದಳು ಎನ್ನುವ ಸುದ್ದಿ ಕೇಳಿ ಸಮಾಜದಲ್ಲಿ ಇನ್ನು ತಾನು ಮೊದಲಿನಂತೆ ಬಾಳಲು ಸಾಧ್ಯವಾಗುವುದಿಲ್ಲವೆಂದು ನಿರ್ಧರಿಸಿ ಪ್ರಾಣ ಬಿಡುತ್ತಾನೆ.

ಸಮಾಜದಲ್ಲಿ ಸ್ಥಾನ ಪಡೆದಿರುವ ಈ ರೀತಿಯ ಸಮಸ್ಯೆಗಳು ಮತ್ತು ಅದರಿಂದ ಏಳುವ ಪ್ರಶ್ನೆಗಳು ವ್ಯಕ್ತಿ ತಾನು ಮಾಡಿಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವಂತೆ ಮಾಡುತ್ತವೆ ಎಂಬುದನ್ನು ವಿವರಿಸುತ್ತದೆ. ಅದೇ ರೀತಿ ಹೆಣ್ಣಿಗೊಬ್ಬಳಿಗೆ ಪತಿ ನಿಷ್ಠೆಯೆಂಬ ನಿಯಮದಡಿ ಬದುಕಿತ್ತಿದ್ದ ಸಮಾಜಕ್ಕೆ ಇದು ಬೇರೆಯಾದ ನೈತಿಕ ಪ್ರಶ್ನೆ ಉಂಟು ಮಾಡುತ್ತದೆ.

'ಹರಿದು ಬಾ ತಾಯಿ' ಕಥೆ ಈಗಿನ ಸಾಮಾಜಿಕ ವ್ಯವಸ್ಥೆಯಲ್ಲಿನ ಸರ್ಕಾರಿ ವ್ಯವಸ್ಥೆಯ ಬಗ್ಗೆ ತಿಳಿಸುತ್ತದೆ. ಸರ್ಕಾರದಿಂದ ಮಂಜೂರಾಗುವ ಯೋಜನೆಗಳು ಹೇಗೆ ಜನರ ಬಳಿಗೆ ತಲುಪದೆ ಅದಕ್ಕಾಗಿ ಮಂಜೂರಾಗುವ ಹಣ ಹೇಗೆ ವ್ಯಯವಾಗುತ್ತದೆ ಎಂಬುದನ್ನು ತಿಳಿಸುವುದು ಕಥೆಯ ಸಾರಾಂಶ.

ಹನುಮಾನಪುರವು ರಾಜಾಪುರ– ಶಾಹಿಪುರ ಎಂಬ ಜಿಲ್ಲೆಗಳ ಗಡಿಯಲ್ಲಿನ ಒಂದು ಚಿಕ್ಕ ಹಳ್ಳಿ. ವರ್ಷವಿಡೀ ಬೇಸಿಗೆ ಇರುವ ಊರಿನಲ್ಲಿ ಜೀವನದ ದಿನನಿತ್ಯ ಆವಶ್ಯಕತೆಗೂ ಬೇಕಾಗುವಷ್ಟು ನೀರಿಲ್ಲ. ಆದರೂ ಇಲ್ಲಿನ ಜನರಿಗೆ ತಾವು ತೋಟ ಮಾಡಿದಂತೆ ಅದರಲ್ಲಿ ಭತ್ತ, ತೆಂಗು, ಕಬ್ಬು, ಬಾಳೆ, ಮಲ್ಲಿಗೆ, ತುಳಸಿ, ಕನಕಾಂಬರ ಮುಂತಾದ ಬೆಳೆಗಳನ್ನು ಕೃಷಿ ಮಾಡಿದವರಂತೆ ಕನಸು ಕಾಣುತ್ತಾರೆ. ಕತೆಯಲ್ಲಿ ಬರುವ

ತಿಮ್ಮನ ಪಾತ್ರದ ಮೂಲಕ ಕತೆ ಸಾಗುತ್ತದೆ. ತಿಮ್ಮ ಚಿಕ್ಕವನಿದ್ದಾಗ ಅವನ ಅಜ್ಜ ಒಮ್ಮೆ ಸಂತೆಗೆ ಹೋಗಿದ್ದವರು ಕೃಷ್ಣಾಪುರದ ತಾಲ್ಲೂಕಿನಲ್ಲಿ ಅಣೆಕಟ್ಟು ಕಟ್ಟುವ ವಿಷಯ ತಿಳಿದು ಸಂತೋಷಗೊಂಡು ಊರಿನ ಎಲ್ಲರಿಗೂ ತಿಳಿಸುತ್ತಾರೆ ಹಾಗೂ ಈ ಯೋಜನೆ ತಮ್ಮಗೆ ಸಹಾಯ ಮಾಡುತ್ತದೆ ಎಂದು ನಂಬುತ್ತಾರೆ.

ತಿಮ್ಮ, ಅವನ ಅಜ್ಜ ಮತ್ತಿತರೂ ಹೋಗಿ ಅಣೆಕಟ್ಟಿನ ಕೆಲಸ ನೋಡಿ ಬಂದು ಹರುಷ ಪಡುತ್ತಾರೆ. ನಂತರದ ಕಾಲಾವಧಿಯಲ್ಲಿ ತಿಮ್ಮನ ಅಜ್ಜ ಸತ್ತು ಹಲವು ವರ್ಷಗಳಾಗುತ್ತವೆ. ಆದರೆ ಅಣೆಕಟ್ಟಿನ ಕೆಲಸ ಮುಗಿಯುವುದಿಲ್ಲ, ತಿಮ್ಮನು ಎಳೆಯ ಹುಡುಗನಾಗಿದ್ದವನು ಇಂದು ಬೆಳೆದು ಅಲ್ಲಿ ಕೆಲಸ ಮಾಡುತ್ತಾನೆ. ಆದರೆ ಅಣೆಕಟ್ಟಿನ ಕೆಲಸ ಮುಗಿಯುವುದಿಲ್ಲ. ಕಾಮಗಾರಿಗೆ ಹಲವಾರು ಜನ ಅಧಿಕಾರಿಗಳು ಬಂದು ಹೋಗುತ್ತಾರೆ. ಸರ್ಕಾರ ಬಿಡುಗಡೆ ಮಾಡಿದ ಹಣ ಮಂತ್ರಿಗಳ-ಶಾಸಕರ ಪಾಲಿಗೇ ಹೋಗುತ್ತದೆ. ತಮ್ಮೂರಿಗೆ ನೀರು ಬರುತ್ತದೆಂದು ನಂಬಿದ್ದ ತಿಮ್ಮನಿಗೆ ಇಷ್ಟು ವರ್ಷಗಳ ಒಡನಾಟದಲ್ಲಿ ನಿಜ ಪರಿಸ್ಥಿತಿಯ ಅರಿವು ಉಂಟಾಗಿದೆ. ಇಪ್ಪತ್ತು ಕಿಲೋಮೀಟರ್ ರಸ್ತೆ ಮಾಡಿ ಮೂವತ್ತು ಕಿಲೋಮೀಟರ್ ಎಂದು ಲೆಕ್ಕ ತೋರಿಸುವ ಲೋಕ ವ್ಯವಹಾರ ಈಗ ತಿಮ್ಮನಿಗೆ ತಿಳಿದಿದೆ.

"ಯಾರು ಯಾತರ ಬಗೆಗೂ ಆಕ್ಷೇಪಿಸುವುದಿಲ್ಲ, ಹಿಂದೆ-ಮುಂದೆ ನೋಡುವುದಿಲ್ಲ, ಅಪರಾಧಿ ಭಾವವಂತೂ ಇಲ್ಲವೇ ಇಲ್ಲ, ಕೃಷ್ಣೆಯಲ್ಲಿ ಹರಿದ ನೀರಿಗಿಂತ ಹೆಚ್ಚು ಹಣ ನೂರಾರು ಕೋಟಿಗಳಷ್ಟು ಹಣ ಹರಿದಿದೆ, ಹರಿಯುತ್ತಲೆ ಇದೆ".೨ ಕಥೆಯ ಕೊನೆಯಲ್ಲಿ ತಿಮ್ಮ ಹೇಳುವ ಮಾತು ಇಂದಿನ ಸರ್ಕಾರಗಳ ಅವ್ಯವಸ್ಥೆಗೆ ಹಿಡಿದ ಕನ್ನಡಿಯಂತೆ ನಮಗೆ ತೋರುತ್ತದೆ. ಒಂದು ಯೋಜನೆಯನ್ನು ರೂಪಿಸಿದ ಜನ ಅದರಿಂದ ತಮಗೇನೂ ಲಾಭ ಎಂದು ನೋಡುತ್ತಾರೆ ಹೊರತು ಅವರು ಇತರರ ಬಗ್ಗೆ ಯೋಚಿಸುವುದಿಲ್ಲ. ತಾವು ಮಾಡುತ್ತಿರುವುದು ತಪ್ಪು ಎಂಬ ಅಪರಾಧಿ ಭಾವನೆಯೂ ಅವರನ್ನು ಕಾಡುವುದಿಲ್ಲ. ಯೋಜನೆಯ ಅಡಿಯಲ್ಲಿ ರೂಪುಗೊಂಡ ಅಣೆಕಟ್ಟಿನಿಂದ ನೀರು ಹರಿದು ಜನರ ಮನಕ್ಕೆ ಹರುಷವೀಯಬೇಕಾಗಿತ್ತು. ಆದರೆ ಅದರಿಂದ ಬರುವ ಹಣ ಮಾತ್ರ ಇಲ್ಲಿ ಕೆಲವೊಬ್ಬರಿಗೆ ಸುಖ ನೀಡುತ್ತಿದೆ ಎಂದು ತಿಮ್ಮ ಅಭಿಪ್ರಾಯ ಪಡುವುದು ಎಲ್ಲಾ ಕಾಲಕ್ಕೂ ಅನ್ವಯಿಸುವಂತೆ ಚಿತ್ರಿತವಾಗಿದೆ.

'ಮುಂದಾಳುವಿನ ಜನತಾ ಸೇವೆ' ಎಂಬ ಕತೆಯಲ್ಲಿ ಜನರ ಹೆಸರಿನಲ್ಲಿ ತನ್ನ ಹೊಟ್ಟೆ ತುಂಬಿಕೊಳ್ಳುವ ಸಮಾಜದಲ್ಲಿನ ದಲ್ಲಾಳಿಗಳ ಚಿತ್ರಣವನ್ನು ವ್ಯಕ್ತಿಯೊಬ್ಬನ ಮೂಲಕ ಹೇಳುತ್ತದೆ. ವ್ಯಕ್ತಿಯೋರ್ವನ ಭವಿಷ್ಯದ ಮೊದಲ ಹೆಜ್ಜೆ ಕಾಲೇಜು ಶಿಕ್ಷಣ, ಇಲ್ಲಿ ನಡೆಯುವ ಅವ್ಯಾವಹರಗಳೆ ಕಥೆಯ ಕೇಂದ್ರ. ತಾಲ್ಲೂಕು ಕೇಂದ್ರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಆ ಸುತ್ತ ಮುತ್ತಲಿನ ಹಲವು ಹಳ್ಳಿಗಳ ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಸ್ಥಳ. ಯಾರೂ ಕದಿಯಲಾಗದ ವಸ್ತು ವಿದ್ಯೆ ಇಂತಹ ಒಂದು ವಿದ್ಯೆಯ ವಿಷಯದಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡುವ ವ್ಯಕ್ತಿ ಕಲ್ಲಪ್ಪ ಮಣ್ಣಿನ ಮನಿ.

ಕಾಲೇಜು ಪ್ರಾರಂಭದ ಸಮಯದಲ್ಲಿ ಸೀಟು ಕೊಡಿಸುತ್ತೇನೆಂದು ಹೇಳಿ ವಿದ್ಯಾರ್ಥಿಗಳ ಬಳಿ ಹಣ ಪಡೆದ ಕಲ್ಲಪ್ಪ ಪ್ರಿನ್ಸಿಪಾಲರ ಬಳಿ ತನ್ನ ಪಟ್ಟಿ ನೀಡುತ್ತಾನೆ ಆದರೆ ಆಗಷ್ಟೇ ಬಂದಿದ್ದ ಪ್ರಿನ್ಸಿಪಾಲರು ಕಾಲೇಜಿನ ನಿಯಮಗಳಿಗೆ ಬದ್ಧರಾಗಿ ಕೆಲಸ ಮಾಡುತ್ತಾರೆ. ಇದರಿಂದ ಅವಮಾನಿತನಾದ ಕಲ್ಲಪ್ಪ ಮರುದಿನ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಅವರ ವಿರುದ್ಧ ಘೋಷಣೆ ಕೂಗಿ ಹೋರಾಟ ನಡೆಸುತ್ತಾನೆ. ತಾಲ್ಲೂಕು ಕಛೇರಿಗೆ ಹೋಗಿ ಬಡವರಿಗಾದ ಅನ್ಯಾಯ ಎಂದು ಇದನ್ನು ಪ್ರತಿಭಟಿಸಿ, ನ್ಯಾಯ

ಕೋರಿ ಮನವಿ ಪತ್ರ ಸಲ್ಲಿಸುತ್ತಾನೆ. ವಿದ್ಯಾರ್ಥಿಗಳ ಮತ್ತು ಅವರ ಮನೆಯವರ ಬಳಿ ಸೀಟಿಗಾಗಿ ಹಣ ವಸೂಲಿ ಮಾಡುತ್ತಾನೆ. ಆದರೆ ಈತನ ವ್ಯವಹಾರಗಳು ಯಾವುದು ಫಲಿಸದಿದ್ದಾಗ ಅವರ ಅರ್ಧದಷ್ಟು ಹಣ ವಾಪಸ್ಸು ನೀಡುತ್ತಾನೆ. ಪೂರ್ತಿ ಹಣ ಕೇಳಿದರೆ ಅದು ಮೇಲಿನ ಅಧಿಕಾರಿಗಳಿಗೆ ಕೊಟ್ಟಾಯಿತು ಎಂದು ಹೇಳಿ ಜನರನ್ನು ತೆಪ್ಪಗಾಗಿಸುತ್ತಾನೆ.

ಕಥೆಯಲ್ಲಿ ಮುಖ್ಯವಾಗಿ ಗಾಂಧೀ ಆದರ್ಶಗಳಿಗೆ ಅಪಮೌಲ್ಯವಾಗುವುದನ್ನು ನೋಡಬಹುದು. ವಿದ್ಯೆ ಎಂಬ ಪವಿತ್ರ ಜಲವನ್ನು ಇಂದು ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ವ್ಯವಹಾರೀಕರಣ ಮಾಡುವುದನ್ನು ಕಥೆ ತಿಳಿಸುತ್ತದೆ. ಸಮಾಜ ಸೇವೆ ಮಾಡುವವರು ತಾವು ಮಾಡಿದ ಸೇವೆಗೆ ಯಾವುದೇ ಪ್ರತಿಫಲವನ್ನು ಬಯಸಬಾರದು ಎಂಬ ಗಾಂಧೀ ತತ್ವವು ಅದಕ್ಕೆ ವಿರುದ್ಧವಾಗಿ ಕೆಲಸ ಮಾಡುವುದನ್ನು ಕಾಣಬಹುದು.

'ಸೋನಿಯಾ' ಹೆಣ್ಣಿನ ವ್ಯಕ್ತಿತ್ವ ತಾಯ್ತತನದಲ್ಲಿ ಕೊನೆಯಾಗುವುದನ್ನು ತಿಳಿಸುತ್ತದೆ. 'A little boy is a little boy, but a little girl is a little mother' - (೩)ಎಂಬ ಇಂಗ್ಲೀಷ್ ವಾಕ್ಯದೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಸಮಾಜವು ಒಂದು ಮಗು ಹುಟ್ಟಿದಾಗಲೇ ಲಿಂಗದಿಂದ ಅದನ್ನು ವಿಂಗಡಿಸುವುದಲ್ಲದೆ ಅದನ್ನು ಬೆಳೆಸುವುದರಲ್ಲೂ ಬೇಧವನ್ನು ಅನುಸರಿಸುತ್ತದೆ. ಹೆಣ್ಣು ಮಗುವಿನ ಮೇಲೆ ಹೇಗೆ ಒಂದು ಜವಾಬ್ದಾರಿಯನ್ನಿರಿಸುತ್ತದೆ ಎಂಬುದು ಇಲ್ಲಿ ಕಾಣುತ್ತದೆ. ಆಗ ತಾನೇ ಹುಟ್ಟಿ ಇನ್ನೂ ಜೀವನ ಏನೂ ಎಂದು ಅರಿಯದ ಹೆಣ್ಣು ಮಗುವಿಗೆ ಸಮಾಜ ನೀನು ಹೆಣ್ಣು, ಮುಂದೆ ಹೆಂಡತಿಯಾಗಿ ತಾಯಿಯಾಗುವವಳು ಎಂದು ಒತ್ತಡ ತರುತ್ತದೆ. ಗಂಡಿಗೆ ಓದಿ ವಿದ್ಯಾವಂತನಾಗು ಎಂದು ಹೇಳುವ ವ್ಯವಸ್ಥೆ ಅದೇ ಮಾತನ್ನು ಹೆಣ್ಣಿಗೆ ಏಕೆ ಬೇರೆ ನೀತಿಯನ್ನು ಅನುಸರಿಸುತ್ತದೆ ಎಂಬ ಮಾತನ್ನು ಲೇಖಕಿ ಇಲ್ಲಿ ಕೇಳಿದ್ದಾರೆ.

ಮಿಲಿ ಮತ್ತು ಸೋನಿಯಾ ಆಪ್ತಗೆಳತಿಯರು. ಸೋನಿಯಾ ಬಹಳ ಬುದ್ಧಿವಂತ ಹುಡುಗಿ ಮತ್ತು ತುಂಟಿ ಎಂದು ಶಾಲೆಯಲ್ಲಿ ಹೆಸರಾಗಿದ್ದವಳು. ಈಕೆ ಮಾಡುವ ತುಂಟತನಕ್ಕೆ ಮಿತಿಯೇ ಇರುತ್ತಿರಲಿಲ್ಲ. ಹುಡುಗಿಯರಿಗಷ್ಟೇ ಅಲ್ಲ ಹುಡುಗರಿಗೂ ಈಕೆಯೇ ಲೀಡರ್. ಕ್ರೀಡಾ ಕೂಟಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಸಭೆ ಸಮಾರಂಭಗಳಲ್ಲಿ ಇವಳು ಯಾವಗಲೂ ಮುಂಚೂಣಿಯಾಗಿರುತ್ತಿದ್ದಳು. ನೀರಿನಲ್ಲಿ ಮುಳುಗುತ್ತಿದ್ದ ತಮ್ಮ ಕ್ಲಾಸ್ ಟೀಚರನ್ನು ಧೈರ್ಯದಿಂದ ಕಾಪಾಡಿದವಳು ಸೋನಿಯ. ಎಲ್ಲರ ಕಣ್ಮಣಿಯಾಗಿ ಚುರುಕಾಗಿದ್ದ ಸೋನಿಯ ಇನ್ನು ಮುಂದೆ ಓದಿ ಬೆಳೆಯಬೇಕು, ವೈದ್ಯೆಯಾಗಿ ಬಡ ಜನರ ಸೇವೆ ಮಾಡುವ ಕನಸು ಕಾಣುತ್ತಿದ್ದವಳು, ಮದುವೆಯಾಗುವುದರ ಮೂಲಕ ಶೋಷಣೆಗೆ ಒಳಗಾಗುತ್ತಾಳೆ.

ರಜಪೂತ ಸಂಪ್ರದಾಯಸ್ಥರಾದ ಸೋನಿಯಾ ಮನೆಯವರು ತಮ್ಮ ಆಚಾರ ವಿಚಾರಗಳಿಗೆ ಕಟ್ಟು ಬಿದ್ದು ಮನೆಯಲ್ಲಿರುವ ಮೂವರು ಮುದುಕಿಯರ ಮಾತಿನಂತೆ ಮದುವೆ ಮಾಡುತ್ತಾರೆ. ಎಲ್ಲರೂ ಹೇಳುವಂತೆ ಇವರೂ ಸಹ ಹೆಣ್ಣು ಹೆಚ್ಚು ಕಲಿತರೆ ಅವರ ಜಾತಿಯ ಹುಡುಗ ಸಿಗುವುದಿಲ್ಲ, ಹಿರಿಯವಳಾದ ಇವಳ ವಿವಾಹ ಸರಿಯಾದ ಕಾಲಕ್ಕೆ ಆಗದಿದ್ದರೆ ತಂಗಿಯರ ಮದುವೆಯ ಗತಿಯೇನು ಎಂಬ ಕಾರಣ ನೀಡುತ್ತಾರೆ. ತನಗೆ ತಿಳಿದರೆ ರಂಪ ಮಾಡುತ್ತಾಳೆಂದು ಸೋನಿಯಾಳಿಗೆ ತಿಳಿಯದಂತೆಯೇ ಎಲ್ಲಾ ಏರ್ಪಡಿಸಿ ಮದುವೆ ಮಾಡಿ ಬಿಡುತ್ತಾರೆ. ವೈವಾಹಿಕ ಜೀವನ ಎಂದರೇನು? ಅದರೊಳಗಿನ ವ್ಯವಸ್ಥೆಯ ಗಂಡು–ಹೆಣ್ಣಿನ ಸಂಬಂಧ ಇತ್ಯಾದಿಗಳ ಬಗ್ಗೆ ಅರಿವೇ ಇಲ್ಲದ ಸೋನಿಯ ಇದರೊಳಗೆ ಸಿಲುಕಿ ನಲುಗುತ್ತಳೆ.

ಇದೇ ಸೋನಿಯಾ ಮುಂದೆ ಒಂದು ವರುಷದ ನಂತರ ಊರಿಗೆ ಬಂದಾಗ ಅವಳ ವ್ಯಕ್ತಿತ್ವದಲ್ಲಿ ಮಹತ್ತರ ಬದಲಾವಣೆಗಳಾಗಿರುತ್ತವೆ. ಮದುವೆಗೆ ಹೊಂದಿಕೊಂಡಿಲ್ಲ ಎಂದು ಎಲ್ಲರೂ ಮರುಕ ವ್ಯಕ್ತಪಡಿಸುತ್ತಿರುವಾಗಲೆ ತಾಯಿಯಾಗುತ್ತಾಳೆ. ತನ್ನ ಬಾಳಿನಲ್ಲಿ ಮದುವೆ ಎಂಬುದು ಒಂದು ದುರಂತ ಎಂಬುದನ್ನು ಮರೆತು ವೈವಾಹಿಕ ಜೀವನದಲ್ಲಿ ಸುಖಿಯಾಗಿರಲು ಹೊಂದಿಕೊಳ್ಳುತ್ತಾಳೆ. ಡಾಕ್ಟರ್ ಆಗಬೇಕು ಎಂಬ ಕನಸು ಕಾಣುತ್ತಿದ್ದ ಸೋನಿಯಾಳ ಸಂಪೂರ್ಣ ವ್ಯಕ್ತಿತ್ವ ಮರೆಯಾಗುತ್ತದೆ. ವಿವಾಹದ ಚೌಕಟ್ಟು ಅವಳ ವ್ಯಕ್ತಿತ್ವವನ್ನೇ ಬದಲಾಯಿಸುತ್ತದೆ. ಸಮಾಜದಲ್ಲಿನ ನೀತಿ, ನಿಯಮಗಳು, ಗೊಡ್ಡುಸಂಪ್ರದಾಯಗಳು, ಮೂಢನಂಬಿಕೆಗಳು ಮುಂತಾದವು ಹೆಣ್ಣುಮಕ್ಕಳ ಹುಟ್ಟಿನಂದಿನಿಂದಲೇ ಆಕೆಯ ಮೇಲೆ ಸವಾರಿ ಮಾಡಿ ತಮ್ಮ ಹಿಡಿತ ಸಾಧಿಸುತ್ತ ಸೋನಿಯಾಳಂಥ ಎಷ್ಟೋ ಹುಡುಗಿಯರ ವ್ಯಕ್ತಿತ್ವವನ್ನೇ ಇವು ಮರೆಮಾಡುವುದನ್ನು ಕಾಣಬಹುದು.

'ಒಂದು ಗಿಡ, ಒಂದು ಬಾವಿ' ಮಾನವ ಜೀವಂತವಾಗಿರುವುದಕ್ಕೆ ಬೇಕಾಗಿರುವ ಅತ್ಯಮೂಲ್ಯ ವಸ್ತು ಪರಿಸರ. ನೆಮ್ಮದಿಯ ಬದುಕಿಗಾಗಿ ಮನುಷ್ಯ ಪರಿಸರ ಪ್ರಜ್ಞೆ ಹೊಂದಬೇಕು ಎಂಬುದು ಕಥೆಯ ಮೂಲ. ಕಥೆಯು ಸ್ವಾತಂತ್ರ್ಯ ಬಂದ ಕಾಲ ಮತ್ತು ನಂತರ ಬೆರಗುಗೊಳಿಸುವ ರೀತಿಯಲ್ಲಿ ಬೆಳೆಯುತ್ತಿರುವ ಆಧುನಿಕ ನವ ಯುಗದಿಂದ ಆಗುತ್ತಿರುವ ಪರಿಸರ ನಾಶವನ್ನು ಕುರಿತು ಚರ್ಚಿಸುತ್ತದೆ.

ಭೂತ ಮತ್ತು ವರ್ತಮಾನದ ಮುಖಾಮುಖಿಯಲ್ಲಿ ಭವಿಷ್ಯತ್ತಿನ ಅಸ್ಪಷ್ಟ ಚಿತ್ರಣ ನೀಡುತ್ತದೆ. ನೀರು ಮತ್ತು ಮರ ಕಥೆಯ ಕೇಂದ್ರ ಪಾತ್ರವಾಗುತ್ತವೆ. ಮನುಷ್ಯರು ಜೀವಂತವಾಗಿರುವುದಕ್ಕೆ ಅನುಕೂಲವಾಗಿರುವಂತಹ ಈ ಎರಡೂ ಪವಿತ್ರ ವಸ್ತುಗಳು ತಂತ್ರಜ್ಞಾನದ ಬಳಕೆಯಿಂದ, ಬೆಳೆಯುತ್ತಿರುವ ಜನಸಂಖ್ಯೆಯಿಂದ ಹೇಗೆ ನಾಶವಾಗುತ್ತಿದೆ ಎಂಬುದರ ಚಿತ್ರಣವನ್ನು ಈ ಕಥೆ ನೀಡುತ್ತದೆ. ಸ್ವಾತಂತ್ರ್ಯ ಬಂದ ಕಾಲದಿಂದ ಶುರುವಾಗುವ ಕಥೆ ಇಂದಿನ ಆಧುನಿಕ ಯುಗದ ಮೂಲಕ ಮುಂದಿನ ಪೀಳಿಗೆಯ ಕಡೆಗೆ ಸಾಗುತ್ತದೆ. ಕಾಲಕಾಲಕ್ಕೂ ಬದಲಾಗುವ ಸಮಾಜದ ಪರಿಸ್ಥಿತಿಯನ್ನು ಕಥೆ ತೆರೆದಿಡುತ್ತದೆ. ಕಥೆಯ ಪ್ರಮುಖ ಪಾತ್ರವಾದ ಬಾವಿಯು ತನ್ನ ಸುತ್ತ ನಡೆಯುವ ಹಲವಾರು ಚಟುವಟಿಕೆಗಳನ್ನು ಗಮನಿಸುತ್ತ ತನ್ನ ಅನುಭವವನ್ನು ಸ್ವಗತದ ರೀತಿ ಹೇಳುವ ಮೂಲಕ ಮೊದಲುಗೊಳ್ಳುತ್ತದೆ. ಸ್ವಾತಂತ್ರ್ಯ ಚಳುವಳಿ ನಡೆಯುವ ಸಂದರ್ಭದಲ್ಲಿ ಗಾಂಧೀಜಿಯವರು ಬಂದಾಗ ಬಾವಿ ನಿರ್ಮಿತವಾಗುತ್ತದೆ. ಊರಿನಿಂದ ದೂರವಾಗಿ ಹೊಸದಾಗಿ ನಿರ್ಮಾಣಗೊಂಡಿರುವ ಹಲವು ಬಡಾವಾಣೆಯ ಜನರ ಅನುಕೂಲಕ್ಕಾಗಿ ಇದು ನಿರ್ಮಿತವಾಗುತ್ತದೆ. ಸ್ವತಂತ್ರ್ಯ ಬಂದ ನೆನಪಿಗಾಗಿ ಬಾವಿಯ ಪಕ್ಕ ಒಂದು ಗಿಡವನ್ನು ನೆಡುತ್ತಾರೆ. ಇವೆರಡರ ಸ್ನೇಹ ಬಾಂದವ್ಯವು ಒಂದಕ್ಕೊಂದು ಪೂರಕವಾಗಿರುವುದು ಕಥೆಯಲ್ಲಿ ವ್ಯಕ್ತವಾಗುತ್ತದೆ. ಸ್ವಾತಂತ್ರ್ಯ ಬಂದ ನಂತರದ ಹಲವು ವರ್ಷಗಳಲ್ಲಿ ಜನರು ಮತ್ತು ಅವರ ರೀತಿ, ನೀತಿಗಳು ಬಾವಿಯ ಸುತ್ತ ಮುತ್ತಲಿನ ಪರಿಸರದೊಂದಿಗೆ ಹೇಗೆ ವೇಗವಾಗಿ ಬದಲಾಗುತ್ತವೆ ಎಂಬುದನ್ನು ಬಾವಿಯು ನೆನಪಿಸಿಕೊಳ್ಳುತ್ತದೆ.

ಹಿಂದೆ ಆ ಕಾಲದಲ್ಲಿ ಗಿಡ ನೆಟ್ಟಂತಹ ಸಂದರ್ಭದಲ್ಲಿ ರಾತ್ರಿ ಮಳೆ ಸುರಿಯುತದೆ. ಮುಂದೆ ಐವತ್ತು ವರ್ಷಗಳಲ್ಲಿ ಮತ್ತೆ ಈ ರೀತಿಯ ಮಳೆಯಾಗುವುದಿಲ್ಲ ಎಂದು ಬಾವಿ ನುಡಿಯತ್ತದೆ. ಹಿಂದೆ ಇದ್ದ ಸಮೃದ್ಧ ಜೀವನವನ್ನು ಇದು ನೆನಪಿಸುತ್ತದೆ. ಸ್ವದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಒಂದು ಸಂತೋಷವಾದರೆ, ಅದಕ್ಕೆ ಪುಷ್ಠಿ ನೀಡುವಂತೆ ಮಳೆ ಸುರಿದದ್ದು ಮತ್ತೊಂದು ಸಂತೋಷಕ್ಕೆ ಕಾರಣವಾಗುತ್ತದೆ. ಆದರೆ ಆನಂತರದ ಬದಲಾದ ಪರಿಸರದಲ್ಲಿ ಭಾರಿ ಮಳೆ ಮತೆಂದೂ ಸುರಿಯದಿದ್ದದ್ದು ದುಃಖದಾಯಕವಾಗಿ ಇಲ್ಲಿ ನಮ್ಮನ್ನು ಕಾಡುತ್ತದೆ.

ಗಿಡ ನೆಟ್ಟ ಸಂದರ್ಭದಲ್ಲಿ ಮೊದಲು ಬಾವಿಯ ಬಳಿಗೆ ಹಳ್ಳಿಯ ಮುಗ್ಧ ಹುಡುಗಿಯರು ಕೊಡದೊಂದಿಗೆ ನೀರಿಗೆಂದು, ವಿದ್ಯಾಭ್ಯಾಸವೇ ಮುಖ್ಯವೆಂದು ನಂಬಿದ್ದ ವಿದ್ಯಾರ್ಥಿಗಳು, ಉತ್ತಮ ಶಿಕ್ಷಣ ನೀಡುವುದೇ ಶಿಕ್ಷಣದ ಗುರಿ ಎಂಬಂತಿದ್ದ ಗುರುಗಳು, ಹಲವು ಜೋಡಿ ಪ್ರೇಮಿಗಳು ಮುಂತಾದವರು ಬರುತ್ತಿದ್ದರು. ಗಿಡ ಬೆಳೆಯುತ್ತಾ ಹೋದಂತೆ ಮೊದಲು ಇದ್ದಂತಹ ಪ್ರಶಾಂತ ವಾತಾವರಣ ಬದಲಾಗುತ್ತದೆ. ಗಿಡ ಮೈದುಂಬಿ ಬೆಳೆಯುವುದನ್ನು ನೋಡುವ ಬಾವಿಗೆ ಈ ಕಾಲ ಅತ್ಯಂತ ಸುಖಮಯವಾದ ದಿನಗಳಾಗಿ ಕಾಣುತ್ತದೆ.

ನಾಗರೀಕತೆ ಎಂಬುದು ಬೆಳೆದಂತೆಲ್ಲಾ ಬಾವಿಯಲ್ಲಿರುವ ನೀರು ಕಲುಷಿತವಾಗುತ್ತದೆ. ಬಾವಿಯ ನೀರನ್ನು ಬಳಸುತ್ತಿದ್ದ ಜನರೆಲ್ಲರೂ ಇಂದು ಕೊಳವೆ ಬಾವಿಗಳಿಂದ, ನಲ್ಲಿಗಳಿಂದ ನೀರು ಪಡೆದುಕೊಳ್ಳುತ್ತಾರೆ. ಅನುಪಯುಕ್ತ, ವಿಷಕಾರಿ ವಸ್ತುಗಳನ್ನು ತಂದು ಬಾವಿಗೆ ಹಾಕುತ್ತಿದ್ದರು. ಒಂದು ಕಾಲದಲ್ಲಿ ಜನರ ಸಂಪರ್ಕದಿಂದ ತುಳುಕುತ್ತಿದ್ದ ಬಾವಿ ಈಗ ನಿವೃತ್ತಿ ಹೊಂದಿದ ಮುದುಕರ ಹರಟೆಯ ಕಟ್ಟೆ ಆಗಿದೆ. ನಿವೃತ್ತಿ ಹೊಂದಿದ ಇವರು ತಾವು ನೌಕರಿಯಲ್ಲಿದ್ದಾಗ ಇದ್ದ ದೇಶದ ಸುಭೀಕ್ಷತೆಯ ಬಗ್ಗೆ ಮತ್ತು ಇಂದಿನ ನವ ನಾಗರೀಕತೆಯ ಬಗ್ಗೆ ಮಾತನಾಡುತ್ತಾರೆ. ಮೊದಲಿಗೆ ಮರದ ನೆರಳಿನಲ್ಲಿ ಒಂದು ಸೀಮೆಂಟು ಬೆಂಚು ಹಾಗೂ ಬಸ್ ನಿಲ್ದಾಣ ಬರುತ್ತದೆ. ಇಲ್ಲಿ ದಿನವೊಂದಕ್ಕೆ ಹಲವಾರು ರೀತಿಯ ಜನ ಬಂದು ಹೋಗುತ್ತಿದ್ದರು. ಪ್ರೇಮಿಗಳು, ವಯಸ್ಸಾದ ದಂಪತಿಗಳು, ಸಾಹಿತ್ಯ ಪ್ರೇಮಿಗಳು ಮುಂತಾದವರು ಬಂದು ಇಲ್ಲಿ ಕುಳಿತು ಮಾತನಾಡುತ್ತಿದ್ದರು. ಆದರೆ ಇಂದಿನ ಆಧುನಿಕತೆಯ ಸಂದರ್ಭದಲ್ಲಿ ಈ ಎಲ್ಲಾ ದಿನಗಳು ಕಳೆದು ಹೋಗಿವೆ. ಜನಕ್ಕೆ ಈಗ ಕೂತು ಮಾತನಾಡುವಷ್ಟು ಸಮಯ ಇಲ್ಲವಾಗಿದೆ. ಮರ ಮತ್ತು ಬಾವಿಯ ಸುತ್ತ ಮುತ್ತ ಅನೇಕ ಅಂಗಡಿಗಳು ತಲೆ ಎತ್ತಿ ನಿಂತಿವೆ. ಮೊದಲಿನ ಹಸಿರಾಗಲೀ, ಶಾಂತಿಯಾಗಲಿ, ಸಮಾಧಾನವಾಗಲೀ ಈಗ ಇಲ್ಲ. ಬಸ್ಸು- ಟ್ರಕ್ಕುಗಳ ಬಿರುಸಿನ ಹೋರಾಟದಲ್ಲಿ ಮರ ತನ್ನ ಕಾಂತಿಯನ್ನು ಕಳೆದುಕೊಂಡಿದೆ. ಮೊದಲಿದ್ದ ಏಕಾಂತವು ಈಗ ಮರ ಮತ್ತು ಬಾವಿಗೆ ಇಲ್ಲವಾಗಿದೆ. ಸದಾ ಗಿಜಗುಡುವ ಜನಜಂಗುಳಿ, ಡಬ್ಬಿ ಅಂಗಡಿಗಳು, ಐಸ್ಕ್ರೀಂ ಪಾರ್ಲರ್‌ಗಳು, ಆಟೋರಿಕ್ಷಾ ಮೊದಲಾದವುಗಳಿಂದ ಬಾವಿಗೆ ಉಸಿರು ಕಟ್ಟಿದ ಅನುಭವವಾಗುತ್ತಿದೆ. ಹಲವು ಬದಲಾವಣೆಗಳ ನಡುವೆ ಯಾವುದೇ ಕಾಮಗಾರಿಯ ನೆಪದಲ್ಲಿ ಜನರು ಮರವನ್ನು ಕಡಿದು ಉರುಳಿಸುತ್ತಾರೆ. ಸ್ವಾತಂತ್ರ್ಯ ಬಂದ ನೆನಪಿಗಾಗಿ ನೆಟ್ಟಂತಹ ಮರ ಇಂದು ಅದರ ಗುರುತು ಇಲ್ಲದಂತೆ ನಾಶವಾಗಿದೆ. ಬಾವಿಗೆ ಇದು ತುಂಬಲಾರದ ನಷ್ಟವಾಗುತ್ತದೆ.

ಹಲವು ಕಾಲಗಳ ಜೊತೆಗಿದ್ದ ಸಂಗಾತಿಯನ್ನು ಕಳೆದುಕೊಂಡು ಬಾವಿ ಬಹಳ ವ್ಯಥೆ ಪಡುತ್ತದೆ. ಮರದಂತೆಯೇ ಒಂದು ದಿನ ತಾನು ಈ ನಾಗರೀಕತೆಯ ಸುಳಿಗೆ ಸಿಲುಕಿ ಸಾಯಬೇಕಾಗುತ್ತದೆ. ಒಂದು ಕಾಲದಲ್ಲಿ ಒಂದು ಬಾವಿ ಇಲ್ಲಿತ್ತು ಎಂಬ ನೆನಪು ಉಳಿಯದಂತೆ ಇವರು ಮಾಡುತ್ತಾರೆ ಎಂಬುದನ್ನು ನೆನೆದು ಅದು ಮರದಂತೆ ತನ್ನ ದುಃಸ್ಥಿತಿಗೆ ಮರುಗುತ್ತದೆ. ಮರು ಕ್ಷಣದಲ್ಲಿಯೇ ನಾಗರೀಕತೆಯ ಈ ಜಂಜಾಟಗಳಲ್ಲಿ ಮರದಂತೆ ತನಗೂ ಒಂದು ಮುಕ್ತಿ ದೊರೆತರೆ ಸಾಕೆಂದು ಹಂಬಲಿಸುತ್ತದೆ.

ಯಂತ್ರ ನಾಗರೀಕತೆಯ ಮಾನವನ ನಿಜ ಸ್ವರೂಪದ ಅರಿವು ಈಗ ಬಾವಿಗಾಗಿದೆ. ಅದರಿಂದ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಭಯವಾಗಿದೆ. ಕಾಂಕ್ರೀಟ್ ಕಾಡಿನಲ್ಲಿ ಒಂದು ಹೂ ಸಹ ಅರಳಲು ಸಾಧ್ಯಾವಿಲ್ಲ ಎಂಬುದು ಬಾವಿಯ ಅನಿಸಿಕೆಯಾಗಿದೆ. ಇಂದಿನ ಪ್ರಮುಖ ಸಂಸ್ಕೃತಿಯೆಂದು ಗುರುತಿಸಲ್ಪಡುತ್ತಿರುವ ಪಬ್ಬು-ಬಾರುಗಳು ಅದರೊಳಗೆ ಸಿಲುಕಿ ಅವನತಿ ಹೊಂದುವ ಜನರ ಬಗ್ಗೆ ಬಾವಿಗೆ ತಿರಸ್ಕಾರವುಂಟಾಗಿರುವುದನ್ನು ನಾವು ಗಮನಿಸಬಹುದಾಗಿದೆ.

ಇಲ್ಲಿ ಬಾವಿ, ನಿರ್ಜೀವ ವಸ್ತುವಾಗಿದ್ದರೂ ಅದಕ್ಕೆ ಈ ನಾಗರೀಕತೆಯ ಅಂತ್ಯದ ಅರಿವಿದೆ. ಆದರೆ ಪರಿಸರವನ್ನೇ ಜೀವವಾಗಿಸಿಕೊಂಡಿರುವ ಅದರಿಂದ ಜೀವಂತವಾಗಿರುವ ಮನುಷ್ಯನಿಗೆ ಅವುಗಳ ಬಗ್ಗೆ ಕಾಳಜಿ ಇಲ್ಲ. ಇವುಗಳು ಇದೇ ರೀತಿ ನಾಶವಾದರೆ ಮುಂದೆ ಜೀವನ ಹೇಗೆ? ಬದುಕುವುದು ಹೇಗೆ? ಎಂಬಿತ್ಯಾದಿ ಪ್ರಶ್ನೆಗಳು ಬಾವಿಗೆ ಕಾಡಿದಂತೆ ಯೋಚನೆ ಮಾಡಲು ಶಕ್ತಿ ಇರುವ ಸುಸಂಸ್ಕೃತನಾದ ಮಾನವನಿಗೆ ಇಲ್ಲದಿರುವುದರ ಬಗ್ಗೆ ಲೇಖಕಿ ಈ ಕಥೆಯಲ್ಲಿ ಪರಿಸರ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಈ ಎಲ್ಲಾ ಕಥೆಗಳನ್ನು ಗಮನಿಸಿದಾಗ ನಮಗೆ ಮುಖ್ಯವಾಗಿ 'ಅನಾಥೆ'ಯಲ್ಲಿ ಅನಾಥಾಲಯದ ದೌರ್ಜನ್ಯವನ್ನು, 'ದ.ಬಾ.'ಕ್ರಿಷ್ಟಪ್ಪ'ದಲ್ಲಿ ಕಾಲ ಬದಲಾಗುವುದಿಲ್ಲ ಎಂಬುದಕ್ಕೆ ಮೊಮ್ಮಗನ ಸಾಕ್ಷಿ. 'ಧೈರ್ಯದ ಮನುಷ್ಯ'ದಲ್ಲಿ ಅಸಹ್ಯ ತರಿಸುವ ಕಟು ವಾಸ್ತವತೆಯನ್ನು, 'ಹರಿದು ಬಾ ತಾಯಿ' ಯಲ್ಲಿ ಬದಲಾಗುವ ಸರ್ಕಾರಗಳಂತೆ ಬದಲಾಗುವ ಅಧಿಕಾರಿಗಳು, ಅವರ ಭ್ರಷ್ಟತೆಯನ್ನು ಮತ್ತು ಶೋಷಿತರ ಅಸಹಾಯಕತೆಯನ್ನು, 'ಮುಂದಾಳುವಿನ ಜನತಾ ಸೇವೆ'ಯಲ್ಲಿ ಗಾಂಧೀ ಆದರ್ಶಗಳ ಅಪಮೌಲ್ಯ, 'ಸೋನಿಯಾ'ದಲ್ಲಿ ಹೆಣ್ಣಿನ ವ್ಯಕ್ತಿತ್ವದ ಕೊಲೆಯನ್ನು, 'ಒಂದು ಗಿಡ, ಒಂದು ಬಾವಿ'ಯಲ್ಲಿ ಪರಿಸರ ಕಾಳಜಿಯನ್ನು ಹೀಗೆ ಹಲವು ವಸ್ತು ವೈವಿಧ್ಯಗಳೊಂದಿಗೆ ಕಥೆಗಳು ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುತ್ತವೆ.

ಕೊನೆ ಟಿಪ್ಪಣಿ.

(1)ಅನಾಥೆ :	ನಡೆದದ್ದೇ ದಾರಿ :	ವೀಣಾಶಾಂತೇಶ್ವರ :	:ಪುಟ 239
(2) ಹರಿದು ಬಾ ತಾಯಿ :	ನಡೆದದ್ದೇ ದಾರಿ :	ವೀಣಾಶಾಂತೇಶ್ವರ	:ಪುಟ 435
(3) ಸೋನಿಯಾ:	,, :	,,	:ಪುಟ 439

ಅಧ್ಯಾಯ– ೪.೨

ಪುರುಷ ಚಿಂತನೆಗಳ ನಿರಾಕರಣೆಯಲ್ಲಿ ವೀಣಾರವರ ಚಿಂತನೆಗಳು.

ಭಾರತೀಯ ಸಮಾಜದಲ್ಲಿ ಹೆಣ್ಣಿನ ವ್ಯಕ್ತಿತ್ವ ಎಂಬುದು ಹಲವಾರು ನಿರೀಕ್ಷೆಗಳಲ್ಲಿ ಹರಿದು ಹಂಚಿ ಹೋಗಿದೆ. ಆದ್ದರಿಂದ ಇವುಗಳ ನಡುವೆ ಆಕೆಯ ನೆಲೆ ಯಾವುದು ಎಂಬ ಸತ್ಯವನ್ನು ಶೋಧಿಸುವ ಪ್ರಯತ್ನ ವೀಣಾ ಅವರ ಸಾಹಿತ್ಯದಲ್ಲಿ ಕಂಡುಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಅಸ್ಥಿತ್ವದ ಬಗ್ಗೆ ಅನೇಕ ವಾಗ್ವಾದಗಳು ಚರ್ಚೆಗಳಾತ್ತಿವೆ. ಆದರೆ ವೀಣಾರವರ ಕಥೆಗಳು ಹೆಣ್ಣಿನ ಅಸ್ಥಿತ್ವ, ಅವಳ ಸ್ವಾತಂತ್ರ್ಯ, ಹಕ್ಕುಗಳನ್ನು ಪ್ರತಿಪಾದಿಸುತ್ತವೆ. ವೀಣಾರವರು ತಮ್ಮ ಕಥೆಗಳಲ್ಲಿ ಪುರುಷ ಚಿಂತನೆಗಳನ್ನು ಹೇಗೆ ನಿರಾಕರಿಸುತ್ತಾರೆ ಎಂಬುದನ್ನು ಇವರ 'ಗಂಡಸರು' ಕಾದಂಬರಿಯಲ್ಲಿ 'ಅವಳ ಸ್ವಾತಂತ್ರ್ಯ', 'ಕೊನೆಯ ದಾರಿ', ' ಹೆಣ', 'ಹೊರಟು ಹೋದವನು', 'ನೀನೇ ತಂತಿ', 'ಬಿಡುಗಡೆ', 'ಮರೀಚಿಕೆ' ಮುಂತಾದ ಕಥೆಗಳಲ್ಲಿ ನಾವು ಕಾಣಬಹುದು.

ವೀಣಾರವರ 'ಗಂಡಸರು' ಕಾದಂಬರಿಯನ್ನು ಓದಿದಾಗ ನಿಷ್ಠಾವಂತ ಪ್ರೇಮಿಗಳಂತೆ ಸೋಗು ಹಾಕುವ ಗಂಡಸರ ದುರ್ಬುದ್ಧಿ, ಅಸಹ್ಯ ತರಿಸುವಷ್ಟು ಪರಿಣಾಮಕಾರಿಯಾಗಿದೆ. "ತನಗೆ ಬೇಕಾದದ್ದು ನಿಜವಾದ ಪ್ರೀತಿ, ಎಲ್ಲಾ ಪರಿಸ್ಥಿತಿಯಲ್ಲೂ ಒಂದೇ ಸಮವಾದ ಪ್ರೀತಿ". (೧) ಎಂಬುದು ಕಾದಂಬರಿಯ ಕೇಂದ್ರ ಪಾತ್ರವಾದ ಶಾಂತಿಯ ಹಂಬಲ, ಹೆಣ್ಣು ಸಂಪೂರ್ಣವಾದ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂಬ ವಿಚಾರವನ್ನು ತನ್ನ ಎಳೆಯ ವಯಸ್ಸಿನಿಂದಲೇ ಮನಸ್ಸಿನಲ್ಲಿ ತುಂಬಿಕೊಂಡ ಹುಡುಗಿ.

ಶಾಂತಿ ಶಾಲಾ ಹುಡುಗಿಯಾಗಿದ್ದಾಗಲೇ ತನ್ನ ವ್ಯಕ್ತಿತ್ವ ಸ್ವಾತಂತ್ರ್ಯಕ್ಕೆ ಅಡ್ಡಿ ಬಾರದಂತೆ ಪುರುಷನಾದ ಶಂಕರನ ಬಳಿ ಮಾತನಾಡುತ್ತಿದ್ದವಳು. ಕಥೆಯ ಆರಂಭದಲ್ಲಿ ತಾನು ಪ್ರೀತಿಸುವ ಹುಡುಗನಾದ ಶಂಕರ ತನ್ನ ರೂಮಿಗೆ ಬಂದಿದ್ದಕ್ಕೇ ಆಕ್ಷೇಪ ವ್ಯಕ್ತಪಡಿಸುವಂತಹ ದಿಟ್ಟ ಹುಡುಗಿ. ತನ್ನ ಸಮ ವಯಸ್ಕನಾದ ಶಂಕರನನ್ನು ಓದಿನಲ್ಲೂ ಸಹ ಹಿಂದೆ ಹಾಕಬೇಕು ಎಂಬುದು ಇವಳ ಹಟ. ಟೆಕ್ನಾಲಜಿ ಓದಿದ ಶಂಕರ ಇವಳಿಗೆ 'I love you' ಎಂದು ಪತ್ರ ಬರೆದಾಗ ಅದನ್ನು ಓದಿದ ಶಾಂತಿ ಗಂಡು ಹುಡುಗರು ಚಿಕ್ಕ ವಯಸ್ಸಿನಲ್ಲಿ ಹುಡುಗಾಟಿಕೆಗೆ ಈ ರೀತಿ ಬರೆಯುತ್ತಾರೆ. ಅವರಿಗೆ ಸಿನ್ಸಿಯಾರಿಟಿ ಇರುವುದಿಲ್ಲ, ಹುಡುಗಿಯರು ಇದಕ್ಕೆ ಸೊಪ್ಪು ಹಾಕಬಾರದೆಂದು ಅಭಿಪ್ರಾಯ ಪಡುತ್ತಾಳೆ. ಅಂದು ರಾತ್ರಿ ಡೈರಿಯಲ್ಲಿ ಶಾಂತಿ "ನಮ್ಮ ಹಿಂದೂ ಹೆಂಗಸರು ಈ ಅನ್ಯಾಯ, ಅತ್ಯಾಚಾರಗಳನ್ನು ಇನ್ನು ಸಹಿಸಬಾರದು, ಅವರಿನ್ನು ಈ ಕಟ್ಟುಪಾಡುಗಳ ವಿರುದ್ಧ ಬಂಡೇಳಬೇಕು, ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಸ್ವಾತಂತ್ರ್ಯ ಸಿಗುವವರೆಗೂ ಹೋರಾಟ ನಿಲ್ಲಿಸಬಾರದು" ಎಂದು ಬರೆಯುತ್ತಾಳೆ.(೨)

ಈ ರೀತಿ ಬರೆದ ಶಾಂತಿಯೇ ಮುಂದೆ ಶಂಕರನಿಂದ ಹಲವು ಪತ್ರಗಳು ಬಂದಾಗ ಆವನ ಪ್ರೀತಿಗೆ ಸೋಲುತ್ತಾಳೆ. ತಾನೂ ಅವನಿಗೆ ಪತ್ರ ಬರೆದು ತನ್ನ ಪ್ರೀತಿ ತಿಳಿಸುತ್ತಾಳೆ. ಪ್ರೀತಿಸಲು ಅನುಮತಿ ನೀಡಿದರೂ ಶಂಕರನಿಗೆ ತನ್ನ ಕೈ ಮುಟ್ಟುವುದಕ್ಕು ಅವಕಾಶ ನೀಡುವುದಿಲ್ಲ. ತನ್ನ ಎಲ್ಲಾ ನೋಟ್ ಬುಕ್ಕಿನಲ್ಲೂ 'ಶ್ರೀ

ಶಂಕರ ಪ್ರಸನ್ನ' ಎಂದು ಬರೆದು ಶಂಕರನೇ ತನ್ನ ಪತಿ ಎಂಬ ಸುಂದರ ಕನಸು ಕಟ್ಟಿಕೊಂಡಿದ್ದಳು. ಆ ಕನಸಿನಿಂದ ಭ್ರಮನಿರಸಗೊಳ್ಳುವ ಪ್ರಸಂಗವೂ ಬರುತ್ತದೆ. ಆಗ ಈಕೆ ಶಂಕರ ಬರೆದಿದ್ದ ಪತ್ರಗಳನ್ನು ಮತ್ತು ತಾನು ಇತ್ತೀಚೆಗೆ ಪೂಜಿಸುತ್ತಿದ್ದ ಶಿವ-ಪಾರ್ವತಿಯರಿದ್ದ ಕಾಗದದ ಪಟವನ್ನು ತೆಗೆದು ಅವುಗಳನ್ನು ಸುಟ್ಟು ಹಾಕುತ್ತಾಳೆ. ಕಾಲೇಜಿನ ಸಮಾರಂಭವೊಂದರಲ್ಲಿ ಸ್ತ್ರೀಯರ ಸ್ವಾತಂತ್ರ್ಯದ ಬಗ್ಗೆ ಮಾತನಾಡಿ ಎಲ್ಲರ ಪ್ರಶಂಸೆಗೆ ಗುರಿಯಾಗುತ್ತಾಳೆ. ಇದೇ ವಿಷಯಕ್ಕೆ ಶಂಕರ ಮತ್ತು ಅವಳ ನಡುವೆ ಭಿನ್ನಾಭಿಪ್ರಾಯ ಮೂಡುತ್ತದೆ. ಶಂಕರನ ಪ್ರಕಾರ ಸ್ತ್ರೀಯೊಬ್ಬಳು ಮಹಿಳಾ ಸ್ವಾತಂತ್ರ್ಯದ ಬಗ್ಗೆ ಮಾತನಾಡುವುದು ಅಪರಾಧ. ಇದರಿಂದ ಶಂಕರ ಮತ್ತು ಆತನ ತಾಯಿಯ ಆಕ್ಷೇಪಣೆಗೆ ಒಳಗಾಗಿ ಹುಡುಗಿ ಓದಿದವಳು ತುಂಬ 'Bold' ಎಂಬ ಕಾರಣದಿಂದ ಆತನೊಂದಿಗಿನ ಮದುವೆಯಿಂದ ತಿರಸ್ಕರಿಸಲ್ಪಡುತ್ತಾಳೆ. ಶಾಂತಿಯ ತಂದೆ ತಾಯಿಗೆ ಇದು ದುಃಖಕರವಾದ ವಿಷಯ. ಆದರೆ ಶಾಂತಿ ಇಂತಹ ವಂಚಕನಿಂದ ಪಾರಾದದ್ದೇ ತನ್ನ ಪುಣ್ಯವೆಂದುಕೊಂಡು ನಿಟ್ಟುಸಿರು ಬಿಡುತ್ತಾಳೆ.

ಶಾಂತಿಯ ಸ್ತ್ರೀ ಸ್ವಾತಂತ್ರ್ಯದ ಹೋರಾಟದಲ್ಲಿ ಸಹಾಯ ಮಾಡುವವನಂತೆ ಬರುವ ಮತ್ತೊಂದು ಪುರುಷ ಪ್ರೊ. ಮಠದ್. ಕಾಮ ಎಂಬ ಹೆಸರಿನಿಂದ ಸ್ತ್ರೀ ವಿಮೋಚನೆಯ ಬಗ್ಗೆ ಕಾದಂಬರಿ ಬರೆಯುವವನು. 'I am a strong supporter of the women's lib' ಎಂಬುದು ಇವನ ನಾಲಿಗೆಯ ತುದಿಯಲ್ಲೇ ಇರುವ ಮಂತ್ರ. ತನ್ನ ಎಲ್ಲಾ ಕಾದಂಬರಿಗಳಲ್ಲೂ ಮಹಿಳೆಯರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಶ್ನೆಯನ್ನು ಎತ್ತುವವನು. ಮಹಿಳೆಯರ ವಿಮೋಚನೆಯ ಬಗ್ಗೆ ಆಸಕ್ತಿ ಇರುವ ಮಠದ್ ಬಗ್ಗೆ ಶಾಂತಿಗೆ ಒಲವು ಬೆಳೆಯುತ್ತದೆ.

"ಗೊತ್ತು-ಗುರಿ ಇಲ್ಲದ ಅಲೆಮಾರಿ ಬಾಳಾಗಿತ್ತು ನನ್ನದು ಇಷ್ಟು ದಿನ. ನೂರು ಆದರ್ಶಗಳನ್ನು ಕಟ್ಟಿಕೊಂಡು ಆಯುಷ್ಯದುದ್ದಕ್ಕೂ ಏಕಾಂಗಿಯಾಗಿ ಹೋರಾಡುತ್ತ ಬಂದಿರುವೆ ನಾನು. ಗುರಿ ತಲುಪಬೇಕೆನ್ನುವ ಛಲ, ಏನು ಬಂದರೂ ಎದುರಿಸಿಯೆನೆಂಬ ಧೈರ್ಯ ಹಿಡಿದ ತತ್ವಗಳನ್ನು ಎಂದಿಗೂ ಬಿಡಲಾರೆನೆಂಬ ವಿಶ್ವಾಸ, ಯಾರಿಗೂ, ಯಾತಕ್ಕೂ, ಎಂದಿಗೂ ಅಂಜಲಾರದ ಕೆಚ್ಚು ನನಗೆ ಮೊದಲು ಇತ್ತು, ಈಗಲೂ ಇದೆ, ಎಂದಿಗೂ ಇರುತ್ತದೆ. ಆದರೆ ನನಗೆ ಏನು ಇರಲಿಲ್ಲ ಯಾವುದರ ಕೊರತೆಯಿತ್ತು, ಅನ್ನುವುದು ನಿಮ್ಮನ್ನು ಕಂಡ ತಕ್ಷಣ ನನಗೆ ತಿಳಿಯಿತು. ನನ್ನ ಬರವಣಿಗೆ, ನನ್ನ ಆದರ್ಶ, ತತ್ವಗಳು, ನನ್ನ ಇಡೀ ಜೀವನ-ಎಲ್ಲದರ ಕೇಂದ್ರ ಬಿಂದು ನೀವು, ನೀವಿಲ್ಲದೆ ಈ ಯಾವುದಕ್ಕೂ ಏನು ಅರ್ಥವಿಲ್ಲ. ಹೇಳಿ ನೀವು ನನಗೆ ಬೆಳಕಾಗುತ್ತೀರಾ? ಗಾಳಿಯಾಗುತ್ತಿರಾ? ಅರ್ಥವಾಗುತ್ತೀರಾ?" (೩) ಎಂದು ನಾನಾ ನಮೂನೆ ಪ್ರಶ್ನಿಸುತ್ತಾ ಅವಳ ಮಂಕುತನವನ್ನು, ಹಿಮಾಲಯದಂತಹ ವೇದನೆಯನ್ನು ಕರಗಿಸುವಲ್ಲಿ ಸಫಲನಾಗಿದ್ದ, ಶಾಂತಾಳಿಗೆ ಇದುವೇ ತನ್ನ ಶೋಧನೆಗೆ ಮುಕ್ತಾಯವೆನಿಸಿತ್ತು. ತಾನು ಎಂದೂ ಅವಳ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವುದಿಲ್ಲ ಎಂದು ಹೇಳಿ ಅವಳ ಮೇಲೆ ಮೋಡಿ ಮಾಡುತ್ತಾನೆ.

ಈ ರೀತಿ ಅವಳನ್ನು ತನ್ನ ಮೋಡಿಗೆ ತೆಗೆದುಕೊಂಡ ಮಠದ್ ಶಾಂತಿ ತನ್ನೊಡನೆ ದೈಹಿಕವಾಗಿ ಅಂತರ ಕಾಯುತ್ತಿದ್ದಾಳೆ ಎಂದು ಅಭಿಪ್ರಾಯ ಪಡುತ್ತಾನೆ. ದೈಹಿಕ ಸಂಪರ್ಕಕ್ಕೆ ಒಳಗಾಗದೆ ತಮ್ಮ ಪ್ರೀತಿ ಅಪೂರ್ಣವಾಗಿದೆ ಎಂದು ಅವಳ ಮೇಲೆ ಒತ್ತಡ ತರುತ್ತಾನೆ. ಶಾಂತಿಯ ಪರೀಕ್ಷೆಯ ಫಲಿತಾಂಶ ಬಂದಾಗ ಆಕೆಯನ್ನು ಅಭಿನಂದಿಸಿ ಪತ್ರ ಬರೆದ ಮಠದ್ ಆಕೆಯನ್ನು ತನ್ನ ಮಾತಿನಲ್ಲಿ ಎಚ್ಚರಿಸುತ್ತಾನೆ. ಕೇವಲ ಮಾತಿನಲ್ಲಿ ಮಾತ್ರ ಸ್ತ್ರೀ ಸ್ವಾತಂತ್ರ್ಯ, ವಿಮೋಚನೆ ಬಗ್ಗೆ ಮಾತನಾಡುವ ಶಾಂತಿ ಪಾಪ-ಪುಣ್ಯಗಳ ನೀತಿ-

ನಿಯಮಗಳಿಂದ ಹೊರ ಬರದ ಧರ್ಮಿಷ್ಟೆ, ಆಕೆಯ ಕೆಚ್ಚು ಆದರ್ಶ, ಧ್ಯೇಯದ ಮಾತುಗಳೆಲ್ಲವು ಸುಳ್ಳು ಎನ್ನುತ್ತಾನೆ. ಇದರಿಂದ ಒಂದು ರೀತಿಯ ಚಿಂತೆಗೀಡಾದ ಶಾಂತಿ 'Take all, give all' ಎಂಬ ನಿರ್ಧಾರಕ್ಕೆ ಬರುತ್ತಾಳೆ. ರಜೆಯಿಂದ ಮರಳಿ ಬಂದ ಶಾಂತಿ ಗೆಳತಿ ಜಯಶ್ರೀಯನ್ನು ಭೇಟಿ ಮಾಡಿದಾಗ ಆಕೆ ತಾನು ಒಬ್ಬ ವ್ಯಕ್ತಿಯಿಂದ ಮೋಸ ಹೋಗಿರುವುದನ್ನು ತಿಳಿಸುತ್ತಾಳೆ. ಮತ್ತು ಅದೇ ವ್ಯಕ್ತಿ ರಮಾ ಎಂಬ ಹುಡುಗಿಗೂ ಮೋಸ ಮಾಡಿರುವುದನ್ನು ತಿಳಿಸುತ್ತಾಳೆ. ಜಯಶ್ರೀಗೆ ಬಂದ ಕಾಗದವನ್ನು ನೋಡಿದಾಗ ಶಾಂತಿಗೆ ಆ ಬರಹ ತನಗೆ ಪರಿಚಿತವಾದದ್ದು ಅದು ತನ್ನ ಪ್ರೇಮಿ ಮಠದ್‌ನ ಬರಹ ಎಂದು ಗೊತ್ತಾದಾಗ ತಾನು ಮೋಸ ಹೋಗುತ್ತಿರುವುದು ತಿಳಿಯುತ್ತದೆ. ಮಠದ್ ನ ಭ್ರಮರ ಬುದ್ಧಿಗೆ ಬೇಸತ್ತು ಆತನ ಸಹವಾಸದಿಂದ ಹೊರ ಬರುತ್ತಾಳೆ.

ಶಾಂತಿಯ ಜೀವನದಲ್ಲಿ ಮತ್ತೆ ಶೋಧನೆಯ ಬಾಗಿಲು ರಮಾಕಾಂತನ ಮೂಲಕ ತನ್ನಷ್ಟಕ್ಕೆ ತಾನೇ ತೆಗೆದುಕೊಳ್ಳುತ್ತದೆ. ಸತಾರೆಯಿಂದ ಮುಂಬೈಗೆ ವಾಸ ಬದಲಿಸುವ ಶಾಂತಿ ಅಲ್ಲಿ ತನ್ನ ಹಳೆಯ ನೆನಪೆಲ್ಲವನ್ನೂ ಮರೆಯುತ್ತಾಳೆ. ಹಿಂದೆ ಇವಳ ಜೀವನದಲ್ಲಿ ಬಂದ ಶಂಕರ ಮತ್ತು ಮಠದ್ ಅವರಿಗಿದ್ದ ಅಂತಸ್ತು ಇಲ್ಲದ ಆಫೀಸಿನಲ್ಲಿ ಪ್ಯೂನ್ ಆಗಿದ್ದ ರಮಾಕಾಂತ ಸಿಗುತ್ತಾನೆ. ಇವರಿಬ್ಬರ ಸ್ನೇಹದ ನಡುವೆ ರಮಾಕಾಂತ ತನ್ನ ಹಳೆಯ ಪುರಾಣ ಬಿಚ್ಚಿದಾಗ ಅವನನ್ನು ಸಂತೈಸುತ್ತ ಎಲ್ಲವನ್ನು ಮರೆಯುವಂತೆ ತಿಳಿಸುವ ಶಾಂತಿಗೆ ಆತ ಎಲ್ಲವನ್ನು ನಿನ್ನ ಸಹವಾಸದಲ್ಲಿ ಮರೆವೆನೆಂದು ಹೇಳುತ್ತಾನೆ. ಸಾಂಸಾರಿಕ ಜಂಜಾಟದಿಂದ ಬೇಸತ್ತಿರುವುದರಿಂದ ಮತ್ತು ಮೊದಲನೇ ಹೆಂಡತಿ ಜೀವಂತವಾಗಿರುವುದರಿಂದ ರಿಜಿಸ್ಟ್ರೇಶನ್ ಮದುವೆ ಬೇಡ ಎನ್ನುವ ಮಾತಿನಲ್ಲಿ ಆಳವಾದ ವಿಶ್ವಾಸ ಕಾಣುತ್ತಾಳೆ. ಆದರೆ ಮದುವೆಯ ಹಿಂದಿನ ದಿನ ಬಂದ ಮಠದ್ ಪತ್ರ ನೋಡಿದ ಈತ "ಎಲ್ಲವನ್ನೂ, ಭೂತವನ್ನು ಮರೆತು ಬಿಡು" ಎಂದಿದ್ದವನು ಅದನ್ನು ಸಹಿಸಲಿಕ್ಕೆ ಸಾಧ್ಯವಾಗದೆ ತಾನು ಇಷ್ಟೊಂದನ್ನು ತೆಡೆದುಕೊಳ್ಳಲು ಸಾಧ್ಯವಿಲ್ಲ ಎಂದು ಪತ್ರ ಬರೆದಿಟ್ಟು ಹೊರಟು ಹೋಗುತ್ತಾನೆ.

ಶಾಂತಿ ಮತ್ತೆ ಅನಿವಾರ್ಯವಾಗಿ ಬದುಕಿನಾಧಾರದ ವ್ಯಕ್ತಿಯೊಬ್ಬನ ಅನ್ವೇಷಣೆಗೆ ತೊಡಗುತ್ತಾಳೆ. ಮುಂಬೈನ ಪ್ರಸಿದ್ಧ 'ಕ್ರಾಂತಿ' ಪತ್ರಿಕೆಯು ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಒತ್ತು ನೀಡುತ್ತದೆಂದು ಅದರಲ್ಲಿ ಕೆಲಸಕ್ಕೆ ಸೇರುತ್ತಾಳೆ. ಈ ಪತ್ರಿಕೆಯ ಲೀಡರ್ ಜಾನ್ ಅಶೋಕ್ ಕುಮಾರ್ ಹೆಸರಿನಲ್ಲಿರುವಂತೆ ಎರಡು ಸಂಸ್ಕೃತಿಗಳು ಒಟ್ಟಾಗಿ ಬೆರೆತಿರುವ ವ್ಯಕ್ತಿತ್ವದವನು. ಅಂದರೆ ಈತ ಮೊದಲಿಗೆ ಹಿಂದೂವಾಗಿದ್ದವನು ಕ್ರಿಶ್ಚಿಯನ್ ಆಗಿ ಪರಿವರ್ತನೆ ಹೊಂದುವನು. ಧರ್ಮಗಳೊಂದಿಗೆ ಪೂರ್ವ, ಪಶ್ಚಿಮದ, ಸಾಂಸ್ಕೃತಿಕ, ಭಾವನಾತ್ಮಕ, ರಾಜಕೀಯ ಸಮನ್ವಯ ಸಾಧಿಸುವುದು ಇವನ ಗುರಿ. 'ಕ್ರಾಂತಿ' ಪತ್ರಿಕೆ ಹೆಸರಿನಂತೆಯೇ ವ್ಯಕ್ತಿ ಸ್ವಾತಂತ್ರ್ಯದ ಯಾವುದೇ ಘಟಕಕ್ಕೆ ಯಾವುದೇ ಶಕ್ತಿಯಿಂದ ಧಕ್ಕೆ ಬಂದರೆ ಅದನ್ನು ವಿರೋಧಿಸಿ, ನಿವಾರಿಸುವುದು ಇದರ ಮುಖ್ಯ ಕಾರ್ಯ. ಪತ್ರಿಕೆಯ ಕಾರ್ಯ ಮತ್ತು ಜಾನ್ ಅಶೋಕ್ ಕುಮಾರನ ಕಾರ್ಯ ವೈಖರಿಯಿಂದ ಶಾಂತಿಗೆ ಒಂದು ಕಾಲದಲ್ಲಿ ತನ್ನಲ್ಲಿ ಜೀವಂತವಾಗಿ ಉರಿಯುತ್ತಿದ್ದ ಮಹಿಳಾ ವಿಮೋಚನೆ, ಮೂಢ ನಂಬಿಕೆಗಳ ವಿರೋಧ, ಹೆಂಗಸರ ಬಿಡುಗಡೆ ಮೊದಲಾದ ಅಂಶಗಳು ಮತ್ತೆ ಮನಸ್ಸಿನಲ್ಲಿ ಜಾಗೃತಗೊಳ್ಳುತ್ತವೆ.

ಜಾನ್ ಅಶೋಕ್ ಕುಮಾರ ಶಾಂತಿಯ ಜೀವನದಲ್ಲಿ ಬರುವ ನಾಲ್ಕನೆಯ ಪುರುಷ ಈಕೆಯ ಬಳಿ ಪ್ರೀತಿಯಲ್ಲಿ 'loyalty' ಮುಖ್ಯ ಎಂದು ಹೇಳುತ್ತಿದ್ದ ರಮಾಕಾಂತನು ಶಾಂತಿ ಎಂಬಾಕೆಯಿಂದ ಪತ್ರಿಕೆಯ

ಮರ್ಯಾದೆ ಹಾಳಾಗುತ್ತಿದೆ. ಆಕೆಯ ಚಾರಿತ್ರ್ಯ ಸರಿ ಇಲ್ಲ, ಆಕೆ ನೀತಿಗೆಟ್ಟವಳು ಎಂದು ಬರೆದ ಪತ್ರದಿಂದ ಇವರಿಬ್ಬರು ಗೆಳೆಯರಾಗುತ್ತಾರೆ. ನಮ್ಮ ದೇಶದಲ್ಲಿ ಗಂಡಿನ ವ್ಯಕ್ತಿ ಸ್ವಾತಂತ್ರ್ಯಕ್ಕೆ ಮುಖ್ಯ ಅಡೆತಡೆ ರಾಜಕೀಯ. ಆದರೆ ಹೆಣ್ಣಿನ ವ್ಯಕ್ತಿ ಸ್ವಾತಂತ್ರ್ಯಕ್ಕೆ ಮುಖ್ಯ ಅಡೆತಡೆ ಗಂಡಸು ಎಂದು ಹೇಳುವಾಗ ಸ್ತ್ರೀಯ ಬಗ್ಗೆ ಇವನಿಗಿರುವ ವಿಶೇಷ ಅಭಿಮಾನ ಕಾಣಬಹುದು. ಈತನ ಈ ವೇದಾಂತಕ್ಕೆ ಅರ್ಥವೇ ಇಲ್ಲವೆಂಬಂತೆ ಇದಕ್ಕೆ ತೀರಾ ವ್ಯತಿರಿಕ್ತವಾಗಿ ವರ್ತಿಸುತ್ತಾನೆ. ಒಮ್ಮೆ ಶಾಂತಿ ಯಾವುದೋ ಕಾನ್ಫರನ್ಸ್ ಮುಗಿಸಿ ತಡವಾಗಿ ಮನೆಗೆ ಬಂದಳೆಂದು ಆಕೆಯನ್ನು ನಿಂದಿಸುತ್ತಾನೆ. ರಾತ್ರಿ ತಡವಾಗಿ ಮಹಿಳೆಯರು ಬರುವುದು ತನಗೆ ಸರಿಯಿಲ್ಲವೆಂದು ತಿಳಿಸುತ್ತಾನೆ. ಮತ್ತೊಮ್ಮೆ ಆತನ ಪರ ಚುನಾವಣಾ ಪ್ರಚಾರಕ್ಕೆ ಸತೀಶ್ ಬ್ಯಾನರ್ಜಿ ಎಂಬ ಯುವಕನ ಜೊತೆ ಹೋಗಿದ್ದಳೆಂದು ಶಾಂತಿಯನ್ನು ಕಟುವಾಗಿ ಟೀಕಿಸುತ್ತಾನೆ. ಅಲ್ಲದ-ಸಲ್ಲದವರೊಂದಿಗೆ ಅಡ್ಡಾಡುವುದು ಸರಿಯಲ್ಲವೆಂಬುದು ಅವನ ವಾದ. ಶಾಂತಿ ಎಂದೋ 'Women' ಎಂಬ ಪತ್ರಿಕೆಯ ಕೆಲಸಕ್ಕೆ ಅರ್ಜಿ ಹಾಕಿರುತ್ತಾಳೆ. ಅದರ ಕೆಲಸದ ಆರ್ಡರ್ ಬಂದಾಗ ತನ್ನ ಅನುಮತಿ ಇಲ್ಲದೆ ಅವಳು ಯಾವುದೇ ಕೆಲಸಕ್ಕೂ ಅರ್ಜಿ ಹಾಕಬಾರದೆಂದು ಹೇಳುತ್ತಾನೆ. ಕೊನೆಯಲ್ಲಿ ಜಾನ್ ಶಾಂತಿಯನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಲು ಬಲವಂತ ಪಡಿಸಿದಾಗ ಶಾಂತಿ ಆತನಿಗೆ ತಿರುಗೆ ಬಿದ್ದು ತನ್ನ ದಾರಿ ನೋಡಿಕೊಳ್ಳುತ್ತಾಳೆ.

ಕಲ್ಕತ್ತೆಯ 'Women' ಪತ್ರಿಕೆಯ ಸಂಪಾದಕಿಯಾಗುವ ಕನಸು ಹೊತ್ತು ವಿಮಾನಯಾನದಲ್ಲಿದ್ದಾಗ ವಿದೇಶಿ ಯುವಕನೊಬ್ಬನ ಪರಿಚಯ ಉಂಟಾಗುತ್ತದೆ. ನೀಲಿ ಕಣ್ಣಿನ, ಕೆಂಪು ಕೂದಲಿನ, ಗುಲಾಬಿ ಬಣ್ಣದ ಯುವಕ ಆಕರ್ಷಕವಾಗಿ ಕಾಣುತ್ತಾನೆ. ಭಾರತೀಯ ಸಂಸ್ಕೃತಿಯ ಬಗ್ಗೆ, ಇಲ್ಲಿನ ಸಾಹಿತ್ಯ, ವೇದ, ಪುರಾಣಗಳ ಬಗ್ಗೆ ಮೋಹವಿದ್ದ ಆತ ಶಾಂತಿಯನ್ನು ತಾನು ಹಿಂದಿರುಗಿ ಹೋಗುವವರೆಗೂ ಜೊತೆಗಿರಲು ಕೇಳುತ್ತಾನೆ. ನಂತರ ಮರು ಕ್ಷಣವೇ ಅವಳನ್ನು ಮದುವೆಯಾಗುತ್ತೇನೆಂದು ಹೇಳಿದಾಗ ಆಕೆ ಅದನ್ನು ತಿರಸ್ಕರಿಸಿ ತನಗೆ ಪ್ರೀತಿ ಎಂದರೇನು ಎಂಬುದು ತಿಳಿದಿಲ್ಲವೆಂದು ಹೇಳುತ್ತಾಳೆ.

ಶಂಕರ, ಮಠದ್, ರಮಾಕಾಂತ್, ಜಾನ್ ಅಶೋಕ ಕುಮಾರ್ ಹೀಗೆ ಸಾಲಾಗಿ ಬಂದ ನಾಲ್ವರು ಪುರುಷರ ಪ್ರೀತಿಯಲ್ಲಿಯೂ ಇವಳು ಪ್ರಾಮಾಣಿಕತೆಯನ್ನು ಕಾಣದೇ ಹೋಗುತ್ತಾಳೆ ಎಂಬುದನ್ನು ಕಾದಂಬರಿ ತಿಳಿಸುತ್ತದೆ. ಕಲಿತು ವೈಚಾರಿಕ ಪ್ರಜ್ಞೆಯನ್ನು ಅಗಾಧ ರೀತಿಯಲ್ಲಿ ಬೆಳೆಸಿಕೊಂಡ ಹೆಣ್ಣೊಬ್ಬಳು, ಅಂತಸ್ತಿನಲ್ಲೂ, ದೇಶೀ, ಪರದೇಶಿಗಳಲ್ಲೂ ದೈಹಿಕ ಹೊಂದಾಣಿಕೆಯಾದರು ಮಾನಸಿಕವಾಗಿ ಅದನ್ನು ಸಾಧಿಸದೆ ಕೊನೆಗೆ 'ಎಲ್ಲ ಗಂಡಸರೂ ಹೀಗೆ' ಎಂಬ ನಿಲುವಿಗೆ ಬರುತ್ತಾಳೆ. ಸ್ತ್ರೀಯ ಸ್ವಾತಂತ್ರ್ಯ ಚಿಂತನೆಯನ್ನು ಗೌರವಿಸುವ ತನಗೆ ಬೇರೆ ಹೆಣ್ಣಿನ ಸಂಪರ್ಕ, ಸಂಬಂಧಗಳಿದ್ದರೂ ಹೆಣ್ಣು ಮಾತ್ರ ಅಕ್ಷತ ಕನ್ಯೆಯಾಗಿರಬೇಕೆಂದು ಬಯಸುವ ಸುಳ್ಳು ಸುಳ್ಳೇ ಪ್ರೀತಿಯ ನಾಟಕವನ್ನಾಡುವ, ತನಗೆ ಬಂದ ಹೆಣ್ಣು ತಾನು ಹೇಳಿದಂತೆಯೇ ಕೇಳಬೇಕೆಂಬ ಸರ್ವಾಧಿಕಾರಿ ಮನೋಭಾವವನ್ನು ತೋರಿಸುವ ಗಂಡಿನ ಕರಾಳ ಮುಖಗಳು ಶಾಂತಿಗೆ ಕಾಣಿಸುತ್ತವೆ. ಇದರಿಂದ ಭ್ರಮನಿರಸನಗೊಂಡ ಶಾಂತಿ ಪ್ರೀತಿಯ ವಿಷಯದಲ್ಲಿ ತನ್ನ ಭಾವುಕತೆಯನ್ನು ಬಿಟ್ಟು, ಪ್ರೀತಿ ಇಲ್ಲದೆಯೂ ಗಂಡಿನೊಡನೆ ದೈಹಿಕ ಸಂಬಂಧ ಬೆಳೆಸುವ ನಿರ್ಭಾವುಕ, ಯಾಂತ್ರಿಕ ಸ್ಥಿತಿಗೆ ತಲುಪುತ್ತಾಳೆ. ಪುರುಷ ನಿರ್ಮಿತ ಸಮಾಜದಲ್ಲಿನ ಮೌಲ್ಯಗಳಿಗೆ ತನ್ನದೇ ಆದ ನೆಲೆಯಲ್ಲಿ ವಿರೋಧ ವ್ಯಕ್ತಪಡಿಸುತ್ತಾಳೆ.

'ಅವಳ ಸ್ವಾತಂತ್ರ್ಯ' ಕಥೆಯು ಪರಂಪರಾಗತವಾಗಿ ಹೆಣ್ಣನ್ನು ತುಳಿಯುತ್ತ ಬಂದಿರುವ ಕೌಟುಂಬಿಕ ವ್ಯವಸ್ಥೆಯ ಆಳದ ಒಳಗೆ ಹುದುಗಿರುವ ಕ್ರೌರ್ಯವನ್ನು ತಿಳಿಸುತ್ತದೆ. ಕಥೆಯ ನಾಯಕಿ ವಿಮಲಾ ಗೃಹಿಣಿ,

ಸುಶಿಕ್ಷಿತೆ, ಉದ್ಯೋಗಸ್ಥೆ. ಈಕೆ ಭಾರತೀಯ ಎಲ್ಲಾ ವಿವಾಹಿತ ಮಹಿಳೆಯರಂತೆ ಒಳ್ಳೆಯ ತಾಯಿ, ವಿಧೇಯ ಪತ್ನಿ ಮತ್ತು ಮನೆಯ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುವ ಕೆಲಸದವಳಂತೆ ತನ್ನ ಜವಾಬ್ದಾರಿ ನಿರ್ವಹಿಸುತ್ತಾಳೆ. ಓದಿ ವಿದ್ಯಾವಂತಳಾಗಿ ನೌಕರಿಯಲ್ಲಿದ್ದರೂ ಸಹ ಈಕೆ ಗಂಡನನ್ನು, ಆತನ ದಬ್ಬಾಳಿಕೆಯನ್ನು ವಿರೋಧಿಸುವುದಿಲ್ಲ. ವಿಮಲಾಳ ಗಂಡ ಶಂಕರನ ಪ್ರಕಾರ ವಿದ್ಯಾವಂತ ಹೆಂಡತಿಯೆಂದರ ಮನಯು ಕ[illegible] ಆಳು.

"ಹೆಂಡತಿ ಗ್ರಾಜ್ಯುಯೇಟ ಇದ್ದರ ಮಕ್ಕಳ್ನ ಛಲೋತ್ನಾಗ ಬೆಳೆಸ್ತಾಳಂತ ಕಡಿಮೀ ವರದಕ್ಷಿಣೆ ತಗೊಂಡು ನಿನ್ನ ಲಗ್ನಾದೆ..... ನೀ ಹುಡುಗರಿಗೆ ಸ್ವಲ್ಪವೂ Displine ಕಲಿಸಿಲ್ಲ ನೋಡು"(೪)ಎಂದು ಹೇಳುವ ಮಾತಿನ ಮೂಲಕ ಇವನು ತನ್ನ ಹೆಂಡತಿಯ ಮೇಲೆ ಯಾವ ರೀತಿ ಹಿಡಿತವನ್ನು ಹೊಂದಿರುತ್ತಾನೆ ಎಂಬುದನ್ನು ನಾವು ಗಮನಿಸಬಹುದು. ಸಂಸಾರವೆಂದ ಮೇಲೆ ಗಂಡ-ಹೆಂಡತಿ ಇಬ್ಬರೂ ಸಮಾನರು. ಇಬ್ಬರೂ ಸಂಸಾರದ ನೊಗವನ್ನು ಎಳೆಯಬೇಕು ಎಂಬುದರಿಂದ ನುಣುಚಿಕೊಳ್ಳುವ ಈತ ಇವುಗಳಿಂದ ದೂರ ಸರಿಯುತ್ತಾನೆ. ಕೆಲಸದ ನೆಪದಿಂದ ಪರವೂರಿನಲ್ಲಿ ವಾಸಿಸುವ ಈತ ತಂದೆ, ಹೆಂಡತಿ, ಮಕ್ಕಳ ಜವಾಬ್ದಾರಿ ಹೊರದೆ ತಾನಾಯಿತು ತನ್ನ ಸುಖವಾಯಿತು ಎಂದು ಜೀವಿಸುತ್ತಾನೆ. ತಾನು ಪುರುಷನೆಂಬ ಅಹಂನಿಂದ, ಅಹಂಕಾರದಿಂದ ಈತ ತನಗಿಂತ ಹೆಚ್ಚಾಗಿ ಮನೆಗಾಗಿ ದುಡಿಯುತ್ತಿರುವ ಹೆಂಡತಿಯನ್ನು ಕಾಲ ಕಸದಂತೆ ಕಾಣುತ್ತಾನೆ.

"ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಕಾಲು ಶತಮಾನ ಕಳೆದು ಹೋದರೂ ನಮ್ಮ ಹೆಂಗಸರು ಮಾತ್ರ ಇನ್ನು ಗುಲಾಮಗಿರಿಯಲ್ಲೇ ಇದ್ದಾರೆ. ಇದಕ್ಕೆ ಕಾರಣ ೨೫% ಸಂಪ್ರದಾಯ , ಇನ್ನು ೨೫% ಪರಿಸ್ಥಿತಿ, ಇನ್ನು ೫೦% ಗಂಡಸರು (ಚಪ್ಪಾಳೆ). ಇದು ಅಂತರರಾಷ್ಟ್ರೀಯ ಮಹಿಳಾ ವರ್ಷ. ನಾವಿನ್ನು ಎಚ್ಚೆತ್ತುಕೊಳ್ಳಬೇಕಾಗಿದೆ, ದಾಸ್ಯದ ಸಂಕೋಲೆಯನ್ನು ಹರಿದೊಗೆಯಬೇಕು, ನಮಗಾಗುತ್ತಿರುವ ಅನ್ಯಾಯವನ್ನು ಎಲ್ಲಾ ವಿಧದಲ್ಲೂ ಪ್ರತಿಭಟಿಸಬೇಕು, ಯಾವ ಕಾರಣಕ್ಕಾಗಿಯೂ ಯಾರೆದುರಿಗೂ ಬಗ್ಗಬಾರದು ಅಂದಾಗ ಮಾತ್ರ" (೫). ಅಂತರರಾಷ್ಟ್ರೀಯ ಮಹಿಳಾ ವರ್ಷದ ದಿನಾಚರಣೆಯಲ್ಲಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ವಿಮಲಾ ಆಡುವ ಮಾತುಗಳಿವು. ಅವಳ ಕೌಟುಂಬಿಕ ಸಂದರ್ಭದೊಂದಿಗೆ ಅವಳ ಭಾಷಣ ಹೊಂದಿರುವ ಅಸಂಗತ ಸಂಬಂಧವೇ ಈ ಕತೆಯಲ್ಲಿ ಮುಖ್ಯವಾಗುತ್ತದೆ. ಮಹಿಳಾ ಸ್ವಾತಂತ್ರ್ಯದ ಬಗೆಗಿನ ವಿಮಲಾಳ ಭಾಷಣ ಅವಳ ಸ್ವಂತ ಮಾತುಗಳಾಗಿ ಹೊರಬಂದಿಲ್ಲ, ಕೌಟುಂಬಿಕ ಜವಾಬ್ದಾರಿಗಳ ನಿರ್ವಹಣೆಯೊಂದಿಗೆ ಉದ್ಯೋಗವನ್ನು ನಿಭಾಯಿಸುವಲ್ಲಿ ಕುಸಿದು ಬೀಳುವ ವಿಮಲಾಳ ಸ್ಥಿತಿ ಯಾವುದೇ ರೀತಿಯ ಅನುಕಂಪವನ್ನು ಪಡೆಯುವುದಿಲ್ಲ. ಕುಟುಂಬದಾಚೆಗಿನ ಸಾಮುದಾಯಿಕ ಸೇವಾ ಚಟುವಟಿಕೆಗಳಲ್ಲಿ ತೊಡಗುವ ಮಹಿಳೆಯರಿಗಿರುವಂತೆ ತನ್ನದೇ ದನಿಯನ್ನು ಹೊಂದುವ, ತಾನು ಮಾಡುವ ಸೇವೆಯನ್ನು ತನ್ನ ವ್ಯಕ್ತಿತ್ವವಿಕಾಸದ ಸಾಧನವಾಗಿ ಬಳಸಿಕೊಳ್ಳುವ ತನ್ನ ಮಾತುಗಳ ಮೂಲಕ ಇತರರನ್ನು ಸಬಲರನ್ನಾಗಿಸುವ ದನಿಯಾಗಲೀ ಗಟ್ಟಿತನವಾಗಲೀ ಇಲ್ಲ. ವಿಮಲಾ ಈ ಎಲ್ಲ ಸಾಧ್ಯತೆಗಳಿಂದ ವಂಚಿತಳಾದುದರಿಂದ ಸ್ಥಿತಿಯನ್ನು ಪ್ರಕಟಗೊಳಿಸದೆ ಹಕ್ಕನ್ನು ಚಲಾಹಿಸುವ ಗಂಡ ಶಂಕರನೆದುರು ವಿಮಲಾಗೆ ಯಾವುದೇ ಭಾಷಿಕ ಸಂವಹನ ಕೂಡ ಸಾಧ್ಯವಾಗದ್ದನ್ನು ಕಥೆಯು ಸೂಚಿಸುತ್ತದೆ.

'ಕೊನೆಯ ದಾರಿ' ಕಥೆಯ ನಾಯಕಿ ಲೀಲಾ ಗಂಡನನ್ನು ತ್ಯಜಿಸಿ ತನ್ನಿಷ್ಟದಂತೆ ಬದುಕುತಿರುತ್ತಾಳೆ. ತಾಯ್ತನದ ಹಂಬಲಕ್ಕಾಗಿ ಹೆಣ್ಣು ಏನು ಬೇಕಾದರೂ ಮಾಡುತ್ತಾಳೆನ್ನುವುದನ್ನು ಕಥೆ ಸೂಚಿಸುತ್ತದೆ. ಪ್ರತಿಯೊಬ್ಬ ಹೆಣ್ಣಿನಂತೆ ಲೀಲಾ ಹಲವಾರು ಕನಸುಗಳನ್ನು ಹೊತ್ತು ವಿವಾಹವಾಗುತ್ತಾಳೆ. ಆದರೆ ತನ್ನ ಗಂಡನಲ್ಲಿದ್ದ ಹಿಂಸತ್ವ, ಜಾರತನ, ಕುಡುಕತನ ಇವುಗಳನ್ನು ಕಂಡು ಅವನನ್ನು ಧಿಕ್ಕರಿಸುತ್ತಾಳೆ. ವೈವಾಹಿಕ ಜಂಜಾಟದಿಂದ

ಬೇಸರಳಾಗಿ ಆದರಿಂದ ಮುಕ್ತವಾಗಿದ್ದ ಲೀಲಾ ಪುರುಷರೊಡನೆ ತನಗಿಷ್ಟ ಬಂದಂತೆ ಬದುಕುತ್ತ ಯಾರಿಂದಲಾದರೂ ತಾನು ಒಂದು ಮಗು ಪಡೆಯಬೇಕು ಎಂಬುದು ಇವಳ ಇಚ್ಛೆ. ಆದರೆ ಇದು ಸುಲಭದ ಮಾತಾಗಿರಲಿಲ್ಲ. ಈಕೆ ಸಂಬಂಧ ಬೆಳೆಸುವ ಪಲವು ಪುರುಷರು ಇದನ್ನು ನಿರಾಕರಿಸುತ್ತಾರೆ.

ಇವಳ ಜೊತೆ ಸಂಬಂಧ ಬೆಳೆಸಿದ ಡಾಕ್ಟರ್ ಗೋವಿಂದ ಮೂರ್ತಿ ಹೆಣ್ಣಿನದೇಹ ರಚನೆಯ ಕುರಿತು ಮಾತನಾಡುತ್ತ 'you are a perfect women' ಎಂದು ಹೊಗಳುತ್ತಾನೆ. ಇವನಿಗೆ ಅವಳ ದೇಹದ ಮೇಲಷ್ಟೇ ಆಸೆ, ಇವಳ ಆಸೆಗೆ ಬೆಲೆ ಇಲ್ಲ. ವಿದ್ಯಾವಂತನಾಗಿ ವೃತ್ತಿಯಲ್ಲಿ ವೈದ್ಯನಾದರು ಈತನಿಗೆ ತಾಯ್ತನದ ಮಹತ್ವ ತಿಳಿಯುವುದಿಲ್ಲ. ತನ್ನಿಂದ ಲೀಲಾಗೆ ಮಗುವಾದರೆ ಅದರ ಜವಾಬ್ದಾರಿ ತಾನು ಹೊರಬೇಕೆಂಬ ಭಯ ಅವನನ್ನು ಇಲ್ಲಿ ತಡೆಹಿಡಿಯುತ್ತದೆ. ಮತ್ತೊಬ್ಬ ವ್ಯಕ್ತಿ ಫಿಲಾಸಫಿ ಲೆಕ್ಚರರ್ ವಿನಯ ಸಾಳ್ವಕರ ಆಧ್ಯಾತ್ಮದ ಬಗ್ಗೆ ಒಲವಿರುವ ಈತನಿಗೆ ಸದಾ ನಿಷ್ಠೆ, ಪಾವಿತ್ರ್ಯ ಎಂಬ ಜೀವನದ ಮೌಲ್ಯಗಳು ಮುಖ್ಯವಾಗುತ್ತವೆ. ಲೀಲಾಳ ಆಸೆಯ ಬಗ್ಗೆ ಏನು ಮಾಡಬೇಕು, ಏನು ಮಾಡಬಾರದು ಎಂಬ ವಿಚಾರ ಸರಣಿಯನ್ನೇ ಹಿಡಿದು ದಿನ ದೂಡುವವನು. ಕಥೆಯಲ್ಲಿ ನಂತರ ಕಾಣಿಸಿಕೊಳ್ಳುವವನೇ ಈಕೆಯ ಬಾಸ್. ತನ್ನ ಹೆಂಡತಿ ಊರಿಗೆ ಹೋದ ದಿನ ಆಫಿಸ್ ಕೆಲಸದ ನೆವದಲ್ಲಿ ಮನೆಗೆ ಕರೆಸಿಕೊಳ್ಳುತ್ತಾನೆ. ಇವನ ಪ್ರಕಾರ ಮದುವೆಯಾಗದ ಹುಡುಗಿಯ ಜೊತೆ ಮಲಗಿದರೆ ಅದು ಪಾಪವಲ್ಲ. ಈತನಿಂದ ಮಗು ಆದರೆ ಅದು ಪಾಪ ಎನ್ನುತ್ತಾನೆ. ಇವರ್‍ಯಾರಿಂದಲೂ ಈಕೆಯ ಆಸೆ ಈಡೇರದಿದ್ದುದರ ಕುರಿತು ಆಕೆಗೆ ಅಸಮಧಾನ. ಅವಳ ಪ್ರಕಾರ ಇವರೆಲ್ಲರೂ 'Educated fools' ಇವರುಗಳು ಒಂದು ಕಡೆ ತಮ್ಮ ವೈವಾಹಿಕ ಜೀವನಕ್ಕೂ ಸಲ್ಲದೆ ಮತ್ತೊಂದೆಡೆ ಮನೆಯಿಂದಾಚೆಯ ಆಸೆಗೂ ಸಲ್ಲದ ಅಂಜುಬುರುಕರು. ಇವುಗಳೆಲ್ಲದರ ಮಧ್ಯೆ ತನ್ನ ಆಸೆ ಪೂರೈಕೆಗಾಗಿ ಮತ್ತೊಂದು ಅನ್ಯ ಮಾರ್ಗ ಹುಡುಕುವ ಆತ್ಮವಿಶ್ವಾಸ ಅಥವಾ ಸೌಂದರ್ಯವಿಲ್ಲದ ಲಿಲ್ಲಿ, ತನ್ನ ಆಸೆ ಈಡೇರಿಸಿಕೊಳ್ಳಲ್ಲು ತನ್ನ ತಂದೆಯ ವಯಸ್ಸಿನವರಾದ ಶಂಕರಗೌಡರ ಆಸರೆ ಪಡೆಯುತ್ತಾಳೆ. ತಾನು ಚಿಕ್ಕಂದಿನಿಂದಲು, ಆಡಿ ಬೆಳೆಯುವಾಗ ನೋಡಿದ ಅವರ ಪ್ರೀತಿಯ ಆಳ ಇವುಗಳನ್ನು ನೆನೆದು ಈಗ ತನ್ನ ಜೀವನದಲ್ಲಿ ಬೇರೆ ದಾರಿ ಕಾಣದೆ ಈ 'ಕೊನೆಯದಾರಿ' ಆಯ್ಕೆ ಮಾಡುತ್ತಾಳೆ.

ಹೆಣ್ಣಿಗೊಂದು ಆಸರೆ ಬೇಕೇ ಬೇಕು ಎನ್ನುವ ಆಶಯದ ಈ ಕಥೆಯಲ್ಲಿ ಗಂಡು-ಹೆಣ್ಣಿನ ಆಕರ್ಷಣೆ ಮತ್ತು ವಿಕರ್ಷಣೆಯ ಶೋಧವಿದೆ. ಲೀಲಾ ಇಲ್ಲಿ ಹೆಣ್ಣನ್ನು ಲೈಂಗಿಕಾಸಕ್ತಿಯಿಂದ ನೋಡುವ ಗಂಡುಗಳಿಗಿಂತ ತನ್ನ ಮೇಲೆ ಪ್ರೀತಿ ತೋರುವ ಶಂಕರ ಗೌಡರನ್ನು ಆಯ್ಕೆ ಮಾಡುತ್ತಾಳೆ. ಸಮಾಜದ ದೃಷ್ಟಿಯಲ್ಲಿ ಇದು ತಪ್ಪಾಗಿ ಕಂಡರು ಅವಳಿಗೆ ಸರಿಯೆನಿಸುತ್ತದೆ ಶಂಕರೇ ಗೌಡರನ್ನು ತನ್ನ ಮುಂದಿನ ಬದುಕಿನ ಆಯ್ಕೆ ಮತ್ತು ಸಾಧ್ಯತೆಯಾಗಿ ಆಕೆ ತಿರ್ಮಾನಿಸುವಾಗ ಆ ತೀರ್ಮಾನವನ್ನು ಕೇವಲ ಪುರುಷ ಪ್ರಧಾನ ಸಮಾಜದಲ್ಲಿ ಅಧೀನ ವ್ಯಕ್ತಿತ್ವದ ಹೆಣ್ಣಿಗೆ ಉಳಿಯುವ ಕೊನೆಯ ದಾರಿಯಾಗಿ ಮಾತ್ರ ಕಾಣುತ್ತದೆ. ಬದುಕಿನಲ್ಲಿ ಹಲವು ದಾರಿಗಳನ್ನು ದಿಟ್ಟ ತನದಲ್ಲಿ ಹುಡುಕುವ, ತನಗೆ ಒಪ್ಪಿಗೆಯಾದ ದಾರಿಯನ್ನೇ ಆರಿಸಿಕೊಳ್ಳುವ ಮನಃಸ್ಥಿತಿಯಲ್ಲಿದ್ದ ನಾಯಕಿ ಈ ತೀರ್ಮಾನವನ್ನು ತೆಗೆದುಕೊಳ್ಳುತ್ತಾಳೆ.

'ಹೆಣ' ಭೂತ ಮತ್ತು ಭವಿಷ್ಯಗಳಲ್ಲಿ ಸಿಲುಕಿದ ಚೇತನಕ್ಕೆ ಕ್ರಿಯಾ ಸ್ವಾತಂತ್ರ್ಯವಿಲ್ಲ.ಕಾರ್ಯ-ಕಾರಣ ಸಂಬಂಧದ ನಿರಂತರ ಕೊನೆಯಿಲ್ಲದ ಸರಣಿಗೆ ಅಧೀನವಾದರೆ ನೈಜ ಕ್ರಿಯೆ ಸಾಧ್ಯಾವೇ ಇಲ್ಲ ಎಂಬುದನ್ನು ಕಥೆ ತಿಳಿಸುತ್ತದೆ. ಭೂತದಿಂದ ಬಿಡಿಸಿಕೊಂಡಾಗ ಅನುಭವಿಸುವ ಶೂನ್ಯತೆಯಲ್ಲಿಯೇ ಅಪಾರ ಸ್ವಾತಂತ್ರ್ಯದ ಸಾಧ್ಯತೆ ಹೆಚ್ಚು. ಗತದ ವಿವರಗಳು ಕೇವಲ ವಿವರಗಳು ಮಾತ್ರವೇ ಹೊರತು ವ್ಯಕ್ತಿಯ ಕ್ರಿಯೆಯನ್ನು ನಿಯಂತ್ರಿಸುವ ಕಾರಣಗಳಲ್ಲ ಎಂಬುದನ್ನು ಕಥೆ ತಿಳಿಸುತ್ತದೆ.

ಮದುವೆಗೆ ಮುಂಚೆ ಉತ್ತಮ ಕವಿ ಆಗಿದ್ದವಳು ಮದುವೆಯ ನಂತರ ಅದನ್ನು ಮರೆಯುತ್ತಾಳೆ. ಸಾಂಸಾರಿಕ ಜಿವನದಲ್ಲಿ ಬರೆಯುವುದಕ್ಕೆ ಸಮಯವಿಲ್ಲ ಎಂಬ ಕಾರಣ ನೀಡುತ್ತಾಳೆ. ಆದರೆ ಇಲ್ಲಿರುವ ವಾಸ್ತವದ ಸಂಗತಿ ಎಂದರೆ ಅವಳೊಳಗಿನ ಕವಿಯ ಮನಸ್ಸು ಮದುವೆಯಾದಾಗಲೇ ಸತ್ತು ಹೆಣವಾಗಿದೆ. ಇವಳ ಆಲೋಚನಾ ಶಕ್ತಿಯೇ ಇಲ್ಲಿ ಮಾಯವಾಗಿರುತ್ತದೆ.

ಸಂಪಾದಕರೊಬ್ಬರ ಒತ್ತಾಯದಿಂದ ಈಗ ಮತ್ತೆ ಕವಿತೆ ಬರೆಯಬೇಕು, ಕವಿಯಾಗಬೇಕು ಎಂದು ಹೊರಟ ಸಮಯದಲ್ಲಿ ಇದುವರೆಗೂ ಸತ್ತು ಮಲಗಿದ್ದ ಅವಳ ಒಳ ಮನಸ್ಸು ಹೆಣವಾಗಿ ಆಕೆಗೆ ಸಹಾಯ ಮಾಡಲು ಬರುತ್ತದೆ. ಕವನ ಬರೆಯಬೇಕಾದರೆ ತಾನು ಮತ್ತೇ ಜೀವಂತವಾಗಬೇಕು ಎಂದು ನುಡಿಯುತ್ತದೆ. "ಅನಿರೀಕ್ಷಿತವಾಗಿ ಹೆಣದ ದನಿಯಲ್ಲಿ ಮೂಡಿದ ಕಂಪನ ನನ್ನೆದೆಯಲ್ಲಿನ ಎಲುಬುಗಳೊಳಗೆ ನಡುಕ ಹುಟ್ಟಿಸಿತು. ಕನಸುಗಳ ಪೂರ್ಣತೆ ಅಸಾಧ್ಯವೆಂಬ ಅರಿವಾದದ್ದು, ಜನ್ಮಾಂತರಗಳಿಂದ ನನ್ನ ಅತೃಪ್ತ ಆತ್ಮ ಅರಸುತ್ತಿದ್ದ ಒಂದು ಕ್ಷಣದ ಮಟ್ಟಿಗೆ ಬದುಕು ಸಾರ್ಥಕವೆನ್ನಿಸುವ ಆ ಗಳಿಗೆ ಕೈಗೆಟಕಿ ಎಟಕದೇ ಹೋದದ್ದು, ಭೂತ-ವರ್ತಮಾನಗಳ ಸಂಬಂಧ ತಟ್ಟೆಂದು ಕಟಗರಿಸದ್ದು"(೬). ಇಲ್ಲಿ ಕವಿತೆ ಬರೆಯುವುದು ಆಕೆಯ ಕೊನೆಯದಾರಿಯಾಗಬಹುದು ಇಲ್ಲವೆ ಕವಲುದಾರಿಯಾಗಬಹುದು. ಎರಡು ಆಯ್ಕೆಯ ಸಾಧ್ಯತೆಗಳನ್ನು ಅವು ಮುಂದಿಡುತ್ತವೆ. ಅವಳು ಮತ್ತೆ ಕವಿಯಾಗಬೇಕಾದರೆ ಅವಳಿಗೆ ತನ್ನ ವೈವಾಹಿಕ ಜೀವನವನ್ನು ಸಾಯಿಸಬೇಕು, ಇಲ್ಲವೆ ತಾನು ಕವಿಯಾಗುವ ಅಥವಾ ಕವಿತೆ ರಚಿಸುವ ಆಸೆ ಬಿಡಬೇಕು.

'ಹೆಣ'ವನ್ನು ಬದುಕಿಸಲೊಲ್ಲದ ಕವಯಿತ್ರಿ ಕವಿತೆ ಬರೆಯದಿರುವ ಆಯ್ಕೆ ಮಾಡಿಕೊಳ್ಳುತ್ತಾಳೆ. ಈ ಆಯ್ಕೆಯು ಭೂತ ವರ್ತಮಾನಗಳ ಸಂಪರ್ಕ ಕಳೆದುಕೊಂಡ ಶೂನ್ಯದಲ್ಲಿ ಉದ್ಭವಿಸುವ ಸಾಧ್ಯತೆಗಳಲ್ಲಿ ಒಂದಾಗುತ್ತದೆ. ಈಗಾಗಲೇ ಸತ್ತು ಗೋರಿಯಾಗಿರುವ ಹೆಣವನ್ನು ಎಬ್ಬಿಸದೆ ಅದು ಈಗ ಇರುವಂತೆ ಇರಲಿ ಎಂಬ ನಿರ್ಧಾರಕ್ಕೆ ಬರುತ್ತಾಳೆ.

'ಹೊರಟು ಹೋದವನು' ಕಥೆಯ ನಾಯಕಿ ಸಹನ. ಸಂತೃಪ್ತ ಜೀವನದ ಆಸರೆಯೊಳಗೆ ಇದ್ದರೂ ಅದನ್ನು ಒಪ್ಪದೇ ಹಿಂದೆ ಕಾಲೇಜಿನಲ್ಲಿ ತಾನು ಪ್ರೀತಿಸಿದ ಪ್ರೊಫೆಸರನ ಮುಖವನ್ನು ರೈಲ್ವೇಸ್ಟೇಷನಿನಲ್ಲಿ ಕಂಡ ಮಿಠಾಯಿವಾಲಾನಲ್ಲಿ ಹುಡುಕಲು ಪ್ರಯತ್ನಿಸುತ್ತಾಳೆ.

ಅತಿಯಾಗಿ ಪ್ರಿತಿಸುವ ಗಂಡ ಸತೀಶ, ಆತನ ಪ್ರೀತಿ ಈಕೆಗೆ ಹಿಂಸೆಯೆನಿಸುತ್ತದೆ. ಆತನ ಕ್ಷಮಿಸುವ, ಉದಾರತೆ ತೋರಿಸುವ, ಸಮಾಧಾನ ಪಡಿಸುವ, ರಕ್ಷಿಸುವ, ತಪ್ಪು ಕಡೆಗಣಿಸುವ ಗುಣಗಳು ಈಕೆಗೆ ಅಸಹ್ಯತರಿಸುತ್ತವೆ. ತನ್ನೆಲ್ಲ ತಪ್ಪುಗಳನ್ನು ದೋಷಗಳನ್ನು ಮನ್ನಿಸುವ ಅದನ್ನು ಹೊಟ್ಟೆಯಲ್ಲಿ ಹಾಕಿಕೊಂಡು ತನ್ನನ್ನು ಕಾಪಾಡುವ ಗುಣ ಈಕೆಯಲ್ಲಿ ಬೆಂಕಿ ಹೊತ್ತಿಸುತ್ತದೆ.

ಗಂಡನಷ್ಟೇ ಅಲ್ಲದೆ ತನ್ನ ಪ್ರೀತಿಗೆ ಬೆಲೆ ಕೊಡದೆ ಬೇರೆಯವನೊಂದಿಗೆ ವಿವಾಹ ಮಾಡಿದ ಅಪ್ಪ, ಅಣ್ಣ, ಅವ್ವ ಎಲ್ಲರೂ ಒಂದು ಕ್ಷಣವೂ ನೆಮ್ಮದಿ ಇಲ್ಲದಂತೆ ಒದ್ದಾಡಬೇಕು ಎಂದು ಆಶಿಸುತ್ತಾಳೆ. ತನ್ನ ತಾಯಿ ಸತ್ತಾಗ ದುಃಖಿಸುವ ಅಪ್ಪನನ್ನು ಕಂಡು ಈಕೆಗೆ ಮಜಾ ಎನಿಸುತ್ತದೆ. ತಾನು ಅಳದಿದ್ದಾಗ ಅವಳಿಗೆ ಶಾಕ್ ಆಗಿದೆ ಎಂದು ಸತೀಶ ನೆರವಿಗೆ ಬರುತ್ತಾನೆ. ಅದೇ ರೀತಿ ಕಾಯಿಲೆಯಿದ್ದ ತಂದೆಗೆ ಅತಿಯಾದ ನಿದ್ರೆ ಮಾತ್ರೆ ನೀಡಿ ಸಾಯಿಸುವುದರ ಮೂಲಕ ತಂದೆಯ ಮೇಲಿನ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾಳೆ. ಹಿಂದೆ

ಒಮ್ಮೆ ತಾನು ತಾಯಿಯಾಗಲಿದ್ದೇನೆಂದು ಸಂಭ್ರಮಿಸಿದ ಸತೀಶನಿಗೆ ಪಪ್ಪಾಯಿ ಹಣ್ಣನ್ನು ತಿಂದು ಮಗುವನ್ನು ಕೊಂದು ನೋವನ್ನುಂಟು ಮಾಡಿ ಆದರಿಂದ ಸುಖ ಪಡುತ್ತಾಳೆ. ತವರು ಮನೆಯ ಮೇಲೆ ಯಾವುದೇ ವ್ಯಾಮೋಹವಿಲ್ಲದಿದ್ದರೂ ರೈಲ್ವೆಸ್ಟೇಷನಿನಲ್ಲಿ ಕಾಣುವ ತನ್ನ ಹಳೇಯ ಪ್ರಿಯಕರನ ಮುಖ ಹೋಲುವ ಮಿಠಾಯಿವಾಲನನ್ನು ನೋಡಲು ಹೋಗುತ್ತಾಳೆ. ಗಂಡನ ವಿರುದ್ಧ ಸೇಡು ತೀರಿಸಿಕೊಳ್ಳಲು ದಿನಾ ಕ್ಲಬ್ಬಿಗೆ ಹೋಗಿ ಲೇಟಾಗಿ ಬರುವುದು, ಪರೀಕ್ಷೆಯ ಸಮಯದಲ್ಲಿ ಮಕ್ಕಳನ್ನು ಬಿಟ್ಟು ಊರಿಗೆ ಹೋಗುವುದು ಇತ್ಯಾದಿ ಮಾಡುತ್ತಾಳೆ. ಕೊನೆಗೆಮ್ಮೆ ಮಿಠಾಯಿವಾಲಾ ಹೋಗಿ ಬಿಟ್ಟ ಎನ್ನುವ ಸುದ್ದಿ ಕೇಳಿ ಬೇಸರದಿಂದ ಮನೆಗೆ ವಾಪಸ್ಸು ಬರುತ್ತಾಳೆ.ತಾನು ಈಗ ಇರುವ ರೀತಿಯಲ್ಲೆ ಬದುಕಲು ಪ್ರಯತ್ನಿಸುತ್ತಾಳೆ.

'ಕವಲು' ಕತೆಯ ನಾಯಕಿ ಮೀನಾಕ್ಷಿ. ಕವಲಾಗಿರುವ ತನ್ನ ಜೀವನವನ್ನು ಯಾವ ದಾರಿಯಲ್ಲಿ ಆರಿಸಿಕೊಳ್ಳುತ್ತಾಳೆ ಎಂಬುದು ಕಥೆಯ ಸಾರಾಂಶ. ತನ್ನ ಜೀವನದ ದಾರಿಯನ್ನು ತಾನು ಮೋಹಿಸಿದವನಿಂದ ಬೇರೆಯಾಗಿ ನೋಡಿಕೊಳ್ಳುವ ಮಿನಿ ಕಥೆಯುದ್ದಕ್ಕೂ ಒಂದು ಮಾತನ್ನು ಆಡುವುದಿಲ್ಲ. ಬರೀ ಕೇಳಿಸಿಕೊಳ್ಳುವವಳಾಗಿ ಉಳಿವ ಮಿನಿಯ ಎದುರು ಆತನ ತರ್ಕ ಸಂಮೋಹವಿದೆ. ಒಂದು ಕಾಲದಲ್ಲಿ ತನ್ನ ಪ್ರಿಯಕರನಾಗಿದ್ದವನು ಇಂದು ಮಿನಿಗೆ ಅಪರಿಚಿತನಂತೆ ಕಾಣಿಸುತ್ತಾನೆ. ಇನ್ನೇನು ಆತ ತುಂಬಿದ ವಿಶ್ವಾಸಕ್ಕೆ ತಲೆದೂಗಿ ಆತನನ್ನು ಮಿನಿ ಹಿಂಬಾಲಿಸುತ್ತಾಳೆ ಎನ್ನುವ ಕುತೂಹಲಕ್ಕೆ ಅನಿರೀಕ್ಷಿತ ತಿರುವಿನಿಂದ ಕಥೆ ಹೊಸ ಆಯಾಮವನ್ನು ಪಡೆದುಕೊಳ್ಳುತ್ತದೆ. ಪ್ರೀತಿಸುವಾಗ ಇವಳ ದೇಹ ಸುಖಕ್ಕೆ ಮಾತ್ರ ಬೆಲೆ ಕೊಟ್ಟ ಈತ ಮಿನಿ ವಿವಾಹದ ಮಾತನಾಡಿದರೆ ತನ್ನ ಹೆಂಡತಿ, ಮಗಳು, ಸಂಸಾರ ಇತ್ಯಾದಿಗಳ ವಿಷಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಾನೆ. ಆತನೊಡನೆ ಸಂಸಾರ ಮಾಡಬೇಕು, ವೈವಾಹಿಕ ಜೀವನ ನಡೆಸಬೇಕು ಎಂದು ಕನಸು ಕಾಣುತಿದ್ದ ಮಿನಿಯ ಆಸೆ ಆಕಾಂಕ್ಷೆಗಳಿಗೆ ಇತನಲ್ಲಿ ಆಗ ಬೆಲೆ ಇರುವುದಿಲ್ಲ. ಆದರೆ ತನ್ನ ಹೆಂಡತಿ ಸತ್ತ ನಂತರ ಇತನಿಗೆ ಮಿನಿಯ ಆಸೆ ಆಕಾಂಕ್ಷಗಳನ್ನು ಈಡೇರಿಸಬೇಕು ಎಂದೆನಿಸುತ್ತದೆ. ಅವಳಿಷ್ಟದಂತೆ ಮುಂದೆ ತಾವು ಬದುಕುಬಹುದು ಎಂಬ ಬಲೆಯನ್ನು ಮತ್ತೆ ಎಸೆಯುತ್ತಾನೆ. ಇಪ್ಪತ್ತು ವರ್ಷಗಳ ಹಿಂದೆ ಆತನೆಸೆದ ಪ್ರೀತಿಯ ಬಲೆಗೆ ಬಿದ್ದವಳು ಮಿನಿ. ಆತನಿಗೆ ಈಗಾಗಲೇ ವಿವಾಹವಾಗಿದೆ ಎಂದು ತಿಳಿದಿದ್ದರೂ ಸಹ ಆತನ ಪ್ರೀತಿಯ ಮಾತುಗಳಿಗೆ ಬಲಿಯಾಗಿ ತನ್ನ ಜೀವನವನ್ನು ಒಂದು ನೆಲೆ ಇಲ್ಲದಂತೆ ಮಾಡಿಕೊಳ್ಳುತ್ತಾಳೆ. ಹಿಂದೂ ವಿವಾಹದ ಪವಿತ್ರ ನಿಯಮದಂತೆ ಅಗ್ನಿಸಾಕ್ಷಿಯಾಗಿ ಮದುವೆಯಾದ ಹೆಂಡತಿಗೆ ತಿಳಿಯದಂತೆ ಈಕೆಯೊಡನೆ ಆತ ಸಂಬಂಧವಿರಿಸಿಕೊಳ್ಳುತ್ತಾನೆ. ಮಿನಿಯು ತನ್ನನ್ನು ವಿವಾಹವಾಗುವಂತೆ ಕೇಳಿದಾಗ ಆತನ ಬಾಯಿಂದ ಪಾಪ, ಪುಣ್ಯ, ದ್ರೋಹದ ಮಾತುಗಳು ಉದುರುತ್ತವೆ. ತನ್ನ ಮೊಸಳೆ ಕಣ್ಣೀರಿನಿಂದ ಇವಳಿಗೆ ಮೋಸ ಮಾಡುತ್ತಿರುತ್ತಾನೆ. ಹೆಂಡತಿ ಶಾಂತ ಸತ್ತ ನಂತರ ಆತ ಮಿನಿಯೊಡನೆ ಮದುವೆಯ ಮಾತನಾಡುತ್ತಾನೆ. ಇಲ್ಲೂ ಸಹ ಪ್ರತಿ ಬಾರಿಗೂ ಆತ ಶಾಂತಳನ್ನು ನೆನಪಿಸಿಕೊಳ್ಳುತ್ತಿರುತ್ತಾನೆ. ಹೆಂಡತಿ ಸತ್ತಿರುವ ದುಃಖವನ್ನು ಮರೆಯುವ ಮಾರ್ಗವಾಗಿ ಆತ ಮಿನಿಯನ್ನು ಯಾವ ಆತಂಕ, ಭಯವಿಲ್ಲದೆ ಕೂಡಲು ದಾರಿ ಮುಕ್ತವಾಗಿದೆ ಎಂಬುದನ್ನು ತನ್ನ ಮಾತುಗಳಲ್ಲಿ ತಿಳಿಸುತ್ತಾನೆ.

ತನ್ನ ಹೆಂಡತಿ ಶಾಂತಾಳಿಗೆ ತಮ್ಮಿಬ್ಬರ ಸಂಬಂಧದ ವಿಷಯ ತಿಳಿದು ಆಕೆ ರಾಕ್ಷಸಿಯಾಗಿದ್ದಾಳೆ ಎಲ್ಲರ ಎದುರು ಅತ್ತು ಕರೆದು ರಂಪ ಮಾಡುತ್ತಿದ್ದಾಳೆ ಎಂದು ಹೇಳುವ ಈತ ಮಿನಿ ಮತ್ತು ತನ್ನ ಸಂಬಂಧವು ಸಮಾಜದಲ್ಲಿ ಮರ್ಯಾದೆ ತೆಗೆಯುವಂತದ್ದು ಎನ್ನುತ್ತಾನೆ. ಹೆಂಡತಿಗೆ ಹೆಚ್ಚು ಪ್ರಾಶಸ್ತ್ಯ ನೀಡುವ ಈತ ಇವಳನ್ನು ಕಡೆಗಣಿಸುತ್ತಾನೆ. I am a brave man ಎಂದು ಹೇಳುವ ಈತ ಒಂದು ರೀತಿಯ ಪಾಪ ಪ್ರಜ್ಞೆಯಲ್ಲಿ ಸಿಕ್ಕೂ ತಾನು ಅಧೀರನಾಗಿಲ್ಲವೆಂಬ ಸಮಾಧಾನದ ಮಾತನಾಡುವವನು.

ಇಡೀ ಕಥೆಯಲ್ಲಿ ಈತನೊಬ್ಬನೆ ಮಾತನಾಡುತ್ತಾನೆ. ಈತ ಆಡುವ ಮಾತುಗಳೆಲ್ಲವೂ ಯಾವ ದೃಷ್ಟಿಯಿಂದ ಪರೀಕ್ಷಿಸಿದರೂ ಅವು ಮಿನಿಯ ಮನಸ್ಸನ್ನು ಗೆದ್ದುಕೊಳ್ಳಲು ಮಾಡುವ ಪ್ರಯತ್ನದಂತೆ ಭಾಸವಾಗುತ್ತವೆ. ಆತನ ನಿರ್ಧಾರದಲ್ಲಿನ ಇಬ್ಬಂದಿತನದ ತೊಡಕಿನಿಂದಾಗಿ ಮಿನಿಗೆ ಆತ ತನ್ನನ್ನು ಪೂರ್ತಿಯಾಗಿ ನಂಬಲಾರ ಎಂಬ ಆಂತರಿಕ ಎಚ್ಚರಿಕೆ ಮಿನಿಯಲ್ಲಿ ಉದ್ಭವಗೊಳ್ಳುತ್ತದೆ. ಈಗ ತಾನು ಯಾವುದೇ ಉತ್ಕಟ ಭಾವಪರಶತೆಗೆ ಒಳಗಾಗಿ, ಒಂದು ವೇಳೆ ಆತನನ್ನು ಕೂಡಿಕೊಂಡರೆ ತನ್ನ ಬದುಕು ಅತಂತ್ರವಾದೀತು ಎಂಬ ಅಳುಕು ಅವಳನ್ನು ತೀವ್ರವಾಗಿ ಘಾಸಿಗೊಳಿಸುತ್ತದೆ. ಈ ಎಲ್ಲಾ ಕಾರಣದಿಂದಾಗಿ ತಾನು ಇನ್ನೇನು ಕೈಬಿಟ್ಟಿದ್ದ ಕೆನಾಡಕ್ಕೆ ಹೋಗುವ ವಿಚಾರಕ್ಕೆ ಮತ್ತೆ ಜೀವ ನೀಡಿ ಅದನ್ನು ತಲೆಗೇರಿಸಿಕೊಳ್ಳುತ್ತಾಳೆ. ಜೋಡಿಯಾಗಿ ಈತನೊಡನೆ ಬಾಳುವುದಕ್ಕಿಂತ ಒಂಟಿತನವೇ ಲೇಸೆಂದು ನಿರ್ಧಾರ ಮಾಡುತ್ತಾಳೆ.

ಗಂಡಸು ತನ್ನಲ್ಲಿರುವ ಅಡ್ಡ ಉದ್ದೇಶಗಳ ಸಾಧನೆಗಾಗಿ ಹಾದಿ ತಪ್ಪುವಂತಾದರೂ ಅವನು ಒಬ್ಬ ಭಾವಜೀವಿ ಎಂಬ ಕಾರಣದಿಂದ ನಿಷ್ಠುರನಾಗಲಾರ ಮತ್ತು ನಿಷ್ಕರುಣಿಯಾಗಲಾರ ಎನ್ನುವುದು ಒಂದು ಸತ್ಯ. ಈ ರೀತಿಯ ದ್ವಂದ್ವ ಮನಸ್ಸಿನವನನ್ನು ದೋಲಾಯಮಾನ ಸ್ಥಿತಿಯವನನ್ನು ಕೈ ಹಿಡಿದರೆ ತನ್ನ ಬದುಕು ನರಕ ಸದೃಶ್ಯವಾಗುತ್ತದೆ ಎಂಬ ಮತ್ತೊಂದು ಸತ್ಯವನ್ನು ಇಲ್ಲಿ ಕಾಣಬಹುದು. ಗಂಡಿನೊಡನೆಯ ಸಂಬಂಧದ ಬಗ್ಗೆ ಮೈ ಚಪಲತೆಯ ಬಗ್ಗೆ ಅಸಹ್ಯವೆನಿಸಿದರೂ ಮಿನಿಯು ಆತನೊಡನೆ ನಡೆಸುವ ಸಂಬಂಧಕ್ಕೆ ಪ್ರೀತಿಯೆಂಬ ಸಂಸ್ಕಾರವಿದೆ. ಆ ಸಂಸ್ಕಾರಕ್ಕೆ ದ್ರೋಹವಾಗುವುದು ಕಥೆಯ ವಸ್ತುವಾಗಿದೆ. ಕಥೆಯಲ್ಲಿ ಮಿನಿಯಲ್ಲಾಗುವ ವಿಕಾಸದ ರೀತಿಯೇ ಭಿನ್ನವಾಗಿದೆ. ಮಿನಿ ಆತನೊಂದಿಗಿನ ತನ್ನನು ತಾನೇ ಚಿತ್ರ ರೂಪದಲ್ಲಿ ಪರಿಭಾವಿಸುತ್ತಾ ತನ್ನ ಗೈರುಹಾಜರಿಯನ್ನು ಕಂಡುಕೊಂಡು ಸ್ವಂತ ಅರಿವನ್ನು ಕಂಡುಕೊಳ್ಳುತ್ತಾಳೆ. ತನ್ನನ್ನು ದಾರಿ ಮಾಡಿಕೊಂಡು ಹೆಂಡತಿ ಶಾಂತಾಳನ್ನೂ, ಶಾಂತಾಳನ್ನು ದಾರಿ ಮಾಡಿಕೊಂಡು ತನ್ನನ್ನು ಗಳಿಸಿಕೊಳ್ಳುವ ವ್ಯವಹಾರ ಚತುರತೆ ಆತನದೆಂದು ಆಕೆಗೆ ಅರಿವಾಗುತ್ತದೆ. ಮತ್ತೊಬ್ಬರಿಂದ ಬಳಸಲ್ಪಡುವ ದಾರಿ ತಾನಾಗಲಾರೆ ಎಂಬ ನಿರ್ಧಾರ ಅವಳ ಪ್ರಜ್ಞಾ ಸ್ವಾತಂತ್ರ್ಯದ ಸೂಚಕವಾಗಿ ಕಥೆ ಬಿಂಬಿತವಾಗಿದೆ.

'ನಿರಾಕರಣೆ' ಕಥೆಯಲ್ಲಿ ಪುರಾಣದ ಶಕುಂತಲೆಯನ್ನು ಸ್ತ್ರೀತ್ವದ ಅನುಭವದ ಹಿನ್ನೆಲೆಯಿಂದ ಚಿತ್ರಿಸಿದ್ದಾರೆ. ಕಥೆಯಲ್ಲಿ ಒಂದು ಕಾಲದಲ್ಲಿ ತಾನೇ ತಿರಸ್ಕರಿಸಿದ ಶಕುಂತಲೆಯನ್ನು ದುಷ್ಯಂತ ಮರು ಭೇಟಿಯಾಗುತ್ತಾನೆ. ಮತ್ತೆ ಅವಳೊಂದಿಗೆ ಬದುಕುವ ನಿರ್ಧಾರ ತಿಳಿಸುತ್ತಾನೆ. ಆದರೆ ತನ್ನದಲ್ಲದ ತಪ್ಪಿಗೆ ಆತನಿಂದ ತಿರಸ್ಕೃತಳಾಗಿ ಅವಮಾನಿತಳಾಗಿದ್ದ ಶಕುಂತಲೆ ಅವನೊಂದಿಗೆ ಇಷ್ಟಪಡುವದಿಲ್ಲ. ಪುರಾಣಾದ ಪ್ರೇಮದ ಸಂಕೇತವಾಗಿರುವ ದುಶ್ಯಂತ ಮತ್ತು ಶಕುಂತಲೆಯ ಸಂಬಧಗಳ ಕುರಿತು ಕತೆಯಲ್ಲಿ ಹೊಸ ವ್ಯಾಖ್ಯೆ ದೊರೆಯುತ್ತದೆ.

ಪುರುಷರಿಗೆ ತಾವು ಮಾಡಿದ ತಪ್ಪಿನಿಂದ ಪಾರಾಗಲು ನೂರು ದಾರಿಗಳಿರುತ್ತವೆ. ತಾನು ಮಾಡಿದ ತಪ್ಪಿನಿಂದ ಅಥವಾ ದುಷ್ಟ ವರ್ತನೆಯಿಂದ ಬೇರೆಯವರಿಗೆ ಅಗುವ ನೋವಿನ ಹೊಣೆಯಿಂದ ತಪ್ಪಿಸಿಕೊಳ್ಳಲು ಅತನಿಗೆ ಹಲವು ಮಾರ್ಗಗಳಿವೆ. ಪುರುಷ ತಪ್ಪುಮಾಡಿದನೆಂದರೆ ನಮ್ಮ ಸಮಾಜ ಗಭೀರವಾಗಿ ಪರಿಗಣಿಸುವುದಿಲ್ಲ. ತಾನು ಮಾಡಿದ ತಪ್ಪಿನಅರಿವು ಅತನಿಗೆ ಇಲ್ಲದಿರುವುದರಿಂದ ಅತನಿಗೆ ನಾಚಿಕೆಯು ಅಗುವುದಿಲ್ಲ ಎಂದು ಶಕುಂತಲೆಯು ಅಭಿಪ್ರಾಯ ಪಡುತ್ತಾಳೆ.

ಶಕುಂತಲೆಯು ಇಲ್ಲಿ ತಾನು ಹಿಂದೆ ಅವನಿಗಾಗಿ ಹಂಬಲಿಸಿ ಅತನ ಬಳಿಗೆ ಬಂದಾಗ ದುಶ್ಯಂತ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಅಕೆಯನ್ನು ನಿರಾಕರಿಸುತ್ತಾನೆ. ಈಗ ದುಶ್ಯಂತ ಶಕುಂತಲೆಯ

ಬಳಿಗೆ ಬಂದು ಆಕೆಯೊಡನೆ ಬಾಳಲು ಹವಣಿಸುತ್ತಿರುವಾಗ ಶಕುಂತಲೆಯು ಜೀವ ಇಲ್ಲದಿರುವ ಉಂಗುರ ಕಳೆದು ಹೋಯಿತೆಂಬ ಕ್ಷುಲಕ ನೆಪದಿಂದ ಒಬ್ಬ ಗಂಡಸು ತಾನು ಪ್ರೀತಿಸಿ ಫಲಿಸಿದ ಹೆಣ್ಣನ್ನು ದೂರ ಮಾಡುವುದಾದರೆ ಆ ಪ್ರೀತಿಗೆ ಅರ್ಥವಿಲ್ಲ ಎಂಬ ಗಟ್ಟಿ ನಿರ್ಧಾರಕ್ಕೆ ಬರುತ್ತಾಳೆ. ತನ್ನನ್ನು ಸಂದೇಹಿಸಿದವನನ್ನು ತಾನು ಮತ್ತೆ ತನ್ನ ಅತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಿ ಅತನೊಡನೆ ಬಳಾಲಾರೆ ಎಂದು ದುಶ್ಯಂತನನ್ನು ನಿರಾಕರಿಸುತ್ತಾಳೆ.

'ಬಿಡುಗಡೆ' ಕಥೆಯ ನಾಯಕಿ ಸರೋಜ. ಈಕೆಯ ಗಂಡನ ಸಾವಿನೊಂದಿಗೆ ಸರೋಜಳ ಅಂತರಗದಲ್ಲಿನ ವಿವಿಧ ಭಾವನೆಗಳು ತೆರೆದುಕೊಳುತ್ತವೆ. ಗಂಡನ ಸಾವಿನ ದುಃಖದಿಂದ ಸರೋಜಳಿಗೆ ಶಾಕ್ ಅಗಿದೆಯೆಂದು ಹೊರಗಿನ ಜನ ಮಾತನಾಡಿಕೊಳ್ಳುತ್ತಾರೆ. ಆದರೆ ಸರೋಜಳ ಮನಸ್ಥಿತಿಯೇ ಬೇರೆಯಾಗಿರುತ್ತದೆ, ಗಂಡನ ಸಾವು ಸರೋಜಾಳಿಗೆ ಏನೂ ಅನ್ನಿಸುವುದಿಲ್ಲ.ಇದ್ದಷ್ಟು ದಿನ ತನ್ನನ್ನು ಕಾಡಿ ಪೀಡಿಸಿದ ಗಂಡ ಸತ್ತನೆಂದು ಆಕೆ ನಿರ್ಲಪ್ತತೆಯಿಂದ ಹಾಲು ಕುಡಿಯುತ್ತಾಳೆ. ಮದುವೆಯಾಗುವ ಪ್ರತಿಯೊಬ್ಬ ಹೆಣ್ಣಿಗೂ ಮದುವೆ ಹಾಗೂ ಮದುವೆಯಾಗುವ ಗಂಡನ ಬಗ್ಗೆ ತನ್ನದೆ ಆದ ಕನಸುಗಳಿರುವಂತೆ ಕಥೆಯ ನಾಯಕಿಗೂ ಕನಸುಗಳಿವೆ. ಗಂಡನಾಗುವವನು ಹೆಂಡತಿಯಾಗುವವಳ ಎಲ್ಲಾಇಷ್ಟನಿಷ್ಟಾಗಳನ್ನು ಅರಿತು ಅವಳೊಂದಿಗೆ ಜೀವನ ನೆಡೆಸಬೇಕು ಎಂಬುದು ಈಕೆಯ ಅಭಿಪ್ರಾಯ.

ಬೆಳಗಿನ ಸವಿ ನಿದ್ದೆಯಿಂದ ಹೆಂಡತಿಯನ್ನು ಎಬ್ಬಿಸಲು ಇಷ್ಟಪಡದ ಗಂಡ ತಾನೆ ಬೆಳ್ಳಿಗೆಯ ತಿಂಡಿ ಮಾಡುವವನು. ಸಂಬಳದ ದಿನ ತನಗೆ ಬಂದ ಪೂರ್ತಿ ಸಂಬಳವನ್ನು ಹೆಂಡತಿಯ ಕೈಗೆ ನೀಡಿ ಮನೆಯ ಸಂಪೂರ್ಣ ಜವಾಬ್ದಾರಿಯ ಹೊಣೆಯನ್ನು ಅಕೆಗೆ ನೀಡಿ ಅಕೆಗೆ ಸಹಾಯಕನಾಗಿ ಜೊತೆಗೆರುವನು. ತನ್ನಿಂದ ಹೆಂಡತಿಗೆ ಯಾವುದೇ ರೀತಿಯಲ್ಲಿ ಬೇಸರವುಂಟಾದರೆ ಆದನ್ನು ನಿವಾರಿಸಿ ಆಕೆ ಸದಾ ಉಲ್ಲಾಸಿತಳಾಗಿರುವಂತೆ ನೂಡಿಕೊಳ್ಳುವವನು. ಹಾಗೆಯೇ ಆಕೆಗೆ ಏನೆಲ್ಲಬೇಕು ಅನ್ನುವುದನ್ನೂ ಅತ ಎಷ್ಟುಚೆನ್ನಾಗಿ ಬಲ್ಲವನಾಗಿರುತ್ತಾನೆಂದರೆ "ಆಕೆಗೆ ಚೈನೀಶ್‌ಡಿಶ್ ಸೇರುತ್ತವೆ ,ಅಖ್ತರ್ ಬೇಗಮೌನ ಗಜಲ್ ಸೇರುತ್ತದೆ. ಬಿಳಿ ಹಾಗೂ ತಿಳಿಗುಲಾಬಿ ಬಣ್ಣಗಳು ಸೇರುತ್ತವೆ. ಬೆಳದಿಂಗಳಿನಲ್ಲಿ ತಿರುಗಾಡುವುದು ಸೇರುತ್ತದೆ. ಹೊರಗೆ ಮಳೆ ಬರುತ್ತಿದ್ದಾಗ ಒಳಗೆಬೆಚ್ಚಗೆ ಕೂತು ಬಿಸಿ ಚಹಾದೂಡನೆ ಕಾಂದಾಭಜ್ಜಿ ತಿನ್ನಲು ಸೇರುತ್ತದೆ ಹಗುರವಾದ ಕಾಟನ್‌ಸೀರೆಗಳು ಸೇರುತ್ತವೆ. ರಾತ್ರಿ ಅತನ ಎದೆಯಲ್ಲಿ ಮುಖ ಹುದುಗಿಸಿ ಮಲಗಲು ಸೇರುತ್ತದೆ" (೫) ಎಂದು ಆಕೆಯ ಇಷ್ಟ ತಿಳಿದವನು. ಮಗುವಿನ ರಾತ್ರಿಯ ಜವಾಬ್ದಾರಿಯನ್ನು ತಾನು ಹೊರುವವನು. ಸ್ಕೂಲಿಗೆ ಮಕ್ಕಳನ್ನು ರೆಡಿ ಮಾಡುವವನು. ಒಟ್ಟಿನಲ್ಲಿ ಹೆಂಡತಿಗೆ ಕೇವಲ ಜವಾಬ್ದಾರಿಯನ್ನು ಹೊರಿಸದ ಗಂಡನಾಗಿ ಆಕೆಯ ಚಿಕ್ಕಪುಟ್ಟ ಅಸೆಗಳನ್ನು ಪೂರೈಸಲು ಪ್ರಮಾಣಿಕವಾಗಿ ಪ್ರಯತ್ನಿಸುವವನು. ಸರೋಜಾಳ ಮನಸ್ಸಿನ ಆದರ್ಶ ಗಂಡನ ಚಿತ್ರವಿದು.

ಸರೋಜಾಳ ಮನಸ್ಸಿನ ಕಲ್ಪನೆಯಲ್ಲಿರುವ ಆದರ್ಶ ಗಂಡನಿಗೆ ವಿರುದ್ಧ ಎಂಬಂತೆ ಆಕೆಯ ವಾಸ್ತವ ಗಂಡನಿದ್ದಾನೆ. ಹೆಂಡತಿಯಾದ ಸರೋಜಾಳನ್ನು ಸರೋಜಿ ಎಂದು ಏಕ ವಚನದಲ್ಲಿಕರೆಯುತ್ತಾನೆ. ತಿಂಗಳೆಲ್ಲ ದುಡಿದ ಆಕೆಯ ಸಂಬಳವನ್ನು ತನ್ನ ಕುಡಿತ, ಜೂಜು ಇತ್ಯಾದಿ ಚಟಗಳಿಗೆ ನೀಡಲಿಲ್ಲವೆಂದು ಜಗಳವಾಡುತ್ತಾನೆ. ಹೆಂಡತಿಯನ್ನು ಕೆಲಸಕ್ಕೆ ಕಳುಹಿಸುವ ಈತ ಅಕೆ ತನ್ನ ಸಹದ್ಯೋಗಿಗಳ ಜೊತೆ ಮಾತನಾಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸುವನು. ಮಕ್ಕಳು ಅಪರೂಪಕ್ಕೆ ಹೋಟೆಲಿಗೆ ಊಟಕ್ಕೆ ಹೋಗೋಣವೆಂದರೆ ಅದು ಕೆಟ್ಟ ಅಭ್ಯಾಸವೆಂದು ಹೇಳಿ ಅವರ ಆಸೆಗೆ ತಣ್ಣೀರೆರಚಿ ತಾನು ಮಾತ್ರ ಕ್ಲಬ್ಬಿಗೆ ಡಿನ್ನರ್‌ಗೆ ಹೋಗುತ್ತಾನೆ. ಮಕ್ಕಳು ಅಟ ಆಡುತ್ತ ಗಲಾಟೆ ಮಾಡುತ್ತಿದ್ದರೆ ಅದು ಕಿರಿ ಕಿರಿ ಎಂದು

ಬೈಯ್ಯುವವನು. ತನ್ನ ಸಂಬಳದ ಜೊತೆ ಆಕೆಯ ಸಂಬಳವನ್ನು ಹಾಳು ಮಾಡುವ ಈತ ಸಂಸಾರದ ಯಾವುದೇ ಜವಾಬ್ದಾರಿ ಹೊರಲು ಸಿದ್ದನಿರುವುದಿಲ್ಲ. ಮಕ್ಕಳು ಹಾಲು ಕುಡಿಯುವುದಕ್ಕು ಆಕ್ಷೇಪ ವ್ಯಕ್ತಪಡಿಸಿ ತಾನೊಬ್ಬ ಹಾಲು ಕುಡಿದರೆ ಸಾಕೆಂದು ಹೇಳುವವನು. ಹೆಂಡತಿಗೆ ಜ್ವರ ಬಂದು ಮಲಗಿದರೆ ನಾಟಕವಾಡುವವಳೆಂದು ಹಿಯಾಳಿಸಿ ಅವಳಿಗೆ ಒಂದಿಷ್ಟು ಕರುಣೆಯನ್ನು ತೋರಿಸದವನು. ತನ್ನಗೆ ಸ್ವಲ್ಪ ಮೈ. ಕೈ. ನೋವಿಗೆ ಜ್ವರವೆ ಬಂದು ಬಿಟ್ಟಿತೆಂದು ಮುನ್ನೆಚ್ಚರಿಕೆಯಗಿ ರಜೆ ತೆಗೆದುಕೊಂಡು ಹೆಂಡತಿಗೆ ತನ್ನ ಸೇವೆ ಮಾಡಲು ಹೇಳುವ ಕ್ರೂರ ವ್ಯಕ್ತಿತ್ವದವನು. ಸರೋಜಾಳಿಗೆ ಇವನಂಥ ಗಂಡ ಸಿಕ್ಕಿರುವುದು ಆಕೆಯ ಪುಣ್ಯ ಎನ್ನುವುದು ಇವನ ಅಭಿಪ್ರಾಯ.

ನಿಜ ಜೀವನದಲ್ಲಿ ಈ ರೀತಿ ಕಾಡಿಸಿ ಪೀಡಿಸಿದಾತ ಇಂದು ಹೃದಯಾಘಾತಕ್ಕೆ ಒಳಗಾಗಿ ಸಾವಿಗೀಡಾಗಿದ್ದಾನೆ. ಗಂಡನಿಂದ ನರಕಯಾತನೆಗೆ ಒಳಗಾಗಿದ್ದ ಸರೋಜಾಗೆ ತನ್ನ ಜೀವನದಲ್ಲಿ ನಡೆದ ಈ ನಂಬಲಾಗದಂಥ ಈ ಸ್ವಭಾವಗಳ ಪಲ್ಲಟದಲ್ಲಿ ಆತ ಹೃದಯಾಘಾತಕ್ಕೆ ಒಳಗಾಗಿದ್ದರ ಬಗ್ಗೆ ಎಳ್ಳಷ್ಟೂ ಮರುಕವಿಲ್ಲದಂತಾಗಿತ್ತು. ಎಲ್ಲರಿಗಿಂತ ಹೆಚ್ಚಾಗಿ ಅತ್ತು ದುಃಖ ಪಡಬೇಕಾದವಳು ತಾನು ಎಂಬ ಭಾವನೆ ಮನಸ್ಸಿನಲ್ಲಿ ಮೂಡಿದರು ಅದರಂತೆ ನಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಗಂಡ ಸತ್ತಿರುವುದನ್ನು ಕಂಡ ಸರೋಜ ಆದರ್ಶ ಗಂಡನಿಗು ಈತನಿಗು ಇರುವ ವ್ಯತ್ಯಾಸವನ್ನು ಕನಸ್ಸಿನಲ್ಲಿ ಗುರತಿಸುತ್ತಾಳೆ. ಕನಸು ಕಾಣುತ್ತಿದ್ದರು ವಾಸ್ತವದಲ್ಲಿ ಆಕೆ ಎಚ್ಚರವಾಗಿದ್ದಾಳೆ. ತನ್ನನ್ನು ವಿವಾಹವಾದವನು ಸತ್ತು ಹೋಗಿದ್ದಾನೆ, ಮೂರು ಮಕ್ಕಳನ್ನು ಹುಟ್ಟಿಸಿದವನು, ಮೂವತ್ತೈದು ವರ್ಷ ತನ್ನ ಜೊತೆ ಬಾಳಿದವನು. ಬಾಳಿ ತನ್ನ ಕನಸುಗಳನ್ನು ಕನಸುಗಳಾಗಿಯೇ ಉಳಿಸಿದಾತ ಇಂದು ಸತ್ತಿದ್ದಾನೆ ಎಂಬ ವಿಚಾರ ಆಕೆಗೆ ವಾಸ್ತವದಲ್ಲಿ ತಿಳಿದಿದೆ.

ಗಂಡ ಸತ್ತ ಈ ಸಂದರ್ಭದಲ್ಲಿ ಆಕೆಗೆ ಮೈ–ಮನಸ್ಸು ಹಗುರವಾದಂತಹ ಅನುಭವವಾಗುತ್ತದೆ. ಒಂದು ರೀತಿಯ ಬಿಡುಗಡೆಯ ಭಾವವನ್ನು ಅನುಭವಿಸುತ್ತಾಳೆ. ತಾನು ಇದುವರೆವಿಗೂ ಅನುಭವಿಸಿದ ಎಲ್ಲಾ ನೋವು, ಅಪಮಾನಗಳಿಂದ, ಹಿಂಸೆಗಳಿಂದ, ನಿರಾಶೆಯಿಂದ ತನಗಾದ ಅನ್ಯಾಯದಿಂದ, ಗಂಡನ ದಬ್ಬಾಳಿಕೆಯಿಂದ ಕಳಚಿಕೊಂಡಂತಹ ಮನೋಭಾವ ಆಕೆಯಲ್ಲಿ ಕಂಡು ಬರುತ್ತದೆ. ವಾಸ್ತವದಲ್ಲಿ ಇತರರಂತೆ ಅಥವಾ ಅದಕ್ಕೂ ಹೆಚ್ಚಿನ ದುಃಖ ತನಗಾಗಬೇಕು ಆದರೂ ತಾನು ದುಃಖಿಸುತ್ತಿಲ್ಲವೆಂಬುದು ಅದಕ್ಕೆ ಕಾರಣವೂ ಈಕೆಗೆ ತಿಳಿದಿದೆ. ಆಕೆಗೆ ದುಃಖವಾಗುತ್ತಿದೆ, ಗಂಡ ಸತ್ತಿದ್ದಕ್ಕಲ್ಲ ಆತ ಸಾಯಿಸಿದ ತನ್ನ ಅಸಂಖ್ಯ ಕನಸುಗಳಿಗಾಗಿ ಮತ್ತು ತನ್ನ ವ್ಯಕ್ತಿತ್ವದ ಕೊಲೆಗಾಗಿ ದುಃಖಿಸುತ್ತಾಳೆ. ಗಂಡ ಸತ್ತದು ಸರೋಜಗೆ ಬಿಡುಗಡೆಯ ಭಾವವನ್ನು ಸೂಚಿಸುತ್ತದೆ. ಕಥೆಯ ಮುಖ್ಯವಾದ ಅಂಶವಿದು. ಈ ಕಥೆಯ ಕೊನೆಯಲ್ಲಿ ಬರುವ ವಾಕ್ಯವು ಅವಳ ನಿರ್ಧಾರವನ್ನು ಸೂಚಿಸುತ್ತದೆ.

"ನಂತರ ಮಗ ತನ್ನನ್ನು ಕರೆಯಲು ಬರುವ ಮೊದಲೇ, ಹಾಲು ಕುಡಿದು ಹಗುರವಾದ ದಿಟ್ಟವಾದ ಹೆಜ್ಜೆಗಳನ್ನಿಡುತ್ತ ಪಡಸಾಲೆಗೆ ಬಂದಳು" (೬)

"ಅವಳು ಪಡಸಾಲೆಗೆ ಬರುವುದು ಅವಳು ಪಡೆದುಕೊಂಡಿರುವ ಬಿಡುಗಡೆಯ ಭಾವದ ಸೂಚನೆಯಾಗಿದೆ. ಹೀಗಾಗಿ ಈ ಕತೆಯ ಮುಕ್ತಾಯ ತುಂಬ ಮಹತ್ವದ್ದಾಗುತ್ತದೆ. ಗಂಡನ ಸಾವು ಸರೋಜಳ ಜೀವನದಲ್ಲಿ ಬಿಡುಗಡೆಯಾಗುತ್ತದೆ. ಈ ಬಿಡುಗಡೆಯು ಅವಳ ಜೀವನದಲ್ಲಿ ಮಹತ್ವಪೂರ್ಣವಾದುದು". (೭)

ಹೆಣ್ಣಿನ ಪ್ರೀತಿ–ವಿಶ್ವಾಸದ ಸಂಬಂಧಗಳ ಮಾರ್ದತೆಯನ್ನು ಹೊಸಕಿ ಹಾಕುವ ಗಂಡಿನ ಅಹಂಕಾರ, ಸ್ವಪ್ರತಿಷ್ಠೆ, ದರ್ಪ, ದುರಭಿಮಾನಗಳ ವಿಕೃತ ರೂಪವನ್ನು ಕಥೆ ಪ್ರದರ್ಶಿಸುತ್ತದೆ. ಹೆಣ್ಣು ಅದರಲ್ಲೂ ಎಚ್ಚೆತ್ತ ನಾಗರೀಕ ಹೆಣ್ಣು ಪುರುಷ ಪ್ರಾಧಾನದ ಮಾನವೀಯ ಕೋಟೆಯ ಕೋಟಲೆಗೆ ಒಳಗಾಗದೆ ತನ್ನ ಅಸ್ಥಿತ್ವವನ್ನು ಬಿಡುಗಡೆಯ ಮೂಲಕ ಕಾಪಾಡಿಕೊಳ್ಳುವುದರಲ್ಲೆ ಜಾಣ್ಮೆ ತೋರಬೇಕೆಂಬುದೆ ಈ ಕತೆಯ ಜೀವಾಳ. ಕನಸಿನ ತಂತ್ರ, ಆದರ್ಶಮಯ ಮಜಲಿನಿಂದಿಳಿದು ವಾಸ್ತವದ ಕ್ರೂರ, ಕಠೋರ ಸತ್ಯವನ್ನು ಬೆಳಕಿಗೆ ತರುವಲ್ಲಿ ಲೇಖಕಿ ಇಲ್ಲಿ ಯಶಸ್ವಿಯಾಗಿದ್ದಾರೆ.

ಸಮಕಾಲೀನ ಸಂದರ್ಭದಲ್ಲಿ ಉದ್ಯೋಗಸ್ಥ ಕೆಳ ಮಧ್ಯಮ ವರ್ಗದ ಮಹಿಳೆಯರು ಹೆಚ್ಚು ದೈಹಿಕ ಮಾನಸಿಕ ಒತ್ತಡಗಳಿಂದ ಬಳಲುವ ಏಕತಾನತೆಯಲ್ಲಿ ತಳಮಳಿಸುವ ಚಿತ್ರಗಳಿಗೆ ಈ ಕಥೆ ಕನ್ನಡಿ ಹಿಡಿದಂತಿದೆ. ಮಹಿಳಾ ಪ್ರತಿಭಟನೆಯ ಒಂದು ಯಶಸ್ವೀ ಕಥೆ ಎನ್ನಬಹುದು. ಗಂಡ ಸತ್ತಾಗ ಅವನು ಸತ್ತಿರುವುದಕ್ಕೆ ಹಾಲು ಕುಡಿದು ಬಿಡುಗಡೆ ಹೊಂದುವ ಹೆಂಡತಿ ಒಂದು ದೊಡ್ಡ ಪ್ರತಿಭಟನೆಯನ್ನು [illegible]ಸುತ್ತಾಳೆ. ಹಂಡತಿಯ ರಕ್ತ ಹೀರುತ್ತಿದ್ದ ಗಂಡ ಸತ್ತಿದ್ದಕ್ಕೆ ಆಕೆ ಹಾಲು ಕುಡಿಯುವುದು ಅವಳ ಗೆಲುವಿನ ಸಂಕೇತವಾಗಿದೆ.

'ನೀನೇ ತಂತಿ' ಕಥೆಯ ನಾಯಕಿ ಸರು. ಈಕೆ ಒಮ್ಮೆ ಏನಾದರು ಭಯಂಕರವಾದುದನ್ನು ಮಾಡಬೇಕು ಎನ್ನುತ್ತಿದ್ದವಳು ಇದ್ದಕ್ಕಿದ್ದಂತೆ ಏನೂ ಮಾಡಲಾಗದ ಸ್ಥಿತಿಗೆ ತಲುಪುತ್ತಾಳೆ. ಎಲ್ಲಾ ಬಂಧನಗಳನ್ನು ಕಡಿದೊಗೆಯಬೇಕು ಎಂದು ಕೊಂಡವಳು ತಾಯ್ತನದ ಕಾರಣದಿಂದಾಗಿ ಹಳೆ ವಾದಕ್ಕೆ ಹೊಸ ತಂತಿ ಹಾಕಿ ಹೊಸರಾಗ ಶುರು ಮಾಡಬೇಕು ಎಂಬ ನಿರ್ಧಾರಕ್ಕೆ ಬರುತ್ತಾಳೆ.

ಮೇಲುನೋಟಕ್ಕೆ ಇದೊಂದು ರೊಮ್ಯಾಂಟಿಕ್ ಕಥೆಯಂತೆ ಕಾಣುತ್ತದೆ. ಹಿಂದೊಮ್ಮೆ ತಾನು ಪ್ರೀತಿಸಿದವನನ್ನು ನೆನೆದು ಕಾಲ ತಳ್ಳುವ ಸರು, ಅವಳನ್ನು ಅತಿಯಾಗಿ ಪ್ರೀತಿಸುತ್ತಲೇ ತಮ್ಮಿಬ್ಬರ ನಡುವೆ ಏನೋ ಕೊರತೆ ಇದೆ ಎಂದು ನಂಬುವ ಗಂಡ ಹರೀಶ, ಈ ಎರಡೂ ಪಾತ್ರಗಳ ನಡುವೆ ಕಂಡು ಕಾಣದಂತೆ ಕಾಡುವ ಸರೂನ ಪ್ರಿಯಕರ. ಈ ಮೂರು ಪಾತ್ರಗಳ ಮೂಲಕ ತ್ರಿಕೋನ ಪ್ರೇಮ ಕಥೆಯನ್ನು ನಿರೂಪಿಸುತ್ತದೆ. ಮನೆಯಲ್ಲಿ ಪಂಜರದೊಳಗಿರುವ ಗಿಳಿಯು ಒಂದು ಪ್ರಮುಖ ಪಾತ್ರದಂತೆ ಭಾಸವಾಗುತ್ತದೆ.

ಕಥೆಯ ನಾಯಕಿ ಸರೂ ಹಿಂದೊಮ್ಮೆ ಸ್ವಲ್ಪ ಕಾಲ ತನ್ನೊಂದಿಗಿದ್ದ ಗೆಳೆಯನನ್ನು ನೆನೆದು ಹಾಡುವ ಹಾಡು 'ನಾನೇ ವೀಣೆ ನೀನೇ ತಂತಿ' ಈ ಹಾಡನ್ನು ಕೇಳಿದಾಗ ಗಂಡ ಹರೀಶನಿಗೆ ತಮ್ಮ ಸಂಸಾರದಲ್ಲಿ ಈ ಸಮರಸವಿಲ್ಲ ಎಂಬ ಭಾವನೆ ಉಂಟಾಗುತ್ತದೆ. ಅದೇ ರೀತಿ ಸರೂಗೆ ಹರೀಶ ಪ್ರೀತಿಯಿಂದ ಸಾಕಿರುವ ಗಿಳಿಯನ್ನು ಪಂಜರದಿಂದ ಬಂಧ ಮುಕ್ತಗೊಳಿಸಿ ತಾನೂ ಈ ಸಂಸಾರದಿಂದ ಬಿಡುಗಡೆಗೊಂಡು ತನ್ನ ಹಳೆಯ ಗೆಳೆಯನಲ್ಲಿಗೆ ಹೋಗಬೇಕು ಎಂಬುದು ಇವಳ ಆಸೆ. ಈ ರೀತಿ ತನ್ನ ಹಳೆಯ ಪ್ರೇಮದ ಕಲ್ಪನಾ ಲೋಕದಲ್ಲಿ ವಿಹರಿಸುತ್ತ ಇದ್ದವಳಿಗೆ ತಾನು ತಾಯಿಯಾಗಲಿರುವ ವಿಷಯ ತಿಳಿದೊಡನೆ ಆಕೆಗೆ ತಾನು ಇಲ್ಲಿಂದ ಹಾರಿ ಹೋಗಲು ಮಾಡುವ ಶತ ಪ್ರಯತ್ನದಲ್ಲಿ ಯಾರೋ ತನ್ನ ರೆಕ್ಕೆಗಳನ್ನು ಕತ್ತರಿಸಿದಂತೆ ಅನ್ನಿಸುತ್ತದೆ. ಗಂಡ ಹೇಳಿದ 'ಸ್ವೀಟ್ ನ್ಯೂಸ್' ಕಾದ ಪಾದರಸದಂತೆ ಕಿವಿಯ ಒಳಗಿಳಿಯುತ್ತದೆ. ಆ ರಾತ್ರಿ ಮಲಗಿರುವಾಗ ನಿದ್ದೆ ಬಾರದೆ ಎದ್ದು ಬಂದ ಸರಯೂ ಗಂಡ ಪ್ರೀತಿಯಿಂದ ಸಾಕಿದ ಗಿಳಿಮರಿಯನ್ನು ಪಂಜರದಿಂದ ಬಂಧಮುಕ್ತಗೊಳಿಸುತ್ತಾಳೆ. ಹತ್ತು ವರ್ಷಗಳ ಹಿಂದೆ ನನ್ನ ಜೀವನದಲ್ಲಿ ಬಂದವನು ನನ್ನ ವೀಣೆಯ ತಂತಿಯಾಗಲಿಲ್ಲ ಎಂದು ಚಿಂತಿಸುವ ಸರೂ ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಹರೀಶನ ಮಗುವಿಗಾಗಿ

ತನ್ನ ಪ್ರಿಯಕರನನ್ನು ಅವನ ಬಗೆಗಿನ ತನ್ನ ಆಲೋಚನೆಗಳನ್ನು ಮರೆಯಲು ನಿರ್ಧರಿಸುತ್ತಾಳೆ. ಆ ರಾತ್ರಿ ಸರೂ ಹಾಡಿದ 'ನಾನೇ ವೀಣೆ, ನೀನೇ ತಂತಿ' ಹಾಡು ಇಂದು ಹರೀಶನಿಗೆ ನಿಜವಾಗಿ ತಮ್ಮ ಸಂಸಾರದಲ್ಲಿ ಸಮರಸ ತುಂಬಿದೆ ಎಂಬ ಭಾವನೆ ತರಿಸುತ್ತದೆ. ಗಿಳಿಮರಿಯನ್ನು ಬಿಟ್ಟು ಅದನ್ನು ಬಂಧಮುಕ್ತವಾಗಿಸುವ ಸರೂ ಜೀವನದಲ್ಲಿ ಹರೀಶನ ಪ್ರೀತಿಯ ಪಂಜರದಲ್ಲಿ ಬಂಧಿಯಾಗುತ್ತಾಳೆ. ತಾನು ಜೀವನದಲ್ಲಿ ದಾಟಲಾಗದಿದ್ದನ್ನು ಗಿಳಿಗೆ ಸ್ವಾತಂತ್ರ್ಯ ನಿಡುವ ಮೂಲಕ ತೃಪ್ತಿ ಹೊಂದುತ್ತಾಳೆ.

'ಹೀಗೊಂದು ಕಥೆ' ಇಲ್ಲಿ ಬರುವ ಗಂಡು-ಹೆಣ್ಣಿಗೆ ಹೆಸರಿಲ್ಲ. ಇವರಿಬ್ಬನ ನಡುವೆ ಸಂಬಂಧವಿದೆ ಸಂಬಂಧಕ್ಕೂ ಹೆಸರಿಲ್ಲ. ಮುಂಬೈಯಿಯ ಸುಡು ಬಿಸಿಲಿನ ಧಗೆಯಲ್ಲಿ ಬೇಯುವ ನಾಯಕಿ. ಬೇಸಿಗೆಯ ನಂತರ ಬರಲಿರುವ ಮಳೆಗಾಲವನ್ನು ಕಾಯ್ದು ತನ್ನ ಮನಸಿನಿಚ್ಛೆಯಂತೆ ಮಳೆಯಲ್ಲಿ ನೆನೆದು ಸುಖ ಪಡುವಳು. ಈ ರೀತಿ ಮಳೆಯಲ್ಲಿ ನೆನೆಯುವ ಸಂದರ್ಭದಲ್ಲಿ ಈಕೆಗೆ ಜೊತೆಯಾಗುವವನು ಇವಳ ಸಹದ್ಯೋಗಿ. ಈ ರೀತಿ ಅನಿರೀಕ್ಷಿತವಾಗಿ ಜೊತೆಯಾದವರು ಮುಂದೆ ಹತ್ತು ವರ್ಷಗಳ ಕಾಲ ಯಾವುದೇ ಸಂಬಂಧದ ಹೆಸರಿಲ್ಲದೆ ಜೊತೆಯಲ್ಲಿ ಬದುಕುತ್ತಾರೆ. ಇಬ್ಬರಿಗೂ ತಮ್ಮ ತಮ್ಮ ಬಂದು-ಬಳಗದವರಿದ್ದಾರೆ. ಪ್ರತಿ ಬಾರಿ ಊರಿಗೆ ಹೋದಾಗಲು ಇವರಿಬ್ಬರ ಈ ರೀತಿಯ ಜೀವನಕ್ಕೆ ಅವರು ಚಿಮಾರಿ ಹಾಕುತ್ತಾರೆ, ಮತ್ತು ಉಪದೇಶವನ್ನು ನೀಡುತ್ತಾರೆ. ಸ್ವಲ್ಪ ಕಾಲದ ನಂತರ ಇಬ್ಬರೂ ಊರಿಗೆ ಹೋಗುವುದನ್ನು ನಿಲ್ಲಿಸುತ್ತಾರೆ. ಈ ರೀತಿಯ ಜೀವನದಲ್ಲಿ ಬದುಕುತ್ತಿದ್ದ ಇವರ ಜೀವನದಲ್ಲಿ ಅನಿರೀಕ್ಷಿತವಾಗಿ ಒಂದು ಘಟನೆ ನಡೆಯುತ್ತದೆ.

ಹತ್ತು ವರ್ಷಗಳ ನಂತರ ಆಕೆ ಬಸುರಿಯಾಗುತ್ತಾಳೆ ಆಕೆಯಲ್ಲಿ ತಾಯ್ತನದ ಬಯಕೆಗಳು ಚಿಗುರೊಡೆಯುತ್ತವೆ. ಈ ವಿಷಯವನ್ನು ತಿಳಿಸುವಾಗ ಆಕೆ ಈ ರೀತಿ ಹೇಳುತ್ತಾಳೆ.

"ಇವತ್ತು ಡಾಕ್ಟರು ಹೇಳಿದರು, ನಾನು ತಾಯಿಯಾಗಲಿದ್ದೇನೆ ಅಂತ"

'ನೀನು ತಂದೆಯಾಗಲಿದ್ದೀ' ಅನ್ನಲಿಲ್ಲ ಆಕೆ.

"ಏನು ಏನಾಗಲಿದ್ದೀಯಂತೆ?" ನಂಬದವನಂತೆ ಕೇಳಿದ ಆತ. ಆತನಿಗೆ ಆಶ್ಚರ್ಯವಾದುದು ಸಹಜ. 'ಗಂಡ', 'ಹೆಂಡತಿ', 'ತಾಯಿ', 'ತಂದೆ', 'ಮಕ್ಕಳು'– ಈ ತರಹದ ನಿರರ್ಥಕ ಸಂಬಂಧ ಸೂಚಕ ಶಬ್ಧಗಳನ್ನು ಎಂದು ಬಳಸಿರಲಿಲ್ಲ. ತಿದ್ದಿಕೊಳ್ಳುತ್ತ ಆಕೆ ಅಂದಳು "ನಾನು ಬಸಿರಿಯಂತೆ". (೮)

ಇಲ್ಲಿ ಗಂಡ, ಹೆಂಡತಿ, ತಾಯಿ, ತಂದೆ, ಮಕ್ಕಳು ಎನ್ನುವ ಸಂಬಂಧಗಳೇ ನಿರರ್ಥಕ ಎಂದು ಸೂಚಿತವಾಗಿದೆ. ಮಗು ತೆಗೆಸಲು ಹೇಳಿದ ಆತನಿಗೆ ಆಕೆ ಅದು ಸಾಧ್ಯವಿಲ್ಲ ಎನ್ನುತ್ತಾಳೆ. ಆತನ ಪ್ರಕಾರ ಮಗುವಾದರೆ ಅವರ ಎಲ್ಲಾ ಸ್ವಾತಂತ್ರ್ಯವು ಬಂಧಿಯಾದಂತೆ. ಮಗು ಹೆರಬೇಕಾದರೆ ಗಂಡ-ಹೆಂಡತಿ ಆಗಿರಬೇಕು ಎಂಬುದು ಆತನ ಅಭಿಪ್ರಾಯ. ಮಗು ಹೆರುವುದು ಹೆಣ್ಣಿನ ಜನ್ಮಸಿದ್ಧ ಹಕ್ಕು ಎಂಬುದು ಈಕೆಯ ಅಭಿಪ್ರಾಯ. ಆದರೆ ಈಕೆ ಅವನನ್ನು ಏನು ಕೇಳುವುದಿಲ್ಲ, ಯಾವುದಕ್ಕೂ ಒತ್ತಾಯಿಸುವುದಿಲ್ಲ ಎಂದು ಹೇಳಿ ಈ ರೀತಿ ಹೇಳುತ್ತಾಳೆ.

"ಏನಿಲ್ಲ ಬಹಳ ಸಿಂಪಲ್, ನನ್ನ ಹೊಟ್ಟೆಯಲ್ಲೊಂದು ಮಗು ರೂಪ ತಳೆಯುತ್ತದೆ. ನನಗದು ಜೀವ ಸಹಿತವಾಗಿ ಬೇಕು ಇಷ್ಟೆ". (೯)

ಇವಳ ಮಾತುಗಳನ್ನು ಕೇಳಿದ ಅವನಿಗೆ ಇಷ್ಟು ವರ್ಷಗಳು ತಮ್ಮ ಸಂಬಂಧದ ಬಗ್ಗೆ ಜನರು ಮಾತನಾಡುತ್ತಿದ್ದರು ಎಂಬುದನ್ನು ಮರೆತವನಂತೆ ಇದೀಗ ಅದರ ಬಗ್ಗೆ ಯೋಚಿಸಿ ಚಿಂತಿತನಾಗುತ್ತಾನೆ. ಆತನಿಗೆ ಕಾಡುವ ಭಯ ಈಕೆಗೆ ಕಾಡುವುದಿಲ್ಲ. ಈ ಕಾರಣದಿಂದಲೇ ಆತ ವರ್ಗಮಾಡಿಸಿಕೊಂಡು ದಿಲ್ಲಿಗೆ ಹೋಗುತ್ತಾನೆ. ಆತ ಈಕೆಯೊಡನೆಯ ಸಂಬಂಧ ಕಳೆದುಕೊಂಡರು ಫೋನ್‌ನ ಮೂಲಕ ಸಂಪರ್ಕದಲ್ಲಿರುತ್ತಾನೆ. ಕಥೆಯ ಕೊನೆಯಲ್ಲಿ ಆಕೆ ತನ್ನಿಷ್ಟದಂತೆ ಮಗುವಿನ ತಾಯಿಯಾಗುತ್ತಾಳೆ. ಇದೇ ಸಮಯದಲ್ಲಿ ಫೋನ ಮಾಡುವ ಆತ ತನ್ನ ತಾಯಿ ತಮ್ಮಿಬ್ಬರ ಜೊತೆ ಲಗ್ನಕ್ಕೆ ಒಪ್ಪಿರುವ ವಿಚಾರ ತಿಳಿಸುತ್ತಾನೆ. ಆದರೆ ಆತನ ಮಾತನ್ನು ಮಧ್ಯದಲ್ಲೇ ತಡೆದು ಕಡ್ಡಿ ಮುರಿದಂತೆ ಈಕೆ ನಿಖರವಾಗಿ ಹೇಳುತ್ತಾಳೆ.

"sorry ನನಗೀಗ ಯಾರ ಅವಶ್ಯಕತೆಯೂ ಇಲ್ಲ, ಯಾತರ ಅವಶ್ಯಕತೆಯೂ ಇಲ್ಲ, ನನಗೆ ಬೇಕಾದುದೆಲ್ಲಾ ನನಗೆ ಸಿಕ್ಕಿದೆ, ನಿನ್ನ ದಾರಿ ನೀನು ನೋಡಿಕೋ...."(೧೦)

ಮದುವೆಯಾಗೆ ಮಗು ಹೆರಬೇಕು ಎಂಬ ಸಾಮಾಜಿಕ ನೀತಿಗೆ ಇಲ್ಲಿ ನಾಯಕಿ ವಿರೋಧ ವ್ಯಕ್ತಪಡಿಸುತ್ತಾಳೆ. ಮದುವೆಗು ಹೆಣ್ಣು ತಾಯಿಯಾಗುವುದಕ್ಕೂ ಸಂಬಂಧವಿಲ್ಲ ಎನ್ನುವುದು ಇಲ್ಲಿನ ಪ್ರಮುಖ ಪ್ರತಿಪಾದನೆಯಾಗಿದೆ. ಹೆಣ್ಣಿಗೆ ತನ್ನ ವ್ಯಕ್ತಿ ಸ್ವಾತಂತ್ರ್ಯದ ಜೊತೆ ಆಯ್ಕೆ ಸ್ವಾತಂತ್ರ್ಯವು ಮುಖ್ಯ ಎಂಬುದಷ್ಟೇ ಅವಳ ಕ್ರಾಂತಿಕಾರಕ ವ್ಯಕ್ತಿತ್ವವೂ ಮುಖ್ಯ ಎಂಬುದು ನಿರೂಪಿತವಾಗಿದೆ.

ಈ ಎಲ್ಲಾ ಕಥೆಗಳಲ್ಲೂ ಗಮನಿಸಬಹುದಾದ ಮುಖ್ಯ ಅಂಶವೆಂದರೆ ಹೆಣ್ಣಿನ ಸ್ವಾತಂತ್ರ್ಯ ಮತ್ತು ಘನತೆಯ ಪ್ರಶ್ನೆ. ವೀಣಾರವರು ಈ ಪ್ರಶ್ನೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಬಿಡಿಸುತ್ತಾರೆ. ಹೆಣ್ಣಿನ ಸ್ವಾತಂತ್ರ್ಯ ಮತ್ತು ಘನತೆ ಎರಡೂ ಇವರ ಕಥೆಗಳಲ್ಲಿ ವೈಯಕ್ತಿಕ ಹಂತದಲ್ಲಿ ರೂಪುಗೊಳ್ಳುತದೆ. ಇಲ್ಲಿ ಬರುವ ಕಥೆಗಳು ಮುಖ್ಯವಾಗಿ ಮಹಿಳೆ ಅಸಹಾಯಕಳಲ್ಲ ಎಂಬುದನ್ನು ಸೂಚಿಸುತ್ತದೆ.

'ಗಂಡಸರು' ಕಾದಂಬರಿಯಲ್ಲಿ ಬರುವ ಶಾಂತಿ ದೈಹಿಕ ಸಂಬಂಧವನ್ನು ನಿರಾಕರಿಸಿದರು ಮುಂದೆ ಇದೆ ದೈಹಿಕ ಸಂಬಂಧದ ಮೂಲಕ ಶೋಷಣೆಗೆ ಒಳಗಾಗುತ್ತಾಳೆ. ಇಲ್ಲಿ ಬರುವ ನಾಲ್ಕು ಗಂಡುಗಳು ಒಂದೊಂದು ರೀತಿ ಗಂಡಿನ ಸ್ವಭಾವವನ್ನು ಸೂಚಿಸುತ್ತವೆ.

(೧) ಶಂಕರ:- ಇವನಿಗೆ ಕಲಿತಿರುವ ಹೆಣ್ಣಾದರೂ ಸಂಸಾರ ತೂಗಿಸಿಕೊಂಡು ಹೋಗುವವಳಾಗಬೇಕು. ಕೌಟುಂಬಿಕ ವಲಯದೊಳಗೆ ಇರಬೇಕು.

(೨) ಮಠದ್:- ಅವರವರ ಭಾವಕ್ಕೆ ಅವರವರ ದೈವಕ್ಕೆ ಅವರಿಗೆಲ್ಲಾ ಗುರು ನೀನೊಬ್ಬನೆ ಎನ್ನುವಂತೆ ಎಲ್ಲಾಕಾಲೇಜು ಯುವತಿಯರಿಗೂ ಪ್ರೇಮ ಪತ್ರ ಬರೆದು ಅವರ ಜೀವನ ಹಾಳು ಮಾಡುವವನು.

(೩) ರಮಾಕಾಂತ್:- ದೈಹಿಕವಾಗಿ ಅವಳೊಂದಿಗೆ ಬೆರೆಯುವವರೆಗೂ ಇಂದಿನದನ್ನು ಮರೆಯಬೇಕು ಎನ್ನುತ್ತಿದ್ದವನು ದೈಹಿಕವಾಗಿ ಒಂದಾದ ನಂತರ ಅವಳ ಹಿಂದಿನ ಕಥೆ ಕೇಳಿ ಪಲಾಯನ ಮಾಡುವವನು. ಅವಳ ಜೀವನದಲ್ಲಿ ಹಿಂದೆ ಇಬ್ಬರು ಗಂಡಸರು ಪ್ರವೇಶ ಮಾಡಿದ್ದರು ಎಂಬುದೇ ಇತನ ಅಸಹನೆಗೆ ಕಾರಣ.

(೪) ಜಾನ್ ಅಶೋಕ್:- ಮತ್ತೊಂದು ಬಗೆಯ ಗಂಡಿನ ಶೋಷಣೆಯ ಮುಖ. ಪತ್ರಿಕೆಯ ಮುಖ್ಯಸ್ಥನಾಗಿದ್ದವನು, ತನ್ನ ಗಂಡ ಎಂಬ ಅಧಿಕಾರದ ಜೊತೆ ಧರ್ಮವನ್ನು ಇವಳ ಮೇಲೆ ಬಲವಂತವಾಗಿ ಹೇರುವಂತವನು.

ಈ ರೀತಿ ಶಾಂತಿ ಎಂಬ ಹೆಣ್ಣಿನ ಬದುಕನ್ನು ಚಿತ್ರಿಸುವ ವೀಣಾ, ಅವಳ ಬದುಕಿನಲ್ಲಿ ಬರುವ ಪುರುಷರ ಆಂತರಂಗಿಕ ಸ್ವಭಾವವನ್ನು ನಿಧಾನಗತಿಯಲ್ಲಿ ಬಿಚ್ಚುತ್ತಾ ಹೋಗುತ್ತಾರೆ. ಗಂಡಸರ ಅಂತರಂಗದ ನೈಜತೆಯನ್ನು ತೆರೆದಿಡುವುದು ಇವರ ವೈಶಿಷ್ಟ್ಯವಾಗಿದೆ.'ಹೆಣ' ಕಥೆಯು ಜೀವಂತವಾಗಿದ್ದ ಕಲಾ ಸಾಹಿತ್ಯ ಮತ್ತು ಹೆಣ್ಣಿನ ಪ್ರತಿಭೆಗಳು ಮದುವೆಯ ನಂತರ ಕ್ರಿಯಾಶೀಲತೆಯನ್ನು ಮರೆಯುತ್ತವೆ ಎಂಬುದು ಕಥೆಯ ಸಾರಾಂಶ. ಕ್ರಿಯಾವಂತಿಕೆಯ ಹೆಣಕ್ಕೆ ಉತ್ತರ ಕೊಡುತ್ತಾ ನಾಯಕಿ ಆರಾಮ ಬದುಕಿನ ಆಯ್ಕೆ ಮಾಡಿಕೊಳ್ಳುತ್ತಾಳೆ. 'ಕವಲು' ಕಥೆಯಲ್ಲಿ ವಿವಾಹವಾದ ಹೆಂಡತಿ ಇಪ್ಪತ್ತು ವರ್ಷಗಳ ನಂತರ ಸತ್ತಳೆಂದು ಅವಳ ಸ್ಥಾನದಲ್ಲಿ ಮಿನಿಯನ್ನು ವಿವಾಹವಾಗಲು ಬಯಸುವವನಿಗೆ ತನ್ನ ಬದಲಾದ ಮನೋಭಾವದ ಮಿನಿ ತನ್ನ ಮುಂದಿರುವ ಕವಲು ದಾರಿಯಲ್ಲಿ ತನಗಿಷ್ಟ ಬಂದ ದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಈ ಮೂಲಕ ತನ್ನ ಸ್ವಂತಿಕೆ ಉಳಿಸಿಕೊಂಡು ಕೆನಾಡಕ್ಕೆ ಹೋಗುತ್ತಾಳೆ. 'ಕೊನೆಯದಾರಿ' ಕಥೆಯಲ್ಲಿ ವಿವಾಹದ ಬಂಧನ ತೊರೆದ ಹೆಣ್ಣು ಅದರಾಚೆಗೆ ತಾನು ತಾಯಿಯಾಗುವ ಹಂಬಲದಿಂದ ಹಲವಾರು ಗಂಡುಗಳ ಸಂಗ ಮಾಡುತ್ತಾಳೆ. ಅದು ಸಾಧ್ಯವಾಗದಿದ್ದಾಗ ತನ್ನ ತಂದೆಯಂತಿದ್ದ ಶಂಕರ ಗೌಡರನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಅದರಿಂದ ತನ್ನ ತಾಯಿಯಾಗುವ ಕನಸಿನ ಜೊತೆಗೆ ತನ್ನ ಬದುಕಿಗೂ ಒಂದು ಆರ್ಥಿಕ ಭದ್ರತೆಯನ್ನು ಅದರಿಂದ ಪಡೆಯುತ್ತಾಳೆ. 'ಬಿಡುಗಡೆ'ಯ ಸರೋಜ ಶವದ ಮುಂದೆ ನಿಂತು ಸಿಂಹಾವಲೋಕನ ಮಾಡಿ ತನ್ನ ಇಷ್ಟು ವರ್ಷಗಳ ತುಮುಲಕ್ಕೆ ವಿರಾಮದ ಚಿಹ್ನೆ ಹಾಕುತ್ತಾಳೆ. ಹಾಲು ಕುಡಿಯುವುದರ ಮೂಲಕ ತನ್ನ ಮನಸ್ಸಿನ ನಿರುಮ್ಮಳತೆಯನ್ನು ಸೂಚಿಸುತ್ತಾಳೆ. 'ಹೀಗೊಂದು ಕಥೆ' ಅಂತರಗತವಾಗಿರುವ ಮಾತೃ ವಾತ್ಸಲ್ಯದ ವ್ಯವಸ್ಥೆಯ ಆಶಯಗಳು ಹಾಗೂ ಆಧುನಿಕ ಮಹಿಳೆಯ ಬದಲಾದ ಮನೋಧರ್ಮ ಸೂಚಿಸುತ್ತದೆ. 'ನಿರಾಕರಣೆ'ಯಲ್ಲಿ ಶಕುಂತಲೆಯ ಮೂಲಕ ಹೆಣ್ಣಿನ ಅಂತರಂಗದ ತುಮುಲಕ್ಕೆ ಬೆಲೆ ಇಲ್ಲವೆನ್ನುವುದನ್ನು ಸೂಚಿಸುತ್ತದೆ. ಹೆಣ್ಣಿನ ಮಧುರ ಭಾವನೆಗಳನ್ನು ಎಗ್ಗಿಲ್ಲದೆ ಹೊಸಕಿ ಹಾಕಿ ನಂತರ ಬಂದು ಕ್ಷಮೆ ಕೇಳುವ ಗಂಡಿನ (ದುಷ್ಯಂತ) ಮನೋಭಾವವನ್ನು ಮತ್ತು ಗಂಡು ಏನೆ ಮಾಡಿದರೂ ಆಕೆ ಕ್ಷಮಿಸಿಯೇ ಕ್ಷಮಿಸುತ್ತಾಳೆಂಬ ಗಂಡಿನ ಖಚಿತ ನಂಬಿಕೆಗೆ ತನ್ನ ಧಿಕ್ಕಾರವನ್ನು ತೋರಿಸುತ್ತಾಳೆ.

ವೀಣಾ ರವರು ಈ ಎಲ್ಲಾ ಕತೆಗಳ ಮೂಲಕ ಹೆಣ್ಣಿನ ಮದುವೆಯ ನಂತರ ಅವಳ ಸ್ವಾತಂತ್ರ್ಯ ಮತ್ತು ಕ್ರಿಯಾಶೀಲತೆಗಳು ನಾಶವಾಗುತ್ತವೆ ಎಂಬುದನ್ನು ಪ್ರಸ್ತುತ ಪಡಿಸುತ್ತಾರೆ. ಹೆಣ್ಣು ಯಾವಾಗಲು ಗಂಡು ರೂಪಿಸಿರುವ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾಳೆ. ಇಲ್ಲಿ ಆಕೆ ತನ್ನ ಸ್ವಂತ ವ್ಯಕ್ತಿತ್ವ ಉಳಿಸಿಕೊಳ್ಳಲು ಹೊರಟಾಗ ಯಾರು ಸಹಕಾರಿಸಲಾರರು ಎಂದಿದ್ದಾರೆ. ಪರಂಪರಾಗತ ನಂಬಿಕೆಗಳ ಮೌಲ್ಯಗಳ ಚಿಪ್ಪಿನೊಳಗೆ ಹುದುಗಿಕೊಳ್ಳದೇ ತನ್ನ ತೆರೆದಿಟ್ಟು ಮನಸ್ಸು, ತೆರೆದಿಟ್ಟ ಬದುಕು ಇವುಗಳನ್ನು ಬಯಲಿಗೆ ತರುವ ಕೆಲಸವನ್ನು ಮಾಡುತ್ತಾರೆ.

ಕೊನೆ ಟಿಪ್ಪಣಿ.

(1) ಗಂಡಸರು :ಕಾದಂಬರಿ : ನಡದದ್ದೇದಾರಿ : ವೀಣಾ ಶಾಂತೇಶ್ವರ್ ಪುಟ 306

(2) ,, ,, ,, ,, ,, ಪುಟ 301

(3) ,, ,, ,, ,, ,, ಪುಟ 309

(4) ಅವಳ ಸ್ವಾತಂತ್ರ್ಯ : ನಡೆದದ್ದೇದಾರಿ. ,, ಪುಟ 171

(5)ಬಿಡುಗಡೆ :ನಡೆದದ್ದೇದಾರಿ. ,, ಪುಟ 216

(6) ಬಿಡುಗಡೆ :ನಡೆದದ್ದೇದಾರಿ. ,, ಪುಟ 224

(7) ನಿರ್ದಿಂಗತ :ಶಾಂತಾ ಇಮ್ರಾಪುರ : ಪುಟ 244

(8) ಹೀಗೊಂದು ಕಥೆ :ನಡೆದದ್ದೇದಾರಿ : ವೀಣಾ ಶಾಂತೇಶ್ವರ ಪುಟ 228

(9) ,, ,, ,, ,, ಪುಟ 229

(10) ,, ,, ಪುಟ. 232

ಅಧ್ಯಾಯ- ೪.೩

ಪುರುಷ ನಿರ್ಮಿತ ಸಾಹಿತ್ಯದಲ್ಲಿ ವೀಣಾರವರು ನಡೆದ ವಿಭಿನ್ನ ಮಾರ್ಗ

ವೀಣಾರವರು ಗಂಡು ಹೆಣ್ಣಿನ ನಡುವಣ ಸಂಬಂಧವನ್ನು, ಅದರಿಂದ ಉಂಟಾಗುವ ಸಂಘರ್ಷವನ್ನು ತಮ್ಮ ಕಥೆ, ಕಾದಂಬರಿಗಳಲ್ಲಿ ನಿರ್ವಹಿಸಿರುವ ರೀತಿ ಕೂಡ ನವ್ಯ ಪುರುಷ ಲೇಖಕರಿಗಿಂತ ಭಿನ್ನವಾಗಿದೆ. ಮಹಿಳೆಯ ಬದುಕು ಮತ್ತು ಬರವಣಿಗೆಯು ಇದುವರೆಗೂ ನಡೆದು ಸವೆದಿರುವ ಜಾಡಿಸಿಂದ ಸಿಡಿದು ಸ್ಥಾಪಿಸಿಕೊಂಡಿರುವ ವ್ಯವಸ್ಥೆಗೆ ಪ್ರತಿರೋಧವನ್ನು ಒಡ್ಡುತ್ತಲೆ ಕಥೆಗಾರ್ತಿಯಾಗಿ ನವ್ಯ ಸಂವೇದನೆಯ ವಿಭಿನ್ನ ಧ್ವನಿ ವ್ಯಕ್ತಪಡಿಸಿದವರು ಹೆಣ್ಣನ್ನು ಕೇವಲ ದೇಹವಾಗಿಸಿದ ಸಾಮಾಜಿಕ ರಚನೆಯಲ್ಲಿ ಆಕೆಯ ಅಸ್ಥಿತ್ವ ಹೀನತೆ, ಅಧೀನತೆ ಮತ್ತು ಬಿಡುಗಡೆಯ ಸಂಕೀರ್ಣ ಲೋಕವನ್ನು ಕಲಾತ್ಮಕ ಕಥೆಗಳನ್ನಾಗಿಸಿ ಮಹಿಳಾ ಸಂವೇದನೆ ಮತ್ತು ಸ್ವಾಭಿವ್ಯಕ್ತಿಗೆ ಹೊಸ ದಾರಿಯನ್ನು ತೆರೆದಿಟ್ಟ ಮಹತ್ವದ ಕಥೆಗಾರ್ತಿ.

ವೀಣಾರವರು ಪುರುಷ ಪ್ರಧಾನ ವ್ಯವಸ್ಥೆಯ ಜಟಿಲ ಹೆಣಿಗೆಗಳನ್ನು ಭೇದಿಸುವ ದುಃಸ್ಸಾಹದಲ್ಲಿ ಬಂಡಾಯ ಸಾರುವ ಕಥಾನಾಯಕಿಯರ ಮೂಲಕ ಹೆಣ್ಣಿನ ಸ್ವಂತಿಕೆ, ಸ್ವಾಭಿಮಾನದ ಸಂಘರ್ಷಕ್ಕೆ ಒಂದು ಭಾಷೆಯನ್ನು ನಿರ್ಮಿಸಿ ಕೊಟ್ಟವರು. ತಮ್ಮ ಕನಸುಗಳಿಗೆ ಜೀವ ತುಂಬಲಾಗದ ಮಹಿಳೆಯರ ಹತಾಶೆಗಳನ್ನು, ಹೆಣ್ಣನ್ನು ಸಮಾನಜೀವಿಯಾಗಿ ಒಪ್ಪಿಕೊಳ್ಳಲು ಸಿದ್ದವಾಗಿರದ ಸಾಮಾಜಿಕ ಸತ್ಯವನ್ನು ಅತ್ಯಂತ ತೀವ್ರವಾಗಿ ಧ್ವನಿಸುತ್ತ ವಾಸ್ತವವಾದಿ ಧೋರಣೆಯ ತಮ್ಮ ಕಥೆಗಳ ಮೂಲಕ ಭಿನ್ನರೆಸಿಕೊಂಡಿದ್ದಾರೆ.

ನವ್ಯ ಲೇಖಕರು ಹೆಣ್ಣನ್ನು ಪುರುಷನಷ್ಟೆ ಸ್ವತಂತ್ರ ಅಸ್ಥಿತ್ವ ಹಾಗೂ ವ್ಯಕ್ತಿತ್ವವುಳ್ಳ ಮಾನವಜೀವಿ ಎಂಬಂತೆ ರೂಪಿಸಿದ್ದು ಅಪರೂಪ. ಇಡೀ ನವ್ಯ ಸಾಹಿತ್ಯದಲ್ಲಿ ಲೈಂಗಿಕ ಉಪಭೋಗಕ್ಕೆ ನೆರವಾಗುವ ಸ್ತ್ರೀ ಎಂಬ ಸಾಮಾಗ್ರಿಯನ್ನು ಬಿಟ್ಟರೆ ಬೇರೆ ಸ್ವರೂಪದ ಹೆಣ್ಣು ಕಾಣುವುದೇ ಅಪರೂಪ. ಇದು ಮುಖ್ಯವಾಗಿ ಗಂಡುಗಳ ಲೋಕ. ಇಲ್ಲಿ ವರ್ಣಿತವಾಗಿರುವುದು ಪುರುಷ ಪ್ರಧಾನ ವ್ಯವಸ್ಥೆ, ಅವನ ಮನೋಧರ್ಮ. ಪುರುಷ ಪ್ರಧಾನ ವಾಗಿದ್ದ ನವ್ಯ ಸಾಹಿತ್ಯ ಸೃಷ್ಟಿಸಿದ ಆಧುನಿಕ ಹಾಗೂ ಸ್ವತಂತ್ರಳಾದ ಹೆಣ್ಣಿಗೆ ಬುದ್ಧಿಯಿಲ್ಲ ಭಾವನೆಯಿಲ್ಲ, ಮನಸ್ಸಿಲ್ಲ, ಕೇವಲ ಜಾಹೀರಾತಿನ ಬೊಂಬೆಯಂತೆ ಚಿತ್ರಿತವಾಗಿದ್ದಾಳೆ.

ನವ್ಯ ಸಾಹಿತ್ಯದ ಪ್ರಮುಖ ಲೇಖಕರಾದ ಅನಂತಮೂರ್ತಿಯವರು ತಮ್ಮ ಕಥೆ, ಕಾದಂಬರಿಗಳಲ್ಲಿ ಹೆಣ್ಣನ್ನು ಭೋಗ ದ್ರಿಷ್ಟಿಯಿಂದ ಮಾತ್ರ ಚಿತ್ರಿಸುತ್ತಾರೆ .ಅವರ ಕಥನಗಳಲ್ಲಿನ ಸ್ರಿ ಪಾತ್ರಗಳಿಗೆ ಗಂಡಿನ ಕಾಮ ತೃಪ್ತಿಯೇ ಮುಖ್ಯಜೀವನೋದ್ದೇಶವಿದ್ದಂತೆ ಕಾಣಿಸುತ್ತದೆ. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯ ಚಂದ್ರಿ. ಅವಸ್ಥೆಯಲ್ಲಿನ ಪಾರ್ಶ್ವವಾಯು ಪೀಡಿತನಾದ ಕೃಷ್ಣಪ್ಪಗೌಡನಿಗೆ ದೊರೆಯುವ 'ದಾದಿ'ಯ ಸಖ್ಯ, 'ಪ್ರಶ್ನೆ' ಕಥೆಯ 'ಶಾರದೆ' 'ಘಟಶ್ರಾದ್ದ' ಕಥೆಯ 'ಶಾರದಕ್ಕ' 'ಸೂರ್ಯನ ಕುದುರೆ'ಯ 'ರುಕ್ಕು 'ಇವರೆಲ್ಲರೂ ವರ್ಣಿತವಾಗಿರುವುದು ಗಂಡಿನ ಅಪರಿಪೂರ್ಣತೆ ತುಂಬುವ ಸಾಧನಗಳಾಗಿ ಮಾತ್ರ ವರ್ಣಿತರಾಗಿದ್ದಾರೆ.

ಅದೇ ರೀತಿ ನವ್ಯದ ಮತ್ತೊಬ್ಬ ಲೇಖಕರಾದ 'ಶ್ರೀ ಕೃಷ್ಣ ಆಲನಹಳ್ಳಿ'ಯವರ 'ಗೀಜಗನ ಗೂಡು'ವಿನ ಆದಿವಾಸಿ ಹೆಣ್ಣು, 'ಅಂಟಿದ ನಂಟಿನ' ಬ್ರಾಹ್ಮಣರ ಹುಡುಗಿ ಶಾಲಿನಿ, 'ಗೆಂಡೆತಿಮ್ಮ' ಕಾದಂಬರಿಯ ಮರಿಂಕಿ ಮುಂತಾದವರು ನವನಾಗರೀಕತೆಯ ಪ್ರಭಾವವಿದ್ದರೂ ಹೆಣ್ಣು ಅವಳಿಗೆ ಅರಿಯದಂತೆಯೇ ಉಸಿರು ಕಟ್ಟಿಸಿದ ವಾತಾವರಣದಲ್ಲಿ ಸಿಕ್ಕು ಒದ್ದಾಡುವುದನ್ನು ನೋಡಬಹುದು.

ಅದೇ ರೀತಿ ಜಿ.ಎಸ್.ಸದಾಶಿವರವರು ಹೆಣ್ಣನ್ನು ಸಂಸಾರದ ಬಂಧನದಲ್ಲಿಯೇ ಇಟ್ಟು ನೋಡುತ್ತಾರೆ. ಪಿ.ಲಂಕೇಶರ 'ದೇವಿ' ಕಥೆಯ ದೇವಿ 'ಅಕ್ಕ' ಕಾದಂಬರಿಯ ಸುಭದ್ರ, ದೇವೀರಿ ,'ಸೆಪ್ಟಂಬರ್‌ನಲ್ಲಿ ಪ್ರಥಮ ರಾತ್ರಿ' ಯ ಶಾಂತಾ, 'ದಾಹ' ಕಥೆಯ ಸೆಲ್ವಿಯಾ ಪದ್ಮ ಮುಂತಾದ ಎಲ್ಲಾ ಹೆಣ್ಣುಗಳು ತಮ್ಮ ದೇಹದಿಂದಲೇ ವರ್ಣಿತವಾಗಿದ್ದಾರೆ.

ನವ್ಯ ಸಾಹಿತ್ಯ ಸಂದರ್ಭದ ಕೆಲವರ ಸಾಹಿತ್ಯವನ್ನು ನೋಡಿದಾಗ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ವೀಣಾರವರ ಕತೆಗಳು ಹೆಣ್ಣಿನ ಆಯ್ಕೆಯ ವಿಚಾರದ ಬಗ್ಗೆ ಎತ್ತಿ ಹೇಳುತ್ತವೆ. ಹೆಣ್ಣನ್ನು ಬಲವಂತವಾಗಿ ಬಂಧಿಸಿರುವ ಪುರುಷ ಜಗತ್ತಿನ ಲೈಂಗಿಕ ಸ್ವಾಮ್ಯವನ್ನು ತನ್ನ ಆಯ್ಕೆಯ ನೆಲೆಯಲ್ಲಿ ಒಡೆಯ ಹೊರಟ ಹೆಣ್ಣಿನ ಹೋರಾಟವನ್ನು ನಿರೂಪಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ 'ತಾಯ್ತನ'ದ ಆಯ್ಕೆಯ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಳ್ಳಲು ಹೊರಟ ಹೆಣ್ಣಿನ ಸೋಲನ್ನು ಇದು ಹೇಳುತ್ತದೆ. ಇದರೊಂದಿಗೆ ಗಂಡು ತನ್ನ ಲೈಂಗಿಕ ತೃಪ್ತಿಗಾಗಿ ನಡೆಸುವ ಶೋಷಣೆಯ ನಾನಾ ಸ್ವರೂಪಗಳ ಕುರಿತು ವಿಚಾರ ಮಾಡುತ್ತದೆ. ಹೆಣ್ಣಿನ ಲೈಂಗಿಕ ಸಂಬಂಧವನ್ನು ಎಂತಹ ಗಂಡು ನಿರಾಕರಿಸುವುದಿಲ್ಲವಾದರೂ, ಹೆಣ್ಣಿನ ಅಗತ್ಯದ ಬಯಕೆಯನ್ನು ಅವನೆಂದಿಗೂ ಈಡೇರಿಸಲಾರ ಎಂಬ ಸತ್ಯದ ನಿರೂಪಣೆ ಇಲ್ಲಿ ಮುಖ್ಯವಾಗುತ್ತದೆ.

'ಮುಳ್ಳುಗಳು' ಎಂಬ ಕತೆ ಶಾಂತಿ ಎಂಬ ಕಾಲೇಜು ಶಿಕ್ಷಕಿ ತರುಣಾವಸ್ಥೆಯಲ್ಲಿರುವ ಅವಿವಾಹಿತ ಸ್ತ್ರೀ ಮತ್ತು ಹಿಂದೆಂದೋ ಹೆಸರಿಲ್ಲದ ಒಬ್ಬನಿಂದಾದ ವಂಚನೆಯನ್ನು ಮರೆಯಲಾಗದೆ ಈಗಲೂ ಒದ್ದಾಡುತ್ತಿರುವ ತರುಣಿ. ತನ್ನ ತಂದೆ ತಾಯಿಯರಿಂದ ದೂರವಾಗಿ ಒಂಟಿಯಾಗಿ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದಾಳೆ. ಶಾಂತಿ ಇನ್ನೂ ಲಗ್ನವಾಗದ, ಆದರೆ ಲಗ್ನಕ್ಕಾಗಿ ಕಾತರಳಾಗಿ ನಿಂತ ಇವಳ ಒಂದು ದಿನದ ಮನಸ್ಸಿನ ಭಾವನೆಯನ್ನು ರೂಪಿಸುತ್ತದೆ. ಕಥೆಯಲ್ಲಿ ಬರುವ ಎಲ್ಲಾ ಸನ್ನಿವೇಶಗಳೂ ಈಕೆಯ ಮನಸ್ಥಿತಿಯನ್ನು ಸ್ಪಷ್ಟವಾಗಿ ಮೂರ್ತಗೊಳಿಸಲು ಸಹಾಯ ಮಾಡುತ್ತವೆ. ಪ್ರಾರಂಭದಲ್ಲಿ ಶಾಂತಿ ಅಸಹಾಯಕ ಹತಾಶ ಸ್ತ್ರೀಯಂತೆ ಕಾಣುತ್ತಾಳೆ. ಅವಳಿಗೆ ಯಾವುದರಲ್ಲಿಯೂ, ಯಾರ ಬಗ್ಗೆಯೂ ಆಸಕ್ತಿಯಿಲ್ಲ. ಇವಳಿಗೆ ರಾತ್ರಿಗಳನ್ನು ಕಳೆಯುವುದೆಂದರೆ ಪ್ರಾಣ ಸಂಕಟ. ಪ್ರತಿ ದಿನ ಬೆಳಗಾಗುವುದನ್ನೇ ಕಾಯುತ್ತಿರುತ್ತಾಳೆ. ತನ್ನ ಪಕ್ಕದ ರೂಮಿನಲ್ಲಿ ಪಿ.ಯು.ಸಿ ಹುಡುಗಿ ಹಾಡು ಹೇಳಿದರೆ ಈಕೆಗೆ ದರಿದ್ರ ಹಿಂದಿ ಫಿಲ್ಮಿನ ರೋಮ್ಯಾಂಟಿಕ್ ಗೀತೆ ಹಾಡುತ್ತಿದ್ದಾಳೆ ಎಂದು ಬೇಸರಿಸುತ್ತಾಳೆ. ಇಂತಹ ನಿರುತ್ಸಾಹದ, ಎಲ್ಲರ ಮೇಲೂ ಹರಿಹಾಯುವ ಶಾಂತಿಯ ಮನಃಸ್ಥಿತಿಗೆ ಕಾರಣ ಗಂಡಸರ ಬಗ್ಗೆ ಅವಳಿಗಿರುವ ತಿರಸ್ಕಾರ. ಎಲ್ಲಾ ಗಂಡಸರೂ ತನ್ನ ಸುಂದರ ದೇಹವನ್ನೇ ಬಯಸುತ್ತಾರೆಂಬ ಅವಳ ಭಾವನೆ. ತಾನು ನೋಡುವ ಪ್ರತಿ ಪುರುಷನ ಕಣ್ಣಿನಲ್ಲೂ ಆಕೆ, ಮುಳ್ಳನ್ನು ನೋಡುತ್ತಾಳೆ.

ಶಾಂತಿ ಗಂಡಿನ ಲೈಂಗಿಕಾಸಕ್ತಿಯನ್ನು ಕಾಮುಕತೆಯಾಗಿ ಗ್ರಹಿಸುತ್ತಾ "ಹಾಸ್ಟೆಲಿನ ಮುಂದೆ ಸದಾ ಬಾಲ ಅಲ್ಲಾಡಿಸುತ್ತ ಬಿದ್ದಿರುವ ಆ ಗಂಡು ನಾಯಿಯ ಕಣ್ಣಲ್ಲೂ ಅದೇ, ನಾಯಿಯಾದರೇನು ಗಂಡಲ್ಲವೇ?" (೧) ಎನ್ನುತ್ತಾಳೆ.

ಈ ಮೂಲಕ ಗಂಡಸರನ್ನು ನಾಯಿಗೆ ಹೋಲಿಸುತ್ತಾಳೆ. ವಾಸ್ತವದಲ್ಲಿ ಈ ಒಂದೆ ಅವಳು ಮೆಚ್ಚಿದ ಪ್ರಿಯಕರನು ಚುಚ್ಚಿದ ಮುಳ್ಳಿನಿಂದ ಮರೆಯಲಾಗದ ಪಾಠವನ್ನು ಕಲಿತ ಮೇಲೆ ಆಕೆ ಮತ್ತೆ ಈ ರೀತಿಯ ಮುಳ್ಳಿನ ಸಹವಾಸಗಳಿಂದ ದೂರವಿರಬೇಕು. ಆದರೆ ವಿಚಿತ್ರವೆಂದರೆ ಅವಳು ತನ್ನ ಸ್ಥಾನದ ಮರ್ಯಾದೆಯನ್ನು ಮರೆತು, ಸಿಕ್ಕ ಸಿಕ್ಕವರ ಕಣ್ಣಿನಿಂದ ಮುಳ್ಳಿನ ಅನುಭವವನ್ನು ಪುನಃ ಪುನಃ ಪಡೆಯಬೇಕೆನ್ನುವ ಆಸೆಗೆ ಒಳಗಾಗುತ್ತಾಳೆ. ತನ್ನ ಮನಸ್ಸಿನ ಕಾತರತೆಯನ್ನು ಬಿಚ್ಚು ಮನಸ್ಸಿನಿಂದ ಒಪ್ಪಿಕೊಳ್ಳದೆ ತನ್ನ ಒಳಗೆ ತೊಂದರೆ ಕೊಡುವ ಸನ್ನಿವೇಶವನ್ನು ಕಥೆಯು ವ್ಯಂಗ್ಯದ ಮೂಲಕ ನಿರೂಪಿಸುತದೆ. ಕತೆಯಲ್ಲಿ ಹೆಣ್ಣಿನ ಲೈಂಗಿಕಾಸಕ್ತಿಯು ಈ ರೀತಿ ವ್ಯಕ್ತವಾಗುತ್ತದೆ.

'ಸ್ನಾನದ್ದೂ ಒಂದು ಮಜ, ಬಡಬಡ ಒಂದು ನಿಮಿಷದಲ್ಲಿ ನೀರು ಸುರುವಿಕೊಂಡಾದ ನಂತರ ಬಹಳ ಹೊತ್ತಿನವರೆಗೆ ಮೈ ಒರೆಸಿಕೊಳ್ಳುತ್ತ ನಿಲ್ಲಬೇಕೆನಿಸುತ್ತದೆ. ಯಾಕೆ ಹೀಗೆ?' (೨) ಈ ರೀತಿ ಪ್ರಶ್ನಿಸುವ ಶಾಂತಿಯ ಪ್ರಶ್ನೆಯಲ್ಲೂ ಒಂದು ತರ್ಕವಿದೆ. ಈ ತರ್ಕ ಅತಿರೇಕದ್ದು ಎನ್ನಿಸಿದರೂ ಇದರ ಹಿಂದೊಂದು ಸಿದ್ಧಾಂತ ಕೆಲಸ ಮಾಡುತ್ತಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷನ ಲೈಂಗಿಕತೆಗೆ ದೊರೆಯುವ ಅತಿಯಾದ ಅವಕಾಶವು ಆತನನ್ನು ಇನ್ನೊಂದು ದೇಹವನ್ನು ಅತಿಕ್ರಮಿಸುವ ಕಾಮುಕನನ್ನಾಗಿಸುತ್ತದೆ. ಅದೇ ಹೆಣ್ಣಿನ ಲೈಂಗಿಕತೆಯ ಮೇಲೆ ಹೇರಲಾಗುವ ಅತಿಯಾದ ನಿಷೇಧವು ಅವಳಲ್ಲಿ ತನ್ನ ದೇಹದ ಕುರಿತಾದ ಅಜ್ಞಾನ, ನಿರಭಿಮಾನ ಹಾಗೂ ಅನಾಸಕ್ತಿಗಳನ್ನು ಪ್ರೋತ್ಸಾಹಿಸುತ್ತದೆ.

ಆದರೆ ಗಂಡಸರ ಬಗ್ಗೆ ಅವಳಿಗಿರುವ ತಿರಸ್ಕಾರ ಮತ್ತು ಗಂಡಸರೊಡನೆ ಇದ್ದಾಗಲೆಲ್ಲಾ ಅವಳಿಗಾಗುವ ಮುಳ್ಳು ಚುಚ್ಚಿದಂತಹ ಅನುಭವ ಸಂಪೂರ್ಣ ಸತ್ಯವಲ್ಲವೆಂದು ಕತೆಯ ಮುಂದುವರಿಕೆಯಲ್ಲಿ ತಿಳಿಯುತ್ತದೆ. ಶಾಂತಿಯ ಅಕ್ಕ ಅವಳನ್ನು ಮದುವೆಯ ಬಗ್ಗೆ ಛೇಡಿಸಿದಾಗ, ಮುಂದೆ ಬರುವ ತನ್ನ ಗಂಡ ಹೇಗಿರಬಹುದೆಂದು ಕಲ್ಪನೆ ಮಾಡಿಕೊಂಡು ಹಗಲುಗನಸು ಕಾಣುತ್ತಾಳೆ. ತನ್ನ ಸಹದ್ಯೋಗಿ ಪ್ರೋ. ದೇಸಾಯಿಯ ವಿಷಯದಲ್ಲಿ ಬೇರೆಯೇ ರೀತಿಯ ಅಭಿಪ್ರಾಯ ಈಕೆಗಿದೆ. ಅವಳ ಪಾಲಿಗೆ ಈತ ಸಂಭಾವಿತನಾದ ಮಳ್ಳ ಗಂಡಸು. ತಾನು ಮರೆಯತೊಡಗಿದ ಹಳೆಯ ಕನಸಿನ ಕಡೆ ಇವನು ಎಳೆಯುತ್ತಿರುವವನು ಎನ್ನುತ್ತಾಳೆ. ರಸ್ತೆಯ ಮೇಲೆ ಯಾರೋ ಅಶ್ಲೀಲ ಹಾಡೊಂದನ್ನು ಗುನುಗುಸುತ್ತಿರುವಾಗ ಅವನನ್ನು ನೋಡಬಾರದು ಎಂದುಕೊಂಡರು ಆದರೂ ನೋಡಲಡ್ಡಿಯಿಲ್ಲ ಎಂದುಕೊಂಡು ಬಾಗಿಲ ಮರೆಯಿಂದ ನೋಡುತ್ತಾಳೆ. ತನ್ನ ಶಿಷ್ಯನೊಬ್ಬ ಆಕೆಯನ್ನು ಸಿನಿಮಾಕ್ಕೆ ಕರೆದಾಗ ಅವಳಿಗೆ ಸಿಟ್ಟಿನೊಡನೆ ಸ್ವಲ್ಪ ಅಭಿಮಾನವು ಉಂಟಾಗುತ್ತದೆ. ದೇಸಾಯಿಯ ಬಗ್ಗೆ ಈಕೆಗೆ ಸ್ವಲ್ಪ ಒಲವಿದೆ ಈ ಎಲ್ಲದರ ನಡುವೆಯೂ ಅವನು ಎಲ್ಲರಿಗಿಂತ ಬೇರೆಯಾಗಿದ್ದಂತೆ ತೋರುತ್ತಾನೆ. ಮುಳ್ಳುಗಳೇ ಇಲ್ಲದ ಹೂವನ್ನು ಪಡೆಯಲು ಯೋಚಿಸುವಂತೆ ಮಾಡುತ್ತನೆ. ಆವನ ಮೃದು ಧೋರಣೆಯಲ್ಲಿ ಅರಳಲು ಪ್ರಯತ್ನಿಸುವವಳು ಕೊನೆಗೆ ಆತನೇ ತನ್ನ ಜೀವನಕ್ಕೆ ಆಧಾರವು ಎಂದುಕೊಳ್ಳುವುದಿಲ್ಲ. ಮುಳ್ಳು ಮುಳ್ಳೇ ಆಗಿದ್ದರು ಅದನ್ನು ಸಂದರ್ಭದ ಎದುರಾಳಿಯಾಗಿಸಿಕೊಂಡು ಈಗಲೂ ಮದುವೆಯ ಕಾತರತೆಯ ಸತ್ಯವನ್ನು ಸಾಯಿಸಿದ ಪಾತ್ರದಲ್ಲಿ ಶಾಂತಿ ಮಿಂಚುತ್ತಾಳೆ.

ವೀಣಾರವರು ಮುಳ್ಳು ಎಂಬ ಪ್ರತಿಮೆಯ ಮೂಲಕ ಬದುಕಿನ ಸುಖ ದುಃಖದ ಅರಿವನ್ನು ಮೂಡಿಸುವುದರ ಜೊತೆಗೆ, ಬದುಕು ಕ್ರೂರವಾಗಿದ್ದರೂ ಮುಂದೆ ಸುಖ ಬರಲಿದೆ ಎಂಬ ಆ ಶಾವಾದದೊಂದಿಗೆ ಅದನ್ನು ಎದುರಿಸಬೇಕು ಎಂದಿದ್ದಾರೆ.

'ಅತಿಥಿ' ಹೆಣ್ಣಿನ ಮನಸ್ಸಿನ, ಆಕೆಯ ನಿಲುವಿನ ಮತ್ತೊಂದು ಮಗ್ಗುಲನ್ನು ಅನಾವರಣಗೊಳಿಸುವ ಕಥೆ. ತನ್ನ ಮಹತ್ವಾಕಾಂಕ್ಷೆಗಾಗಿ ತಾರುಣ್ಯದಲ್ಲಿ ಪ್ರೇಮವನ್ನು ಧಿಕ್ಕರಿಸಿದ ಪ್ರೊ. ಲೀಲಾವತಿಯ ಜೀವನದ ಕಥೆಯಾಗಿದೆ. ಯೌವನದಲ್ಲಿ ಜೀವನದಲ್ಲಿ ಏನನ್ನಾದರೂ ಸಾಧಿಸುತ್ತೇನೆ ಎಂಬ ಛಲದಿಂದ ಹೊರಟ ಲೀಲಾವತಿ ವಯಸ್ಸಾದಂತೆ ಜೀವನ ಸಾಫಲ್ಯಕ್ಕೆ ಎದುರಾಗಿ ಸ್ಯಾಡಿಸ್ಟ್ ಆಗುತ್ತಾಳೆ. ಈ ರೀತಿಯ ಮನೋಭಾವದಿಂದ ತನ್ನ ಜೀವನಕ್ಕೆ ಅತಿಥಿಯಾದ ಲೀಲಾವತಿಯವರ ಮನಃಸ್ಥಿತಿಯ ಚಿತ್ರಣ ಈ ಕತೆಯಲ್ಲಿದೆ. ಸ್ತ್ರೀಯೊಬ್ಬಳ ಜೀವನದ ಆದರ್ಶ ಮತ್ತು ವಾಸ್ತವಗಳ ದ್ವಂದ್ವವನ್ನು ಇಲ್ಲಿ ನೋಡುತ್ತೇವೆ. ಅವಿವಾಹಿತಳಾಗಿದ್ದು ಅದರಲ್ಲೇ ಪ್ರಯೋಗ ಮಾಡುತ್ತಲೇ ಅವಿವಾಹಿತ ಸ್ತ್ರೀ ಸಾಮಾಜಿಕ ಸ್ತ್ರೀಯಾಗುವುದರಲ್ಲಿ ಸೋಲುತ್ತಾಳೆ ಎಂಬ ನಿಲುವಿಗೆ ಬರುತ್ತಾಳೆ.

ತನ್ನ ಬದುಕಿನ ಯಾವುದೋ ಆದರ್ಶಕ್ಕಾಗಿ ಮದುವೆಯಾಗದೆ ಉಳಿದು ಹಾಸ್ಟೆಲ್ ವಾರ್ಡನ್ ಆದವರು ಲೀಲಾವತಿ. ಹಾಸ್ಟೆಲಿನಲ್ಲಿರುವ ಹದಿಹರೆಯದ ಹೆಣ್ಣುಗಳ ಹೊಸ ಪ್ರಣಯ, ಮುಗ್ಧತೆ, ಬದುಕಿನ ಚೆಲುವನ್ನು ಮೊಗೆದು ಕುಡಿಯುವಂತೆ ಅವರಾಡುವ ಚೆಲ್ಲಾಟಗಳು ಇವುಗಳನ್ನು ಕಂಡು ತಾನು ಕಳೆದುಕೊಂಡ ಬದುಕಿನ ಅಮೂಲ್ಯ ಕ್ಷಣಗಳಿಗಾಗಿ ಪರಿತಪಿಸುತ್ತಾಳೆ. ತಾನು ಪಡೆಯಲಾಗದ್ದನ್ನು ಪಡೆದುಕೊಳ್ಳುತ್ತಿರುವ ಹುಡುಗಿಯರ ಮೇಲೆ ಸೇಡು ತೀರಿಸಿಕೊಳ್ಳುವ ಕಥೆಯಾಗಿ ಅತ್ಯಂತ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ಹಾಸ್ಟೇಲಿನ ವಾರ್ಡನ್ ಆದ ಲೀಲಾವತಿ ನಲವತ್ತರ ಆಸುಪಾಸಿನವಳು. ತಾನು ಯೌವನದಲ್ಲಿ ಪಡೆಯದೆ, ಅನುಭವಿಸದೆ ಉಳಿದ ಭಾವನೆಗಳನ್ನು ಹಾಸ್ಟೇಲಿನ ಹುಡುಗಿಯರಲ್ಲಿ ಕಂಡಾಗ ಆಕೆ ಉರಿಯುತ್ತಾಳೆ. ತನ್ನ ಹೆಸರಿಗೆ ಬರುವ ಕಾಗದಗಳ ಮೇಲೆ ತನ್ನ ಹೆಸರಿನ ಮುಂದೆ 'ಬಾಯಿ' ಎಂದಿದ್ದರೆ ಈಕೆಗೆ ಸಹಿಸಲು ಸಾಧ್ಯವಿಲ್ಲ. ದಿನಾ ಬೆಳಿಗ್ಗೆ ಮೈ ಮೇಲಿನ ಪರಿವೆಯೂ ಇಲ್ಲದಂತೆ ಹುಡುಗಿಯರು ಕಾಗದ ತೆಗೆದುಕೊಳ್ಳಲು ಹೋದಾಗ ಆಕೆಗೆ ಅವರ ಬಗ್ಗೆ ಅಸೂಯೆ ಮೂಡುತ್ತದೆ. ಯೌವ್ವನದ ಹುಡುಗಿಯರು ತೆಳ್ಳಗಿರುವುದನ್ನು ಕಂಡಾಗ ತಾನು ಅವರಂತೆ ಆಗಬೇಕೆಂದೆನಿಸುತ್ತದೆ. ಅದರ ತಯಾರಿಯನ್ನು ನಡೆಸುತ್ತಾಳೆ. ಹುಡುಗಿಯರ ಪ್ರೇಮ ವಿಫಲವಾಗಿ ಅವರು ಅಳು ಮುಖ ಮಾಡಿಕೊಂಡರೆ ಇವಳಿಗೆ ಒಂದು ರೀತಿಯ ಸಂತೋಷವಾಗುತ್ತದೆ. ತಾನು ಅನುಭವಿಸದ ಭಾವನೆ, ತುಮುಲಗಳನ್ನು ಇತರರು ಅನುಭವಿಸಿದರೆ ಈಕೆ ಸಹಿಸುವುದಿಲ್ಲ. ಅಪರೂಪಕ್ಕೆ ಯಾವುದಾದರೂ ಸಭೆ ಸಮಾರಂಭಗಳಿಗೆ ಅತಿಥಿಯಾಗಿ ಹೋದಾಗ ತನ್ನ ಭಾಷಣದಲ್ಲಿ ಹೆಣ್ಣಿನ ಸ್ವಾತಂತ್ರ್ಯದ ವಿಚಾರ, ಗಂಡಸರ ವಿರುದ್ಧ ದನಿ ಎತ್ತಬೇಕು ಎಂದು ಪುರುಷರ ವಿರೋಧಿಯಾಗಿ ನುಡಿಯುತ್ತಾಳೆ. ತನ್ನನ್ನು ಪ್ರೀತಿಸಿದವರಿಗೆ ಸ್ವಂತವಾಗಲಿಲ್ಲವೆಂದು ಈಕೆ ಇಡೀ ಪ್ರಪಂಚಕ್ಕೆ 'ಅತಿಥಿ'ಯಾಗಿ ಗೋಚರಿಸುತ್ತಾಳೆ. ಕೌಟುಂಬಿಕ ವಲಯದಲ್ಲಿ ಎಲ್ಲಿಯೂ ಬೇರಿಳಿಯದ ಈಕೆ ಕೊನೆಗೆ ತನ್ನ ಬದುಕಿಗೆ ತಾನೇ 'ಅತಿಥಿ'ಯಾಗಿ ಬಿಡುತ್ತಾಳೆ.

'ಪ್ರಶ್ನೆ' ಕತೆಯ ನಾಯಕಿ ಶಶಿ. ತನ್ನ ಜೀವನದಲ್ಲಿ ಬಂದು ಹೋಗುವ ಗಂಡುಗಳಿಗೆ ೧.೨.೩.೪ ಎಂದು ಸಂಖ್ಯೆಗಳನ್ನು ನೀಡಿ ನಾಮಕರಣ ಮಾಡುತ್ತಾಳೆ. ತನ್ನ ಜೀವನದಲ್ಲಿ ಬಂದು ಹೋಗುವ ಪುರುಷರ

ಪಟ್ಟಿ ಮಾಡುತ್ತಾಳೆ. ಹೀಗಾಗಲೇ ಮೂರು ಜನರ ಜೊತೆ ತನ್ನ ಸಂಬಂಧ ಕಡಿದು ಬಿದ್ದ ನಂತರ ನಾಲ್ಕನೆಯವನಲ್ಲಿ ತನ್ನ ಜೀವನದ ಆಸೆ ಆಕಾಂಕ್ಷೆಗಳಿಗೆ ಪುನಃ ಜೀವ ತುಂಬುತ್ತಾಳೆ.

ಹಿಂದೆ ಬಂದ ಮೂರು ಜನರಿಗಿಂತ ಭಿನ್ನವಾಗಿ ಇವನನ್ನು ಆಕೆ ಪ್ರೀತಿಸುತ್ತಾಳೆ. ಆದರೆ ಆತ ತಾನು ಹಿಂದೆ ಎಂದೋ ಪ್ರೀತಿಸಿದವಳ ನೆನಪನ್ನು ಶಶಿಯ ಪ್ರೀತಿ ಅಳಿಸಲು ಸಾಧ್ಯವಿಲ್ಲ ಎಂದು ಹೇಳಿ ಆಕೆಯನ್ನು ನಿರಾಕರಿಸುತ್ತಾನೆ. ಆತನ ಆತ್ಮಶೋಧನೆಯ ಪ್ರಶ್ನೆಯ ಉತ್ತರ ಈಕೆಯಾಗುವುದಿಲ್ಲ ಎಂಬುದು ಆತನ ಅಭಿಪ್ರಾಯ. ಜೀವನವೇ ಒಂದು ಪ್ರಶ್ನೆ ಎನ್ನುವ ಈಕೆಯ ಮಾತಿಗೆ ತಂದೆಯು

"ಹೆಣ್ಣುಮಕ್ಕಳು ಲಗ್ನಾ ಮಾಡಿಕೊಂಡ ಮ್ಯಾಲೆ ಎಲ್ಲಾ ಪ್ರಶ್ನೀನೂ ಬಗೇಹರೀತಾದ, ನೀ ಕಲಿತಾಕಿ, ತಿಳುವಳಿಕೆ ಇದ್ದಾಕಿ ಲಗ್ನಾ ಒಲ್ಲೆ ಅಂದ್ರ ಏನ್ ಮಾಡಬೇಕು ನಿನ್ನ ಹಡದವ್ರು"?" ಎಂದು ಪ್ರಶ್ನೆ ಮಾಡುತ್ತಾರೆ.(೩)

ಈಕೆಯ ಜೀವನದಲ್ಲಿ ಬರುವ ನಾಲ್ಕನೆಯವನು ಇವಳಲ್ಲಿ ಆತನ ಆತ್ಮಶೋಧನೆಗೆ ತೊಡಗುತ್ತಾನೆ. ಆದರೆ ಆತ ಇವಳಲ್ಲಿ ಮಾತ್ರವಲ್ಲ, ಬೇರೆ ಯಾರಲ್ಲೂ ಸಹ ತನ್ನ ಆತ್ಮ ಶೋಧನೆಯ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲಾರದ ಮನಃಸ್ಥಿತಿಯವನು. ಆತ ಈಕೆಯನ್ನು ತಿರಸ್ಕರಿಸಿದಾಗ ಈಕೆ ಹೇಳುವ ಮಾತುಗಳು

"ನನಗಾಗ ಅನ್ನಿಸಿತ್ತು–ನನ್ನ ಬಗೆಗಿನ ನಿನ್ನ ಹುಚ್ಚು ಸೆಳೆತ ಹೀಗೆಯೇ ಇರಲಿ. ಇಷ್ಟೇ ತೀವ್ರವಾಗಿರಲಿ ಉರಿಯುತ್ತಿರುಲಿ, ಕುದುಯುತ್ತಿರಲಿ ಆಗ ಸದ್ದಿಲ್ಲದೆ ನಿನ್ನ ಹುಚ್ಚಿಗೆ–ತೀವ್ರತೆಗೆ– ಬೆಂಕಿಗೆ ನೀರುಹಾಕಿ, ಕಲ್ಲುಹಾಕಿ, ಮಣ್ಣುಹಾಕಿ, ಗೋರಿ ಕಟ್ಟಿ ನಾನು ಎಲ್ಲಾದರೂ ದೂರ ಹೋಗಬೇಕು; ಆಗ ಹಾಗಾದ ನಂತರ ನಿನ್ನಲ್ಲಿ ಬೆಂಕಿಯಾಗಿ, ಆದರಲ್ಲೆ ನೀನು ಸ್ವಲ್ಪ–ಸ್ವಲ್ಪವಾಗಿ ಸುಟ್ಟು ಬೆಂದು ಹೋಗುವುದನ್ನು ದೂರದಿಂದ ನೋಡುತ್ತಿರಬೇಕು, ನೋಡಿ ಸಮಾಧಾನ ಹೊಂದಬೇಕು". (೪)

ಈ ರೀತಿಯ ಮಾತುಗಳು ವ್ಯವಸ್ಥೆಗೆ ಒಂದು ಆಘಾತವನ್ನು ನೀಡುತ್ತವೆ. ಮೋಸ ಮಾಡಿದವನನ್ನೇ ನೆನಸಿಕೊಂಡು ಜೀವನ ಪೂರ್ತಿ ಕೊರಗುವುದರ ಬದಲು ಆತನೇ ಕೊರಗುವಂತೆ ಮಾಡಬೇಕು ಎಂಬುದು ಸ್ತ್ರೀ ಪುರುಷನಿಗೆ ನೀಡುವ ವಿರೋಧ ಎನ್ನಬಹುದು. ಅಷ್ಟೇ ಅಲ್ಲದೆ ಇಷ್ಟಕ್ಕೆ ತನ್ನ ಜೀವನವನ್ನು ಸ್ಥಗಿತಗೊಳಿಸದೆ ಅವನನ್ನು ಅವನ ನೆನಪನ್ನು ಬಿಟ್ಟು ಮುಂದೆ ಹೋಗುತ್ತಾಳೆ. ಇಲ್ಲಿ ಗಂಡಿನಿಂದ ನಿರಾಶಳಾಗುವ ತರುಣಿಯ ತುಮುಲವನ್ನು ಗಮನಿಸಬಹುದು. ಶಶಿ ಇಲ್ಲಿ ಗಂಡು ಹೆಣ್ಣಿನ ಸಂಬಂಧ ಎಂದರೆ ಏನು? ಯಾಕೆ? ಎಂಬ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಲಾರದೆ ಅವುಗಳನ್ನು ಪ್ರಶ್ನೆಯಾಗಿಯೇ ಸ್ವೀಕರಿಸಲು ಮುಂದಾಗುತ್ತಾಳೆ.

'ನೆನಪು____ ಬರಿ ನೆನಪು' ಪಾವನಾ ತಾನು ಪ್ರೀತಿಸಿದ ಮೂರ್ತಿಯ ಜೊತೆ ವಿವಾಹವಾಗಲು ತಯಾರಾಗಿರುವ ಹೆಣ್ಣು. ಇದ್ದಕಿದ್ದಂತೆ ಎದುರಾಗುವ ತನ್ನ ಬಾಲ್ಯದ ಗೆಳೆಯನನ್ನು ಅವನ ನೆನಪನ್ನು ಹೇಗೆ ನಿರ್ಧರಿಸುತ್ತಾಳೆ ಎಂಬುದು ಕಥೆಯ ಚಿತ್ರಣವಾಗಿದೆ. ಮದುವೆಯ ಸವಿಗನಸಿನಲ್ಲಿರುವ ಪಾವನಾಳಿಗೆ ಇದ್ದಕ್ಕಿದ್ದಂತೆ ಅವಳ ಬಾಲ್ಯದ ಸ್ನೇಹಿತ ಎಲಿಸನ್ ಪಿಂಟೊ ಪ್ರತ್ಯಕ್ಷವಾಗುತ್ತಾನೆ. ತನ್ನ ಬಾಲ್ಯದಲ್ಲಿ ತನಗಿಂತ ಹಿರಿಯವನಾಗಿದ್ದ ಎಲಿಸನ್ ಈಕೆಯನ್ನು ಸೈಕಲಿನಲ್ಲಿ ಕೂಡಿಸಿಕೊಂಡು ಹೆದರಿಸುತ್ತಿದ್ದವನು, ಪ್ರೀತಿಯಿಂದ ಇವಳನ್ನು ಮುದ್ದುಸುತ್ತಿದ್ದವನು. ಆತನ ನೆನಪು ಈಗ ಪಾವನಾಳನ್ನು ಕಾಡುತ್ತದೆ.

ಮೂರ್ತಿಯೊಂದಿಗಿನ ಕನಸಿನ ಸುಖಮಯ ಮೆರವಣಿಗೆಯಲ್ಲಿ ಏಣಿಯಿಲ್ಲದೆ ಸಾಗಿರುವಾಗ ಎಲಿಸನ್ ಗೌಣವಾಗುತ್ತಾನೆ. ಆಗಿಲ್ಲದ ಒಂದು ಪ್ರಬುದ್ಧತೆ ಈಗ ಪಾವನಾಗೆ ಬಂದಿದೆ. ಅದರಲ್ಲೂ ಆತ ಕ್ರಿಶ್ಚಿಯನ್ ಎಂಬ ಜಾತಿ ಪ್ರಜ್ಞೆಯು ಅವನ ಬಗೆಗಿನ ಆಕರ್ಷಣೆಯನ್ನು ತಪ್ಪಿಸುತ್ತದೆ. ವಾಸ್ತವದ ನಿಷ್ಠುರಣೆಯಲ್ಲಿ ಎಲಿಸನ್ ಹಾಜರಿಯಿಂದ ಮನಸ್ಸನ್ನು ಮಂದಾರವಾಗಿಸಿಕೊಳ್ಳಬೇಕೆನ್ನುತ್ತಾಳೆ. ಎಲಿಸನ್‌ಗೆ ಆ್ಯಕ್ಸಿಡೆಂಟ್ ಆದಾಗ ಪಾವನಾ ಅತೀ ಗಾಬರಿಯಾಗುತ್ತಾಳೆ. ಆದರೆ ಆಗ ಎಲಿಸನ್ "ಇಷ್ಟು ಸಣ್ಣ ಆ್ಯಕ್ಸಿಡೆಂಟ್‌ಗೆ" ಎನ್ನುವ ಮಾತು ಕೊನೆಯದಾದರೂ ಅದನ್ನು ಕೊನೆಯಾಗಿಸುವುದಿಲ್ಲ. ನೆನಪು ಅಮರವೆನ್ನುವ ಸತ್ಯವನ್ನು ಮೆಲುಕು ಹಾಕುತ್ತಾಳೆ. ಅವನ ಕುರಿತ ಕವಿತೆ ಎಲ್ಲೂ ಹಾರಿಹೋಗದಂತೆ ನೋಡುತ್ತ, ಇತ್ತ ಮೂರ್ತಿಯ ಭಾವಚಿತ್ರಕ್ಕೆ ಮುದ್ದು ಕೊಡುತ್ತ ನೆನಪಿಗೆ ಮರೆವಿನ ಪರದೆ ಎಳೆಯುತ್ತಾಳೆ.

ಚಂಚಲತೆಗೆ ಒಂದು ರೀತಿಯ ಚಮತ್ಕಾರದ ತಿರುವು ಕೊಡುವ ಮೂಲಕ ನೆನಪು ಎಷ್ಟೆಂದರೂ ಗುಟ್ಟಾಗಿರಬೇಕು. ಅದರೊಳಗೆ ಸೇರಿ ಉಸಿರುಗಟ್ಟಿಸಿಕೊಳ್ಳುವುದಕ್ಕಿಂತ ವಾಸ್ತವದ ತೆರೆದೆದೆಗೆ ತಲೆ ಆನಿಸುವುದೇ ಲೇಸು ಎನ್ನುವ ಪಾವನಾಳ ಆಶಯಕ್ಕೆ ಅರ್ಥವಿದೆ. ಪಾವನ ವಿವಾಹ ಸಂಸ್ಥೆಯನ್ನು ಪ್ರವೇಶಿಸುವಾಗ ಗಂಡು-ಹೆಣ್ಣಿನ ಹಳೆಯ ನೆನೆಪುಗಳು ಏನಾಗಬೇಕು? ಎಂಬ ಪ್ರಶ್ನೆಗೆ ಅವು ಮಧುರ ನೆನಪಾಗಿ, ಕಾವ್ಯವಾಗಿ ಮನದಾಳದಲ್ಲುಳಿಯಬೇಕು ಎಂಬ ಉತ್ತರ ಕಂಡುಕೊಳ್ಳುತ್ತಾಳೆ.

'ಮರೀಚಿಕೆ' ಕಥೆಯ ನಾಯಕಿ ಮೀನಾಕ್ಷಿ (ಮಿನಿ) ಗೃಹಿಣಿ ಎಂಬ ಏಕತಾನತೆಯ ಬದುಕಿನಿಂದ ಬೇಸತ್ತವಳು. ಅನ್ಯರು ಸಂತೃಪ್ತ ಗೃಹಿಣಿ ಎಂದು ಕರೆಯಲು ಬೇಕಾದ ಎಲ್ಲವೂ ಮೀನಾಕ್ಷಿಯ ಸಂಸಾರದಲ್ಲಿದೆ. ಹ್ಯಾಂಡ್ ಸಮ್ ಗಂಡ, ದೊಡ್ಡಮನೆ, ಕಾರು, ಮುದ್ದಾದ ಎರಡು ಮಕ್ಕಳು ಎಲ್ಲವೂ ಇವೆ. ಹತ್ತು ವರ್ಷಗಳ ದಾಂಪತ್ಯ ಜೀವನ ಇವರದು. ಗಂಡನ ಸೇವೆ ಮಾಡುವುದು, ಅವನನ್ನು ಮುದ್ದಿಸುವುದು, ಮಕ್ಕಳನ್ನು ಸ್ಕೂಲಿಗೆ ಕಳುಹಿಸುವುದು, ಬಿಡುವಿನ ಸಮಯದಲ್ಲಿ ಪತ್ರಿಕೆ ಓದುವುದು, ಸಿನಿಮಾ, ಪಾರ್ಕು,ಪಾರ್ಟಿ ಮಾಡುವುದು ಇತ್ಯಾದಿ. ಒಟ್ಟಿನಲ್ಲಿ ಇನ್ನೊಬ್ಬರು ಹೊಟ್ಟೆಕಿಚ್ಚು ಪಡುವಂತ ಸಂಸಾರ.

ಇಷ್ಟೆಲ್ಲಾ ಸುಖ ಸಂತೋಷದ ಸಂಸಾರ ಇರುವ ಮಿನಿಗೆ ಬೇರೆಯೇ ಆದ ವಿಚಾರವಿದೆ. "ಒಮ್ಮೆ ಹೋಗಬೇಕು ರೆಕ್ಕೆ ಬಿಚ್ಚಿಕೊಂಡು, ಈ ಎಲ್ಲಾ ಗೋಡೆ ದಾಟಿ ಆಚೆಕಡೆ ಏನಿದೆಯೆಂದು ನೋಡಬೇಕು ಒಂದು ಸಲವಾದರೂ ಹೀಗೆ ಮಾಡಿದರೆ ಹೇಗೆ? ಹಾಗೆ ಮಾಡಿದರೆ ಹೇಗೆ? ಅಂತ ವಿಚಾರಿಸದೆ ಮನಸ್ಸಿಗೆ ಬಂದದ್ದು ಮಾಡಬೇಕು. ಸಿಕ್ಕೀತು ತನಗೂ ಒಂದು ಫೇರೀಲ್ಯಾಂಡ್, ಆದೀತು ಕುದುರೆಯೊಂದಿಗಿನ ರಾಜಕುಮಾರನ ಭೆಟ್ಟಿ- ಆದರೆ ಛೆ, ಇದರರ್ಥ ಬೇರೆಯೇ ಆಗುತ್ತದೆ. ಹೀಗೆಲ್ಲ ತನಗನಿಸುವುದು. ಖಂಡಿತ ಹೀಗಲ್ಲ, ತನಗನಿಸುವುದು ಬಿಟ್ಟು ಹೀಗೆ ಏನಾದರೂ ಇಲ್ಲಿಯ ತನಕ ಆಗದೇ ಇದ್ದದ್ದು ಆಗಬೇಕು- ಈ ಎಲ್ಲಾ ಬೇಸರ ಹೋಗಿಸಿ ಬಿಡುವಂಥಾದ್ದು ಏನಾದರು___".(೫)

ತನ್ನ ಸಂಸಾರದ ಎಲ್ಲಾ ಸುಖಗಳನ್ನು ಬಿಟ್ಟು ಬೇರೆ ಏನನ್ನೋ ಹುಡುಕುವ ತವಕ ಈಕೆ ಯಲ್ಲಿ ಕಾಣುತ್ತೇವೆ. ಪ್ರೀತಿಸುವ ಗಂಡನಿದ್ದರೂ ತಾನು ಎಂದೋ ಓದಿದ ಫ್ರೆಂಚ್ ಕಥೆಯಲ್ಲಿ ನಡೆಯುವಂತೆ ವಿಚಿತ್ರವಾದದ್ದು ಏನಾದರೂ ತನ್ನ ಜೀವನದಲ್ಲಿ ಸಂಭವಿಸಬೇಕು, ತನಗೊಬ್ಬ ಸುಂದರ ಗೆಳೆಯ ಸಿಗಬೇಕು, ಆತನೊಡನೆ ಸಿನಿಮಾ, ಪಾರ್ಕು, ಹೋಟೆಲ್ ಎಲ್ಲಾ ತಿರುಗಿ ರಾತ್ರಿ ಅವನೊಂದಿಗೆ ಕಳೆಯಬೇಕು ಎಂಬ ಹಂಬಲ ಈಕೆಯಲ್ಲಿ ಕಾಣಿಸುತ್ತದೆ. ವಾಸ್ತವದಲ್ಲಿರುವ ಈ ಜೀವನಕ್ಕಿಂತ ಬೇರೆಯದನ್ನು ಈಕೆ ಅಪೇಕ್ಷಿಸುತ್ತಾಳೆ.

ಈ ರೀತಿಯ ಒಂದು ಮಹಾತ್ವಾಕಾಂಕ್ಷೆಯ ನಿರೀಕ್ಷೆಯಲ್ಲಿಯೇ ತನ್ನ ಅಕ್ಕನ ಮನೆಗೆ ಬರುತ್ತಾಳೆ. ಆದರೆ ಇಲ್ಲಿಯೂ ತನ್ನ ಸಂಸಾರದಂತೆ ಇರುವ ಅಕ್ಕನ ಸಂಸಾರವು ಈಕೆಗೆ ಬೇಸರವೆನಿಸುತ್ತದೆ. ಅದೇ ಬೇಸರದಿಂದಲೇ ಊರಿಗೆ ಮರಳಲು ಬಸ್ಸು ಹತ್ತುವ ಮಿನಿಗೆ ತನ್ನಂತೆ ಅಭಿರುಚಿ ಹೊಂದಿರುವ ಸಹ ಪ್ರಯಾಣಿಕ ದೊರೆಯುತ್ತಾನೆ. ಆತನನ್ನು ನೋಡಿದ ತಕ್ಷಣ ಮಿನಿಗೆ ಇಷ್ಟು ದಿನದ ತನ್ನ ಹುಡುಕಾಟಕ್ಕೆ ಈತ ಒಂದು ದಾರಿ ತೋರಿಸುತ್ತಾನೆ ಎಂಬ ನಂಬಿಕೆ ಹುಟ್ಟುತ್ತದೆ. ಈ ಸಂತೋಷದಲ್ಲೇ ಆತನ ಬಳಿ ತಾನು ಮದುವೆಯಾದವಳು ಎನ್ನುವುದನ್ನು ಮರೆಮಾಚುತ್ತಾಳೆ. ಇಷ್ಟು ವರ್ಷ ತಾನು ಸಾಧಿಸಲಾಗದಿದ್ದನ್ನು ಇಂದು ಬಸ್ಸಿನ ಪ್ರಯಾಣದಲ್ಲಿ ಈ ನಾಲ್ಕಾರು ಗಂಟೆಗಳಲ್ಲಿ ಸಾಧಿಸಬೇಕೆಂದುಕೊಳ್ಳುತ್ತಾಳೆ. ಈತನೊಡನೆ ಕಳೆಯುವ ಈ ದಿನ ತನ್ನ ಜೀವನದೊಳಗೆ ಕಡೆ ತನಕ ನೆನಪಿನಲ್ಲಿ ಉಳಿಯುವಂತದ್ದು, ಸ್ವಯಂ ಪರಿಪೂರ್ಣವಾದ ದಿನ ಎಂದು ಕನಸು ಕಾಣುತ್ತಾಳೆ. ತನ್ನ ವಿಳಾಸವನ್ನು ಆವನಿಗೆ ತಿಳಿಯುವಂತೆ ತಾನು ಓದುತ್ತಿದ್ದ ' waiting for godot' ಪುಸ್ತಕದಲ್ಲಿ ಇಟ್ಟು ಬರುತ್ತಾಳೆ.

"ನಾವು ಏನೇನೋ ಆಗ್ಲಿ ಅಂತ ಕಾಯ್ತಿರತೀವಿ, ಆದರ ಎಲ್ಲಿ ಆಗತಾವ ಜೀವನದಾಗ" (೬) ಎನ್ನುವ ಆತನ ಮಾತಿನಂತೆ ತನ್ನ ಜೀವನದಲ್ಲಿ ಒಂದು ಮಹತ್ತರವಾದ ಬದಲಾವಣೆ ಆಗಬೇಕು ಎಂದು ಬಯಸಿದ ಮಿನಿಯು ತನ್ನ ಸಂಸಾರದೊಳಗೆ ಮತ್ತೆ ಸೇರಿದಾಗ ತಾನು ಆತನಿಗೆ ವಿಳಾಸ ನೀಡಿ ತಪ್ಪು ಮಾಡಿದೆನೇನೋ ಎನ್ನುವ ಭಾವನೆ ಮೂಡುತ್ತದೆ. ಆದರೆ ನಾವು ಅಂದು ಕೊಂಡಿದ್ದೆಲ್ಲವೂ ನಡೆಯಲು ಸಾಧ್ಯವಿಲ್ಲ ಎಂಬ ಆತನ ಮಾತಿನಂತೆ ಈಕೆಯಿಟ್ಟ ಚೀಟಿಯೊಡನೆ ಪುಸ್ತಕ ಸುರಕ್ಷಿತವಾಗಿ ಈಕೆಯ ಕೈ ಸೇರುತ್ತದೆ. ತಾನು ಅಂದುಕೊಂಡಂತೆ ಏನೂ ಆಗಲಿಲ್ಲವೆಂದು ನಿರಾಸೆಯನ್ನು ಹೊಂದುತ್ತಾಳೆ. 'waiting for godot' ನ ಸಂಕೇತ ಈ ಕಥೆಯಲ್ಲಿ ಶಕ್ತಿಯುತವಾಗಿ ಬಳಕೆಯಾಗಿದೆ. ನಮ್ಮ ಸಮಾಜದಲ್ಲಿ ಸಂಸಾರದ ಬಂದನದೊಳಗೆ ಬುಧಿಯಾಗಿರುವ ಹಲವಾರು ಹೆಂಗಸರು ಮಿನಿಯಂತೆ ವ್ಯರ್ಥ ಕಾಯುವುದರಲ್ಲೇ, ನಿರೀಕ್ಷೆಯಲ್ಲೆ ತಮ್ಮ ಬದುಕು ಕಳೆಯುತ್ತಾರೆ. ಏನಾದರೂ ಮಾಡಿ ತಮ್ಮ ಸುತ್ತಲಿನ ಕೋಟೆಯನ್ನು ಮುರಿಯಬೇಕು ಎಂದು ಹೊರಟವರು ಮತ್ತದೇ ಸಂಸಾರಿಕ ಜೀವನದ ಸೆಳೆತದಿಂದ ಮತ್ತೆ ಬಂಧಿಯಾಗುತ್ತಾರೆ ಎಂದು ಕಥೆ ತಿಳಿಸುತ್ತದೆ.

'ಶೋಷಣೆ, ಬಂಡಾಯ ಇತ್ಯಾದಿ___' ಕಾದಂಬರಿಯು ಮುಖ್ಯವಾಗಿ ಸಮಾಜದಲ್ಲಿರುವ ಹಲವು ಮಹಿಳೆಯರ ಜೀವನದ ಮುಖಗಳನ್ನು ಪರಿಚಯಿಸುವ ಮೂಲಕ ಪುರುಷ ಸಮಾಜದ ರೀತಿ ನೀತಿ ರಿವಾಜುಗಳನ್ನು ತೆರೆದಿಡುತ್ತದೆ. ಕಾದಂಬರಿಯ ಪ್ರಮುಖ ಪಾತ್ರವಾದ ಶಾಂತಿ ನಾನು ಪುರುಷ ದ್ವೇಷಿಯಲ್ಲ, ಸುಖಾ ಆನಂದವನ್ನು ಬೇಡ ಅನ್ನುವುದಿಲ್ಲ. ಆದರೆ ಈ ಪ್ರೀತಿ ಬಂಧನ ಅನ್ನುವುದು ಬೇಡ ಏಕೆಂದರೆ ಅಂಥಾದ್ದು ಅಸ್ತಿತ್ವದಲಿಲ್ಲ ಗಂಡು ಹೆಣ್ಣಿನ ಸಂಬಂಧದ ಸುಖಾ ಇರಲಿ ಆದರೆ ಅದು ಕೊರಳಿಗೆ ಉರುಳಾಗಬಾರದು ಎಂಬ ಆಧುನಿಕ ಧೋರಣೆಯುಳ್ಳವಳು. ಈಕೆ ವೃತ್ತಿಯಲ್ಲಿ ವೈದ್ಯೆಯಾದವರು ಒಬ್ಬ ಸಮಾಜ ಕಾರ್ಯಕರ್ತೆಯಂತೆ ತನ್ನ ಸುತ್ತಲೂ ಇರುವ ಅಭಿನೇತ್ರಿ ಕಮಲಾ, ಮನೆಕೆಲಸದಾಕೆ ರೋಶನ್ ಬಿ, ಹೃದಯವಂತ ವಕೀಲೆ ಶಾಂತಾ ಆಪ್ಪೆ, ಅವಿವಾಹಿತ ಬ್ಯಾಂಕ್ ಉದ್ಯೋಗಿ ಲೀಲಾ ಕುಲಕರ್ಣಿ, ಕವಯತ್ರಿ ಮತ್ತು ಗೃಹಿಣಿ ಪೂರ್ಣಿಮಾ ಸಿಂಗ್ ಮತ್ತು ಯಶಸ್ವೀ ರಾಜಕಾರಣಿ ಮಾಲಿನಿ ಪಟೇಲ್ ಈ ಆರು ಜನ ಸ್ತ್ರೀಯರ ಬದುಕನ್ನು ಆಸಕ್ತಿಯಿಂದ ಹತ್ತಿರದಿಂದ ನೋಡಿ ಅವಲೋಕಿಸುತ್ತಾಳೆ.

ಕಾದಂಬರಿಯ ಶೀರ್ಷಿಕೆಯೇ ಹೇಳುವಂತೆ ಇಲ್ಲಿ ಉದ್ಧಕ್ಕೂ ಶೋಷಣೆ, ಬಂಡಾಯ ಇತ್ಯಾದಿಗಳ ಬಗ್ಗೆ ಆಯಾ ಪಾತ್ರಗಳು ಮಾತನಾಡುವುದನ್ನು ನೋಡುತ್ತೇವೆ. ತನ್ನ ಆಯ್ಕೆ ತಪ್ಪು ಇಲ್ಲಿ ಅಪಾಯವಿದೆ ಎಂದು ಗೊತ್ತಿದ್ದರೂ ಅದರ ಜಾಲದಲ್ಲಿ ಸಿಕ್ಕಿಕೊಳ್ಳುವ ಜೇಡದಂತೆ ಹೆಣ್ಣು ಇಲ್ಲಿ ತಾನು ಬಲಿಪಶುವಾಗುತ್ತಾಳೆ. ಹೆಣ್ಣು ಅದೆಷ್ಟೆ ಪಜ್ಞಾಸ್ತರದಲ್ಲಿ ವೈಚಾರಿಕ ಪ್ರಖರತೆಯನ್ನು ಉಪಾಯವಾಗಿ ಬಳಸಿಕೊಂಡರೂ ಹೆಣ್ಣಿಗೇ ಕೊನೆಗೆ ಗಂಡೆ ಗತಿ ಅಥವಾ ಗಂಡಸಿಗೆ ಶರಣಾಗುವುದೇ ಅಂತಿಮ ಮಾರ್ಗ, ಶರಣಾಗತಿಯೇ ದಿವ್ಯವಾದ ಔಷಧಿ ಎಂಬ ಸತ್ಯಾಂಶವನ್ನು ಇಲ್ಲಿ ಕಾಣುತ್ತೇವೆ.

ಕಾದಂಬರಿಯ ಕೇಂದ್ರ ಪಾತ್ರ ಶಶಿ, ಆಧುನಿಕ ಮನೋಭಾವದವಳು ಈಕೆಯ ಪ್ರಕಾರ ಗಂಡು ಹೆಣ್ಣಿನ ಸಂಬಂಧವೆಂದರೆ ತನ್ನ ದಿನ ನಿತ್ಯದ ಇನ್ನಿತರ ಕಾರ್ಯಕ್ರಮಗಳಂತೆ ಒಂದು. ಈಕೆಗೆ ತನ್ನ ಅಸಹದ್ಯೋಗಿ ಗೆಳೆಯ ಸತೀಶನ ಜೊತೆಗಿನ ದೈಹಿಕ ಸಂಬಂಧದ ಬಗ್ಗೆ ಅವಳಿಗೆ ಉದ್ವೇಗವಾಗಲೀ, ಸಂಕೋಚವಾಗಲೀ, ನಾಚಿಕೆಯಾಗಲೀ ಇಲ್ಲ. ಇಬ್ಬರೂ ಕೂಡಿ ಪಿಕ್ಚರ್ ನೋಡುವ ಹಾಗೆ, ಚಹಾ ಕುಡಿಯುವಂತೆ, ಐಸ್ ಕ್ರೀಂ ತಿಂದ ಹಾಗೆ ಮಲುಗುವುದು ಕೂಡ ತಮ್ಮಿಬ್ಬರ ಗೆಳೆತನದ ವಿಸ್ತಾರದ ಒಂದು ಭಾಗ. ಹಾಗೆಯೇ ತನ್ನ ಮನೆಯ ಹೊರಗೆ ಮತ್ತು ವೈದ್ಯ ವೃತ್ತಿಯಲ್ಲಿ ಹಲವು ಜನ ಹೆಂಗಸರು ಗಂಡಸರ ದಬ್ಬಾಳಿಕೆಗೆ ಒಳಗಾಗುವುದನ್ನು ಕಂಡವಳು.

ತನ್ನ ಆಪ್ತ ಗೆಳತಿಯಾದ ಕಮಲಾಳ ಡೈರಿಯನ್ನು ಓದುವ ಮೂಲಕ ಆಕೆಯ ಜೀವನದ ಬಗ್ಗೆ ತಿಳಿದುಕೊಳ್ಳುತ್ತಾಳೆ. ಕಮಲಾ ಮತ್ತು ಶಶಿ ಆಪ್ತ ಗೆಳತಿಯರು, ಕಾಲೇಜು ದಿನಗಳಿಂದಲೂ ಒಬ್ಬರನ್ನೊಬ್ಬರು ಬಲ್ಲವರಾಗಿದ್ದವರು. ತಾನು ಒಬ್ಬ ಉತ್ತಮ ಮತ್ತು ದೊಡ್ಡ ನಟಿ ಆಗಬೇಕು ಎಂಬುದು ಕಮಲಾಳ ಮಹತ್ತರವಾದ ಆಸೆ. ಜೀವನ ಒಂದು ಕಲೆ ಎನ್ನುವುದಕ್ಕಿಂತ ಕಲೆಯೇ ಜೀವನ ಎಂದು ನಂಬಿದ್ದವಳು. ಜೀವನದಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಧ್ಯೇಯವಿರುವಂತೆ ಸಮಾಜದಲ್ಲಿ ಉತ್ತಮ ಕಲಾವಿದೆಯೆಂದು ಗುರುತಿಸಿಕೊಳ್ಳುವುದು ಈಕೆಯ ಧ್ಯೇಯ. ಮದುವೆಯ ವಿಷಯದಲ್ಲೂ ಕೂಡ ಈಕೆ ಇದೇ ನಿಲುವನ್ನು ಹೊಂದಿರುವವಳು. ಕಲೆಯನ್ನು ಪ್ರೀತಿಸುವ ಒಬ್ಬ ಉತ್ತಮ ಮನುಷ್ಯನನ್ನು ಮದುವೆಯಾಗಿ ಉತ್ತಮ ಗೃಹಿಣಿಯಾಗಬೇಕು ಎಂಬುದು ಕಮಲಾಳ ಕನಸು. ಗಂಡಿನ ಕುರಿತು ಶಶಿಯ ವಿಚಾರಧಾರೆಗಳಿಗೆ ಸಂಪೂರ್ಣ ವಿರುದ್ಧವಾದವಳು. ಗಂಡು ಹೆಣ್ಣಿನ ನಡುವಿನ ಪ್ರೀತಿ ಪ್ರೇಮದಲ್ಲಿ ಆದರ ಬಂಧನದಲ್ಲಿ ಸಿಗುವ ತೃಪ್ತಿ ಜೀವನದ ಕಷ್ಟಗಳನ್ನು ಮರೆಸುತ್ತದೆ ಎಂಬುದು ಇವಳ ಅಭಿಪ್ರಾಯ.

ಕಲೆಗಾಗಿಯೇ ಅದನ್ನು ಪ್ರೀತಿಸುವಂತವನಿಗೆ ಈ ಜೀವ ಮುಡುಪು ಎನ್ನುತ್ತಿದ್ದ ಕಮಲಾಳಿಗೆ ' ರಸಿಕ ಕೂಟ' ಎಂಬ ನಾಟಕ ಕಂಪನಿಯ ಮೂಲಕ ಅದರ ನಿರ್ದೇಶಕ ಶಿವಮೂರ್ತಿಯ ಪರಿಚಯವಾಗುತ್ತದೆ. ತಾನು ಬಯಸಿದ ಆದರ್ಶ ಪುರುಷ ಈತನೇ ಎಂದು ಅವನನ್ನು ನಂಬಿ ಮನಸಾರೆ ಪ್ರೀತಿಸುತ್ತಾಳೆ. ಶಿವಮೂರ್ತಿಗೆ ಈಗಾಗಲೇ ವಿವಾಹವಾಗಿ ಮೂರು ಮಕ್ಕಳಿದ್ದಾರೆ ಎಂಬ ವಿಚಾರ ತಿಳಿದೂ ಅದನ್ನು ಮರೆತು ಆತನನ್ನು ಸ್ವೀಕರಿಸುತ್ತಾಳೆ. ವಿವಾಹವಾಗದೆಯೇ ಆತನೊಡನೆ ಸಂಸಾರ ಶುರು ಮಾಡಿದ ನಂತರ ಕಮಲಾಳಿಗೆ ಶಿವಮೂರ್ತಿಯ ನಿಜ ಸ್ವರೂಪದ ಅರಿವಾಗುತ್ತದೆ. ಶಿವಮೂರ್ತಿಯ ಪ್ರಕಾರ ಕಮಲಾ ಕೇವಲ ಆತನ ಸ್ವತ್ತು, ಅಭಿನೇತ್ರಿಯಾದ ಆಕೆ ಸಿನಿಮಾವೊಂದರಲ್ಲಿ ನಾಯಕಿಯಾಗುವ ಅವಕಾಶ ಬಂದಾಗ ಆಕೆಯನ್ನು ನಾಯಕಿಯಾಗದಂತೆ ತಡೆಯುತ್ತಾನೆ. ಆತನನ್ನೇ ಸರ್ವಸ್ವ ಎಂದು ನಂಬಿದ್ದ ಕಮಲಾಳ ಮೇಲೆ ಅನಾದರ ಆರೋಪ ಮಾಡುತ್ತಾನೆ. ಕ್ಷುಣಕ ಕಾರಣಗಳಿಗಾಗಿ ಈಕೆಯ ಮೇಲೆ ಹಲ್ಲೆ ನಡೆಸುತ್ತಾನೆ. ಮಾನಸಿಕ ಹಿಂಸೆಯನ್ನು ನೀಡುತ್ತಾನೆ. ಇಷ್ಟೆಲ್ಲಾ ದಬ್ಬಾಳಿಕೆ, ದೌರ್ಜನ್ಯವೆಸಗಿದ ಮೂರ್ತಿಯ ಕಪಟ ಮಾತುಗಳಿಗೆ, ಆತನ

ಅಪ್ಪುಗೆಗೆ ತನ್ನೆಲ್ಲಾ ನೋವನ್ನು ಮರೆಯುವಂತವಳಾಗಿರುತ್ತಾಳೆ. ಸಹನೆಗೂ ಒಂದು ಮಿತಿ ಇದೆ ಎಂಬಂತೆ ಕೊನೆಗೊಂದು ದಿನ ಇನ್ನು ಆತನ ಹಿಂಸೆ ತಾಳಲಾರೆ ಎಂಬಂತೆ ಮನೆಯಿಂದ ಹೊತಬೀಳುತ್ತಾಳೆ. ಜೀವನದಲ್ಲಿ ಇನ್ನು ಮುಂದಾದರು ಕಮಲ ಸುಖವಾಗಿರುತ್ತಾಳೆ ಎಂಬ ನಂಬಿಕೆಯನ್ನು ಹುಸಿಯಾಗಿಸುವಂತೆ ಕಮಲಾ ಮತ್ತೆ ಶಿವಮೂರ್ತಿಯ ಬಳಿಗೆ ಬರುತ್ತಾಳೆ.

'ರೋಶನ್ ಬಿ' ಕಾದಂಬರಿಯ ಮೊದಲಿನಿಂದ ಕೊನೆಯವರೆಗೂ ಕಾಣ ಸಿಗುವವಳು ಕೆಲಸದಾಕೆಯಾಗಿ ಬರುವ ಈಕೆ ಪ್ರತಿನಿತ್ಯ ಗಂಡನ ಒಂದಲ್ಲ ಒಂದು ಹಿಂಸೆಯಿಂದ ನರಳಿ ಹಿಂಸೆ ಪಶುವವಳು. ದಿನವೂ ಕಣ್ಣೀರು ಸುರಿಸುತ್ತಲೇ ಬದುಕುವವಳು, ಮನೆ ಮಕ್ಕಳ ಪೋಷಣೆಗೆ ಎಳ್ಳಷ್ಟು ಸಹಾಯ ಮಾಡದ ಗಂಡ. ಇವಳು ದುಡಿದು ತಂದ ಹಣದಿಂದಲೇ ಮಜಾ ಮಾಡುವವನು. ಇದ್ದಕ್ಕಿದಂತೆ ಗಂಡನ ದುರ್ವತನೆಯಿಂದ ಬೇಸತ್ತು ತನ್ನ ತವರಿಗೆ ಹೊರಟು ಹೋಗುತ್ತಾಳೆ. ಆದರೆ ಗಂಡನಿಂದ ತಪ್ಪಾಯಿತು ಕ್ಷಮಿಸು ಇನ್ನು ಈ ರೀತಿ ಮಾಡುವುದಿಲ್ಲ ಎಂಬ ಒಂದು ಮಾತಿಗೆ ತವರಿನವರ ನ್ಯಾಯದ ಮೂಲಕ ಮತ್ತೇ ಆತನೊಡನೆ ಬಾಳಲು ಬರುತ್ತಾಳೆ.

'ಪೂರ್ಣಿಮಾ ಸಿಂಗ್' ಮದುವೆಗೆ ಮುಂಚೆ ಉತ್ತಮ ಕವಿಯಾಗಿದ್ದವಳು. ಮದುವೆಯ ನಂತರ ಗಂಡನಿಗೆ ಅದು ಇಷ್ಟವಾಗುವುದಿಲ್ಲವೆಂದು ತಿಳಿದು ತನ್ನೊಳಗಿನ ಕವಯಿತ್ರಿಯನ್ನು ಕೊಂದು ಬದುಕುತ್ತಿರುತ್ತಾಳೆ. ಮದುವೆಯ ನಂತರ ಹೆಣ್ಣೆಂದರೆ ಕೇವಲ ಹೆರುವ ಯಂತ್ರ ಎಂಬಂತೆ ಮಕ್ಕಳನ್ನು ಹೆರುತ್ತಿರುತ್ತಾಳೆ. ಮನೆಯಲ್ಲಿ ಆಳು ಕಾಳು, ಕಾರು, ಬಂಗಲೆ ಎಲ್ಲವೂ ಇದ್ದರೂ ಈಕೆ ನೆಮ್ಮದಿಯಿಲ್ಲದವಳಾಗಿರುತ್ತಾಳೆ. ಗಂಡ ತನ್ನ ಮೇಲೆ ದಬ್ಬಾಳಿಕೆ ನಡೆಸುತ್ತಿರುವುದರ ಅರಿವಿದ್ದು ಅದನ್ನು ತಾಳಿಕೊಂಡು ಬಾಳುತ್ತಾಳೆ. ಕವಿತೆ ರಚಿಸುವ ಕೆಲಸಕ್ಕಿಂತ ವರ್ಷಕ್ಕೆ ಎರಡು ವರ್ಷಕ್ಕೆ ಒಂದರಂತೆ ಮಕ್ಕಳನ್ನು ಹೆರುವ ಮೂಲಕ ಜೀವಂತ ಕಾವ್ಯಗಳನ್ನು ಸೃಷ್ಟಿಸುತ್ತಿರುತ್ತಾಳೆ. ಪೂರ್ಣಿಮಾಗೆ ತಾನು ಸೃಷ್ಟಿಸುವ ಈ ಜೀವಂತ ಕಾವ್ಯಗಳು ತನ್ನನ್ನು ಸ್ವಲ್ಪ ಸ್ವಲ್ಪವಾಗಿಯೇ ಕೊಲ್ಲುತ್ತವೆ. ತನ್ನನ್ನು ಕೊಲ್ಲುವ ಮಕ್ಕಳಿಗಿಂದ ತನ್ನ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವ ಇವರು ಜೀವವಿಲ್ಲದ ಕವಿತೆ ರಚನೆಯ ಮಾರ್ಗವೇ ಹೆಚ್ಚು ಹಿತವೆನಿಸುತ್ತದೆ. ಪೂರ್ಣಿಮಾಳ ಗಂಡನ ಪ್ರಕಾರ ಹೆಂಡತಿಯೆಂದರೆ ಕೇವಲ ಮಕ್ಕಳು ಹೆರುವ ಯಂತ್ರವಷ್ಟೆ.

"ಹೆಂಗಸಾಗಿ ಪ್ರೆಗ್ನೆನ್ಸಿ ಮಾಡೋ ಶಕ್ತಿ ಇಲ್ಲ ಅಂದ್ರ ಏನ್ರೀ ಡಾಕ್ಟರ್? ಏನರೆ ಗುಳಿಗೀ ಔಷಧಿ ವಗೈರೆ ಕೊಡ್ರಿ, ಖರ್ಚು ಬೇಕಾದಷ್ಟಾಗ್ಲಿ, ನಾಕೊಡ್ಲಿಕ್ಕೆ ತಯಾರಿದ್ದೀನಿ. ಏನು ಮಾಹಾ, ಒಂಬತ್ತು ತಿಂಗಳು ಆಡಾಡುತ್ತಾ ಕಳೆಯ ಹೋಗ್ತಾದ". (೭)

ಆತನ ಪ್ರಕಾರ ಹೆಣ್ಣು ಬಸುರಿಯಾಗುವುದು, ಮಕ್ಕಳನ್ನು ಹೆರುವುದು ಒಂದು ಸಣ್ಣ ಕೆಲಸ. ಹೆಂಡತಿಯಾದ ಪೂರ್ಣಿಮಾಳ ಆರೋಗ್ಯ ಸರಿಯಿಲ್ಲದಿದ್ದರು, ಆಕೆಯಲ್ಲಿ ತಾಯಿಯಾಗಲು ಶಕ್ತಿ ಇಲ್ಲದಿದ್ದರು ಗಂಡನಾದ ಇವನಿಗೆ ಪೂರ್ಣಿಮಾಳ ಬಗ್ಗೆ ಕರುಣೆ ಇಲ್ಲ. ತನ್ನ ಬಗ್ಗೆ ಕರುಣೆ, ಪ್ರೀತಿ ಕಿಂಚಿತ್ತು ಇಲ್ಲದ ಈ ಗಂಡನ ಮರ್ಜಿ ಕಾಯುವುದು ಹೆಂಡತಿಯಾದ ತನ್ನ ಕರ್ತವ್ಯ ಎಂಬುದು ಪೂರ್ಣಿಮಾಳ ಪಭಿಪ್ರಾಯ. ಪೂರ್ಣಿಮಾಳಿಗೆ ಮಕ್ಕಳಾಗದಂತೆ ಶಸ್ತ್ರ ಚಿಕಿತ್ಸೆ ಮಾಡಿದರೆ ಮುಂದೆ ಆಕೆ ತನ್ನ ಸುಂದರ ಶರೀರ ಕಳೆದುಕೊಳ್ಳುತ್ತಾಳೆ ಎಂಬ ಒಂದೇ ಒಂದು ಕಾರಣದಿಂದ ಶಸ್ತ್ರ ಚಿಕಿತ್ಸೆಯನ್ನು ಈತ ಒಪ್ಪುವುದಿಲ್ಲ. ಹೆರಿಗೆ ನೋವಿನ ಸಮಯದಲ್ಲಿಯೂ ಪುರ್ಣಿಮಾ ಗಂಡನ ಮಾತಿಗೆ ತಲೆಬಾಗುತ್ತಾಳೆ.

'ಲೀಲಾ ಕುಲಕರ್ಣಿ' ಖಾಸಗಿ ಬ್ಯಾಂಕೊಂದರಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುವಾಕೆ. ತನ್ನ ಕುಟುಂಬದವರ ಹಿತಾಸಕ್ತಿ ಕಾಪಾಡುವ ಸಲುವಾಗಿ ತನ್ನನ್ನು ತಾನೇ ಶೋಷಣೆಗೆ ಒಡ್ಡಿಕೊಳ್ಳುತ್ತಾಳೆ. ಹುದ್ದೆಯಲ್ಲಿ ಮೇಲೇರಲು ಇರುವ ಯಾವುದೇ ಪರೀಕ್ಷೆಯನ್ನು ಪಾಸು ಮಾಡಿದರು ಇವಳಿಗೆ ಪ್ರಮೋಶನ್ ಸಿಗುವುದಿಲ್ಲ. ಪ್ರಮೋಶನ್ ಸಿಗಬೇಕಾದರೆ ಈಕೆ ತನ್ನ ಮೇಲಿನ ಅಧಿಕಾರಿಗಳ ಆಸೆ ಪೂರೈಸಬೇಕು. ಕುಟುಂಬದವರ ಒಳಿತಿಗಾಗಿ ಇವಳು ಪ್ರಮೋಶನ್ ಎಂಬ ಮರೀಚಿಕೆಯ ಬೆನ್ನು ಹತ್ತಿ ಎಡವುತ್ತಾಳೆ. ಕೆಲಸಕ್ಕಿಂತ ಆರೋಗ್ಯವೇ ಮುಖ್ಯ ಎಂದು ಬುದ್ಧಿ ಹೇಳುವ ಡಾ. ಶಶಿಯ ಮಾತಿಗೆ ಆಕೆ ತನಗೆ ಕೆಲಸವೇ ಮುಖ್ಯ ಎನ್ನುತ್ತಾಳೆ. ಒಂದು ಕಾಲದಲ್ಲಿ ಒಬ್ಬರ ಜೊತೆ ಮಲಗಿ ಇನ್ನೊಬ್ಬರ ಜೊತೆ ವಿವಾಹವಾಗುವುದನ್ನು ವಿರೋಧಿಸುತ್ತಿದ್ದ ತಾನೆ ಇಂದು ಆದಾರಿಯಲ್ಲಿ ನಡೆಯುತ್ತಾಳೆ. ಮದುವೆ ಗೊತ್ತಾಗಿದ್ದರು ಕೂಡ ಅದಕ್ಕಿಂತ ಕಲಸವೇ ಮುಖ್ಯ ಎಂದು ಹೇಳುತ್ತ ತನ್ನ ಕುಟುಂಬದವರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಪ್ರಯತ್ನಿಸುತ್ತಾಳೆ.

'ಮಾಲಿನಿ ಪಟೇಲ್' ಒಬ್ಬ ಯಶಸ್ವೀ ರಾಜಕಾರಣಿ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಶೋಷಣೆಗಳನ್ನು ವಿರೋಧಿಸುತ್ತ ಹೋರಾಟ ಮಾಡುವವಳು. ಸಮಾಜದಲ್ಲಿ ಗಂಡು-ಹೆಣ್ಣಿನ ಸಮಾನತೆಯ ಬಗ್ಗೆ ಮಾತನಾಡುವ ಈಕೆ ತನ್ನ ಮನೆಯಲ್ಲಿ ಗಂಡನನ್ನು ನಿರ್ಲಕ್ಷಿಸುತ್ತಾಳೆ. ಕೆಲವು ವರ್ಷಗಳ ಹಿಂದೆ ಕಾರಿನ ಅಪಘಾತದಲ್ಲಿ ಎರಡೂ ಕಾಲು ಕಳೆದುಕೊಂಡಿರುವ ಮತ್ತು ಇತ್ತೀಚೆಗಷ್ಟೇ ಹೃದಯಾಘಾತಕ್ಕೆ ಒಳಗಾಗಿರುವ ಗಂಡನ ಸೇವೆಯನ್ನು ಈಕೆ ಮರೆಯುತ್ತಾಳೆ. ಈಕೆಯ ರಾಜಕೀಯ ಕಾರ್ಯಗಳ ನಡುವೆ ಮನೆಯ ಬಗ್ಗೆ ಗಂಡನ ಆರೋಗ್ಯದ ಕಡೆ ಗಮನ ನೀಡಲು ಸಾಧ್ಯವಿಲ್ಲವೆನ್ನುವವಳು.

ಹಿಂದೂ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುವ ಶೋಷಣೆ, ಅನ್ಯಾಯ, ಅತ್ಯಾಚಾರಗಳ ವಿರುದ್ಧ ಮಾತನಾಡುವ ಈಕೆ ಮನೆಯಲ್ಲಿ ಗಂಡನ ಶುಶ್ರೂಷೆಗಾಗಿ ಅತ್ತೆಯನ್ನು ನೇಮಕ ಮಾಡಿರುತ್ತಾಳೆ. ತನ್ನ ಹಕ್ಕಿನ ಜೊತೆ ಬೆರೆತಿರುವ ಕರ್ತವ್ಯವನ್ನು ಮರೆತು ಎಲ್ಲರಿಗೂ ಸಮಾನತೆಯ ಪಾಠ ಹೇಳುತ್ತಾಳೆ.

'ಶಾಂತಾ ಅಪ್ಪೆ' ಮಾಲಿನಿ ಪಟೇಲರಂತೆ ಬರೀ ಬಾಯಿ ಕೊಚ್ಚುವವರಲ್ಲ. ತಾವು ಆಡಿದನ್ನು ಮಾಡಿತೋರಿಸುವವರು. ಅನ್ಯಾಯಕ್ಕೊಳಗಾಗಿ ನೊಂದಂತಹ ಹೆಣ್ಣು ಮಕ್ಕಳಿಗೆ ನ್ಯಾಯ ದೊರೆಕಿಸಿಕೊಡುತ್ತಾರೆ. ಶಶಿ ಮನೆಯ ಕೆಲಸದಾಳು ರೋಶನ್ ಬಿ ಮತ್ತೆ ತನ್ನ ಗಂಡನೊಂದಿಗೆ ರಾಜಿ ಮಾಡಿಕೊಂಡಿರುವುದನ್ನು ಕೇಳಿ ಆಕೆಯ ಬಗ್ಗೆ ಅನುಕಂಪ ವ್ಯಕ್ತಪಡಿಸುತ್ತಾರೆ. ಹೆಂಡತಿಯ ಬಗ್ಗೆ ಕರುಣೆ ಇಲ್ಲದಂತೆ ಮಾತನಾಡುವ ಪೂರ್ಣಿಮಾಳ ಗಂಡ ಮತ್ತು ಗಂಡನ ಪ್ರತಿ ಮಾತಿಗೂ ತಲೆ ಬಾಗುವ ಅವಳ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸುತ್ತಾರೆ. ಅನಿವಾರ್ಯ ಕಾರಣಗಳಿಂದ ಮದುವೆಗೆ ಮುಂಚೆಯೇ ಕಾಲುಜಾರಿದ ಲೀಲಾ ಕುಲಕರ್ಣಿಗೆ ಮದುವೆಯ ವ್ಯವಸ್ಥೆ ಮಾಡುವ ಮೂಲಕ ಶೋಷಣೆಗೆ ಒಳಗಾದ ಅವಳ ಜೀವನಕ್ಕೆ ನೆರವಾಗುತ್ತಾರೆ. ಈಕೆ ಮಾಡುವ ಪ್ರತಿಯೊಂದು ಕಲಸದ ಹಿಂದೆಯೂ ಪತಿಯ ನೆರವಿದೆ ಎಂಬುದು ಸಹ ಇಲ್ಲಿ ಮುಖ್ಯವಾಗುತ್ತದೆ. ಹೆಣ್ಣಿನ ಪರ ಮಾತನಾಡುವುದಷ್ಟೇ ಅಲ್ಲದೆ ಅದರ ಪರವಾಗಿ ಹೆಂಡತಿಯ ಜೊತೆ ಕಾರ್ಯ ನಿರ್ವಹಿಸುವ ಇವರು ಓದುಗರ ಪ್ರಶಂಸೆಗೆ ಗುರಿಯಾಗುತ್ತಾರೆ.

ಪ್ರತಿ ದಿನ ತನ್ನ ದೈನಂದಿಕ ಜೀವನದಲ್ಲಿ ಮದುವೆಯಾದ ಮತ್ತು ಮದುವೆಯಾಗದ ಈ ಆರು ಜನ ಹೆಣ್ಣುಗಳ ಜೀವನದಲ್ಲಿ ಬರುವ ಪುರುಷ ಮತ್ತು ಅವರ ವರ್ತನೆಯ ಬಗ್ಗೆ ತಿಳಿದಿರುವ ಶಶಿಗೆ ವಿವಾಹ ವ್ಯವಸ್ಥೆಯ ಬಗ್ಗೆ ನಂಬಿಕೆ ಇರುವುದಿಲ್ಲ. ಮದುವೆಗೆ ವಿರೋಧ ವ್ಯಕ್ತ ಪಡಿಸುವ ಈಕೆ ಮುಂದೆ ಉಳಿದವರಂತೆಯೇ ತಾನು ವಿವಾಹದ ಬಂಧನಕ್ಕೆ ಒಳಗಾಗುತ್ತಾಳೆ. ತನ್ನ ಆಪ್ತ ಗೆಳೆಯನಾದ ಕಮಲಾ ಮೋಸ

ಹೋದವನನ್ನೇ ಮತ್ತೆ ಆಶ್ರಯಿಸುವುದು. ರೋಶನ್ ಬಿ ಗಂಡನ ಹಿಂಸೆಯನ್ನು ಮರೆತು ಆತನನ್ನು ಒಪ್ಪಿಕೊಳ್ಳುವುದು ಇವಳ ನಿರ್ಧಾರವನ್ನು ಅಲ್ಲಾಡಿಸುತ್ತದೆ. ತನ್ನ ಸಹದ್ಯೋಗಿ ಡಾ. ಸತೀಶ್‌ನನ್ನು ಇದುವರೆಗೂ ಆಟ ಆಡಿಸುತ್ತಿದ್ದ ಗಂಡಾದ ಆತ ಇವಳಿಗೆ ತಲೆಬಾಗುವಂತೆ ಮಾಡಿದ ಶಶಿ ಮುಂದೆ ಆತನನ್ನು ಒಪ್ಪಿಕೊಳ್ಳುತ್ತಾಳೆ. ತಾನು ವಿರೋಧಿಸಿದ ವಿವಾಹ ಬಂಧನಕ್ಕೆ ತಾನೇ ಬಂಧಿಯಾಗುತ್ತಾಳೆ. ಕಾದಂಬರಿಯ ಕೊನೆಯಲ್ಲಿ ವಿವಾಹಕ್ಕೆ ಒಪ್ಪಿಗೆ ಸೂಚಿಸಿದ ಶಶಿಗೆ ಸತೀಶನಲ್ಲಿನ ಬದಲಾವಣೆ ಸ್ಪಷ್ಟವಾಗಿ ಗೋಚರಿಸುತ್ತದೆ. ಪರಿಚಯವಾದ ಇಷ್ಟು ದಿನಗಳಲ್ಲಿ ಈಕೆಯ ಒಪ್ಪಿಗೆ ಕೇಳದೆ ಏನನ್ನು ಮಾಡದವನು ಇಂದು ತನ್ನಿಷ್ಟದಂತೆ ಮಾಡುತ್ತಾನೆ. ತನ್ನ ಎಂದಿನ ಮನೋಭಾವವನ್ನು ಬಿಟ್ಟು ಶಶಿ ಆತನನ್ನು ಹಿಂಬಾಲಿಸುತ್ತಾಳೆ. ಬಹುಶಃ ಒಂಟಿಯಾಗಿ ಮಹಿಳೆ ತನಗೆ ಬೇಕಾದಂತೆ ಬದುಕಲು ಈ ವ್ಯವಸ್ಥೆಯಲ್ಲಿ ಸಾಧ್ಯವಿಲ್ಲ ಎಂಬ ಭಾವನೆ ಶಶಿಯಲ್ಲಿ ಮೂಡುವುದೇ ಇದಕ್ಕೆ ಕಾರಣವಾಗುತ್ತದೆ. ಎಲ್ಲರಿಗಿಂತ ಭಿನ್ನವಾಗಿ ಆಲೋಚಿಸುವ ಶಶಿ ಮುಂದೆ ತಾನು ಎಲ್ಲರಂತಾಗುತ್ತಾಳೆ ಎಂಬುದನ್ನು ಕಾದಂಬರಿ ಸೂಚಿಸುತ್ತದೆ.

'ಮುಳ್ಳುಗಳು' ಕಥೆಯ ಶಾಂತಿ ಗಂಡಸರ ಲೈಂಗಿಕಾಸಕ್ತಿಯ ಬಗ್ಗೆ ತನ್ನದೇ ಆದ ಅಭಿಪ್ರಾಯ ರೂಪಿಸಿಕೊಂಡವಳಾಗಿದ್ದು ಅದನ್ನು ದೆಸಾಯಿಯಂತಹ ಪಾತ್ರದ ಮೂಲಕ ಒರೆಹಚ್ಚಿಕೊಳ್ಳುತ್ತ ತನಗೂ ಆದರ ಬಗ್ಗೆ ಆಸೆ, ಆಸಕ್ತಿ ಇದ್ದವಳಂತೆ ಕಾಣಿಸುತ್ತಾಳೆ. 'ಅತಿಥಿ' ಕಥೆಯ ಲೀಲಾವತಿ ಅವಿವಾಹಿತಳಾಗಿರುವ ನಿರ್ಧಾರ ಮಾಡಿ ಮುಂದೆ ಹತಾಶಳಾಗಿ ಹಾಸ್ಟೆಲ್ಲಿನ ಹುಡುಗಿಯರ ಮೇಲೆ ತನ್ನ ಸಿಟ್ಟಿನ ಪಯೋಗ ಮಾಡುತ್ತಾಳೆ. ಅವಿವಾಹಿತ ಸ್ತ್ರೀಗೆ ಸಮಾಜದಲ್ಲಿ ಒಳ್ಳೆಯ ಸ್ಥಾನವಿಲ್ಲ ಎಂಬ ನಿಲುವಿಗೆ ಬರುತ್ತಾಳೆ. 'ಪ್ರಶ್ನೆ' ಕಥೆಯ ನಾಯಕಿ ಶಶಿ ವಿವಾಹದ ಬಗ್ಗೆ ತನ್ನ ಒಳಗಿರುವ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಅವುಗಳನ್ನು ಪ್ರಶ್ನೆಗಳಾಗಿಯೇ ಸ್ವೀಕರಿಸಿ ಬದುಕಲು ಮುಂದಾಗುತ್ತಾಳೆ. 'ನೆನಪು ಬರಿ ನೆನಪು' ಕಥೆಯ ಪಾವನ ವಿವಾಹ ಸಂಸ್ಥೆಯನ್ನು ಪ್ರವೇಶಿಸಲು ಸಿದ್ಧಳಾಗುತ್ತಲೆ ಹೆಣ್ಣಿನ ಮನಸ್ಸಿನಲ್ಲಿರುವ ಹಳೆಯ ಗೆಳೆಯನ ನೆನಪುಗಳು ಮಧುರ ಕಾವ್ಯಗಳಂತೆ ಮನದಾಳದಲ್ಲುಳಿಯಬೇಕು ಎಂಬ ನಿರ್ಧಾರಕ್ಕೆ ಬರುತ್ತಾಳೆ. 'ಮರೀಚಿಕೆ' ಕಥೆಯ ಮಿನಿಯಂತೆಯೇ ಸಮಾಜದಲ್ಲಿ ಎಷ್ಟೋ ಸ್ತ್ರೀಯರು ಭಿನ್ನವಾದ ಒಂದು ಘಟನೆಗೆ ಕಾಯುವುದರಲ್ಲೇ, ನಿರೀಕ್ಷೆಯಲ್ಲೇ ಬದುಕು ಕಳೆದು ಹೋಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತದೆ. ವಿರೋಧ ವ್ಯಕ್ತಪಡಿಸುವ ಶಶಿಯೇ ವಿವಾಹದ ಬಂಧನದಲ್ಲಿ ಬಂಧಿಯಾಗುವುದನ್ನು ಗುರುತಿಸಬಹುದಾಗಿದೆ.

ಈ ಎಲ್ಲಾ ಕಥೆಗಳನ್ನು, ಕಾದಂಬರಿಗಳನ್ನು ಅವಲೋಕಿಸಿದಾಗ ಸ್ತ್ರೀ ಎಷ್ಟೇ ಆಧುನಿಕವಾಗಿ ಯೋಚಿಸಿದರು ಪುನಃ ಪುನಃ ಅದೇ ವ್ಯವಸ್ಥೆಗೆ ತಲೆಬಾಗುವುದನ್ನು ಕಾಣಬಹುದು. ನವ್ಯ ಲೇಖಕರ ಕೃತಿಗಳಲ್ಲಿ ಬರುವ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ನೋಡಿದಾಗ ವೀಣಾರವರು ಸೃಷ್ಟಿಸಿರುವ ಸ್ತ್ರೀ ಪಾತ್ರಗಳು ವಿಶಿಷ್ಟವಾಗಿ ಮತ್ತು ಚೈತನ್ಯ ಪೂರ್ಣವಾಗಿ ಕಾಣುತ್ತವೆ.

<u>ಕೊನೆ ಟಿಪ್ಪಣಿ.</u>

(1)ಮುಳ್ಳುಗಳು :	ನಡೆದದ್ದೇ ದಾರಿ :	ವೀಣಾಶಾಂತೇಶ್ವರ	ಪುಟ. 6.
(2) ,,	,,	,,	ಪುಟ. 9.
(3) ಪ್ರಶ್ನೆ:	,,	,,	ಪುಟ. 35.
(4) ,,	,, ,,	,,	ಪುಟ. 41.
(5) ಮರೀಚಿಕೆ:	,, ,,	,,	ಪುಟ. 249.
(6) ಶೋಷಣೆ ಬಂಡಾಯ ಇತ್ಯಾದಿ.	ನಡೆದದ್ದೇ ದಾರಿ :	ವೀಣಾಶಾಂತೇಶ್ವರ್	ಪುಟ. 371.

ಅಧ್ಯಾಯ- ೪.೪

ಹೊಸ ಸಮಾಜ ನಿರ್ಮಾಣದಲ್ಲಿ ವೀಣಾರವರ ಕಥಾ ಸಾಹಿತ್ಯ ಹಿಡಿದ ಭಿನ್ನ ಹಾದಿ

ವೀಣಾರವರ ಬಹುಪಾಲು ಕಥೆಗಳ ಕೇಂದ್ರ ವಿಷಯವಾಗಿ ಕಾಣಿಸುವುದು ಆಧುನಿಕತೆ ಮತ್ತು ವಿದ್ಯಾಭ್ಯಾಸವನ್ನು ಒಪ್ಪಿಕೊಂಡು ಅದಕ್ಕೆ ತಮ್ಮನ್ನು ಒಡ್ಡಿಕೊಂಡ ಮಹಿಳೆಯರು. ಇತರ ಲೇಖಕಿಯರಂತೆ ತಮ್ಮ ಹಿಂದಿವರ ನೆನಪು ವೀಣಾರವರ ಕಥೆಗಳಲ್ಲಿ ಸುಳಿಯುವುದು ಅಪರೂಪ. ವೀಣಾರವರು ಮುಖ್ಯವಾಗಿ ತಮ್ಮ ಕಾಲಕ್ಕಿಂತ ತರುಣ ಪೀಳಿಗೆಯ ಬಗೆಗೆ ಹೆಚ್ಚು ಕುತೂಹಲ ಹೊಂದಿರುವುದನ್ನು ಕಾಣಬಹುದು. ನವ್ಯ ಪುರುಷರು ಬರೆಯುತ್ತಿದ್ದ ಕಾಲದಲ್ಲಿ ಸಾಹಿತ್ಯ ರಚನೆಗೆ ತೊಡಗಿದ ಇವರು ಮಾಡಿದ ಸಾಧನೆಯೆಂದರೆ, ಹೆಣ್ಣನ್ನು ಗಂಡಿನ ದೃಷ್ಟಿಯಿಂದ ಚಿತ್ರಿಸದೆ ಇರುವುದಾಗಿದೆ. ಕೇವಲ ತನ್ನ ದೇಹದಿಂದ ಮಾತ್ರ ಗಂಡಸರಿಂದ ವರ್ಣನೆಗೆ ಒಳಗಾಗುತ್ತಿದ್ದ ಹೆಣ್ಣು ಇವರ ಕಥೆಗಳಲ್ಲಿ ತಾನೇ ಗಂಡನ್ನು ವರ್ಣಿಸಿ, ವಿಮರ್ಶಿಸುತ್ತಾಳೆ. ಹೆಣ್ಣನ್ನು ಅವಳು ಇರುವ ಹಾಗೆ, ಯಾರ ನಿರೀಕ್ಷೆಗಳಿಗೂ ತಲೆಬಾಗದೆ, ಯಾವ ರಿಯಾಯಿತಿಗಳನ್ನು ತೋರಿಸದೆ ಚಿತ್ರಿಸಿದ್ದು ಇವರ ಬಹು ದೊಡ್ಡ ಸಾಧನೆ.

ಆಧುನಿಕರಲ್ಲಿ ಆಧುನಿಕರೆನಿಸಿದ ನವ್ಯರು ಹೆಣ್ಣಿನ ಬಗೆಗಿನ ತಮ್ಮ ಬರವಣಿಗೆಯಲ್ಲಿ ಹಲವು ಮಿತಿಗಳನ್ನು ಗ್ರಹಿಸಿದವರು. ಬದಲಾಗಿರುವುದು ಬಲೆಯೇ ಹೊರತು ಅದರ ಉರಿಯಲ್ಲ ಎಂಬಂತೆ ವೀಣಾ ನವ್ಯ ಪುರುಷರ ಗ್ರಹಿಕೆಗಳನ್ನು ಗ್ರಹಿಸಿದವರು. ಈಗಾಗಲೇ ರೂಢಿಗರವಾಗಿರುವ ಮೌಲ್ಯಗಳಿಗೆ ತಮ್ಮ ಮಾದರಿಗಳ ಮೂಲಕ ನಿರಾಕರಣೆ ತೋರಿಸಿದವರು. ನಮಗೆ ಅಂದು ಆಕರ್ಷಕವಾಗಿ ಕಂಡ, ಕಾಮಿನಿ, ರೇವತಿ, ಗೌರಿ, ನಿರ್ಮಲಾ, ಚಂದ್ರಿ ಮುಂತಾದವರು ಕೊನೆಗೆ ಪುರುಷ ನಿರ್ಮಿತ ಮಾದರಿಗಳೇ ಎಂಬ ಸತ್ಯವನ್ನು ನಮಗೆ ತಿಳಿಸಿಕೊಟ್ಟರು. ನವ್ಯ ಲೇಖಕರು ದಾಂಪತ್ಯ ಜೀವನವನ್ನು ನಿರಾಕರಿಸಲು ಇದ್ದ ಕಾರಣಕ್ಕೂ ವೀಣಾ ಅವರು ತಮ್ಮ ಕೃತಿಗಳಲ್ಲಿ ನಡೆಸುವ ದಾಂಪತ್ಯದ ಶವ ಪರೋಕ್ಷೆಗೂ ವ್ಯತ್ಯಾಸವಿದೆ. ಇವರ ಕಥೆಗಳು, ಕಾದಂಬರಿಗಳು ದಾಂಪತ್ಯ ಮತ್ತು ಅದರಾಚೆಗಿನ ಸ್ತ್ರೀ ಪುರುಷ ಸಂಬಂಧಗಳಿಗೆ ಹಿಡಿದ ನಿಲುವುಗನ್ನಡಿಗಳಾಗಿವೆ. ವೀಣಾರವರು ತಮ್ಮ ಕಥೆ ಕಾದಂಬರಿಗಳಲ್ಲಿ ಕೇವಲ ಕೆಟ್ಟ ಪುರುಷನ ಚಿತ್ರಣವನ್ನು ಮಾತ್ರ ನೀಡುವುದಿಲ್ಲ. "ಇವರು ಕೆಟ್ಟ ಗಂಡಸರು, ಒಳ್ಳೆಯ ಗಂಡಸರು, ಕೆಟ್ಟ ಹೆಂಗಸು ಮತ್ತು ಒಳ್ಳೆಯ ಹೆಂಗಸರನ್ನು ಸೃಷ್ಟಿಸುತ್ತಾರೆ. ಈ ರೀತಿ ಇರುವುದಕ್ಕಿಂತ ಹೆಚ್ಚಾಗಿ ಒಂದೇ ವ್ಯಕ್ತಿಯಲ್ಲಿ ಈ ನಾಲ್ಕು ಸಾಧ್ಯತೆಗಳು ಇರುತ್ತವೆ ಮತ್ತು ಇರಬೇಕು ಎನ್ನುವುದು ಅವರ ತಾತ್ವಿಕತೆ" (೧)

ಗಂಡೊಬ್ಬನೆ ಕೆಟ್ಟವನಾಗಿರುವುದಿಲ್ಲ ಅಥವಾ ಎಲ್ಲಾ ಗಂಡಸರು ಒಳ್ಳೆಯವರಾಗಿರುವುದಿಲ್ಲ ಎಂಬಂತೆ ಹೆಣ್ಣಿನಲ್ಲೂ ಸಹ ಈ ರೀತಿಯ ವ್ಯಕ್ತಿತ್ವವನ್ನು ವೀಣಾರವರ ಕಥೆಗಳಲ್ಲಿ ಗುರುತಿಸಬಹುದು ಎಂಬುದು ಇದರ ಅಭಿಪ್ರಾಯವಾಗಿದೆ. ಇವರ ಕಥೆಗಳ ಮತ್ತೊಂದು ಮುಖ್ಯ ಲಕ್ಷಣವೆಂದರೆ 'ತೋರಿಕೆ' ಮತ್ತು 'ಇರುವಿಕೆ' ಗಳ ನಡುವಿನ ದ್ವಂದ್ವ. ಗಂಡಿನಲ್ಲಿ ಇದು ಸ್ವಾರ್ಥದ ಮೂಲವಾದರೆ, ಹೆಣ್ಣಿನಲ್ಲಿ ಇದು ಅನಿವಾರ್ಯ. ಭಾರತೀಯ ಸಮಾಜದ ಚೌಕಟ್ಟಿನಲ್ಲಿ ಹೆಣ್ಣಿನ ಸ್ಥಿತಿ ದಾರುಣವಾದದ್ದು. ಇಲ್ಲಿ ಹೆಣ್ಣು ಎಲ್ಲಾ ಹಂತಗಳಲ್ಲಿಯೂ ತನ್ನ ಆಯ್ಕೆಯ ಸಾಧ್ಯತೆಗಳನ್ನು ಕಳೆದುಕೊಂಡಾಗ ಹುಟ್ಟುವ ತೋರಿಕೆ ಬೇರೆ ಬಗೆಯದು.

'ಒಂದು ರವಿವಾರ' ಎನ್ನುವ ಕಥೆಯಲ್ಲಿ ಈ ರೀತಿಯ ದ್ವಂದ್ವವನ್ನು ನೇರವಾಗಿ ಗುರುತಿಸಬಹುದಾಗಿದೆ. ಕಥೆಯಲ್ಲಿ ಆ ದಿನವನ್ನು ಮುಂಜಾನೆ, ಮಧ್ಯಾಹ್ನ, ಸಂಜೆ ಎಂಬ ಮೂರು ಪಾತ್ರಗಳಿಗೆ ಹೋಲಿಸಲಾಗಿದೆ. ಬೆಳಗಾವಿಯ ಒಂದು ರಸ್ತೆಯ ತಿರುವಿನ ಕೊನೆಯಲ್ಲಿನ ಒಂದು ಮನೆಯಲ್ಲಿ ಮಾಲಕಿ ಗಿರಿಜಾ,ರೇಖಾ, ಶಾಂತ ಎಂಬ ಉಳಿದ ಇಬ್ಬರು ಹುಡುಗಿಯರ ಜೊತೆ ಬಾಡಿಗೆಗೆ ಹಂಚಿಕೊಂಡಿದ್ದಾಳೆ. ಟೈಪಿಸ್ಟ್ ಮತ್ತು ಮೆಡಿಕಲ್ ಕಾಲೇಜಿನಲ್ಲಿ ಓದುವ ಇವರಿಬ್ಬರು ಪಿ.ಎಚ್. ಡಿ ಮಾಡುತ್ತಿರವ ಮಾಲಕಿಗೆ ಜೊತೆಯಾದವರು. ಈ ಮೂರು ಜನ ಹುಡುಗಿಯರ ಒಂದು ರವಿವಾರದ ದಿನಚರಿಯನ್ನು ಕುರಿತು ಕಥೆ ಹೆಣೆಯಲ್ಪಟ್ಟಿದೆ. ಮೂರು ಜನರಿಗೂ ಬೇರೆ ಬೇರೆ ಗಂಡಸರ ಜೊತೆ ಅಂದಿನ ದಿನಚರಿ ನಿಗಧಿಯಾಗಿದೆ ಎಂದು ಒಬ್ಬರಿಗೊಬ್ಬರು ಹೇಳಿಕೊಳ್ಳುವ ಮೂಲಕ ಕಥೆ ಆರಂಭವಾಗುತ್ತದೆ.

ರೇಖಾ ಚೆಲ್ಲುಚೆಲ್ಲಾದ ಹುಡುಗಿ ತಮ್ಮ ಆಫೀಸಿನ ಸೂಪರಿಂಡೆಂಟ್ ಜಗನ್ನಾಥನ ಜೊತೆ ಅವನ ಹೊಸ ಸ್ಕೂಟರಿನಲ್ಲಿ ಔಟಿಂಗ್ ಹೊರಟಿದ್ದೇನೆ ಎಂದು ಹೇಳುವಳು. ಇವನೊಬ್ಬನೇ ಅಲ್ಲದೆ ಮತ್ತೊಬ್ಬರ ಜೊತೆಯು ಈಕೆ ಈ ದಿನ ಹೋಗುವುದಾಗಿ ಹೇಳುತ್ತಾಳೆ. ಅದಕ್ಕಾಗಿ ಒಂದು ಜೊತೆ ಬಟ್ಟೆಯನ್ನು ತನ್ನೊಡನೆ ತೆಗೆದುಕೊಂಡು ಹೋಗುತ್ತಾಳೆ. ಆದರೆ ವಾಸ್ತವದಲ್ಲಿ ರೇಖಾಳಿಗೆ ಇವತ್ತುಯಾರ ಜೊತೆಯು ಹೋಗುವ ಕೆಲಸವಿಲ್ಲ. ಊರಿನಲ್ಲಿರುವ ತನ್ನ ಸಂಸಾರದ ಹೊಣೆ ಹೊತ್ತಿರುವ ರೇಖಾ ಪ್ರತಿ ರವಿವಾರ ತನ್ನ ಮಾಂಸಿಯ ಮನೆಯ ಬಳಿ ಇರುವ ಡಾಕ್ಟರ್ ಒಬ್ಬರ ಮಕ್ಕಳಿಗೆ ಪಾಠ ಹೇಳಿ ಕೊಡುತ್ತಾಳೆ. ಕಿತ್ತು ತಿನ್ನುವ ಯೌವ್ವನದ ಆಸೆಗಳ ಜೊತೆಗೆ ಮನೆಯ ಸಮಸ್ಯೆಗಳೇ ಈಕೆಗಾಗಿ ಕಾಯುತ್ತಿರುವಂತವು.

ಶಾಂತಾ ಒಂದು ರೀತಿಯ ಗಂಭೀರ ಪ್ರವೃತ್ತಿಯವಳು. ಮದುವೆಯಾಗಿ ಯಾರೋ ಒಬ್ಬ ಗಂಡಿನ ಆಳಾಗಿ ಇರುವುದು ಇವಳಿಗೆ ಆಗದ ವಿಷಯ. ರಾಮಕೃಷ್ಣಮಿಶನ್ನಿಗೆ ಹೋಗಿ ಆಧ್ಯಾತ್ಮದ ಬಗ್ಗೆ ಮಾತನಾಡುವ ಚಿನ್ಮಯಾನಂದಜಿಯವರ ಭಾಷಣ ಕೇಳುವುದು ಈಕೆಯ ರವಿವಾರದ ದಿನಚರಿ. ಆದರೆ ಈಕೆಯೂ ಸಹ ತಾನು ಹೇಳಿದಂತೆ ನಡೆಯಲಾರದೆ ಹೋಗುವುದು ಹೋಟೆಲ್ ಗ್ರೀನ್ಸ್‌ಗೆ. ಹಿಂದಿನ ದಿನ ತನ್ನನ್ನು ಅಲ್ಲಿಗೆ ಬರುವಂತೆ ಹೇಳಿದ ಡಾ. ಪ್ರಭಾಕರನಿಗಾಗಿ ಕಾಯುತ್ತಾಳೆ. ಆತ ಬರದಿದ್ದಾಗ ಅಲ್ಲೇ ಸಿಗುವ ವರ್ಮಾನ ಜೊತೆ ಸಂಜೆ ಕಳೆಯಲು ಹೋಗುತ್ತಾಳೆ. ಚಿನ್ಮಯಾನಂದಜಿಯ ಮಾತುಗಳನ್ನು ಕೇಳಲು ಹೋಗುತ್ತೇನೆಂದು ಹೇಳಿದ ಈಕೆ ಅದೇ ಹೆಸರಿನ ವರ್ಮಾನ ಜೊತೆ ಸುತ್ತಾಟಕ್ಕೆ ಹೋಗುತ್ತಾಳೆ.

ಗಿರಿಜಾ ಮನೆಯ ಮಾಲಕಿ ತನಗೆ ವಯಸ್ಸು ನಲವತ್ತಾದರೂ ಇನ್ನೂ ಲಗ್ನ ಆಗಿಲ್ಲ ಎಂದು ಕೊರಗುವವಳು. ತನ್ನ ಮನೆಯಲ್ಲಿಯೇ ಬಾಡಿಗೆಗೆ ಇರುವ ಶಾಂತ ಮತ್ತು ರೇಖಾಳ ಬಗ್ಗೆ ಒಂದು ರೀತಿಯ ಅಸಹ್ಯ. ಅವರ ಬಳಿ ಒಬ್ಬರ ಮೇಲೆ ಒಬ್ಬರಿಗೆ ಛಾಡಿ ಹೇಳಿ ಸಂತೋಷ ಅನುಭವಿಸುವವಳು. ಈ ರವಿವಾರದ ಈಕೆಯ ಕೆಲಸ ತನ್ನ ಪ್ರೋಫೆಸರನ್ನು ಬೇಟಿ ಮಾಡುವುದು ಮತ್ತು ಲೈಬ್ರರಿಗೆ ತೆರಳುವುದು ಎಂದು ಹೇಳುತ್ತಾಳೆ. ಆದರೆ ಈಕೆಯ ನಿಜವಾದ ಕೆಲಸವೆಂದರೆ ತನಗಿರುವ ಟಿ.ಬಿ ಕಾಯಿಲೆಗೆ ಔಷಧಿ ತೆಗೆದುಕೊಳ್ಳಲು ಡಾಕ್ಟರ್ ಬಳಿಗೆ ಹೋಗುವುದು. ಕಾಯಿಲೆಯ ಮಧ್ಯೆಯು ತನೋರ್ವ ಹೆಣ್ಣೆಂಬ ಕಾರಣಕ್ಕೆ ಹತ್ತು ಸಲ ಕಂಡಿರುವ ಮದುವೆಯ ದಲ್ಲಾಳಿ ರಾಮಭಟ್ಟನನ್ನು ಕಾಣುವುದಾಗಿದೆ.

'ಒಂದು ರವಿವಾರ' ಈ ಕಥೆಯಲ್ಲಿ ತ್ರಿಮೂರ್ತಿ ಹೆಂಗಳೆಯರು ಮುಖವಾಡದ ಕೃತಕ ಬದುಕನ್ನು ಬದುಕುತ್ತ ತಮ್ಮ ಒಳ ಪ್ರಪಂಚದ ನೋವು, ನಿರೀಕ್ಷೆ, ವಿಷಾದ, ತಲ್ಲಣ ಹೀಗೆ ಎಲ್ಲವನ್ನು ಅನುಭವಿಸುತ್ತ ಮೊಗ್ಗು ಹೂವಾಗದಂಥ ಸ್ಥಿತಿಯಲ್ಲಿದ್ದಾರೆ.ಸ್ತ್ರೀ ಸಂವೇಧನೆಯ ವೈಚಾರಿಕ ಮಟ್ಟದಲ್ಲಿ ಪುರುಷ ಪ್ರಧಾನ

ವ್ಯವಸ್ಥೆಯ ಸಿಕ್ಕುಗಳಲ್ಲಿ ಸ್ವಯಂ ಸಿಕ್ಕು ನಲುಗುವಂತವರಾಗಿದ್ದಾರೆ. ವಿಭಿನ್ನ ಸ್ವಭಾವದ ಮೂರು ಹುಡುಗಿಯರು ತಮ್ಮ ಒಳ ಹತೋಟಿಯನ್ನು ಕಳೆದುಕೊಂದು, ತಾಕಲಾಟದ ನಿಸ್ಸೀಮತೆಯನ್ನು ತೋರುವಲ್ಲಿ ಕಥೆ ಯಶಸ್ವಿಯಾಗಿದೆ. 'ಕಾಯುತ್ತಲಿದ್ದ ಕರಿಯ....' ಪುರುಷನೊಬ್ಬನೂ ಸಹ ಒಬ್ಬ ಉತ್ತಮ ಮಾನವನಾಗುತ್ತಾನೆ ಎಂಬುದನ್ನು ಕಥೆಯು ತಿಳಿಸುತ್ತದೆ. ಹಲವು ವರ್ಷಗಳ ಹಿಂದೆ ತಿಮ್ಮಾಪುರಕ್ಕೆ ನಾಯಕರು ಜೀಪಿನಲ್ಲಿ ಬಂದು ಭಾಷಣ ಮಾಡಿ ಹೋದ ಕಾಲಕ್ಕೆ ಕರಿಯ ಚಿಗುರು ಮೀಸೆಯ ಹುಡುಗ, ಊರಿನ ಹಿರಿಯರು, ಸಾಹುಕಾರರೂ ಆಗಿದ್ದ ಸಂಗನಗೌಡರಲ್ಲಿ ಜೀತದಾಳಾಗಿ ದುಡುಯುತ್ತಿದ್ದವನು, ತಂದೆ ತಾಯಿಯಿಲ್ಲದೆ ಗೌಡರ ಮನೆಯಲ್ಲೇ ಆಳಾಗಿದ್ದರೂ ಕಟ್ಟುಮಸ್ತಾಗಿ ಎಲ್ಲರ ಕಣ್ಣುಕುಕ್ಕುವಂತಿದ್ದ ಕರಿಯನಿಗೆ ಹೆಣ್ಣು ಕೊಡಲು ಹಲವಾರು ಜನ ಮುಂದೆ ಬರುತ್ತಾರೆ. ಆದರೆ ಕರಿಯ ಮದುವೆಯ ಬಗ್ಗೆ ಆಸಕ್ತಿ ತೋರದೆ ಶ್ಯೂನ್ಯ ಮನಸ್ಕನಾಗಿರುತ್ತಾನೆ. ಈ ರೀತಿ ಇದಂತಹ ಕರಿಯನ ಜೀವನದಲ್ಲಿ ಮಹತ್ತರವಾದ ಒಂದು ಘಟನೆ ಸಂಭವಿಸುತ್ತದೆ. ಕೆಲವು ದಿನಗಳ ಮಟ್ಟಿಗೆ ಹಳ್ಳಿಯಲ್ಲಿರಲಿ ಬಂದಿದ್ದ ಗೌಡರ ಅಣ್ಣನ ಮಗಳು ಇವನೊಂದಿಗೆ ಸಂಬಂಧ ಬೆಳೆಸುತ್ತಾಳೆ. ಮುಂದೆ ಆಕೆ ಊರಿಗೆ ಹೊರಟು ಹೋದಾಗ ಕರಿಯ ಆ ದಿನದ ನೆನಪಿನಲ್ಲೇ ದಿನ ಕಳೆಯುತ್ತಾನೆ. ಅದೇ ಹುಡುಗಿ ಮುಂದೆ ತಾಯಿಯಾಗುವ ಸ್ಥಿತಿಯಲ್ಲಿ ಊರಿಗೆ ಬಂದು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಅನಾಥಾಶ್ರಮಕ್ಕೆ ನೀಡಬೇಕಾಗಿದ್ದ ಮಗುವನ್ನು ಗೌಡರಿಂದ ಕೇಳಿ ಪಡೆದು ತಾನೇ ಸಾಕುತ್ತಾನೆ. ಲಕ್ಷ್ಮೀ ಎಂದು ಹೆಸರಿಟ್ಟು ಮಗುವಿಗಾಗಿ ತನ್ನ ಜೀವನವನ್ನು ಮುಡುಪಾಗಿಡುತ್ತಾನೆ.

ಕರಿಯನ ಮಗಳು ನೋಡಲು ಮುದ್ದಾಗಿದ್ದವಳು ಮುಂದೆ ಬೆಳೆಯುತ್ತಾ, ಬೆಳೆಯುತ್ತಾ ತಂದೆಯಿಂದ ದೂರವಾಗುತ್ತಾಳೆ. ಶಾಲೆಗೆ ಸೇರಿ ವಿದ್ಯೆ ಕಲಿತ ಆಕೆಗೆ ಕೊಳಕು ಬಟ್ಟೆ ಉಟ್ಟಿರುವ ತಂದೆಯನ್ನು ಕಂಡರೆ ಅಸಹ್ಯಪಡುತ್ತಾಳೆ. ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮುಂಬೈಗೆ ತೆರೆಳುವ ಆಕೆ ತಂದೆಯೊಂದಿಗಿನ ವಾತ್ಸಲ್ಯಮಯ ಸಂಬಂಧವನ್ನು ಸಂಪೂರ್ಣವಾಗಿ ಕಡೆದುಕೊಳ್ಳುತ್ತಾಳೆ. ಆದರೆ ತನ್ನ ಭಾಗ್ಯದ ಸರ್ವಸ್ವ ಎಂದುಕೊಂಡಿದ್ದ ಈಕೆಯನ್ನು ನೆನೆಯುತ್ತಲೆ ಇವಳಿಗಾಗಿ ಕಾಯುತ್ತಲೇ ಕರಿಯ ಮುದುಕನಾಗುತ್ತಾನೆ. ಊರಿಗೆ ಬರುವ ವಾಹನಗಳಲ್ಲೆಲ್ಲ ಮಗಳು ಲಕ್ಷ್ಮಿಯನ್ನು ಹುಡುಕುತ್ತಾನೆ.

ಕಥೆಯಲ್ಲಿ ಪುರುಷ ಪಾತ್ರವಾದ ಕರಿಯನಲ್ಲಿ ವಾತ್ಸಲ್ಯಮಯದ ಕರುಣೆಯ ಚಿತ್ರವಿದೆ. ಸ್ವಂತ ಮಗಳಾಗಿದ್ದರು ಬೇರೆಯವರೆ ಕಣ್ಣಿನಲ್ಲಿ ಕರಿಯನ ಸಾಕು ಮಗಳಾಗಿರುವ ಲಕ್ಷ್ಮಿಯ ಮೈಯಲ್ಲಿ ಗೊತ್ತಿರುವ ಶ್ರೀಮಂತರ ರಕ್ತ ಹರಿಯುತ್ತಿರುತ್ತದೆ. ಆದ್ದರಿಂದಲೇ ಆವಳ ಪಾಲಿಗೆ ಕಕ್ಕುಲಾತಿಯ ಕರಿಯನ ಪ್ರೀತಿ, ಪ್ರೇಮ, ಆದರ್ಶಗಳು ಯಾವ ಲೆಕ್ಕಕ್ಕು ಇಲ್ಲದಂತಾಗುತ್ತದೆ. ಸಂಗನಗೌಡರ ಶ್ರೀಮಂತ ಮೊಮ್ಮಗಳಾದ ಈಕೆ ಆಡಂಬರದ ಬದುಕನ್ನೆ ಆಯ್ಕೆ ಮಾಡುತ್ತಾಳೆ. ಬಡತನಕ್ಕೆ ಬರಸಿಡಿಲೇ ಗತಿ ಎಂಬಂತೆ ಕರಿಯನು ಇಲ್ಲಿ ಎಲ್ಲರ ಕರುಣೆಗೂ ಪಾತ್ರವಾಗುತ್ತಾನೆ.

'ಮರ್ಯಾದೆ' ಕಥೆಯ ಕೇಂದ್ರ ಪಾತ್ರ ಕಮಲಾ ಒಂದು ದೊಡ್ಡ ಕುಟುಂಬದ ಹಿರಿಯ ಮಗಳು, ಶ್ರೀಮಂತನೋರ್ವನ ಪತ್ನಿ. ಮದುವೆಯಾಗಿ ಗಂಡನ ಮನೆಯಲ್ಲಿ ಸುಖದಿಂದ ಇರುವ ಈಕೆ ಯಾವುದೋ ಕಾರಣಕ್ಕಾಗಿ ತವರು ಮನೆಯ ಆಮಂತ್ರಣದಿಂದ ತವರು ಮನೆಗೆ ಬರುತ್ತಾಳೆ. ಈಕೆ ಬಂದಾಗ ಸಿಗುವ ಸ್ವಾಗತ ಹೋಗುವಾಗ ಸಿಗುವುದಿಲ್ಲ. ಕಮಲಾಳ ತಂದೆ ದೊಡ್ಡ ಉದ್ಯಮಿ. ಹಲವಾರು ಕಾರಣಗಳಿಂದ ಆತ ತಮ್ಮ ಮನೆಕೆಲಸದಾಕೆ ಸರಸವ್ವನನ್ನು ಮದುವೆಯಾಗಲು ನಿರ್ಧರಿಸುತ್ತಾನೆ. ಇದು ಉಳಿದ ಮಕ್ಕಳಿಗೆ ಇಷ್ಟವಾಗುವುದಿಲ್ಲ. ತಂದೆಗೆ ನೇತವಾಗಿ ಇದನ್ನು ತಿಳಿಸಲಾಗದೆ ತಂದೆ ಹೆಚ್ಚು ಬೆಲೆ ಕೊಡುವ ಕಮಲಾಳನ್ನು ಕರೆಸುತ್ತಾರೆ ಮತ್ತು ಸ್ವಾಗತಿಸುತ್ತಾರೆ.

ತವರು ಮನೆಯ ಪರಿಸ್ಥಿತಿಯನ್ನು ನೋಡಿದ ಕಮಲಾಳಿಗೆ ತಂದೆಯ ಸ್ಥಿತಿ ಅರಿವಾಗುತ್ತದೆ. ಮಕ್ಕಳು, ಸೊಸೆಯಂದಿರಿದ್ದರೂ ತಂದೆ ಇಲ್ಲಿ ಅನಾಥರಾಗಿದ್ದಾರೆ. ಎಂಬುದು ಈಕೆಗೆ ತಿಳಿಯುತ್ತದೆ. ಅಪ್ಪನಿಗಿಂತ ಆತನ ಆಸ್ತಿಯ ಮೇಲೆ ಕಣ್ಣಿಟ್ಟಿರುವ ಇತರರ ಬಗ್ಗೆ ತಿಳಿಯುತ್ತದೆ. ಅಪ್ಪನಿಗಿಂತ ಆಸ್ತಿಗೆ ಹೆಚ್ಚು ಗಮನ ನೀಡುವ ಮಕ್ಕಳಿಗಿಂತ ಈ ಇಳಿವಯಸ್ಸಿನಲ್ಲಿ ತಂದೆಗೆ ಮಾನಸಿಕ ಧೈರ್ಯ ನೀಡುತ್ತ ಅವರ ಆರೈಕೆಯಲ್ಲಿ ತೊಡಗಿರುವ ಸರಸವ್ವನನ್ನು ತಂದೆ ಮದುವೆಯಾಗುವುದೇ ಸರಿ ಎಂದು ನಿರ್ಧರಿಸಿ ತನ್ನ ನಿರ್ಧಾರವನ್ನು ತಂದೆ ಮತ್ತು ಇತರರಿಗೆ ತಿಳಿಸಿ ಹೊರಡುತ್ತಾಳೆ. ತಮ್ಮ ಪರವಾಗಿ ಮಾತನಾಡುವುದನ್ನು ಅಪೇಕ್ಷಿಸಿದ್ದ ಉಳಿದ ಮಕ್ಕಳಿಗೆ ಇದರಿಂದ ಬೇಸರವಾಗುತ್ತದೆ. ಆಕೆ ಊರಿಗೆ ಹೊರಡುವಾಗ ಆಕೆಗೆ ಬಂದಾಗ ಸಿಗುವ ಮರ್ಯಾದೆ ಇಲ್ಲದೆ ಹೊರಡುತ್ತಾಳೆ. ಅದನ್ನು ತಾನು ನಿರೀಕ್ಷಿಸಿಯೂ ಇರಲಿಲ್ಲ ಎಂಬಂತೆ ಕಮಲ ಊರಿಗೆ ಹೋರಡುವುದರೊಂದಿಗೆ ಕಥೆ ಮುಗಿಯುತ್ತದೆ.

'ತಾರ ಮೇಡಮ್ ಮತ್ತು ತತ್ವಗಳು' ತಾರಾ ಕಥೆಯ ಕೇಂದ್ರ ಪಾತ್ರ. ಒಳ್ಳೆಯ ಹೆಂಗಸಿನಂತೆ ಕೆಟ್ಟ ಹೆಂಗಸರು ಇರುತ್ತಾರೆ ಎಂಬುವಂತೆ ಇರುವವಳು. ಹೆಣ್ಣು ತನ್ನ ವಯ್ಯಾರದಿಂದ ಕಛೇರಿಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಹೇಗೆ ವರ್ತಿಸುತ್ತಾಳೆ ಎಂಬುದು ಕಥೆಯ ಸಾರಾಂಶ. ಕಛೇರಿಗೆ ಹೊಸದಾಗಿ ಬಂದ ಪುರುಷ ಅಧಿಕಾರಿಗಳನ್ನು ತನ್ನ ಹೊಗಳಿಕೆಯ ಮಾತುಗಳಿಂದ ಮರುಳು ಮಾಡುವ ತಾರಾ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರಳಾಗುತ್ತಾಳೆ. ಈ ರೀತಿ ಅವರ ಮೆಚ್ಚುಗೆ ಪಡೆದ ಈಕೆ ನಂತರ ಕೈ ಕೆಳಗಿನವರ ಮೇಲೆ ಅಧಿಕಾರ ಚಲಾಯಿಸುತ್ತಾಳೆ. ತನ್ನ ದುರ್ವತನೆಯಿಂದ ಪ್ರತಿ ದಿನ ಕಛೇರಿಯ ಇತರ ಸಿಬ್ಬಂದಿಗಳಿಗೆ ಒಂದಲ್ಲ ಒಂದು ರೀತಿಯ ಕಾಟ ಕೊಡುತ್ತಾಳೆ, ಹೆಚ್ಚಾಗಿ ಮಹಿಳಾ ಸಿಬ್ಬಂದಿಯ ಮೇಲೆ ಅಧಿಕಾರಿಗಳಿಗೆ ದೂರು ನೀಡಿ ಅವರನ್ನು ಬೈಯಿಸಿ ಅವರು ದುಃಖ ಪಡುವುದನ್ನು ಕಂಡು ತಾನು ವಿಚಿತ್ರ ಸುಖ ಅನುಭವಿಸುತ್ತಾಳೆ. ಸಭೆಗಳಲ್ಲಿ ಹೆಣ್ಣಿನ ದೌರ್ಜನ್ಯಗಳ ಬಗ್ಗೆ ಮಾತನಾಡುವ ಈಕೆ ಇದಕ್ಕೆ ವಿರುದ್ಧವಾಗಿ ವರ್ತಿಸುತ್ತಾಳೆ. ಆದರೆ ಕೊನೆಯಲ್ಲಿ ತಾನು ಸಿಕ್ಕಿ ಒದ್ದಾಡುವುದರೊಂದಿಗೆ ಕಥೆ ಮುಕ್ತಾಯವಾಗುತ್ತದೆ.

'ಒಲವೆ ಜೀವನ' ಸತೀಶ ಕುಲಕರ್ಣಿ ಕಥೆಯ ನಾಯಕ. ಒಂದು ಸುಂದರ ಹುಡುಗಿಯನ್ನು ಮದುವೆಯಾಗಿ ಸುಖ ಜೀವನವನ್ನು ನಡೆಸಬೇಕು ಎಂದು ಕನಸು ಕಂಡವನು. ಬ್ಯಾಂಕೊಂದರಲ್ಲಿ ಕೆಲಸ ಮಾಡುವ ಈತ ತನ್ನ ಸಹದ್ಯೋಗಿಯೊಬ್ಬಳು ತನ್ನನ್ನು ಪ್ರೀತಿಸುತ್ತಿರುವುದಾಗಿ ತಿಳಿಸಿದಾಗ ಆಕೆ ತಾನು ಕನಸು ಕಂಡವಳಂತೆ ಇಲ್ಲದೆ ಬಹಳ ತೆಳ್ಳಗಿದ್ದಾಳೆ ಎನ್ನುವ ಕಾರಣ ನೀಡಿ ಆಕೆಯನ್ನು ತಿರಸ್ಕರಿಸುತ್ತಾನೆ. ಇದೇ ಸತೀಶ ಮುಂದೆ ತಮ್ಮ ಬ್ಯಾಂಕಿಗೆ ಬರುವ ಬೇರೆ ಬ್ಯಾಂಕಿನ ಅಧಿಕಾರಿಯಾಗಿರುವವಳನ್ನು ಪ್ರೀತಿಸುತ್ತಾನೆ. ಆಕೆಯ ಮನೆಗೆ ತೆರಳಿ ಆಕೆಗೂ, ಆಕೆಯ ತಂದೆಗೂ ಅವರ ಕಾರ್ಯಗಳಲ್ಲಿ ನೆರವಾಗುತ್ತಾನೆ. ಆಕೆಗೆ ಕೈ ಇಲ್ಲದಿರುವುದನ್ನು ಕಂಡು ಬೇಸರಗೊಂಡರು ಆಕೆಯ ಒಳ್ಳೆಯ ವ್ಯಕ್ತಿತ್ವಕ್ಕೆ ಬೆಲೆ ನೀಡಿ ಆಕೆಯನ್ನು ಮದುವೆಯಾಗಲು ನಿರ್ಧರಿಸುತ್ತಾನೆ.

ಈ ಹಿಂದೆ ತಾನೆ ಹೇಳಿದಂತೆ ಹೆಣ್ಣಿಗೆ ಸೌಂದರ್ಯ ಮುಖ್ಯ ಎಂಬ ಮಾತನ್ನು ಮರೆತು ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯಕ್ಕೆ ಬೆಲೆ ನೀಡುತ್ತಾನೆ. ಮದುವೆಯಿಂದ ಅದರ ಕನಸಿನಿಂದ ದೂರವಾಗಿದ್ದ ಹುಡುಗಿಗೆ ಆಸರೆಯಾಗುತ್ತಾನೆ. ಹೆಣ್ಣನ್ನು ಕೇವಲ ದೇಹದಿಂದ ನೋಡುವ ಅನ್ಯ ಪುರುಷರಿಗಿಂತ ಭಿನ್ನವಾಗಿ ನಿಲ್ಲುತ್ತಾನೆ.

ಈ ಎಲ್ಲಾ ಕಥೆಗಳಲ್ಲೂ ಮುಖ್ಯವಾಗಿ ಹೆಣ್ಣೊಬ್ಬಳು ಸಮಾಜಕ್ಕೆ ಪುರುಷನಷ್ಟೇ ಆತಂಕಕಾರಿಯಾಗಬಲ್ಲಳು ಎಂಬುದನ್ನು ಮತ್ತು ತನ್ನ ಪುರುಷಾಧಿಕಾರದ ಅಹಂಕಾರವನ್ನು ಬಿಟ್ಟು ಕೆಳಗಿಳಿಯುವ ಪುರುಷನನ್ನು ಕಾಣುತ್ತೇವೆ. ಸ್ತ್ರೀ ಮತ್ತು ಪುರುಷ ಇಬ್ಬರೂ ಸಮಾಜಕ್ಕೆ ಮುಖ್ಯ ಎಂಬುದನ್ನು ಕಾಣಬಹುದು. ವೀಣಾರವರ ಉಳಿದ ಕಥೆಗಳಿಗಿಂತ ಭಿನ್ನವಾಗಿ ಇಲ್ಲಿನ ಪುರುಷರು ಸಮಾನತೆಯ ಒಂದು ನವ ಸಮಾಜದ ನಿರ್ಮಾಣಕ್ಕೆ ಮುಂದಾಗುವುದನ್ನು ಗುರುತಿಸಬಹುದು.

ಕೊನೆ ಟಿಪ್ಪಣಿ.

(1) ನಿರ್ದಿಂಗತ ಸಂಪುಟ: –೧ ಪುಟ. 148

ಅಧ್ಯಾಯ- ೪.೫

ವೀಣಾರವರ ಕಥಾ ಸಾಹಿತ್ಯ ಹಾಗೂ ಸಮಕಾಲೀನ ಲೇಖಕಿಯರ ಕಥೆಗಳಿಗೂ ಇರುವ ಹೋಲಿಕೆ

ಬದುಕು ಒಂದು ಕಥೆ .ಅದರಲ್ಲೂಹೆಣ್ಣೊಬ್ಬಳು ತನ್ನಜೀವನದಲ್ಲಿ ಮಗಳಾಗಿ, ಗೆಳತಿಯಗಿ, ಹೆಂಡತಿಯಾಗಿ, ತಾಯಿಯಾಗಿ, ಸೊಸೆಯಾಗಿ ಕಂಡು ಬರುತ್ತಾಳೆ. ಈ ರೀತಿಯ ಬೇರೆ ಬೇರೆ ಘಟ್ಟಗಳಲ್ಲಿ ತನ್ನನ್ನು ಪ್ರತಿನಿಧಿಸಿಕೊಳ್ಳುವ ಪ್ರತಿಯೊಂದು ಹೆಣ್ಣಿನ ಬದುಕು ಒಂದು ಬರೆದಿಡದ ಕಥೆಯಾಗಿರುತ್ತದೆ. ಪ್ರತಿಯೊಂದು ಹೆಣ್ಣು ತನ್ನ ಕಥೆಗಳನ್ನು ಮಾತ್ರವಲ್ಲದೆ ಅನೇಕರ ಕಥೆಗಳನ್ನು ತನ್ನಲ್ಲಿ ಹುದುಗಿಸಿಕೊಂಡಿರುತ್ತಾಳೆ. ದಾರಿಕಾಣಲಾಗದೆ ಹೋದ ಇಂಥ ನೂರರು ಕಥೆಗಳಿಗೆ ನಮ್ಮ ಲೇಖಕಿಯರು ಈ ಅಂತರಂಗದ ಕಥೆಗಳಿಗೆ ದನಿಕೊಡುವ ಪ್ರಯತ್ನ ಮಾಡುವುದೇ ಆಧುನಿಕ ಮಹಿಳಾ ಸಾಹಿತ್ಯ ಎಂದು ಗುರುತಿಸಿಕೊಂಡಿದೆ. ಬದುಕೇ ಒಂದು ಕಥೆಯಾಗುವುದೆಂದರೆ ಹೆಣ್ಣಿನ ಜೀವನದಲ್ಲಿ ಅನಿರೀಕ್ಷಿತ ತಿರುವುಗಳು ಬಂದಾಗ. ಹೆಣ್ಣಿನ ಬದುಕಿನ ಪ್ರತಿಯೊಂದು ಹಂತವು ಇಂತಹ ತಿರುವುಗಳನ್ನು ಪಡೆಯುತ್ತಲೇ ಇರುತ್ತವೆ. ಹೆಣ್ಣು ಯಾವ್ವನಕ್ಕೆ ಕಾಲಿರಿಸುವುದರೊಂದಿಗೆ ಇದು ಮುಖ್ಯವಾಗಿ ಅರಂಭವಾಗುತ್ತದೆ. ಹೆಣ್ಣು ತನ್ನ ಯಾವ್ವನದ ಆಸೆ. ಆಕಾಂಕ್ಷೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗದಿದ್ದಾಗ, ನಂತರ ಮದುವೆಯಾಗಿ ಗಂಡನೆಂಬ ಪ್ರರಕೀಯ ವ್ಯಕ್ತಿಯ ಮನೆ ಮನಸ್ಸುಗಳ ಪ್ರವೇಶದೊಂದಿಗೆ, ಒಬ್ಬ ಹೊಸ ವ್ಯಕ್ತಿಯೊಂದಿಗೆ ಬದುಕುವ ಮೂಲಕ ಗಂಡ ಇವಳಿಗೆ ನಿಷ್ಠನಾಗಿದ್ದರೆ ಒಂದು ರೀತಿ ಬೇರೆ ಹೆಣ್ಣಿಗೆ ಮರುಳಾಗಿದ್ದರೆ ಮತ್ತೊಂದು ರೀತಿ. ಅನಿರೀಕ್ಷಿತವಾಗಿ ಮೃತನಾದರೆ ಅವಳ ಬದುಕು ಬೇರೆ ರೀತಿ ಈ ಬಗೆಯಲ್ಲಿ ಹೆಣ್ಣಿನ ಜೀವನದ ಹಲವು ತಿರುವುಗಳು ಅವಳ ಜೀವನ ಬದಲಾಯಿಸುತ್ತವೆ. ಹೆಣ್ಣಿಗಿರುವಂತೆ ಹಲವು ಬಗೆಯ ಜೀವನದ ತಿರುವುಗಳು ಗಂಡಿಗೂ ಇರುತ್ತವೆ. ಆದರೆ ಹೆಣ್ಣಿನ ಜೀವನ ಬದಲಾದಂತೆ ಗಂಡಿನ ಜೀವನ ಬದಲಾಗುವುದಿಲ್ಲ. ಆದರೆ ಹೆಣ್ಣು ಮಾತ್ರ ತನಗೆ ಬೇಡದಿರಲಿ ಬೇಕಿರಲಿ ಜೀವನದಲ್ಲಿ ವಿವಿಧ ಪಾತ್ರಗಳನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಇದರಿಂದ ಪ್ರತಿಯೊಂದು ಹೆಣ್ಣು ತನ್ನ ಜಿವನವನ್ನೇ ಕಥೆಯಾಗಿಸುತ್ತಾಳೆ.

ಹೆಣ್ಣು ಲೇಖಕಿಯಾದರೂ ಪಿತೃ ಪ್ರಧಾನ ಸಮಾಜ ಅವಳನ್ನು ಹೆಣ್ಣಾಗಿಯೇ ಕಾಣುವುದರಿಂದ ಆಕೆಯ ಅನುಭವಗಳು ಕೌಟುಂಬಿಕ ವಲಯದೊಳಗೇ ಇರುತ್ತದೆ. ಮೇಲು ನೋಟಕ್ಕೆ ವೀಣಾರವರ ಕಥಾ ಸಾಹಿತ್ಯ ಹಿಡಿದಿರುವ ದಾರಿಗೂ ಅವರ ಹಿಂದೆ ಬರೆಯುತ್ತಿದ್ದ ಲೇಖಕಿಯರಿಗೂ ಅಷ್ಟೇನೂ ವ್ಯತ್ಯಾಸಗಳು ಕಾಣುವುದಿಲ್ಲ . ಆದರೆ ಆಳವಾಗಿ ಅಭ್ಯಾಸಿಸಿದಾಗ ಪ್ರತಿಭಟನೆಯ ಸ್ವರೂಪ ಹಾಗೂ ಕಾರಣಗಳು ಕಾಲದಿಂದ ಕಾಲಕ್ಕೆ ಭಿನ್ನವಾಗಿ ಬದಲಾಗುವುದನ್ನು ಗಮನಿಸಬಹುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಕಂಡು ಬರುವ ಹಲವು ಘಟ್ಟಗಳಾದ ನವೋದಯ , ನವ್ಯ , ಪ್ರಗತಿಶೀಲ, ದಲಿತ, ಬಂಡಾಯಗಳಲ್ಲಿ ಹಲವು ಲೇಖಕಿಯರೂ ಆಯಾಯ ಕಾಲದ ಸಂದರ್ಭಕ್ಕೆ ತಕ್ಕಂತೆ ತಮ್ಮ ಕಥೆಗಳನ್ನು ಬರೆದಿರುವುದನ್ನು ಗಮನಿಸಬಹುದು.

ನವೋದಯದ ಆರಂಭ ಕಾಲದಲ್ಲಿ ಬರೆದಂತಹ ಲೇಖಕಿಯರ ಉದ್ದೇಶ ಒಳ್ಳೆಯದಿದ್ದರೂ ಸ್ಪಷ್ಟ ತಿಳಿವಳಿಕೆ ಇಲ್ಲದ ಕಾರಣ ಅವರು ಮುಖ್ಯವಾಗಿ ಯಾವುದನ್ನು ವಿರೋಧಿಸಬೇಕು ಎಂದಿದ್ದರೋ ಅದನ್ನೇ ಪುರಸ್ಕರಿಸುವಂತೆ ಅವರ ಕಥಾ ಸಾಹಿತ್ಯ ರಚಿತವಾಗಿವೆ. ಯಾವುದೋ ಕಾರಣದಿಂದ ವೇಶ್ಯೆಯಾದ ಅಥವಾ ಮಕ್ಕಳಿಲ್ಲದ ಹೆಣ್ಣಿನ ಚಿತ್ರವನ್ನು ಅವಳ ಸಂಕಟವನ್ನು ಅನುಕಂಪದಿಂದ ಬರೆಯುವ ಲೇಖಕಿಯರು ಪಿತೃ ಪ್ರಧಾನ ಸಮಾಜ ರೂಪಿಸಿರುವ ಪಾತಿವ್ರತ್ಯ, ತಾಯ್ತನದಂತಹ ಮೌಲ್ಯಗಳಿಗೆ ಒತ್ತು ಕೊಡುತ್ತಾರೆ.

ಪಿತೃಪ್ರಧಾನ ವ್ಯವಸ್ಥೆಯನ್ನು ಖಂಡಿಸುವ ಮತ್ತು ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಗಳ ಅರಿವು ಮೂಡಿಸುವುದು ಉದ್ಧೇಶವಾಗಿದ್ದರೂ ಪರಿಣಾಮ ವ್ಯತಿರಿಕ್ತವಾಗಿರುತ್ತಿತ್ತು.

ಕನ್ನಡದ ಆಧುನಿಕ ಕಾಲದ ಆರಂಭದ ಲೇಖಕಿಯಾದ 'ತಿರುಮಲಾಂಬ' ಅವರು ಆಗಿನ ಕಾಲಕ್ಕೆ ಅಸಮ ದಾಂಪತ್ಯದ ಬಗ್ಗೆ, ಹೆಣ್ಣೊಬ್ಬಳು ವಿದ್ಯಾವಂತೆಯಾದರೆ ಆಕೆ ಅವುಭವಿಸಬೇಕಾದ ಕಷ್ಟಗಳನ್ನು ಕುರಿತು ಚರ್ಚಿಸುತ್ತಾರೆ. ವಿಧವೆಯರ ದುಃಸ್ಥಿತಿಯ ಬಗ್ಗೆ ಮುಖ್ಯವಾಗಿ ಚರ್ಚಿಸುವ ಇವರು ವಿಧವಾವಿವಾಹದ ಬಗ್ಗೆ ಚರ್ಚಿಸುವುದಿಲ್ಲ. ಸ್ವತಹ ಆಧುನಿಕ ಮನೋಭಾವ ಹೊಂದಿದ್ದರೂ ಆ ಕಾಲ ಸಂದರ್ಭದ ಮಿತಿಗಳಿಗೆ ಒಳಪಡುತ್ತಾರೆ. ಸ್ತ್ರೀಗೆ ಶಿಕ್ಷಣದ ಅಗತ್ಯವಿದೆ ಎಂದು ಪ್ರತಿಪಾದಿಸುವ ಇವರು ಪುರುಷರಿಗೆ ನೀಡುವ ಶಿಕ್ಷಣವನ್ನೇ ಸ್ತ್ರೀಯರಿಗೆ ನೀಡಬೇಕು ಎನ್ನದೆ ಜೈವಿಕವಾಗಿ ಬೇರೆಯಾಗಿಯೇ ರೂಪುಗೊಂಡಿರುವ ಸ್ತ್ರೀಯ ದೇಹ ರಚನೆಗೆ ಅನುಗುಣವಾಗಿ ಶಿಕ್ಷಣ ನೀಡಬೇಕು ಎಂದು ಪ್ರತಿಪಾದಿಸುತ್ತಾರೆ. ಈ ಮೂಲಕ ಗಂಡು ಹೆಣ್ಣಿನ ನಡುವೆ ದೈಹಿಕವಾಗಿ ವ್ಯತ್ಯಾಸವಿದೆ ಎಂದು ಹೇಳುವ ಮೂಲಕ ಮಹಿಳೆಯ ಸ್ಥಾನವನ್ನು ಕುಂಠಿತಗೊಳಿಸುತ್ತಾರೆ. ವೈಧವ್ಯ ಎನ್ನುವುದು ಹಿಂದಿನ ಜನ್ಮದ ಫಲ ಎಂದು ಚಿಂತಿಸುವುದನ್ನು ಇವರ 'ಸುಶೀಲೆ' ಕಾದಂಬರಿಯು ಸೂಚಿಸುತ್ತದೆ. ಕೆಲವೊಂದು ಕಡೆ ಸ್ತ್ರೀ ವಿಮೋಚನೆಯ ಬಗ್ಗೆ ಚಿಂತಿಸುವ ಇವರು ಮತ್ತೊಂದು ಕಡೆ ಅದೇ ಸ್ತ್ರೀಯನ್ನು ಗೃಹಿಣಿತ್ವದ ಚೌಕಟ್ಟಿಗೆ ಒಳಪಡಿಸುತ್ತಾರೆ.

ಸ್ತ್ರೀ ಶಿಕ್ಷಣ ಮತ್ತು ಮಹಿಳೆಯರ ವ್ಯಕ್ತಿತ್ವ ವಿಕಸನದ ಬಗ್ಗೆ ಧನಾತ್ಮಕವದ ನಿಲುವು ಹೊಂದಿದ್ದ ಕಲ್ಯಾಣಮ್ಮನವರು ಅವರ ಬಗ್ಗೆ ಲೇಖನಗಳನ್ನು, ಕೃತಿಗಳನ್ನು ಬರೆದಿದ್ದಾರೆ. ೧೯೨೯ ರಲ್ಲಿ ಬಂದ ಶಾರದಾ ಬಿಲ್ಲು ಕಾಯಿದೆ ಅಂಗೀಕೃತವಾದಾಗ ಅದನ್ನು ವಿರೋಧಿಸಿದವರ ವಿರುದ್ಧ ಇವರು ಖಂಡಿಸುತ್ತಾರೆ. ಸ್ತ್ರೀ ಸಂಬಂಧಿತ ವೈಚಾರಿಕ ಲೇಖನಗಳಲ್ಲಿ ಸ್ತ್ರೀಯರು ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕಾದ ಅಗತ್ಯವನ್ನು ತಿಳಿಸುತ್ತಾರೆ. ಸ್ತ್ರೀಯರಿಗೆ ಶಿಕ್ಷಣ ನೀಡದೆ ಹೋದಲ್ಲಿ ಸಮಾಜ ಹೇಗೆ ದುಷ್ಪರಿಣಾಮಗಳನ್ನು ಎದುರಿಸುತ್ತದೆ ಎಂಬುದನ್ನು ತಿಳಿಸುತ್ತಾರೆ.

ಕಲ್ಯಾಣಮ್ಮನವರು ತಮ್ಮ ' ಇಂದಿರೆ' ಕಾದಂಬರಿಯಲ್ಲಿ ವಿದ್ಯಾವಂತಳಾದ ಇಂದಿರೆ ತನ್ನ ಆಯ್ಕೆಯಂತೆ ಪ್ರೀತಿಸಿದವನನ್ನು ವಿವಾಹವಾಗುವುದಿಲ್ಲ. ವಿದ್ಯಾವಂತ ಸ್ತ್ರೀಗೂ ಆಯ್ಕೆ ಸ್ವಾತಂತ್ರವಿಲ್ಲ ಎಂದು ಸೂಚಿಸುತ್ತಾರೆ. ಆದರೆ ಮುಂದೆ ಇದೆ ಇಂದಿರೆ ವಿಧವಾ ವಿವಾಹವಾಗುವ ಮೂಲಕ್ ಕ್ರಾಂತಿಯನ್ನು ಮಾದುತ್ತಾಳೆ ಎಂದು ಸೂಚಿಸುತ್ತ ಸ್ತ್ರೀ ವಿಮೋಚನೆಯನ್ನು ಮಾಡುವ ಮೂಲಕ ಕಥೆಯನ್ನು ಮುಗಿಸುತ್ತಾರೆ.

'ಕೊಡಗಿನ ಗೌರಮ್ಮ' ಇವರು ಪ್ರಬುದ್ಧ ಕತೆಗಾರ್ತಿ. ಇವರ ಕಥೆಗಳ ಬಹುಪಾಲು ಮುಖ್ಯ ವಸ್ತುಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸುದ್ದಿಗಳು. ಹೆಣ್ಣನ್ನು ನಂಬಿಸಿ ಮೋಸ ಮಾಡುವ ಗಂಡುಗಳ ಚಿತ್ರಣ ಮತ್ತು ಅದರಿಂದ ಮನನೊಂದು ಬೇಸರದಿಂದ ಆತ್ಮಹತ್ಯೆ ಮಾಡಿಕೊಂಡರೆಂಬ ಪತ್ರಿಕೆಯ ನಿಜ ಜೀವನದ ವಿಷಯಗಳು ಇವರ ಕಥೆಗಳ ಮೂಲ ನೆಲೆಗಳು. ಲಿಂಗ ಅಸಮಾನತೆಯನ್ನು ಹೆಚ್ಚು ನಿಖರವಾಗಿ ಮತ್ತು ಕಲಾತ್ಮಕವಾಗಿ ಅಭಿವ್ಯಕ್ತಿಸುತ್ತಾರೆ. ಇವರ ಸೌಂದರ್ಯದ ಪರಿಕಲ್ಪನೆ ಕುತೂಹಲಕಾರಿಯಾದುದು. ಇವರ ಕಥೆಗಳಲ್ಲಿ ಬರುವ ಬಹುಪಾಲು ಸ್ತ್ರೀಯರು ಸುಂದರಿಯಲ್ಲ. ದೈಹಿಕ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯಕ್ಕೆ ಹೆಚ್ಚು ಬೆಲೆ ನೀಡಿರುವುದು ಇವರ ಕಥೆಗಳಲ್ಲಿ ಪ್ರಮುಖವಾಗಿ ಗಮನ ಸೆಳೆಯುತ್ತವೆ.

'ಎಚ್.ವಿ. ಸಾವಿತ್ರಮ್ಮ' ಇವರ ಕಥೆಗಳಲ್ಲಿನ ಪಾತ್ರಗಳಾದ ಸ್ತ್ರೀಯರು ತಮ್ಮ ಮೇಲೆ ಉಂಟಾಗುತ್ತಿದ್ದ ದೈಹಿಕ ಹಾಗೂ ಮಾನಸಿಕ ದೌರ್ಜನ್ಯಗಳಿಗೆ ತಮ್ಮ ಸೀಮಿತ ಚೌಕಟ್ಟಿನೊಳಗೇ ಉತ್ತರ ಹುಡುಕಿಕೊಳ್ಳುತ್ತಾರೆ. ಇವರ ನಿರಾಶ್ರಿತೆ ಕಾದಂಬರಿಯಲ್ಲಿ ನಮಗೆ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ನಡೆದ ಕಹಿ ಘಟನೆಗಳು ಅವು ಹೆಣ್ಣಿನ ಬದುಕಿನಲ್ಲಿ ಉಂಟು ಮಾಡಿದ ತಲ್ಲಣವನ್ನು ವಿವರಿಸುತ್ತದೆ. ಕೋಮುವಾದ, ಜಾತಿಯತೆಗಳ ಜಾಲದಲ್ಲಿ ಸಿಕ್ಕು ತಮ್ಮ ಬಾಳನ್ನು ಹಾಳು ಮಾಡಿಕೊಂಡ ಹೆಣ್ಣುಮಕ್ಕಳ ಜೀವನವನ್ನು ತೆರೆದಿಡುತ್ತಾರೆ. ಅತ್ಯಾಚಾರಕ್ಕೊಳಗಾದ ಹೆಣ್ಣಿನ ಬದುಕಿನ ಚಿತ್ರಣವನ್ನು ಇವರು ಕಟ್ಟಿಕೊಡುತ್ತಾರೆ. ಗಂಡನಿದ್ದರೂ ಅತ್ಯಾಚಾರಕ್ಕೊಳಗಾದವಳು ಎಂಬ ಕಾರಣದಿಂದ ತನ್ನ ಮಗುವಿಗೆ ತಾನೇ ನೆಲೆಯಾಗುವ ಮೂಲಕ ತನ್ನ ಬದುಕಿಗೂ ತಾನೇ ಜವಾಬ್ದಾರಳಾಗುವುದನ್ನು ಈ ಕಥೆ ಬಿಂಬಿಸುತ್ತದೆ.

ಪ್ರಗತಿಶೀಲತೆಯ ಕಾಲದಲ್ಲಿ ಪ್ರಮುಖವಾಗಿ ಕಂಡು ಬಂದ ಲೇಖಕಿಯೆಂದರೆ ವಾಣಿ. ಇವರ ಕಥನಗಳಲ್ಲಿ ಪ್ರಮುಖವಾಗಿ ಸಾಂಸಾರಿಕ ಜೀವನದ ನಿರೂಪಣೆ, ಗಂಡು ಹೆಣ್ಣುಗಳ ಬೆಚ್ಚನೆಯ ಪ್ರಣಯ, ಪ್ರೇಮ ವಿವಾಹಕ್ಕಿರುವ ಅಡ್ಡಿ ಆತಂಕಗಳು, ನಿವಾರಣೆ ಇವು ಪ್ರಮುಖವಾಗಿ ಕಂಡು ಬರುತ್ತವೆ. ಇವರ 'ಶುಭ ಮಂಗಳ' ದ ನಾಯಕಿ ಹೇಮಾ ಸ್ವಾಭಿಮಾನಿ ಸ್ತ್ರೀಯ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತೆ ಚಿತ್ರಿಸಿದ್ದಾರೆ.

'ಸುಶೀಲಾ ಕೊಪ್ಪರ' ಇವರೊಬ್ಬ ಪತ್ರಿಕೋದ್ಯಮಿಯೂ ಆಗಿದ್ದುದರಿಂದ ಇವರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ ನಿಚ್ಚಳವಾಗಿ ಕಾಣಿಸುತ್ತದೆ. ಪ್ರಧಾನ ಸಂಸ್ಕೃತಿ ಹೆಣ್ಣಿನ ಬಗೆಗೆ ಹೊಂದಿರುವ ಸೈದ್ಧಾಂತಿಕ ತಾತ್ವಿಕ ನಿಲುವುಗಳು ಬದುಕಿನ ನಡವಳಿಕೆಯಲ್ಲಿ ಕಾರ್ಯಗತ ಹೊಂದಿರುವ ಅವರ ಕಥೆಗಳಲ್ಲಿದೆ. ಇವರ 'ಅವಿಸ್ಮರಣೀಯ ಮೂರು ಘಂಟೆಗಳು' ಕಥೆಯ ನಾಯಕಿ ಪ್ರೇಮ ತನಗೆ ಬೇರೊಬ್ಬ ಪ್ರಿಯಕರ ಇರುವುದಾಗಿ ತಿಳಿಸಿ ಗಂಡನನ್ನು ಪರೀಕ್ಷಿಸಲು ಮುಂದಾಗುವುದು. ಆತ ತೋರುವ ಔದಾರ್ಯ, ನೀಡಿದ ಅವಕಾಶ ಇವುಗಳೆಲ್ಲವನ್ನು ಆಕೆ ನಟನೆಯೆಂದು ನಿರ್ಧರಿಸಿ ಆತನನ್ನು ನಂಬುವುದಿಲ್ಲ ಎಂಬುದು ಸುಶೀಲಾ ಅವರ ಹೆಣ್ಣುಗಳ ಧನಾತ್ಮಕ ನಿಲುವನ್ನು ಸ್ಪಷ್ಟಪಡಿಸುತ್ತದೆ.

'ಡಾ.ಅನುಪಮಾ ನಿರಂಜನ' ವೃತ್ತಿಯಿಂದ ವೈದ್ಯೆಯಾದುದರಿಂದ ಸಾಮಾಜಿಕ ಕಳಕಳಿಯೊಂದಿಗೆ ಸಾಮಾಜಿಕ ಆರೋಗ್ಯದ ಕಡೆಗೂ ಗಮನ ಹರಿಸುತ್ತಾರೆ. ಇವರು ಹೆಣ್ಣಿನ ಮೇಲೆ ಆಗುವ ಯಾವುದೇ ರೀತಿಯ ಶೋಷಣೆ, ದಬ್ಬಾಳಿಕೆಗಳನ್ನೂ ತೀವ್ರವಾಗಿ ವಿರೋಧಿಸುತ್ತಾರೆ. ವೇದಗಳ ಕಾಲದಿಂದ ಹಿಡಿದು ಇಲ್ಲಿಯವರೆಗೂ ನಡೆದಿರಬಹುದಾದ ಹೆಣ್ಣಿನ ದೇಹದ ಮೇಲೆ ಸಂಪೂರ್ಣ ಹತೋಟಿಯಿಟ್ಟುಕೊಳ್ಳುವ ಪ್ರಧಾನ ವ್ಯವಸ್ಥೆ ಅವಳನ್ನು ತುಂಬ ಸುಲಭವಾಗಿ ಮಾರುತ್ತದೆ, ಕೊಳ್ಳುತ್ತದೆ ಎಂಬ ಅನಾಗರಿಕ ಪದ್ಧತಿಯನ್ನು ಅಮಾನವೀಯ ಎನ್ನುತ್ತಾರೆ.

'ರಾಜಲಕ್ಷ್ಮಿ ಎನ್.ರಾವ್' ಇವರ ಕಥೆಗಳಲ್ಲಿ ಹೆಣ್ಣಿನ ಹೊರಗಿನ ಬಾಹ್ಯ, ವಾಚ್ಯ, ವಿವರಣೆಗಳಿಗಿಂತ ಅಂತರಂಗದ ಮನೋವಲಯದಲ್ಲಿ ನಡೆಯುವ, ದ್ವಂದ್ವ, ಹೋರಾಟಗಳು, ಘರ್ಷಣೆಗಳೂ ಪ್ರಕಟಗೊಳ್ಳುತ್ತವೆ. ವಿವಾಹೇತರ ಸಂಬಂಧಗಳು, ಅತೃಪ್ತ ಹೆಣ್ಣಿನ ಲೈಂಗಿಕ ಕಾಮನೆಗಳು, ಬಯಕೆಗಳೂ ಕೈಗೂಡದಾದಾಗ ಹೆಣ್ಣಿನ ಹೃದಯಕ್ಕಾಗುವ ತಲ್ಲಣಗಳು, ಬೇಗು
ದಿಗಳನ್ನು ಅತ್ಯಂತ ಸೂಕ್ಷ್ಮವಾಗಿ ನಿರೂಪಿಸಿದರು. ಹೆಣ್ಣಿನ ಅನನ್ಯತೆಯನ್ನು ಮಾನವೀಯ ಸಂಬಂಧಗಳ ಪರಿವಲಯದೊಳಗೇ ಗುರುತಿಸುವ ಸ್ತ್ರೀ ಸಂವೇಧನೆ ಇವರ ಕಥೆಗಳ ಮುಖ್ಯ ವಿಷಯವಾಗುತ್ತದೆ.

‘ಬಿ.ಟಿ ಲಲಿತಾನಾಯಕ್’ ಲಂಬಾಣಿ ಬುಡಕಟ್ಟು ಜನಾಂಗದ ಕಷ್ಟ ಸುಖಗಳನ್ನು ಮತ್ತು ಇಲ್ಲಿನ ಮಹಿಳೆಯರು ಶೋಷಿತರಾಗುವುದನ್ನು ಕಂಡು ಅನುಭವಿಸಿ ಅವುಗಳನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸುತ್ತಾರೆ. ಕೋಪ, ಸಿಟ್ಟು, ವೈಚಾರಿಕತೆ ಪ್ರಾದೇಶಿಕತೆಗಳೆಲ್ಲವೂ ಬೆರೆತ ವಿಶಿಷ್ಟ ಶೈಲಿ ಇವರ ಸಾಹಿತ್ಯದಲ್ಲಿದೆ. ಕನ್ನಡದಲ್ಲಿ ಮೊದಲ ಬಾರಿಗೆ ಬುಡಕಟ್ಟು ಜನರ ಸಮಾಜವೊಂದರ ಅನಿಸಿಕೆಗಳಿಗೆ ದನಿಕೊಟ್ಟ [illegible] ಇವರು.

ಮುಸ್ಲಿಂ ಲೇಖಕಿಯರಲ್ಲಿ ಅವರ ಜನಾಂಗದ ಸಾಂಸ್ಕೃತಿಕ ವಿವರಗಳು ಮತ್ತು ಧರ್ಮ ಸಂಸ್ಕೃತಿಗೆ ವಿಶಿಷ್ಟವಾದುದರಿಂದ ಇಲ್ಲಿನ ಪ್ರತಿಯೊಂದು ವಿವರವೂ ಸಾಂಸ್ಕೃತಿಕ ವೈಶಿಷ್ಟ್ಯ ಹೇಳುವಂತದ್ದಾಗಿದೆ. ಸಾರಾ ಅಬೂಬಕರ್ ಮತ್ತು ಬಾನು ಮುಷ್ತಾಕ ರವರರ ಕಥೆಗಳಿಗೆ ಮುಸ್ಲಿಂ ಹೆಣ್ಣುಗಳ ಬವಣೆಗಳ ಚಿತ್ರಣವೇ ಮುಖ್ಯ ಉದ್ಧೇಶ. ಮುಸ್ಲಿಂ ಜನಾಂಗದ ವಿವಿಧ ವಯೋಮಾನದ ವಿವಿಧ ಸ್ಥಿತಿಗಳ ಮಹಿಳೆಯರೇ ಕೇಂದ್ರ ಪಾತ್ರಗಳಾಗಿದ್ದಾರೆ. ಇಬ್ಬರೂ ಲೇಖಕಿಯರು ಮುಖ್ಯವಾಗಿ ಮುಸ್ಲಿಂ ಧರ್ಮದಲ್ಲಿರುವ ತಲಾಖ್ ವ್ಯವಸ್ಥೆಯನ್ನು ಮತ್ತು ಅದು ವಿವಾಹಿತ ಹೆಣ್ಣನ್ನು ಶೋಷಿಸುವುದನ್ನು ವಿರೋಧಿಸುತ್ತಾರೆ.

‘ವೀಣಾ ಶಾಂತೇಶ್ವರವರು ಕಥೆಗಳು ಈ ಎಲ್ಲಾ ಲೇಖಕಿಯರು ಚಿತ್ರಿಸಿರುವ ಭಿನ್ನವಾದ ಹೆಣ್ಣುಗಳನ್ನು ತಮ್ಮ ಕಥೆ, ಕಾದಂಬರಿಗಳಲ್ಲಿ ಚಿತ್ರಿಸುತ್ತಾರೆ. ವೀಣಾ ಅವರ ಕಥೆಗಳು ಹೆಣ್ಣಿನ ಆಯ್ಕೆಯ ಸ್ವಾತಂತ್ರ್ಯವನ್ನು ವಸ್ತುವಾಗಿ ತೆಗೆದುಕೊಂಡಿದ್ದಾರೆ. ಉಳಿದ ಎಲ್ಲಾ ಲೇಖಕಿಯರು ಆಯ್ಕೆ ಸ್ವಾತಂತ್ರವನ್ನು ತಮ್ಮ ನಾಯಕಿಯರಿಗೆ ನೀಡಿದ್ದರೂ ಅವರು ವೀಣಾರವರು ಸೃಷ್ಟಿಸಿದ ನಾಯಕಿಯರಿಗಿಂತ ಹಿಂದೆ ಹೋಗುತ್ತಾರೆ. ಇವರ ಕಥೆಗಳಲ್ಲಿನ ಬಹುಪಾಲು ನಾಯಕಿಯರು ಪುರುಷರಿಂದ ದೌರ್ಜನ್ಯಕ್ಕೆ ಒಳಗಾಗಿ ನಂತರ ಅವರ ವಿರುದ್ಧ ಸಿಡಿದೇಳುವುದಲ್ಲದೆ ತಮ್ಮದೇ ಆದ ವಿಚಾರ ಸರಣಿಯಿಂದ ಮುನ್ನಡೆಯುತ್ತಾರೆ. ಲೈಂಗಿಕ ಸಂಪರ್ಕದ ಮೂಲಕ ಇದುವರೆಗೂ ತಮ್ಮನ್ನು ನಿರ್ಲಕ್ಷಿಸಿದ ಗಂಡಸರ ಸ್ಥಾನವನ್ನು ಇವರು ಆಕ್ರಮಿಸುತ್ತಾರೆ. ಇವರ ಕಥೆಗಳುದ್ದಕ್ಕೂ ಕಾಣಿಸಿಕೊಳ್ಳುವಂತಹ ಹೆಣ್ಣುಗಳು ಸುಕ್ಷಿತರು, ಉದ್ಯೋಗಸ್ಥರು, ಮುಂಬಯಿಯಂತಹ ನವನಾಗರಿಕ ಜಗತ್ತಿನಲ್ಲಿ ಬದುಕುತ್ತಿರುವವರು. ಹೀಗಾಗಿ, ಸಹಜವಾಗಿ ಇವರ ಆಲೋಚನೆ, ನಡವಳಿಕೆಯ ಮೇಲೆ ಪಾಶ್ಚಾತ್ಯ ಪ್ರಭಾವವನ್ನು ಗುರುತಿಸಬಹುದು. ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಇವರು ಅರ್ಥಮಾಡಿಕೊಂಡು ವಿರೋಧಿಸಬಲ್ಲರು. ತಮಗೆ ಸಂವಿಧಾನದಲ್ಲಿ ನೀಡಲ್ಪಟ್ಟಿರುವ ಹಕ್ಕುಗಳ ಬಗೆಗೆ ಯೋಚಿಸುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದು ಸ್ವಾವಲಂಬಿಗಳಾಗಿದ್ದಾರೆ. ವೀಣಾ ಸಮಕಾಲೀನ ಸಾಹಿತ್ಯದ ಧೋರಣೆ ವೈಚಾರಿಕ ಚಿಂತನೆಗಳಿಗೆ ತಮ್ಮನ್ನು ತಾವು ತೆರೆದುಕೊಂಡವರು. ಇದುವರೆಗೂ ಇದ್ದ ಸಿದ್ಧ ಹೆಣ್ಣಿನ ಮಾದರಿಗಳನ್ನು ಮುರಿದು ಹೊಸ ಹೆಣ್ಣನ್ನು ಕಟ್ಟುವ ಸಾಹಸ ಧೈರ್ಯ ವೀಣಾರವರ ಕಥೆನಗಳ ಮುಖ್ಯ ನೆಲೆಯಾಗಿದೆ. ಹಿಂದಿನವರು ಚರ್ಚಿಸಲು ಇಷ್ಟ ಪಡದಿದ್ದ ಲೈಂಗಿಕತೆ ಇವರಲ್ಲಿ ಪ್ರಧಾನವಾಗಿ ಚರ್ಚೆಯಾಗಿ ಉಳಿದವರಿಗಿಂತ ಭಿನ್ನವಾಗುತ್ತಾರೆ.

ತಾಯ್ತನಕ್ಕೆ ಸಂಬಂಧಿಸಿದಂತೆ ಉಂಟಾಗುವ ವಿವಿಧ ರೀತಿಯ ಸಮಸ್ಯೆಗಳು ನಮ್ಮ ಬಹುತೇಕ ಲೇಖಕಿಯರ ಕಥೆಗೆ ವಸ್ತು. ಶೀಲ, ಪಾತಿವ್ರತ್ಯಗಳಂತೆ ಇದೂ ಸಹ ಹೆಣ್ಣನ್ನು ಕಾಡುವ ಸಮಸ್ಯೆ. ಹಿಂದಿನ ಲೇಖಕಿಯರ ಕಥೆಗಳಲ್ಲಿ ಬಂಜೆ ಎಂಬ ಬಿರುದು ಹೊತ್ತ ಹೆಣ್ಣಿನ ಗೋಳಿನ ವರ್ಣನೆ ಮುಖ್ಯವಾಗಿರುತ್ತಿತ್ತು. ನಂತರದ ದಿನಗಳಲ್ಲಿ ಇದು ಸಮಸ್ಯೆಯಲ್ಲದಿದ್ದರೂ ಇದೇ ಮೌಲ್ಯದ ಸುತ್ತ ಬೆಳೆದಿರುವ ಇನ್ನಿತರ ಅಂಶಗಳು ಹೇಗೆ ಬದುಕನ್ನು ಕಾಡುತ್ತವೆ ಎಂಬುದರತ್ತ ಲೇಖಕಿಯರು ಗಮನ ಹರಿಸಿದ್ದಾರೆ. ಇಂದಿನ ಸಂದರ್ಭದಲ್ಲಿ

ಮಗುವಿನ ಆಯ್ಕೆಯ ಪ್ರಶ್ನೆ, ವಿಚ್ಛೇದನದ ಸಂದರ್ಭದಲ್ಲಿ ಮಕ್ಕಳ ಮೇಲಿನ ಅಧಿಕಾರದ ಪಶ್ನೆ, ಅತ್ಯಾಚಾರದ ಪ್ರಕರಣಗಳು ಇವೆಲ್ಲವು ಇಂದಿನ ಲೇಖಕಿಯರ ಕಥೆಗಳಿಗೆ ಪ್ರಧಾನ ವಸ್ತುವಾಗಿರುವುದನ್ನು ಕಾಣಬಹುದಾಗಿದೆ. ಹಿಂದಿನ ಲೇಖಕಿಯರಿಗಿದ್ದ ಅಡೆ ತಡೆಗಳು ಈಗಿನವರಿಗೆ ಇಲ್ಲ. ಪುರುಷ ಚಿಂತನೆಯನ್ನು ಧಿಕ್ಕರಿಸುವ ಪ್ರಶ್ನಿಸುವ ಧೈರ್ಯ ಈಗಿನವರಲ್ಲಿ ಕಂಡುಬರುತ್ತಿದೆ.

ಅಧ್ಯಾಯ –5

ಸಮಾರೋಪ

ಅಧ್ಯಾಯ –5

ಸಮಾರೋಪ

ಆಧುನಿಕ ಮಹಿಳಾ ಸಾಹಿತ್ಯವು ಇಂದು ತನ್ನದೇ ಆದ ವಿಶಿಷ್ಟ ನೆಲೆಯಿಂದ ಮುಂದುವರೆಯುತ್ತಿದೆ. ಹಲವಾರು ಲೇಖಕಿಯರು ಇಂದು ಬರವಣಿಗೆಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಇಂತಹ ಲೇಖಕಿಯರಲ್ಲಿ ಎಲ್ಲರಿಗಿಂತ ಹೆಚ್ಚು ಧೈರ್ಯದಿಂದ ನಿರ್ಭೀತಿಯಿಂದ ಬರೆದು ಹಲವಾರು ವಿಮರ್ಶಕರ ವಿಮರ್ಶೆಗೆ ಗುರಿಯಾದವರು ವೀಣಾ ಶಾಂತೇಶ್ವರ. ತಮ್ಮ ಕೃತಿಗಳಲ್ಲಿ ವೀಣಾರವರು ಸ್ತ್ರೀ ವಿಮೋಚನೆಗೆ ಹೇಗೆ ಒತ್ತು ನೀಡಿದ್ದಾರೆ ಎಂಬುದನ್ನು ತಿಳಿಯುವ ಪ್ರಯತ್ನವನ್ನು ಈ ನಿಬಂಧದಲ್ಲಿ ಮಾಡಲಾಗಿದೆ. ಈ ಪ್ರಕ್ರಿಯೆಯಲ್ಲಿ ವೀಣಾರವರ ಕಥಾ ಸಾಹಿತ್ಯದಲ್ಲಿ ಬರುವ ಸ್ತ್ರೀಯರು ಹೇಗೆ ಪುರುಷ ಪ್ರಧಾನ ಧಾರೆಯಿಂದ ದೂರ ಸರಿದು ತಮ್ಮನ್ನು ಬೇರ್ಪಡಿಸಿಕೊಂಡು ಸ್ವತಂತ್ರರಾಗಿ ನಿಲ್ಲುತ್ತಾರೆ ಎಂಬುದನ್ನು ಚಿತ್ರಿಸುವುದಾಗಿದೆ.

ಕನ್ನಡ ಮಹಿಳಾ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಮುಖ್ಯವಾಗಿ ಕೇಳಿ ಬರುವ ಹೆಸರು ವೀಣಾರವರದ್ದು. ನವ್ಯ ಸಂದರ್ಭದಲ್ಲಿನ ಬರಹಗಾರ್ತಿಯರಲ್ಲಿ ವೀಣಾರವರು ಉಳಿದ ಲೇಖಕಿಯರಿಗಿಂತ ಭಿನ್ನ ಹಾದಿ ಹಿಡಿದಿದ್ದಾರೆ. ವೀಣಾರವರು ಬರೆಯ ತೊಡಗಿದ ಕಾಲಘಟ್ಟಗಳಲ್ಲಿ ನವ್ಯ ಸಾಹಿತ್ಯ ಉತ್ತುಂಗ ಸ್ಥಿತಿಯಲ್ಲಿತ್ತು. ನವ್ಯ ಸಾಹಿತ್ಯದ ತತ್ವ..ತಾತ್ವಿಕತೆಗಳನ್ನು ,ತಂತ್ರಗಳನ್ನು, ವಸ್ತುವನ್ನು ಭಿನ್ನ ರೀತಿಯಲ್ಲಿ ಆಯ್ಕೆ ಮಾಡಿಕೊಂಡಿದ್ದೆ ವೀಣಾರವರ ದೊಡ್ಡ ಬಂಡಾಯ ಎಂದು ಹೇಳಬಹುದು. ಈ ರೀತಿ ವೀಣಾರವರು ತಮ್ಮ ಕಾಲಕ್ಕೆ ಸ್ಪಂದಿಸಿದ ರೀತಿಯನ್ನು, ಹೊಸ ಪ್ರಜ್ಞೆ, ತನ್ನ ತನವನ್ನು ಕಾಪಾಡಿಕೊಳ್ಳಬೇಕೆನ್ನುವ ತುಡಿತ, ಹಂಬಲಗಳಿಂದ ಹೇಗೆ ತಮ್ಮನ್ನು ಸ್ತ್ರೀ ಪರವಾಗಿ ಚಿತ್ರಿಸಿದರು ಎಂಬುದನ್ನು ಗುರುತಿಸಬಹುದು. ನವ್ಯದ ಸಂದರ್ಭದಲ್ಲಿ ಹೆಣ್ಣನ್ನು ಕೇವಲ ದೇಹವಾಗಿ, ಲೈಂಗಿಕತೆಗಷ್ಟೆ ಸೀಮಿತವಾದ ವ್ಯಕ್ತಿಗಳಿಗಿಂತ ಭಿನ್ನವಾಗಿ ಇವುಗಳಿಗೆ ಪ್ರತಿರೋಧ ಒಡ್ಡಿದ ವೀಣಾರವರ ಕಥೆಗಳನ್ನು ಈ ನಿಟ್ಟಿನಲ್ಲಿ ವಿಶ್ಲೇಷಿಸುವುದು ನಿಬಂಧದ ಮುಖ್ಯ ಉದ್ಧೇಶವಾಗಿದೆ.

ಸ್ತ್ರೀ ವಿಮೋಚನೆಯ ಪರಿಕಲ್ಪನೆಯನ್ನು ವೀಣಾರವರಂತೆ ಇತರ ಲೇಖಕಿಯರು ಹೇಗೆ ಚಿತ್ರಿಸಿದ್ದಾರೆ ಮತ್ತು ತಮ್ಮದೇ ಆದ ಭಿನ್ನ ಭಿನ್ನ ನೆಲೆಗಳಲ್ಲಿ ಸ್ತ್ರೀ ವಿಮೋಚನೆಯನ್ನು ಹೇಗೆ ಅಭಿವ್ಯಕ್ತಿಸಿದ್ದಾರೆ ಎಂಬುದನ್ನು ಗಮನಿಸಲಾಗುತ್ತದೆ. ಕೇವಲ ನವ್ಯ ಸಂದರ್ಭ ಮಾತ್ರವಲ್ಲದೆ ನವೋದಯ, ಪ್ರಗತಿಶೀಲ, ದಲಿತ ಬಂಡಾಯ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿನ ಮಹಿಳಾ ಲೇಖಕಿಯರ ಬಗ್ಗೆ ಕುರಿತು ಚರ್ಚಿಸಲಾಗಿದೆ. ಹೆಣ್ಣು ತನ್ನ ಮನೆಯ ವಾತಾವರಣವನ್ನು ಬಿಟ್ಟು ಬೇರೆ ಕಡೆ ಚಲಿಸಲು ಈ ಸಾಹಿತ್ಯಗಳು ಹೇಗೆ ದಾರಿಯಾದವು ಮತ್ತು ಈ ಕಾಲದ ಲೇಖಕಿಯರು ತಮ್ಮ ಕಾಲದ ಸಾಂಪ್ರದಾಯಿಕ ನಂಬಿಕೆಗಳಿಗೆ–ಭಾವನೆಗಳಿಗೆ ಪೆಟ್ಟು ಕೊಟ್ಟಂತೆ ಸುಧಾರಣೆಯ ನೆಲೆಗಳನ್ನು ಸೃಷ್ಟಿಸಿದರು ಎಂಬುದನ್ನು ಕುರಿತು ವಿವರಿಸಲಾಗಿದೆ. ತಮ್ಮ ಕಾಲದ ಇಕ್ಕಟ್ಟಿನ ಸಂದರ್ಭದಲ್ಲೂ ಸಹ ತಮ್ಮ ಹಟ ಬಿಡದೆ ತಮ್ಮೊಳಗಿನ ಬೆಂಕಿಯನ್ನು ಕಾರಿದ ಲೇಖಕಿಯರನ್ನು ಅವರ ಕಥೆಗಳ ಮೂಲಕ ಚಿಂತನೆಗೆ ಒಳಪಡಿಸಲಾಗಿದೆ.

ನವ್ಯ ಸಾಹಿತ್ಯ ಸಂದರ್ಭದಲ್ಲಿ ಬಂದಂತಹ ಪುರುಷ ಲೇಖಕರನ್ನು ಅವರ ಕೃತಿಗಳಲ್ಲಿನ ಸ್ತ್ರೀ ಪಾತ್ರಗಳ ಕುರಿತು ಚರ್ಚಿಸಲಾಗಿದೆ. ಕನ್ನಡ ಸಾಹಿತ್ಯದ ಒಂದು ಪ್ರಮುಖ ಘಟ್ಟವಾದ ನವ್ಯ ಸಾಹಿತ್ಯ ಕಾಲದಲ್ಲಿ ಬರೆದಂತಹ ಪ್ರಮುಖ ಲೇಖಕರು ಹೆಣ್ಣನ್ನು ಭೋಗ ವಸ್ತುವಂತೆ ಕಾಣಲು ಕಾರಣವೇನು, ಈ ಲೇಖಕರಲ್ಲಿನ

ಸ್ತ್ರೀ ಪಾತ್ರದ ಚಿತ್ರಣವನ್ನು ಇದೇ ಕಾಲದ ಮಹಿಳಾ ಲೇಖಕಿಯರ ಕೃತಿಗಳಲ್ಲಿನ ಸ್ತ್ರೀ ಚಿತ್ರಣಗಳ ಕುರಿತು ಹೋಲಿಕೆ ಮಾಡಿ ಅವುಗಳನ್ನು ಕುರಿತು ವಿಶ್ಲೇಷಣೆಯನ್ನು ಈ ನಿಬಂಧದಲ್ಲಿ ಮಾಡಲಾಗಿದೆ. ಇಡೀ ನಿಬಂಧದ ಮುಖ್ಯ ಉದ್ದೇಶ ವೀಣಾರವರ ಕಥಾ ಸಾಹಿತ್ಯವನ್ನು ಕುರಿತದ್ದಾಗಿರುವುದರಿಂದ ಇವುಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗಿಲ್ಲ ಎಂದು ತಿಳಿಸುತ್ತೇನೆ.

ವೀಣಾ ಶಾಂತೇಶ್ವರವರ 'ನಡೆದದ್ದೇ ದಾರಿ' ಸಮಗ್ರ ಕಥಾ ಸಂಕಲನದ ಮೂಲಕ ಅವರ ಕೃತಿಗಳಲ್ಲಿನ ಸ್ತ್ರೀ ವಿಮೋಚನೆಯ ಹಲವು ನೆಲೆಗಳ ಕುರಿತು ಚರ್ಚಿಸಲಾಗಿದೆ. ಮನುಷ್ಯನೊಬ್ಬ ಸಮಾಜ ಜೀವಿ ತಾನು ವಾಸಿಸುವ ಸಮಾಜದೊಂದಿಗೆ ಅವರು ಹೊಂದಿರುವ ಸಂಬಂಧವನ್ನು ವೀಣಾರವರ ಕಥೆಗಳ ಮೂಲಕ ವಿಶ್ಲೇಷಿಸಲಾಗಿದೆ. ಸಮಾಜದಿಂದಲೇ ರೂಪುಗೊಂಡಂತಹ ವ್ಯಕ್ತಿಗಳು ಸಮಾಜಕ್ಕೆ ತಮ್ಮ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳಿಂದ ಮುಖ್ಯವಾಗುತ್ತಾರೆ ಎಂಬ ಹಿನ್ನೆಲೆಯಲ್ಲಿ ವೀಣಾರವರ ಕೃರಿಗಳಲ್ಲಿನ ಸಾಮಾಜಿಕ ಕಳಕಳಿಯನ್ನು ಕುರಿತು ವಿಶ್ಲೇಷಿಸಲು ಯತ್ನಿಸಿದ್ದೇನೆ.

ಭಾರತೀಯ ಸಂಸ್ಕೃತಿಯಲ್ಲಿ ಕಂಡು ಬರುವ ಪ್ರಧಾನಧಾರೆಯಾದ ಪುರುಷ ಪ್ರಧಾನ ಸಮಾಜದ ವಿರುದ್ಧ ವೀಣಾರವರು ಹಿಡಿದ ಭಿನ್ನ ದಾರಿಯ ಬಗ್ಗೆ ಕುರಿತು ವಿವರಿಸಲಾಗಿದೆ. ಕನ್ನಡದ ಇತರ ಲೇಖಕಿಯರಿಗಿಂತ ವೀಣಾ ಅವರು ಬೇರೆಯದೇ ಆದ ಸ್ಥಾನವನ್ನು ಪಡೆದುಕೊಂಡಿರುವುದು ಅವರ ಆಧುನಿಕತಾವಾದಿ ಚಿಂತನೆಯ ಕ್ರಮದಿಂದ. ಈ ನಿಟ್ಟಿನಲ್ಲಿ ವೀಣಾರವರ ಮುಕ್ತವಾದ ಮನಸ್ಸು, ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ವೀಣಾರವರ ಕಥೆಗಳಲ್ಲಿ ಹೆಣ್ಣಿನ ಘನತೆಯ ಪ್ರಶ್ನೆಯನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನಿರ್ವಹಿಸಲು ಪ್ರಯತ್ನಿಸಿದ್ದೇನೆ. ಪುರುಷ ನಿರ್ಮಿತ ಸಮಾಜ ಮತ್ತು ಸಾಹಿತ್ಯದಲ್ಲಿ ತಮ್ಮ ನೇರ, ದಿಟ್ಟ ನಿಲುವುಗಳಿಂದ ಅವುಗಳ ವಿರುದ್ಧ ಮಾತನಾಡಿ ತಮ್ಮದೇ ಆದ ಭಿನ್ನ ಹಾದಿಯ ಮೂಲಕ ತಮ್ಮ ಕಥೆಗಳಲ್ಲಿನ ನಾಯಕಿಯರು ಹೇಗೆ ಸ್ವತಂತ್ರ ಮನೋಭಾವದಿಂದ ಮುನ್ನಡೆಯುತ್ತಾರೆ ಎನ್ನುವುದನ್ನು ಮುಖ್ಯವಾಗಿ ಗಮನಿಸಲಾಗಿದೆ. ಈ ಹಿನ್ನಲೆಯಲ್ಲಿ ಕೆಲವು ಕಥೆಗಳನ್ನು ಗಮನಿಸಿದಾಗ ಇಲ್ಲಿ ಬರುವ ಮಹಿಳೆಯರು ಸ್ವತಂತ್ರ ನಿರ್ದಾರವನ್ನು ಕೈ ಗೊಳುವಷ್ಟು ಬಲಿಷ್ಠರಾಗಿದ್ದಾರೆ. ನಾಯಕಿಯರಿಗೆ ಅವರದೇ ಆದ ಆಯ್ಕೆಗಳಿವೆ. ಸ್ವಂತದ ಗೊತ್ತುಗುರಿಗಳಿವೆ. ಜೀವನದ ಅರಿವಿದೆ ಹಾಗಾಗಿಯೇ ಗೊಂದಲಗಳಿಲ್ಲದೆ ಯಾರನ್ನೋ ಆಯ್ಕೆ ಮಾಡಬೇಕಾದ ಅಗತ್ಯ ಅವರಿಗಿರುವುದಿಲ್ಲ ಎಂಬ ದೃಷ್ಟಿಯಿಂದ ವೀಣಾ ಅವರು ಕೊಡುವ ಹೊಸ ಕಾಲದ ಮಹಿಳೆಯರಬಗ್ಗೆ ವಿಶ್ಲೇಷಿಸಲಾಗಿದೆ.

ಇವರ ಕಥಾವಸ್ತುವಿನಲ್ಲಿ ವೈವಿಧ್ಯವಿದೆ. ಹೆಣ್ಣೇ ಕೇಂದ್ರ ಪಾತ್ರವಾಗಿದ್ದಾಳೆ. ಅವಳಲ್ಲಿಯ ವಿಭಿನ್ನ ಬಗೆಯ ಬಿಡುಗಡೆಯ ತಹತಹವೇ ಸ್ಥಾಯೀ ನೆಲೆಯಾಗಿದೆ. ನವ್ಯ ಕಥಾನಕದ ಚೌಕಟ್ಟಿನಲ್ಲಿ. ಹೆಣ್ಣಿನ ಸುತ್ತಲೇ ಏನೆಲ್ಲ ಆಗುವುದನ್ನು ವೀಣಾ ಅವರು ತಮ್ಮ ಸ್ವ ಅರಿವಿನಲ್ಲಿ ಅದ್ಭುತವಾಗಿ ಅಭಿವ್ಯಕ್ತಿಸಿದ್ದಾರೆ. ಸೋತು, ಸೋತೂ ಬದುಕನ್ನು ಕಟ್ಟಲೆಳೆಸುವ ಹೆಣ್ಣಿನಲ್ಲಿ ವೈಚಾರಿಕ ಕಿಚ್ಚು ಹಚ್ಚಿ ಬದಲಾವಣೆಗೆ ಸಿದ್ದಗೊಂಡಿರುವ ಹೆಣ್ಣುಗಳು ಇವರ ಕ್ರತಿಗಳಲ್ಲಿವೆ. ತನಗೂ ಸ್ವತಂತ್ರ್ಯದ ಹಕ್ಕಿದೆ ಎಂದು ಅನ್ಯಾಯದ ವಿರುದ್ಧ ಹೋರಾಡುವ ಹೆಣ್ಣುಗಳನ್ನು ಇಲ್ಲಿಗುರುತಿಸಬಹುದು. ಶೋಷಣೆಯ ಬಗ್ಗೆ ಅರಿವು ಮೂಡಿಸುವಂತೆ ಅಕ್ರೋಶವನ್ನು ಹೊಂದಿರುವ ಹೆಣ್ಣು ಇಲ್ಲಿ ಹೇಗೆ ಮುಖ್ಯವಾಗಿ ಕಾಣುತ್ತಾಳೆ ಎಂಬ ಅರಿವನ್ನು ಗುರುತಿಸಿ ಇವರ ಕಥೆಗಳಲ್ಲಿಇವುಗನ್ನು ವಿಶ್ಲೇಷಿಸಲಾಗಿದೆ.

ವೀಣಾ ಅವರು ಅಸ್ತಿತ್ವವಾದಿ ನಿಲುವಿಗಿಂತ ಭಿನ್ನವಾಗಿ ಆಲೋಚಿಸಿ ಅವರ ಕಥೆಗಳಲ್ಲಿ ವಾಸ್ತವವಾದಿ ದ್ರುಷ್ಟಿಕೋನಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಸಂಪ್ರದಾಯ, ಧರ್ಮ, ಸಂಸ್ಕೃತಿಯ ಹೆಸರಿನಲ್ಲಿ ಹೆಣ್ಣಿನ ಮೇಲೆ

ಪುರುಷ ಪ್ರಭುತ್ವ ಹೇರುವ ನಿಯಮಗಳು, ಅದರಿಂದ ಉಂಟಾಗುವ ತಳಮಳಗಳ ಮೂಲಕ ಶೋಷಣೆಗೆ ಗುರಿಯಾದ ಸ್ತ್ರೀ ಲೋಕವನ್ನು ಸೃಷ್ಟಿಸಿದ ವೀಣಾರವರ ಭಿನ್ನ ಹಾದಿಯ ಬಗ್ಗೆ ಗಮನ ಹರಿಸಲಾಗಿದೆ. ಇಲ್ಲಿಯ ಕಥೆಗಳು ನವ್ಯಕಾಲದ ಬದ್ಧತೆಗೆ ಒಳಗಾಗಿದ್ದರೂ. ಹೆಣ್ಣಿನ ಮನದ ಕ್ಷೋಭೆಯ ಒತ್ತಡದಲ್ಲೂ ಆಂತರಂಗಿಕವಾಗಿ ಸಾಂಸ್ಕೃತಿಯ ಎಲ್ಲೆಯನ್ನು ಮೀರದ ಸ್ವಯಂ ಪ್ರಭೆಯಾದ ಹೆಣ್ಣುಗಳನ್ನು ಇವರ ಕಥೆಗಳನ್ನು ಗುರುತಿಸಬಹುದಾಗಿದೆ. ನವ್ಯ ಸಾಹಿತ್ಯವು ಮಹಿಳೆಯ ಅಸ್ಥಿತ್ವ, ಸಮಸ್ಯೆಗಳನ್ನು ಕುರಿತು ಮಾತನಾಡುವುದಿಲ್ಲ. ಅವುಗಳನ್ನು ಒಂದು ಸ್ವತಂತ್ರ್ಯ ಜೀವಿಯಾಗಿಯೂ ಪರಿಗಣಿಸದೆ ಹೆಣ್ಣನ್ನು ಕೇವಲ ಸುಖ, ಭೋಗದ ಸಾಧನವಾಗಿ ಕಾಣುವ ನವ್ಯ ಸಾಹಿತ್ಯದಲ್ಲಿ ನೇತ್ಯಾತ್ಮಕವಾದ ಸ್ತ್ರೀ ಜಗತ್ತಿನ ಚಿತ್ರಣವಿದೆ. ಹೆಣ್ಣಿನ ಸ್ವಂತಿಕೆ, ಸ್ವಾತಂತ್ರ್ಯದ ಹಂಬಲ. ಅಸೆ, ನಿರಾಸೆಗಳು ವಾಸ್ತವಿಕ ಸಂಗತಿಗಳು ನವ್ಯರ ಗಮನ ಸೆಳೆಯುವುದಿಲ್ಲ. ಗಂಡಿನ ಅಸ್ತಿತ್ವ ಮಾತ್ರ ಅಧಿಕೃತ, ಸಾರ್ವತ್ರಿಕ ಎಂದು ಭಾವಿಸುತ್ತಾರೆ ಈ ರೀತಿ ಸ್ತ್ರೀ ಜಗತ್ತಿನ ವೇದನೆ ಸಂವೇದನೆಗಳನ್ನು ಉಪೇಕ್ಷಿಸಿದ ನವ್ಯದವರ ನಂಬಿಕೆಗಳಿಗೆ ವಿರುದ್ಧವಾದ ರೀತಿ ಮಾತನಾಡಿದ ವೀಣಾರವರು ನವ್ಯ ಸಾಹಿತ್ಯದ ಪುರುಷ ಲೇಖಕರ ಹುಳುಕನ್ನು ಬಯಲು ಮಾಡುತ್ತಾರೆ ಎಂಬುದನ್ನು ಇವರ ಕೃತಿಗಳಲ್ಲಿ ಗಮನಿಸಬಹುದಾಗಿದೆ.

ವೀಣಾ ಅವರು ಸಮಾಜದ ಎಲ್ಲಾಅಂದರೆ ಬಡ. ಮಧ್ಯಮ, ಶ್ರೀಮಂತ ವರ್ಗಕ್ಕೆ ಸೇರಿದ ಮಹಿಳೆಯರ ಮನೋವಿಶ್ಲೇಷಣಾತ್ಮಕ ಅನುಭವನ್ನು ತಮ್ಮ ಪಾತ್ರಗಳಲ್ಲಿ ಚಿತ್ರಿಸಿದ್ದಾರೆ ಇವರ ಕಥೆಗಳಿಗೆ ಸ್ತ್ರೀ ವಾದಿ ದೃಷ್ಟಿ ಕೋನ ಮುಖ್ಯ ತಾತ್ವಿಕ ತಳಹದಿಯಾಗಿದೆ. ಸ್ತ್ರೀಯರು ತಮ್ಮ ಅಸ್ಮಿತೆಯನ್ನು ಹೇಗೆ ಹುಡುಕುತ್ತಾರೆ ಎಂಬ ಇವರ ಕಥೆಗಳ ಆಶಯವನ್ನು ಗಮನಿಸಲಾಗಿದೆ. ತಮ್ಮ ಕಥೆಗಳಲ್ಲಿ ಸೃಷ್ಟಿಸಿರುವ ಸ್ತ್ರೀ ಪಾತ್ರಗಳ ಮುಖಾಂತರ ಗಂಡಸರು ಸ್ತ್ರೀಯರ ಮೇಲೆ ಪ್ರಭುತ್ವ ಸ್ಥಾಪಿಸುವುದನ್ನು ವಿರೋಧಿಸುತ್ತಾರೆ. ಆದರೆ ಕಥೆಗಳಲ್ಲಿ ಬರುವ ನಾಯಕಿಯರೆಲ್ಲ ಪುರುಷ ದ್ವೇಷಿಗಳಲ್ಲ. ಸಮಾನತೆ, ಸ್ವಾತಂತ್ರ್ಯ, ಸ್ತ್ರೀವಿಮೋಚನೆ ಇವುಗಳ ಇಂದಿನ ಸಮಾಜಕ್ಕೆ ಹೇಗೆ ಮತ್ತು ಏಕೆ ಮುಖ್ಯವಾಗಿದೆ ಎಂಬ ಚರ್ಚೆಯ ಮುಖಾಂತರವೇ ಇವುಗಳನ್ನು ಪುರುಷ ಸರಿಯಾಗಿ ಅರ್ಥೈಸಿಕೊಂಡಾಗ ಮಾತ್ರ ಒಂದು ಆರೋಗ್ಯವಂತ ಸಮಾಜ ರೂಪುಗೋಳ್ಳಲು ಸಾಧ್ಯ ಎಂಬುದನ್ನು ಇವರ ಕಥೆಗಳ ಮೂಲಕ ಹೇಗೆ ವ್ಯಕ್ತಪಡಿಸಿದ್ದಾರೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ವೀಣಾರವರ ಸಮಕಾಲೀನ ಲೇಖಕಿಯರಲ್ಲಿ ಕಂಡುಬರುವ ಸ್ತ್ರೀ ವಿಮೋಚನೆ ಕುರಿತಾದ ಚಿಂತನೆಗಳನ್ನು ಮತ್ತು ವೀಣಾರವರ ಆಲೋಚನೆಯಲ್ಲಿ ಮೂಡಿಬರುವ ಸ್ತ್ರೀ ವಿಮೋಚನೆಯನ್ನು ಕುರಿತು ಒಟ್ಟಾಗಿ ಚರ್ಚಿಸಲಾಗಿದೆ ಸ್ತ್ರೀ ಪರವಾದ ದನಿ ಮೂಡಿಸುತ್ತಲೆ ಮತ್ತದೇ ಪುರುಷ ನಿರ್ದೇಶಿತ ಮೌಲ್ಯಗಳಿಗೆ ತಲೆಬಾಗುವ ಲೇಖಕಿಯರು ಮತ್ತು ಅದೇ ರೀತಿ ತಮ್ಮ ಕಥೆಗಳಲ್ಲೂ ಹೆಣ್ಣನ್ನು ಚಿತ್ರಿಸಿ ಅವಳು ಬಂಡಾಯವೇಳುವ ವೀಣಾರವರ ಕೃತಿಗಳ ಬಗ್ಗೆ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನದ ಮೂಲಕ ವೀಣಾಶಾಂತೇಶ್ವರ ಕಥನ ಸಾಹಿತ್ಯವನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಆದರೂ ನನ್ನ ಗಮನಕ್ಕೆ ಬಾರದಿರುವ ವಿಷಯಗಳು ಉಳಿದಿದ್ದರೆ ಅವುಗಳನ್ನು ಮುಂದಿನ ಅಧ್ಯಯನಕಾರರ ಗಮನ ಕ್ಕೆ ಬಿಡಲಾಗಿದೆ. ಈ ಅಧ್ಯಯನವು ಮುಂದೆ ಮಹಾಪ್ರಬಂಧ ಬರೆಯುವವರಿಗೆ ಸಹಕಾರಿಯಾಗಬಹುದೆಂದು ನಂಬಿರುತ್ತೇನೆ.

ಆಕರ ಗ್ರಂಥಗಳು

(1) ನಡೆದದ್ದೇ ದಾರಿ : ವೀಣಾಶಾಂತೇಶ್ವರ
ಸುಂದರ ಪುಸ್ತಕ ಪ್ರಕಾಶನ,
ಧಾರವಾಡ.

(2) ನಿರ್ದಿಗಂತ (ಸಂಪುಟ–1) : ಶಾಂತಾ ಇಮ್ರಾಪುರ
ವೀಣಾಶಾಂತೇಶ್ವರ ಅಭಿನಂಧನ ಸುಂದರ ಪುಸ್ತಕ ಪ್ರಕಾಶನ, ಧಾರವಾಡ.

(3) ಕನ್ನಡ ಲೇಖಕಿಯರ ನೇಲೆ ಬೆಲೆ : ಬಿ.ಎಸ್. ವೆಂಕಟಲಕ್ಷ್ಮಿ.
: ಎನ್. ಶ್ಯಾಂಪ್ರಕಾಶನ (1991)

ಇಪ್ಪತ್ತನೇ ಶತಮಾನದ ಮೊದಗಲಿಗರು :
ಹೆಜ್ಜೆಗುರುತು ಮೂಡಿಸಿದ ಸಮಕಾಲೀನರು :
(ವಾಣಿ, ತ್ರಿವೇಣಿ, ಇಂದಿರಾ, ಅನುಪಮ, ನಿರಂಜನರ ಕುರಿತು)

(4) ಸಾಹಿತ್ಯ ವಾರ್ಷಿಕ – 1971 : ಜಿ.ಎಸ್.ಶಿವರುದ್ರಪ್ಪ :ಬೆಂ. ವಿ. ವಿ.
(ಸಣ್ಣಕಥೆ:)

(5) ಸಾಹಿತ್ಯ ವಾರ್ಷಿಕ – 1976 : ಜಿ. ಎಸ್. ಶಿವರುದ್ರಪ್ಪ:ಬೆಂ. ವಿ. ವಿ.
(ಸಣ್ಣ ಕಥೆ :)

(6) ಕನ್ನಡ ಸಾಹಿತ್ಯ ಮತ್ತು ಸ್ತ್ರೀ ವಾದಿ ಚಿಂತನೆ : ವಿವಿಧ ಲೇಖಕರು.
(ಕರ್ನಾಟಕ ಸಾಹಿತ್ಯ ಅಕಾಡೆಮಿ)

(7) ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ: ವಿವಿಧ ಲೇಖಕರು
(ಕರ್ನಾಟಕ ಸಾಹಿತ್ಯ ಆಕಾಡೆಮಿ)

(8) ಮಹಿಳೆ ಸಾಹಿತ್ಯ ಸಮಾಜ : ವಿಜಯಾ ದಬ್ಬೆ.
: ರಚನಾ ಪ್ರಕಾಶನ.

(9) ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ : ಡಾ.ಎಚ್.ಎಸ್. ಶ್ರೀಮತಿ.
: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

(10) ಕನ್ನಡ ಕಥನ ಸಾಹಿತ್ಯ ಸಣ್ಣಕಥೆ : ಜಿ .ಎಸ್ ಅಮೂರ
: ಪ್ರಿಯದರ್ಶಿನಿ ಪ್ರಕಾಶನ

(11) ಮಹಿಳಾ ಸಾಹಿತ್ಯ ಸಮೀಕ್ಷೆ : ಶ್ರೀಮತಿ ಆರ್ಯಾಂಭ ಪಟ್ಟಾಭಿ

(12) ಸ್ತ್ರೀವಾದಿ ಸಾಹಿತ್ಯ ವಿಮರ್ಶೆ : ತೇಜಸ್ವಿ ನಿರಂಜನ
ಸೀಮಂತಿ ನಿರಂಜನ
ಕನ್ನಡ ಸಂಘ ಕ್ರೈಸ್ಟ್ ಕಾಲೇಜ್
ಬೆಂಗಳೂರು

(13) ಹೊಸಗನ್ನಡ ಸಾಹಿತ್ಯ ಚರಿತೆ : ಎಲ್. ಎಸ್. ಶೇಷಗಿರಿ ರಾವ್
ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ
ಬೆಂಗಳೂರು.

(14) ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ : ವಿವಿಧ ಲೇಖಕರು .
ಕರ್ನಾಟಕ ಸಾಹಿತ್ಯಾ ಅಕಾಡೆಮಿ.

(15) ಹೊಸಗನ್ನಡ ಸಾಹಿತ್ಯ ಚರಿತ್ರೆ : ರಂ. ಶ್ರೀ. ಮುಗಳಿ
ಗೀತಾಬುಕ್ ಹೌಸ್, ಮೈಸೂರು.

(16) ಕನ್ನಡ ಸಾಹಿತ್ಯ ಕೋಶ : ರಾಜಪ್ಪ ದಳವಾಯಿ
ಶ್ರೀ ರಾಘವೇಂದ್ರ ಪ್ರಕಾಶನ
ಬೆಂಗಳೂರು.

(17) ಸುವರ್ಣ ಸಾಹಿತ್ಯ ವಿಮರ್ಶೆ : ಎಚ್. ದಂಡಪ್ಪ
ಬಿ.ಎಸ್.ಸುಮಿತ್ರಾಬಾಯಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

(18) ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ : ಜಿ. ಎಸ್. ಆಮೂರ
ಅಂಕಿತ ಪುಸ್ತಕ ಪ್ರಕಾಶನ. ಬಸವನಗುಡಿ.

(19) ಪೂರ್ವಾಪರ : ಯು. ಆರ್ ಅನಂತಮೂರ್ತಿ.
ವಿಮರ್ಶಾಬರಹಗಳು
ಶೋಭಾ ಪ್ರೊಸೆಸ್ ಪ್ರಿಂಟರ್ಸ್ ದರ್ಬೆ.

(20) ಕನ್ನಡದ ಹಾಡು ಪಾಡು : ಕೆ. ಸಿ. ಶಿವಾರೆಡ್ಡಿ
ಅಧ್ಯಯನ ಮಂಡಲ. ಬೆಂಗಳೂರು.

(21) ಚಪ್ಪಲಿಗಳು : ಸಾರಾ ಅಬೂಬಕ್ಕರ್
ನವ ಕರ್ನಾಟಕ ಪ್ರಕಾಶನ ಬೆಂಗಳೂರು.

(22) ಆಲನಹಳ್ಳಿಯವರ ಸಣ್ಣ ಕಥೆಗಳು : ಶ್ರೀ ಕೃಷ್ಣ ಆಲನಹಳ್ಳಿ
ಐ. ಬಿ. ಹೆಚ್. ಪ್ರಕಾಶನ.

(23) ಪ್ರಜ್ಞೆ ಮತ್ತು ಪರಿಸರ : ಯು. ಆರ್. ಅನಂತಮೂರ್ತಿ.
ಅಕ್ಷರ ಪ್ರಕಾಶನ .

(24) ಲೇಖಕಿಯರ ಕಥಾ ಸಂಕಲನ : ವೀಣಾಶಾಂತೇಶ್ವರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು.

(25) ಸೂರ್ಯನ ಕುದುರೆ : ಯು. ಆರ್. ಅನಂತಮೂರ್ತಿ
ಅಕ್ಷರ ಪ್ರಕಾಶನ ಹೆಗ್ಗೋಡು.

(26) ದಶವಾರ್ಷಿಕ ಸಾಹಿತ್ಯ ಸಮೀಕ್ಷೆ : ಜಿ. ಎಸ್. ಶಿವರುದ್ರಪ್ಪ
ಬೆಂಗಳೂರು ವಿಶ್ವವಿದ್ಯಾಲಯ

(27) ಮೊದಲ ಕಟ್ಟಿನ ಗದ್ಯ : ಎಚ್. ಎಸ್. ಶಿವಪ್ರಕಾಶ್

(28) ಕನ್ನಡಸಾಹಿತ್ಯದಲ್ಲಿ ನೋವಿನ ನೆಲೆಗಳು : ವಿವಿಧ ಲೇಖಕರು
ಕರ್ನಾಟಕ ಸಾಹಿತ್ಯ ಅಕಾಡೆಮಿ.

(29) ಮಹಿಳಾ ಸಂಕಥನ : ಡಾ// ಗಾಯಿತ್ರೀ ನಾವಾಡ
ಕನ್ನಡ ಪುಸ್ತಕ ಪ್ರಾಧಿಕಾರ

(30) ಸಾಹಿತ್ಯ ವಿಮರ್ಶೆ –1990 : ಮುರುಳೀಧರ ಉಪಾಧ್ಯ ಹಿರಿಟಕ.
: ಬಿ.ಎಸ್.ಸತ್ಯನಾರಾಯಣಾರಾವ್. (1992)

(31) ನವ್ಯ ಸಾಹಿತ್ಯ ದರ್ಶನ : ಶಾಂತಿನಾಥ ದೇಸಾಯಿ
ಪರಿಸರ ಸಾಹಿತ್ಯ ಪ್ರಕಾಶನ
ಶಿವಮೊಗ್ಗ.

(32) ಸಂಸ್ಕಾರ : ಯು.ಆರ್.ಅನಂತ ಮೂರ್ತಿ
ಡೆಲ್ಲಿ ಪಬ್ಲಿಕೇಶನ
ನವ ದೆಹಲಿ.

(33) ಪಿ. ಲಂಕೇಶ್ ಅವರ ಆಯ್ದ ಕಥೆಗಳು : ಪಿ. ಲಂಕೇಶ್
ಅಕ್ಷರ ಪ್ರಕಾಶನ ಹೆಗ್ಗೋಡು
ಸಾಗರ.